ಸಾಕ್ಷಾತ್ಕಾರ

ಬಸವರಾಜ ಕಟ್ಟೀಮನಿ



ಸಾಕ್ಷಾತ್ಕಾರ

"ಮೊಲೆಯ ಮೇಲಿರ್ಪ ಯೋಗಿಗಳುಂಟು ;
ಶಿಲೆಯ ಮೇಲಿರ್ಪ ಭೋಗಿಗಳುಂಟು ! "

—ರತ್ನಾಕರ.

ಬಸವರಾಜ ಕಟ್ಟೀಮನಿ

ದರ್ಶನ ಪ್ರಕಾಶನ
ಶಾರಾನಿವಾಸ : : ತಿಪಟೂರು.

ಪ್ರಥಮ ಮುದ್ರಣ : ಮಾರ್ಚಿ ೧೯೫೬
ಸುದರ್ಶನ ಕಾದಂಬರಿ ಹನ್ನೆರಡು

ಮುಖ ಚಿತ್ರ :

ಜಿ. ಕೆ. ಮೂರ್ತಿ—ಧಾರವಾಡ.

ಬೆಲೆ : ಒಂದೂವರೆ ರೂಪಾಯಿ

ಮುದ್ರಣ :

ಇಂಡಿಯಾ ಪ್ರೆಸ್, ಮೈಸೂರು.

ಮೊದಲ ಮಾತು

ಸುಶಿಕ್ಷಿತರೆಂದೂ, ಸುಸಂಸ್ಕೃತರೆಂದೂ ಮೆರೆಯುತ್ತ, ಸಮಾಜದಲ್ಲಿ ಎತ್ತರದ ಸ್ಥಾನ ಪಡೆಯಲೆತ್ನಿಸುವ ಇಂದಿನ ಮಧ್ಯಮ ಹಾಗೂ ಉಚ್ಚವರ್ಗದವರಲ್ಲ ನೇಕರ ಜೀವನ ವಾಸ್ತವವಾಗಿ ಎಂಥ ಮಟ್ಟದಲ್ಲಿದೆಯೆಂಬುದರ ಸತ್ಯದರ್ಶನ ಮಾಡಿಸಲೆಂದು ನಾನು ಬರೆಯುತ್ತಿರುವ ಕಾದಂಬರಿಗಳಲ್ಲಿ ' ಸಾಕ್ಷಾತ್ಕಾರ 'ವೂ ಒಂದು.

ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಅಧ್ಯಾತ್ಮದ ಮುಖ ವಾಡ ಧರಿಸುವುದು ಇಂದಿನ " ಸುಸಂಸ್ಕೃತ "ರನೇಕರ ' ಫ್ಯಾಷನ್ ' ಆದಂತಾ ಗಿದೆ. ಈ ಮುಖವಾಡವನ್ನು ಕಿತ್ತೆಸೆದು, ಈ " ಸುಸಂಸ್ಕೃತ "ರ ನೈಜಸ್ವರೂಪ ವನ್ನು ತೋರಿಸಲು ನಾನಿಲ್ಲಿ ಯತ್ನಿಸಿದ್ದೇನೆ. ಅಂತರ್ಮುಖಿಗಳ ಮಾನಸಿಕ ವಿಶ್ಲೇಷಣೆಯೂ ಇಲ್ಲಿ ಕಾಣಿಸುತ್ತದೆ. ಮರುಳಯ್ಯ, ಶರಣಪ್ಪ, ರೋಷರಾಯರು ಮತ್ತಿನ್ನಿತರ ಒಳ್ಳೆಯ ವ್ಯಕ್ತಿಗಳು ರಹಸ್ಯವಾದಕ್ಕೆ ಬಲಿಬೀಳಲು ಕಾರಣ ವೇನೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಸುಚರಿತರಾಯ, ಸುಲಲಿತದೇವಿ, ಸಾಹುಕಾರ್ ಕುಬೇರಪ್ಪ, ನಾಗೇಂದ್ರಪ್ಪ ಇವರಂಥ ವ್ಯಕ್ತಿಗಳನ್ನು ಇಂದು ಕರ್ನಾಟಕದ ಎಲ್ಲಾ ನಗರ ಗಳಲ್ಲೂ ನೋಡಬಹುದಾಗಿದೆ. ಇಂಥ ಡಾಂಭಿಕರ ಕೈಯಲ್ಲಿ, ಪೂರ್ಣಯೋಗ, ದಿವ್ಯದರ್ಶನ, ಸಾಕ್ಷಾತ್ಕಾರ ಮೊದಲಾದ ಶಬ್ದಗಳು ಹೊಲೆಬಳಕೆಗೀಡಿವೆ. ಜನತೆಯ ಸಂಪರ್ಕ ಕಡಿದುಕೊಂಡು ಏಕಾಂತದಲ್ಲಿ ಸಾಧನೆ ನಡಸಲೆತ್ನಿಸುವ ಮಹಾಪುರುಷರ ಸುತ್ತಲೂ ಇಂಥ ಆಷಾಡಭೂತಿಗಳ ಗುಂಪು ಸೇರಿಕೊಳ್ಳುವುದು ಎಲ್ಲ ಕಾಲಗಳಲ್ಲೂ, ಎಲ್ಲ ದೇಶಗಳಲ್ಲೂ ನಡೆದು ಬಂದ ಸಂಗತಿಯಾಗಿದೆ. ಒಬ್ಬ ಗುರುವಿನ ಹೆಸರಲ್ಲಿ ಒಂದು ಪಂಥ ಕಟ್ಟಿ, ರಹಸ್ಯಮಯ ಶಬ್ದಗಳ ಜಾಲ ಹರಡುತ್ತಾ ಅದರ ಮರೆಯಲ್ಲಿ ಮೋಜು ಮಾಡುವುದೇ ಈ ಜನರ ನಡವಳಿಕೆ

ಯಾಗಿದೆ. ಇಂಥ ಹಲವು ಧೂರ್ತರು ಸೇರಿ ಸ್ಥಾಪಿಸಿದ 'ಯೋಗಮಂಡಲ'ದ ಮತ್ತು ಅದರ ಸದಸ್ಯರ ಸ್ವಾರಸ್ಯಪೂರ್ಣವಾದ ಕಥೆ ಇಲ್ಲಿ ಚಿತ್ರಿತವಾಗಿದೆ.

ಅಧ್ಯಾತ್ಮವಾದಿಗಳೆಲ್ಲರೂ ಧೂರ್ತರೆಂದು ನನ್ನ ಅಭಿಪ್ರಾಯವಲ್ಲ. ಪ್ರಾಮಾಣಿಕವಾದ ರೀತಿಯಲ್ಲಿ ಸಾಧಕಜೀವನ ನಡಸುತ್ತ, ಸುಂದರವಾದುದನ್ನೂ, ಸತ್ಯವಾದುದನ್ನೂ, ಶಿವವಾದುದನ್ನೂ ಆರಾಧಿಸಿ ಸಾಕ್ಷಾತ್ಕಾರ ಪಡೆಯಲೆತ್ನಿಸುವ ಹಿರಿಯ ಜೀವಿಗಳೂ ಅಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರ ವಿಷಯದಲ್ಲಿ ಎಲ್ಲರಿಗೂ ಆದರವುಂಟು. ಆದರೆ, ಇಂಥವರ ಸಂಖ್ಯೆ ಬಹಳ ಚಿಕ್ಕದು ; ಧೂರ್ತರ, ಸ್ವಾರ್ಥಿಗಳ ಮತ್ತು ಆಷಾಢಭೂತಿಗಳ ಸಂಖ್ಯೆಯೇ ದೊಡ್ಡದು. ಇಂದಿನ ನಮ್ಮ ರಾಷ್ಟ್ರಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಪ್ರಾಮಾಣಿಕರಾದವರನ್ನು ತುಳಿದು ವಿಜೃಂಭಿಸುತ್ತಿರುವ ಈ ಧೂರ್ತರು ಅಧ್ಯಾತ್ಮ ಕ್ಷೇತ್ರವನ್ನು ಹಾಗೆಯೇ ಬಿಡುವುದುಂಟೇ ? ಈ ಕ್ಷೇತ್ರದಲ್ಲಿನ ಇವರ ಹಾವಳಿಯ ಅಲ್ಪಾಂಶ ಮಾತ್ರ ಇಲ್ಲಿ ಚಿತ್ರಿತವಾಗಿದೆ ; ಅವರ ಪೂರ್ಣಸ್ವರೂಪವನ್ನೆ ಚಿತ್ರಿಸ ಹೊರಟರೆ ಸಾವಿರ ಪುಟಗಳ ಮಹಾಕಾದಂಬರಿಯಾದೀತು. ವಾಚಕರು ಅಪೇಕ್ಷಿಸಿದಲ್ಲಿ, ಸಮಯಾನುಕೂಲವಾಗುತ್ತಲೂ ಆ ಕೆಲಸವನ್ನೂ ಮಾಡಿ ಮುಗಿಸುವ ಆಶಯವಿದೆ.

ಬಸವರಾಜ ಕಟ್ಟೀಮನಿ

No-8

ಸತ್ಯ-ಸದಾಚಾರಗಳ ನಿಷ್ಠುರ ಆರಾಧಕ
ಆಷಾಡಭೂತಿಗಳ ಕಡು ವಿರೋಧಿ

ಅಂಬಿಗರ ಚೌಡಯ್ಯನವರ

ದಿವ್ಯಸ್ಮರಣೆಗೆ ಅರ್ಪಿತ.

೧

ಆ ದಿನವೂ ಮರುಳಯ್ಯನನ್ನು ಎಚ್ಚರಗೊಳಿಸಿದುದು ನೆರಮನೆಯ ಮುಕ್ಕಣ್ಣನ ಉದಯರಾಗವೆ. ಉದಯರಾಗವೆಂದರೆ ಅದೇನು ದೇವರ ಪ್ರಾರ್ಥನೆಯಲ್ಲ, ರಾಷ್ಟ್ರಗೀತೆಯೂ ಅಲ್ಲ. ಬೆಳಗಿನಲ್ಲಿ ಎದ್ದೊಡನೆ ಅಂಥ ಹಾಡನ್ನು ಕೇಳುವ ಇಚ್ಛೆ ಮರುಳಯ್ಯನಿಗೆ ಕೊಂಚವೂ ಇರಲಿಲ್ಲವಾದರೂ ಆ ಬಗೆಗೆ ಆತ ಆಕ್ಷೇಪವೆತ್ತುವಂತಿರಲಿಲ್ಲ. ಮುಕ್ಕಣ್ಣನದು ಮಹಾ ವಿಚಿತ್ರ ಸ್ವಭಾವ. ಮರುಳಯ್ಯನನ್ನು ಪೀಡಿಸುವುದೇ ಅವನಿಗೊಂದು ತಮಾಷೆಯ ವಿಷಯವಾದ ಹಾಗಿತ್ತು. ನೆರೆಮನೆಯಲ್ಲಿ ಬಿಡಾರ ಹೂಡಿ ನೆಲಸಿದ ಎರಡು ತಿಂಗಳುಗಳಿಂದಲೂ ಅದೊಂದು ನಿತ್ಯಕಾಯಕವೆ ಆದ ಹಾಗಿತ್ತು ಮುಕ್ಕಣ್ಣನಿಗೆ. ಆ ಹಾಡುಗಳನ್ನು ಆತ ಎಲ್ಲಿ ಓದಿದ್ದನೊ! ಕನ್ನಡದ ಪ್ರಖ್ಯಾತ ಕವಿಗಳ ಅನೇಕ ಹಾಡುಗಳನ್ನು ಆತ ಮನಸ್ಸಿಗೆ ಹೊಳೆದಂತೆ ವಿಕೃತಗೊಳಿಸಿ ಬೆಳಗಿನ ವೇಳೆಯಲ್ಲಿ ಹಾಡುತ್ತಿದ್ದುದಿತ್ತು. ತನ್ನಷ್ಟಕ್ಕೆ ತಾನು ಮೆಲುದನಿಯಲ್ಲಿ ಹಾಡಿಕೊಂಡರೆ ಆ ಮಾತು ಬೇರೆಯಾಗುತ್ತಿತ್ತು. ಆದರೆ, ಮುಕ್ಕಣ್ಣ ಬೇಕೆಂತಲೇ ಧ್ವನಿಯನ್ನೆತ್ತರಿಸಿ ಹಾಡಿ ಗದ್ದಲ ಮಾಡುತ್ತಿದ್ದ. ದಿನವೂ ಹಾಸಿಗೆ ಬಿಟ್ಟು ಎದ್ದೊಡನೆ ಹತ್ತು ಹದಿನೈದು ನಿಮಿಷಗಳ ವರೆಗೆ ಮೌನವಾಗಿ ಪ್ರಾರ್ಥನೆ ಮಾಡುವುದು ಮರುಳಯ್ಯನ ಪದ್ಧತಿಯಾಗಿತ್ತು. ಆ ಪದ್ಧತಿಯನ್ನು ಮುರಿಯುವ ಉದ್ದೇಶದಿಂದಲೇ ಮುಕ್ಕಣ್ಣ ತನ್ನ ವಿಲಕ್ಷಣ ಉದಯರಾಗಕ್ಕಾರಂಭಿಸುತ್ತಿದ್ದ.

“ ಏಳು ಮನದನ್ನೆ,
ಏಳೆನ್ನ ಚೆನ್ನೆ........”

ಅಷ್ಟು ಬೇಗ ಏಳುವ ಚೆನ್ನೆಯಲ್ಲ ಅವನ ಪತ್ನಿ ಪದ್ಮಾವತಿ. ಅವಳಿಗೆ ನಿದ್ದೆ—ಅದರಲ್ಲೂ ಬೆಳಗಿನ ನಿದ್ದೆ—ಎಂದರೆ ಬಲು ಪ್ರೀತಿ. ತವರುಮನೆಯಲ್ಲಿದ್ದಷ್ಟು ದಿನವೂ ಅವಳು ಏಳು ಗಂಟೆಗೆ ಮೊದಲು ಎಂದೂ ಎದ್ದುದಿರಲಿಲ್ಲ. ಮದುವೆಯಾಗಿ, ಮುಕ್ಕಣ್ಣನೊಡನೆ ಓರೆಕೋರೆನಗರದಲ್ಲಿ ಹೊಸ ಸಂಸಾರ

ಹೊಡಿದ ಎರಡು ತಿಂಗಳುಗಳಲ್ಲಿ ಆ ರೂಢಿ ಕೊಂಚ ಕೊಂಚವಾಗಿ ಮುರಿದು ಹೋಗುತ್ತಿದ್ದಿತಾದರೂ ಮುಕ್ಕಣ್ಣನಂತೆ ಐದು ಗಂಟೆಗೆಲ್ಲ ಎದ್ದು ಬಿಡುವುದು ಅವಳಿಗಿನ್ನೂ ಸಾಧಿಸಿರಲಿಲ್ಲ. ಅಷ್ಟು ಬೇಗ ಎದ್ದು ಮಾಡಬೇಕಾದ ಮಹಾ ಕಾರ್ಯವಾದರೂ ಏನು? ಎಂಬುದು ಅವಳ ಪ್ರಶ್ನೆ. ಮುಕ್ಕಣ್ಣನಿಗೆ ಮಾತ್ರ ಮೊದಲಿನಿಂದಲೂ ಬೇಗ ಏಳುವುದು ಅಭ್ಯಾಸವಾಗಿತ್ತು. ಎದ್ದು, ಮುಖ ತೊಳೆದು, ಕಾಫಿ ಕುಡಿದು ಪುಸ್ತಕ ಹಿಡಿದುಕೊಂಡು ಓದುತ್ತ ಕುಳಿತರೆ ಆತ ಮತ್ತೆ ಮೇಲಕ್ಕೇಳುತ್ತಿದ್ದುದು ಸ್ನಾನದ ಸಮಯಕ್ಕೆ.

ಓದುವುದಕ್ಕೆ ಮೊದಲು ಬಿಸಿ ಬಿಸಿ ಕಾಫಿ ಮಾತ್ರ ಅವನಿಗೆ ಅತ್ಯಗತ್ಯವಾಗಿ ಬೇಕಾಗುತ್ತಿತ್ತು. ಸ್ಟವ್ ಹೊತ್ತಿಸಿ ಕಾಫಿ ಕಾಸುವುದನ್ನೇನೊ ಅವನು ಬಲ್ಲ. ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಅವನೇ ಅಲ್ಲವೆ ಕಾಫಿ ಮಾಡಿಕೊಳ್ಳುತ್ತಿದ್ದುದು? ಕಾಫಿ ತಯಾರಿಸುವುದರಲ್ಲಿ ಪ್ರವೀಣನೆಂಬ ಕೀರ್ತಿಯೂ ಅವನಿಗೆ ಲಭಿಸಿತ್ತು. ಆದರೆ, ಮನೆಯಲ್ಲಿ ಹೆಂಡತಿಯಿದ್ದಾಗಲೂ ತಾನೇ ಒಲೆಯ ಜೊತೆಗೆ ಗುದ್ದಾಡುವುದೆಂದರೆ ಎಂಥ ಗಂಡಸಿಗಾದರೂ ಬೇಸರವೇ ಅಲ್ಲವೆ?

ಎಂತಲೇ, ಮುಕ್ಕಣ್ಣ ತಾನು ಏಳುತ್ತಲೂ ಆ ಹಾಡು ಈ ಹಾಡು ಹೇಳಿ ಕೂಗಿ ಗದ್ದಲ ಮಾಡಿ ಪದ್ಮಾವತಿಯನ್ನೆಬ್ಬಿಸಲು ಯತ್ನಿಸುತ್ತಿದ್ದ. ಅವಳು ಎದ್ದ ತರುವಾಯವೂ ಅವನ ಹಾಡು ಮುಗಿಯುತ್ತಿರಲಿಲ್ಲ. ಕಾಫಿ ತಯಾರಾಗುವ ವರೆಗೂ ಅವನ ಸಂಗೀತ ಕಚೇರಿ ನಡೆದೇ ಇರುತ್ತಿತ್ತು.

"ಒಲೆಯು ಕಾಯುತಿದೆ ನಿನಗಾಗಿ
ಊದೆನ್ನ ಚೆನ್ನೆ!
ಕಾಫಿ ಕಾಯುತಿದೆ ನನಗಾಗಿ
ಊದು ಮನದನ್ನೆ!"

ಎಂದು ಹೇಳುತ್ತಾ ಆತ ಅವಳ ಹತ್ತಿರವೇ ಕುಳಿತು ಚಕ್ಕಳಗುಳ್ಳಿ ಇಟ್ಟು ನಗಿಸುತ್ತಿದ್ದ.

ಅವರಿಬ್ಬರಿಗೂ ಅದೊಂದು ಮೋಜಿನ ಆಟವಾದರೆ ನೆರೆಮನೆಯ ಮರುಳಯ್ಯನಿಗೆ ಪ್ರಾಣಸಂಕಟ. ಒಂದೇ ಮನೆಯ ಎರಡು ವಿಭಾಗಗಳಲ್ಲಿ ಅವರು ನೆಲಸಿದ್ದರಿಂದ ಒಂದು ವಿಭಾಗದಲ್ಲೆದ್ದ ಧ್ವನಿ ಇನ್ನೊಂದು ವಿಭಾಗಕ್ಕೆ ಸುಲಭವಾಗಿ ಸಹಜವಾಗಿ ಪ್ರವೇಶಿಸುತ್ತಿತ್ತು. ಆ ಧ್ವನಿಯನ್ನು ಪ್ರತಿಬಂಧಿಸಲು

ಸಾಧ್ಯವಿತ್ತೇ? ಮರುಳಯ್ಯನಿಗೆಷ್ಟೇ ಬೇಸರವೆನ್ನಿಸಿದರೂ ಮುಕ್ಕಣ್ಣನಿಗೆ ಆತ ಏನನ್ನೂ ಹೇಳುವಂತಿರಲಿಲ್ಲ. ಹಾಡಕೂಡದೆಂದು ಹೇಳಲು ಅವನಿಗೇನು ಅಧಿಕಾರವಿತ್ತು? ಅವನೇನು ಆ ಮನೆಯ ಒಡೆಯನಲ್ಲ. ಮುಕ್ಕಣ್ಣನಂತೆ ಇವನೂ ಬಾಡಿಗೆದಾರ. ಇವನು ಹತ್ತು ರೂಪಾಯಿ ಬಾಡಿಗೆ ಕೊಡುವವನಾದರೆ ಮುಕ್ಕಣ್ಣ ಇಪ್ಪತ್ತು ಕೊಡುತ್ತಿದ್ದವನು. ಆ ಕಾರಣದಿಂದ ಮುಕ್ಕಣ್ಣನಲ್ಲಿ ವಿಶೇಷ ಗೌರವ ಮನೆಯೊಡೆಯರಿಗೆ. ಮುಕ್ಕಣ್ಣನ ವಿಚಾರವಾಗಿ ಅವರಲ್ಲಿ ದೂರಿಕೊಳ್ಳುವುದರಿಂದ ಯಾವ ಉಪಯೋಗವೂ ಆಗುವಂತಿರಲಿಲ್ಲ. ಹಾಗೆ ದೂರಿಕೊಳ್ಳುವಷ್ಟು ದೂರ ಹೋಗಲು ಮರುಳಯ್ಯನೂ ಸಿದ್ಧನಿರಲಿಲ್ಲ.

ಮರುಳಯ್ಯನಿಗೆ ಅಪರಿಚಿತನೇನೂ ಆಗಿರಲಿಲ್ಲ ಮುಕ್ಕಣ್ಣ. ಇಬ್ಬರೂ ಒಂದೇ ಕಾಲೇಜಿನಲ್ಲಿ ಓದಿದವರು. ಮರುಳಯ್ಯ ಬಿ. ಎ.ಯ ಕೊನೆಯ ವರ್ಷದಲ್ಲಿದ್ದಾಗ ಮುಕ್ಕಣ್ಣ ಜ್ಯೂನಿಯರ್ ವರ್ಗದಲ್ಲಿದ್ದ. ಕಾಲೇಜಿನ ಕರ್ನಾಟಕ ಸಂಘದ ಸಭೆಗಳಲ್ಲಿ ಇಬ್ಬರೂ ಭಾಗವಹಿಸುತ್ತಿದ್ದರು. ಹಾಗೆ ಬೆಳೆದ ಪರಿಚಯ ಮತ್ತೆ ಬೆಳೆದು ಸ್ನೇಹದಲ್ಲಿ ಪರಿಣಮಿಸುವ ಯೋಗ ಮಾತ್ರ ಒದಗಿ ಬಂದಿರಲಿಲ್ಲ. ಮರುಳಯ್ಯನದು ಏಕಾಂತಪ್ರೇಮಿ ಸ್ವಭಾವ. ಕಾಲೇಜಿನಲ್ಲಿ ಯಾರೊಡನೆಯೂ ಆತ ಸ್ನೇಹ ಬೆಳಸುವ ಗೊಡವೆಗೆ ಹೋಗಿರಲಿಲ್ಲ. ತಾನಾಯಿತು, ತನ್ನ ಪುಸ್ತಕಗಳಾಯಿತು, ತನ್ನ ವ್ಯಾಸಂಗವಾಯಿತು. ಬೇರಾವುದನ್ನೂ ಆತ ತಲೆಗೆ ಹಾಕಿಕೊಳ್ಳುತ್ತಿರಲಿಲ್ಲ. ಸಾಹಿತ್ಯದಲ್ಲಿ ಅಭಿರುಚಿಯಿದ್ದುದರಿಂದ ಕರ್ನಾಟಕ ಸಂಘದ ಸಭೆಗಳಲ್ಲಿ ಆತ ಭಾಗವಹಿಸುತ್ತಿದ್ದನಷ್ಟೆ. ಬೇರಾವ ಚಟುವಟಿಕೆಗಳಲ್ಲೂ ಆತ ಮನಸ್ಸು ತೊಡಗಿಸುತ್ತಿರಲಿಲ್ಲ. ಮುಕ್ಕಣ್ಣನದು ತದ್ವಿರುದ್ಧವಾದ ಪ್ರಕೃತಿ. ಕರ್ನಾಟಕ ಸಂಘವಲ್ಲದೆ ಇನ್ನೂ ಹಲವು ಸಂಘ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಆತ ಉತ್ಸಾಹದಿಂದ ಭಾಗವಹಿಸುತ್ತಿದ್ದ. ಕ್ರಿಕೆಟ್ ಮತ್ತು ಬ್ಯಾಡ್ಮಿಂಟನ್ ಆಟಗಳಲ್ಲೂ ಅವನಿಗೆ ಆಸಕ್ತಿಯಿತ್ತು. ಒಳ್ಳೆಯ ಮಾತುಗಾರನಾದುದರಿಂದ ಚರ್ಚಾಕೂಟಗಳಲ್ಲೂ ಆತ ಪ್ರಕಾಶಿಸುತ್ತಿದ್ದ. ಎಂತಲೇ ಆತ ಕಾಲೇಜಿನ ಜನಪ್ರಿಯ ವಿದ್ಯಾರ್ಥಿಯಾಗಿ ನೂರಾರು ಜನರ ಸ್ನೇಹ ಸಂಪಾದಿಸಿದ್ದ. ಮರುಳಯ್ಯ ಬುದ್ಧಿವಂತ ವಿದ್ಯಾರ್ಥಿಯೆಂದು ಆತನಲ್ಲಿ ಮುಕ್ಕಣ್ಣನಿಗೆ ಗೌರವವಿತ್ತು. ಅವನನ್ನೂ ಹತ್ತಿರದ ಸ್ನೇಹಿತನನ್ನಾಗಿ ಮಾಡಿಕೊಳ್ಳಬೇಕೆಂದು ಮುಕ್ಕಣ್ಣ ಪರಿಪರಿಯಾಗಿ ಯತ್ನಿಸಿದ್ದನಾದರೂ ಮರುಳಯ್ಯ ದೂರ ದೂರವೇ

ಇದ್ದುಬಿಟ್ಟಿದ್ದ. ಎಂತಲೇ ಅವರಿಬ್ಬರಲ್ಲಿ ಹೆಚ್ಚಿನ ಸಲಿಗೆ ಬೆಳೆದು ಬಂದಿರಲಿಲ್ಲ.

ಮರುಳಯ್ಯ ಬಿ. ಎ. ಮುಗಿಸಿ ನಗರಸಭೆಯ ಹೈಸ್ಕೂಲಿನಲ್ಲಿ ಶಿಕ್ಷಕನ ಕೆಲಸ ಹಿಡಿದು ಮನೆ ಮಾಡಿದ ನಾಲ್ಕು ವರ್ಷಗಳ ತರುವಾಯ ಮುಕ್ಕಣ್ಣ ಎಂ. ಎ. ಮುಗಿಸಿ ಅದೇ ನಗರದಲ್ಲಿದ್ದ ಖಾಸಗಿ ಸಂಸ್ಥೆಯೊಂದು ನಡಸುತ್ತಿದ್ದ ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ದೊರಕಿಸಿ, ಮನೆ ಹುಡುಕುತ್ತಿದ್ದಾಗ ಮರುಳಯ್ಯನ ನೆರೆಮನೆ ಖಾಲಿಯಿದ್ದುದನ್ನು ಕಂಡು ಅಲ್ಲಿಗೆ ಬಂದು ನೆಲಸಿದ್ದ. ಮುಕ್ಕಣ್ಣನ ನಿಕಟ ಸಹವಾಸ ಮರುಳಯ್ಯನಿಗಿಷ್ಟವಿರಲಿಲ್ಲವಾದರೂ ಆತ ಆ ವಿಚಾರವಾಗಿ ಏನನ್ನೂ ಮಾಡುವಂತಿರಲಿಲ್ಲ. ತಮ್ಮ ಪಾಡಿಗೆ ತಾವಿದ್ದುಬಿಟ್ಟರಾಯಿತು, ಮುಕ್ಕಣ್ಣನಿಗೆ ಹೆಚ್ಚು ಸಲಿಗೆ ಕೊಡದಿದ್ದರೆ ಸರಿ— ಎಂದುಕೊಂಡು ಸುಮ್ಮನಾಗಿದ್ದ ಮರುಳಯ್ಯ. ಆದರೆ, ಒಂದಕ್ಕೊಂದು ಹೊಂದಿಕೊಂಡಿರುವ ಮನೆಗಳಲ್ಲಿರುವವರು ಹೆಚ್ಚು ದಿನಗಳ ಕಾಲ ಬಿಗುವಿನಿಂದಿರಲು ಸಾಧ್ಯವಾಗುವುದಿಲ್ಲ. ಮುಕ್ಕಣ್ಣನ ಹಾಗೆಯೆ ಅವನ ಪತ್ನಿ ಪದ್ಮಾವತಿಯದೂ ಸ್ನೇಹಪರ ಪ್ರಕೃತಿ. ಮರುಳಯ್ಯ ಎಷ್ಟು ಬಿಗುವಿನಿಂದ ವರ್ತಿಸುತ್ತಿದ್ದರೂ ಪದ್ಮಾವತಿಗೂ ಕಮಲಳಿಗೂ ಸ್ನೇಹ ಬೆಳೆಯಲು ವಿಲಂಬವಾಗಿರಲಿಲ್ಲ. ಮರುಳಯ್ಯನೊಡನೆ ಸಲಿಗೆ ಬೆಳೆಸಲು ಮುಕ್ಕಣ್ಣನೂ ಬಗೆ ಬಗೆಯಾಗಿ ಯತ್ನಿಸಿದ್ದ. ಮರುಳಯ್ಯ ಕರೆಯದಿದ್ದರೂ ಆತ ತಾನಾಗಿಯೆ ಅವನ ಕೊಠಡಿಗೆ ಬಂದು ಕುಳಿತು ಅವನನ್ನು ಮಾತಿಗೆಳೆಯಲು ಯತ್ನಿಸಿದ್ದುದಿತ್ತು. ಮರುಳಯ್ಯನಿಗಿದ್ದ ಅಧ್ಯಾತ್ಮದ ಹುಚ್ಚನ್ನು ಬಿಡಿಸಲೆಂದು ಆತ ಆ ವಿಚಾರವನ್ನು ಮತ್ತೆ ಮತ್ತೆ ಪ್ರಸ್ತಾಪಿಸಿ ವಾದದ ಗಾಳಿಯೆಬ್ಬಿಸಲು ಹವಣಿಸಿದ್ದನಾದರೂ ಮರುಳಯ್ಯ ಅದಕ್ಕೆ ಸಿಕ್ಕಿಕೊಳ್ಳದೆ ಉಪಾಯವಾಗಿ ಜಾರಿಕೊಳ್ಳುತ್ತಿದ್ದುದಿತ್ತು. ಮುಕ್ಕಣ್ಣ ಸೋಲನ್ನೊಪ್ಪಿಕೊಳ್ಳದೆ ತನ್ನ ಪ್ರಯತ್ನವನ್ನು ಹಾಗೇ ಮುಂದುವರಿಸಿಕೊಂಡು ಬಂದಿದ್ದ. ಬೆಳಗಿನಲ್ಲೂ ರಾತ್ರಿಯಲ್ಲೂ ಆತ ಪ್ರಣಯಗೀತೆಗಳನ್ನು ಹಾಡುತ್ತಿದ್ದುದೂ ಅದೇ ಉದ್ದೇಶದಿಂದ.

ಆ ಹಾಡುಗಳಿಂದಾಗಿ ಮರುಳಯ್ಯನಿಗೆ ಬೇಸರವೆನ್ನಿಸುತ್ತಿದ್ದಿತಾದರೂ ಒಂದು ಬಗೆಯ ವಿಚಿತ್ರ ಆನಂದವೂ ಆಗದಿರುತ್ತಿರಲಿಲ್ಲ. ಆ ಆನಂದದ ಹಿಂದೆ ಹಿಂದೆಯೆ ಮತ್ತೆ ಬೇಸರ, ಅಸಮಾಧಾನ; ತನ್ನ ಬಗೆಗೆ ತನಗೇ ಕೋಪ. ಮುಕ್ಕಣ್ಣ ಅಂಥ ಹಾಡು ಹಾಡದಿದ್ದರೇನೇ ಒಳ್ಳೆಯದು. ಆದರೆ ಆ ವಿಚಾರ

ವನ್ನು ಬಾಯಿಬಿಟ್ಟು ಹೇಳುವುದಾದರೂ ಹೇಗೆ? ಹಾಗೆ ಹೇಳಲು ಹೋದರೆ ಮುಕ್ಕಣ್ಣ ಖಂಡಿತವಾಗಿಯೂ ಆ ಬಗೆಗೆ ಚರ್ಚೆಗಾರಂಭಿಸಬಹುದಾಗಿತ್ತು. ಆ ಹಾಡುಗಳ ಬಗೆಗೆ ತನಗೆ ಬೇಸರವುಂಟಾಗಲು ಕಾರಣವೇನೆಂದು ಮುಕ್ಕಣ್ಣ ಸವಾಲು ಹಾಕಿದರೆ ತಾನಾವ ಉತ್ತರವೀಯುವುದು? ತನಗಾದರೂ ಎಲ್ಲಿ ತಿಳಿದಿದೆ ಆ ಉತ್ತರ?

ಪ್ರಣಯಗೀತೆಗಳೆಂದರೆ ತನಗೂ ಕೂಡಾ ಬಹಳ ಪ್ರೀತಿಯೇ ಇದ್ದಿತಲ್ಲವೆ? ಒಂದು ಕಾಲವಿತ್ತು. ಒಂದು ಕಾಲವೆಂದೇಕೆ ಹೇಳಬೇಕು? ಆರು ವರ್ಷ ಗಳ ಹಿಂದೆಯಷ್ಟೆ ಯಾವಾಗಲೂ ಪ್ರಣಯಗೀತೆಗಳ ಪುಸ್ತಕಗಳನ್ನು ಕೋಟಿನ ಕಿಸೆಯಲ್ಲಿಟ್ಟುಕೊಂಡು, ಪಠ್ಯಪುಸ್ತಕಗಳ ಕಡೆಗೂ ಲಕ್ಷ್ಯವೀಯದೆ ಪ್ರಣಯ ಗೀತೆಗಳನ್ನು ಉರುಹೊಡೆಯುತ್ತಿರಲಿಲ್ಲವೆ ತಾನು? ಈಚೆಗೆ ಆಧ್ಯಾತ್ಮದಲ್ಲಿ ಅಭಿರುಚಿ ಹುಟ್ಟಿದಂದಿನಿಂದ, ಯೋಗಸಾಧನೆಯಲ್ಲಿ ಲಕ್ಷ್ಯ ಕೊಡಗಿದಂದಿನಿಂದ ಪ್ರಣಯಕತೆ, ಕಾದಂಬರಿ, ಕವಿತೆಗಳ ವಾಚನವನ್ನು ತಾನು ಬೇಕೆಂತಲೇ ನಿಲ್ಲಿಸಿ ದ್ದರೂ ಮತ್ತೆ ಮತ್ತೆ ಅವುಗಳ ನೆನಪು ಬರದಿರುವುದಿಲ್ಲ. ತರಾಜೂರಿನ ಮಹಾ ಮಾತೆಯನ್ನು ಧ್ಯಾನಿಸುತ್ತಾ ತಾನು ಕಣ್ಣುಮುಚ್ಚಿ ಕುಳಿತಿದ್ದ ಹಾಗೆ ಆ ಮಾತೆಗೆ ಬದಲು ಕಮಲಳ ಮೂರ್ತಿಯೇ ಕಣ್ಣಿನಿದಿರು ಕಾಣಿಸಿಕೊಳ್ಳುವು ದುಂಟು. 'ಭರತೇಶ ವೈಭವ'ದ ಭೋಗಸಂಧಿಯಲ್ಲಿನ ರಸಪೂರ್ಣ ಪದ್ಯಗಳು ನಾಲಗೆಯ ಮೇಲೆ ನರ್ತಿಸುವುದುಂಟು. ಎಳೆ ವಯಸ್ಸಿನಲ್ಲಿ ತಾನು ಹೇಳಿ ಕೊಂಡು ನಲಿಯುತ್ತಿದ್ದ ಶೃಂಗಾರ ರಸಭರಿತ ಲಾವಣಿಗಳ ಚರಣಗಳು ಕಿವಿ ಗಳಲ್ಲಿ ದುಮುದುಮಿಸುವುದುಂಟು.

ಮುಕ್ಕಣ್ಣ ಹೇಳುವ ಹಾಡುಗಳು ಕಿವಿಗೆ ಬಿದ್ದಾಗಲೂ ತನ್ನ ಮೈಯೆಲ್ಲ ಪುಲಕಿತವಾಗುವುದು. ಇಂಥ ಹಾಡು ಕೇಳಬಾರದೆಂದು ಒಮ್ಮೆ ಅನ್ನಿಸಿದರೆ ಮರುಕ್ಷಣವೆ ಆ ವಿಚಾರ ಬದಲಾಗಿ ಅದೇ ಹಾಡನ್ನು ಮತ್ತೆ ಮತ್ತೆ ಕೇಳ ಬೇಕೆನ್ನಿಸುವುದು. ಮನಸ್ಸನ್ನು ಬಿಗಿಹಿಡಿದು ಧ್ಯಾನದಲ್ಲಿ ಮುಳುಗಿಸಲು ಎಷ್ಟೇ ಯತ್ನಿಸಿದರೂ ಫಲ ದೊರಕದೆ ಹೋಗುವುದು. ಆಗ ಮುಕ್ಕಣ್ಣನನ್ನು ಮನಸ್ಸಿ ನಲ್ಲಿಯೆ ಶಪಿಸುತ್ತಾ ತಾನು ಎದ್ದುಬಿಡುವನು. ಮುಕ್ಕಣ್ಣ ನೆರೆಮನೆಯಲ್ಲಿ ರುವಷ್ಟು ದಿನವೂ ತನ್ನ ಯೋಗಸಾಧನೆ ನಡೆಯದೆಂಬುದಂತೂ ಸ್ಪಷ್ಟವೇ ಆಗಿತ್ತು.

ತಾನೇ ಆ ಮನೆಯನ್ನು ಬಿಟ್ಟು ಬೇರೆ ಮನೆಗೆ ಹೊರಟುಹೋಗಬೇಕೆಂದೂ ಆತ ಅನೇಕ ಬಾರಿ ಯೋಚಿಸಿದ್ದುದಿತ್ತು. ಆದರೆ ಆ ಯೋಚನೆಯೂ ಅಷ್ಟೇ ಬೇಗ ಕೃತಿಗಿಳಿಯುವುದು ಸಾಧ್ಯವಿರಲಿಲ್ಲ.

ಓರೆಕೋರೆನಗರದಂಥ ದೊಡ್ಡ ಊರಿನಲ್ಲಿ ಅಷ್ಟೇ ಬೇಗ ಬೇರೊಂದು ಮನೆ ಸಿಕ್ಕುವುದುಂಟೇ !

ಒಂದು ವೇಳೆ ಮನೆ ಸಿಕ್ಕಿದರೂ ಇದರಷ್ಟು ಅನುಕೂಲವಾದುದು ಸಿಕ್ಕಲಾರದು.

ಈ ಮನೆಯಾದರೋ ಚಿಕ್ಕದು. ಬಾಡಿಗೆಯೂ ಕಡಿಮೆಯೆ. ಹಿತ್ತಲಲ್ಲಿಯೇ ನಲ್ಲಿಯುಂಟು, ಕಕ್ಕಸವುಂಟು. ಮನೆಯಲ್ಲಿ ವಿದ್ಯುದ್ದೀಪಗಳೂ ಉಂಟು. ಸುತ್ತುಮುತ್ತಲೂ ಜನರ ಗದ್ದಲವೂ ಇಲ್ಲ. ಮುಖ್ಯ ರಸ್ತೆಗಳಿಂದ ದೂರದಲ್ಲಿದೆಯಾದುದರಿಂದ ಧೂಳಿನ ಉಪಟಳವೂ ಕಡಮೆ. ಹೈಸ್ಕೂಲಿಗೂ ಹತ್ತಿರ. ಊಟ ಮುಗಿಸಿಕೊಂಡು ಹತ್ತು-ಐವತ್ತಕ್ಕೆ ಮನೆಯಿಂದ ಹೊರಟರೆ ಹನ್ನೊಂದಕ್ಕೆ ಸರಿಯಾಗಿ ಹೈಸ್ಕೂಲಿನಲ್ಲಿರಬಹುದು.

ಎಂತಲೇ ಈ ಮನೆಯನ್ನು ಬಿಟ್ಟು ಬಿಡುವ ಇಚ್ಛೆಯೂ ಅವನಿಗಿರಲಿಲ್ಲ.

ಕಮಲಳಿಗೂ ಅಷ್ಟೆ. “ಈ ಮನೆ ಬಿಡುವ ಮಾತೇ ಬೇಡ,” ಎಂದು ಅವಳೂ ಸ್ಪಷ್ಟವಾಗಿ ಹೇಳಿದ್ದಳು.

“ಸರಿ. ಸದ್ಯಕ್ಕಂತೂ ಹ್ಯಾಗಾದರೂ ಸಹಿಸಿಕೊಂಡು ಸುಮ್ಮನಿದ್ದು ಬಿಡೋದು. ಮುಂದೆ ಮುಕ್ಕಣ್ಣನಿಗೆ ತಾನಾಗೇ ಬುದ್ಧಿ ಬಂದೀತು,” ಎಂದುಕೊಂಡು ಅಷ್ಟೇ ದಿನ ಸುಮ್ಮನಿದ್ದುಬಿಟ್ಟಿದ್ದ ಮರುಳಯ್ಯ.

ಆದರೆ, ಈ ದಿನ ಮಾತ್ರ ಅವನ ಸಹನೆಯ ಅಂಶವೂ ತೀರಿಹೋದಂತಾಯಿತು.

ಪದ್ಮಾವತಿಯಿನ್ನೂ ಎದ್ದಿರಲಿಲ್ಲವೇನೊ, ಮತ್ತೊಂದು ಹಾಡಿಗಾರಂಭಿಸಿದ್ದ ಮುಕ್ಕಣ್ಣ.

“ಬಾ ಮಲ್ಲಿಗೆ
ಬಾ ಮೆಲ್ಲಗೆ
ನನ್ನೆದೆ ಮೆಲ್ಲಾಸಿಗೆ........” *

ಅದನ್ನಾಲಿಸುತ್ತಿದ್ದ ಹಾಗೆ ಮರುಳಯ್ಯನ ಎದೆ ವೇಗವಾಗಿ ಬಡಿದು

ಕೊಳ್ಳತೊಡಗಿತು. “ಅಂದರೆ? ಅವಳಿನ್ನೂ ಎದ್ದಿಲ್ಲ ಹಾಗಾದರೆ? ಅವನೂ ಮತ್ತೆ ಬಿದ್ದುಕೊಂಡನೇನೊ ಕಳ್ಳ! ಅದಕ್ಕೇ ಈ ಹಾಡು! ದೇವರ ಧ್ಯಾನದಲ್ಲಿ ಮನಸ್ಸು ತೊಡಗಿಸಬೇಕಾದ ಈ ಪವಿತ್ರ ವೇಳೆಯಲ್ಲಿ ಎಂಥಾ ಹಾಡು ಇವನದು.... ಎಂಥಾ ಕಾಯಕ........ಶಿವ ಶಿವಾ........ಗುರುದೇವಾ........ರಾಮಕೃಷ್ಣಾ.... ಶಾರದಾಮಣೀದೇವೀ........ವಿವೇಕಾನಂದ ಸ್ವಾಮೀ........ಕ ರಾ ಚೂ ರಿ ನ ಮಹಾಗುರುವೇ, ಮಹಾಮಾತೇ, ಅಯ್ಯಯ್ಯೋ!” ಎಂದುಕೊಳ್ಳುತ್ತಾ ಆತ ಕಿವಿಗಳಿಗೆ ಬೆರಳಿಟ್ಟುಕೊಂಡ.

ಹಾಡು ಹರಿದು ಬರುತ್ತಲೇ ಇತ್ತು:

“ಚೆಲುವಾಗಿದೆ
ಬನವೆಲ್ಲವು
ಗೆಲುವಾಗಿದೆ ಮನವು........
ಉಸಿರುಸಿರಿಗು
ತಂಪೆರಚಿದೆ
ನಿನ್ನೆದೆ ಪರಿಮಳವು!” *

ಮರುಳಯ್ಯನ ಎದೆ ಕಂಪಿಸಿದ ಹಾಗಾಯಿತು. ಶ್ರೀ ರಾಮಕೃಷ್ಣಾದಿ ಗುರುಗಳೆಲ್ಲ ಮರೆತು ಹೋಗಿ ಅವನ ಕಣ್ಣೆದಿರು ಕಮಲಳ ಎದೆಯೇ ಎದ್ದು ಕಾಣಿಸತೊಡಗಿತು.

“ನಿನ್ನೆದೆ ಪರಿಮಳವು.......”

“ಎಲಾ! ಎಂಥಾ ರಸಿಕನಿರಬಹುದು ಇದನ್ನು ಬರೆದ ಕವಿ!” ಮರುಳಯ್ಯ ತನ್ನಲ್ಲಿ ತಾನೆ ಹೇಳಿಕೊಳ್ಳುತ್ತಾ ಕಮಲಳ ಹಾಸಿಗೆಯತ್ತ ದೃಷ್ಟಿ ತಿರುಗಿಸಿದ. ಕಮಲ ಅಲ್ಲಿ ಕಾಣಿಸಲಿಲ್ಲ. ಅವಳಾಗಲೇ ಎದ್ದು ಹೋಗಿ ತನ್ನ ಕಾರ್ಯದಲ್ಲಿ ನಿರತಳಾಗಿದ್ದಳು.

“ಎದೆಯ ಪರಿಮಳ! ಎದೆ! ಎದೆಗೂ ಒಂದು ಪರಿಮಳವಿರಬಹುದೆಂಬ ವಿಚಾರ ಇಷ್ಟು ದಿನವೂ ನನ್ನ ದಪ್ಪ ಮಿದುಳಿಗೆ ಹೊಳೆದಿರಲಿಲ್ಲವಲ್ಲಾ! ಎಂಥಾ ಮರುಳ ನಾನು!” ಎಂದುಕೊಳ್ಳುತ್ತಾ ಮರುಳಯ್ಯ ಅಸ್ವಸ್ಥ ಚಿತ್ತದಿಂದ ಕೊಟಡಿಯಲ್ಲಿ ಶತಪಥ ಹಾಕತೊಡಗಿದ. ಗೋಡೆಗಳ ಮೇಲೆ ತೂಗಾಡುತ್ತಿದ್ದ

* ಕವಿ: ಚೆನ್ನವೀರ ಕಣವಿ

ಗುರುಗಳ ಮತ್ತು ಮಾತೆಯರ ಚಿತ್ರಪಟಗಳತ್ತ ದೃಷ್ಟಿ ಹೊರಳುತ್ತಲೂ ಆತ ಪಶ್ಚಾತ್ತಾಪಪಟ್ಟುಕೊಂಡವನಂತೆ ರಭಸದಿಂದ ತಲೆಯನ್ನು ಕೊಡಹಿ, "ಛೆ. ಛೆ. ತಪ್ಪಾತು, ತಪ್ಪಾತು, ದೊಡ್ಡ ತಪ್ಪಾತು. ಇನ್ನು ಮುಂದೆ ಇಂಥಾ ಅಶ್ಲೀಲ ವಿಚಾರಗಳನ್ನ ಎಂದೆಂದೂ ತಲೆಯಲ್ಲಿ ಸೇರಿಸಬಾರದು," ಎಂದು ಹೇಳಿಕೊಂಡು ನಡೆದಾಡುವುದನ್ನು ನಿಲ್ಲಿಸಿ ಬಂದು, ಹಾಸಿಗೆಯನ್ನು ಸುತ್ತಿ ಸುರುಳಿ ಮಾಡಿ ಗೋಡೆಗೊರಗಿಸಿ, ಚಾಪೆಯ ಮೇಲೆ ಕುಳಿತು ಪದ್ಮಾಸನ ಹಾಕಿ ಕಣ್ಣು ಮುಚ್ಚಿಕೊಂಡ.

"ನಮುಸ್ಕಾರ
ನಮುಸ್ಕಾರ
ನಮುಸ್ಕಾರ ಮಾತಾಜೀ....
ನಮುಸ್ಕಾರ
ನಮುಸ್ಕಾರ
ನಮುಸ್ಕಾರ ಗುರೂಜೀ....
ಕರಾಚೂರ ಗುರೂಜೀ....
ಮಾತಾಜೀ ...ಮಾತಾಜೀ...."

ಆಧುನಿಕ ಭಾರತದ ಅಧ್ಯಾತ್ಮ ಸಾಮ್ರಾಜ್ಯದ ಅನಭಿಷಿಕ್ತ ರಾಜ ರಾಣಿಯರೆನಿಸಿಕೊಂಡಿದ್ದ ಕರಾಚೂರಿನ ಮಹಾಗುರು ಮಹಾಮಾತೆಯರನ್ನು ಕುರಿತು ಪ್ರಾರ್ಥಿಸಲೆಂದು ಮರುಳಯ್ಯನೇ ರಚಿಸಿದ್ದ ಪದ್ಯವದು. ಅವರತ್ತ ಆಕರ್ಷಿತನಾಗಿ ಅವರ ಶಿಷ್ಯತ್ವ ಸ್ವೀಕರಿಸಿದಾಗಲೇ ಆತ ಬಹಳ ಕಷ್ಟಪಟ್ಟು ಆ ಪ್ರಾರ್ಥನಾಗೀತೆಯನ್ನು ತಯಾರಿಸಿ, ಅಂದಿನಿಂದ ದಿನವೂ ಅದನ್ನು ಶ್ರದ್ಧೆಯಿಂದ ಉರು ಹೊಡೆಯುತ್ತ ಬಂದಿದ್ದ.

ಆದರೆ, ಆ ಪದ್ಯವನ್ನು ಈ ದಿನ ಪೂರ್ಣವಾಗಿ ಪಠಿಸಲಾಗಲಿಲ್ಲ. ಅಂಕೆಯಲ್ಲಿಲ್ಲದ ಎಮ್ಮೆಯಂತೆ ಮನಸ್ಸು ಎತ್ತೆತ್ತಲೋ ಓಡುತ್ತಿತ್ತು.

ಆ ಅನುಭವವೇನೂ ಅವನಿಗೆ ಹೊಸದಲ್ಲ. ಯೋಗಸಾಧನೆಗಾರಂಭಿಸಿದಂದಿನಿಂದ ಹಾಗೆಯೇ ಆಗುತ್ತಿತ್ತು. ಪೂರ್ಣಯೋಗವನ್ನು ಸಾಧಿಸುವುದಕ್ಕೆ ನೈಷ್ಠಿಕ ಬ್ರಹ್ಮಚರ್ಯ ಅತ್ಯವಶ್ಯವೆಂದು ಕರಾಚೂರಿನ ಮಹಾಗುರುಗಳ ಪುಸ್ತಕವೊಂದರಲ್ಲಿ ಓದಿದಂದಿನಿಂದಲೂ ಮರುಳಯ್ಯ ಕಮಲಳಿಂದ ದೂರವಿರಲು

ಯತ್ನಿಸುತ್ತ ಬಂದುದಾಗಿತ್ತು. ಕಾಯಾ ವಾಚಾ ಮನಸಾ ಬ್ರಹ್ಮಚರ್ಯ ಆವಶ್ಯಕ. ಅದು ಅತ್ಯಂತ ಪ್ರಯಾಸದ ವಿಷಯವಾದರೂ ಮರುಳಯ್ಯ ಆರು ತಿಂಗಳುಗಳಿಂದಲೂ ಅದನ್ನು ಸಾಧಿಸಲು ಯತ್ನಿಸಿದ್ದ. ಒಂದೇ ಹಾಸಿಗೆಯಲ್ಲಿ ಪವಡಿಸುತ್ತಿದ್ದ ಗಂಡ-ಹೆಂಡಿರು ಬೇರೆ ಬೇರೆ ಹಾಸಿಗೆ ಗೊತ್ತುಮಾಡಿಕೊಂಡು ದೂರ ದೂರದಲ್ಲಿ ಮಲಗಿಕೊಳ್ಳತೊಡಗಿದರು. ಅವನಿಗೆ ಮಾತ್ರ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಬಹಳ ಕಷ್ಟವಾಗಿತ್ತು. ಶೃಂಗಾರಿಕ ಗೀತೆಗಳ ಶ್ರವಣದಿಂದ ಚಂಚಲತೆ ಹೆಚ್ಚಾಗದಿರುತ್ತದೆಯೆ? ಕೇಳಬಾರದು........ಅಂಥವುಗಳನ್ನು ಕೇಳಬಾರದು........

ತಾನು ಹಾಗೆ ನಿರ್ಧರಿಸಿದಾಗಲೂ ಕಿವಿಗಳು ತಮ್ಮ ಕೆಲಸ ಮಾಡುವುದನ್ನು ನಿಲ್ಲಿಸುವುದಿಲ್ಲವಲ್ಲ! "ಕಿವುಡನ ಮಾಡಯ್ಯ ತಂದೇ!" ಎಂದು ಬಸವಣ್ಣನವರು ಕೂಡಲಸಂಗಮೇಶ್ವರನನ್ನು ಪ್ರಾರ್ಥಿಸಿದುದು ಇಂಥ ಸಂದರ್ಭದಲ್ಲೇ ಆಗಿದ್ದೀತು.

ಸರಿ. ಈ ಸ್ಥಿತಿಯಲ್ಲಿ ಮೌನವಾಗಿ ಪ್ರಾರ್ಥನೆ ಮಾಡುವುದಂತೂ ಅಶಕ್ಯ. ಬಾಣಕ್ಕೆ ಪ್ರತಿಬಾಣ ಬಿಡುವುದೇ ಉತ್ತಮೋಪಾಯ—

ಹಾಗೆ ಯೋಚಿಸಿ ಮರುಳಯ್ಯ ಗಟ್ಟಿಯಾದ ಧ್ವನಿಯಲ್ಲಿ ಹಾಡತೊಡಗಿದ:

"ಏಳು ಮೇಲೇಳೇಳು ಸಾಧುವೆ ಹಾಡು ಜೋಗಿಯ ಹಾಡನು,
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು...." *

ಹಕ್ಕಿಗಳ ಕಲಕಲರವವನ್ನು ನೆನಪು ಮಾಡಿಕೊಡುವ ಹಾಗೆ ನೆರೆಮನೆಯಿಂದ ಮುಕ್ಕಣ್ಣ, ಪದ್ಮಾವತಿಯರ ನಗು ಕೇಳಬಂದಿತು. ಅಡುಗೆಮನೆಯಲ್ಲಿ ಪಾತ್ರೆ ತೊಳೆಯುತ್ತಿದ್ದ ಕಮಲಳಿಗೂ ನಗುವನ್ನು ತಡೆಹಿಡಿಯಲಾಗಲಿಲ್ಲ.

ಇಷ್ಟು ದಿನಗಳ ವರೆಗೆ ಮೌನವ್ರತಧಾರಿಯಾಗಿದ್ದ ಮರುಳಯ್ಯ ಈ ದಿನ ಒಮ್ಮಿಂದೊಮ್ಮೆಲೆ ಬಾಯಿ ತೆರೆದು ಪ್ರತಿಭಟನೆಯ ದಾರಿಗಿಳಿದುದನ್ನು ಕಂಡು ಮುಕ್ಕಣ್ಣನಿಗೆ ತುಂಬಾ ಸೋಜಿಗವೆನ್ನಿಸದಿರಲಿಲ್ಲ.

"ಇವತ್ತೇನೋ ಬಾಯಿ ಬಂದ ಹಾಗೆ ಕಾಣ್ತದ ಈ ಮೂಕನಿಗೆ!" ಎಂದನಾತ.

* ಕವಿ; ಕುವೆಂಪು

" ಸಿಟ್ಟು ಬಂದದ್ದೋ ಏನೊ ? " ಎಂದಳು ಪದ್ಮಾವತಿ.

" ಸಿಟ್ಟು ಬಂದಷ್ಟೂ ಒಳ್ಳೆಯದೇ. ಆ ನೆವದಿಂದಲಾದರೂ ಅವನ ಮೆದಳು ಸ್ವಲ್ಪ ನೆಟ್ಟಗಾದೀತು."

" ಇದೆಲ್ಲಿಯ ಹಾಡು ತೆಗೆದರ್ರೀ ಇವರು ? " ಎಂದು ಅವಳು ಕುತೂಹಲ ದಿಂದ ಪ್ರಶ್ನಿಸಿದಳು.

" ಕುವೆಂಪು ಅವರ ಓಂ ತತ್ ಸತ್ ಅನ್ನುವ ಹಾಡಿದು. ವೀರಯೋಗಿ ಗಳು ಹೇಳುವ ಹಾಡು."

ಮತ್ತೆ ಪದ್ಮಾವತಿ ನಗತೊಡಗಿದಳು.

ಮುಕ್ಕಣ್ಣ ಮನಸ್ಸಿನಲ್ಲಿಯೆ ಏನನ್ನೋ ಯೋಚಿಸಿ, ಮರುಳಯ್ಯ ನಿಗಿಂತಲೂ ಗಟ್ಟಿಯಾದ ಧ್ವನಿ ತೆಗೆದು, ಮತ್ತೊಂದು ಹಾಡು ಹೇಳತೊಡಗಿದ :

" ಎರಡೆದೆಗಳು ತುಡಿಯುತ್ತಿವೆ ಪ್ರೇಮಾಂಬುಧಿಗೆಳಸಿ
ಆ ಗಂಗಾಯಮುನೆಯರೊಲು ಚಿರಸಂಗಮ ಬಯಸಿ...."

ಅದನ್ನು ಕೇಳಿದೊಡನೆ ಮರುಳಯ್ಯನಿಗೆ ಹುಚ್ಚು ಆವೇಶ ಬಂದಂತಾ ಯಿತು. ಅವನೂ ಮತ್ತಷ್ಟು ಗಟ್ಟಿಯಾಗಿ ಹೇಳತೊಡಗಿದ :

" ದೂರದಡವಿಯೊಳೆಲ್ಲಿ ಲೌಕಿಕ ವಿಷಯವಾಸನೆ ಮುಟ್ಟದೊ,
ಎಲ್ಲಿ ಗಿರಿಗುಹೆ ಕಂದರದ ಬಳಿ ಜಗದ ಗಲಿಬಿಲಿ ತಟ್ಟದೊ,
ಎಲ್ಲಿ ಕಾಮವು ಸುಳಿಯದೊ, ಮೇಣ್
ಎಲ್ಲಿ ಜೀವವು ತಿಳಿಯದೊ........"

ಆ ಚರಣವನ್ನು ಆತನಿನ್ನೂ ಹೇಳಿ ಮುಗಿಸಿರಲಿಲ್ಲ. ಅಷ್ಟರಲ್ಲಿಯೆ ನೆರೆ ಮನೆಯಿಂದ ಪ್ರಚಂಡವಾದ ನಗು ಕೇಳಿಸತೊಡಗಿತು.

" ಏಕಯ್ಯಾ ಹೋಗಲಿಲ್ಲಾ ಗಿರಿಗೆ ?
ಓ ಬಣಗು ಬೈರಾಗಿಯೆ ? "

ಎಂದು ರಾಗ ತೆಗೆದು ಗಹಗಹಿಸಿ ನಕ್ಕ ಮುಕ್ಕಣ್ಣ.

" ಇದ್ಯಾರು ಬರೆದರ್ರೀ ? "

" ಮಹಾಕವಿ ಮುಕ್ಕಣ್ಣ ! " ಎಂದು ಹೇಳಿ ಮತ್ತೂ ಗಟ್ಟಿಯಾಗಿ ನಗ ತೊಡಗಿದ ಮುಕ್ಕಣ್ಣ.

ಅಷ್ಟರಲ್ಲಿ ಪದ್ಮಾವತಿಯೆ ಗಾಂಭೀರ್ಯ ತಂದುಕೊಂಡು,

" ಸಾಕು ಸಾಕು ಸುಮ್ಮನಿರ್ರಿ. ಪಾಪ. ಅವರು ಸ್ವಲ್ಪಾದರೂ ಪ್ರಾರ್ಥನಾ ಮಾಡಲಿ," ಎಂದಳು.

" ಪ್ರಾರ್ಥನಾ ಅಷ್ಟೇ ಯಾಕೆ? ಕೀರ್ತನಾ ಮಾಡಲಿ ಕೀರ್ತನಾ! ನಮ್ಮ ಗಂಟೇನು ಹೋಗ್ತದ? ನಮಗೊಂದು ಕಾಫಿ ಸಿಕ್ಕರೆ ಸಾಕಲ್ಲ? ಅಷ್ಟು ಮಾಡಿ ಕೊಡ್ತೀಯಾ?"

ಪದ್ಮಾವತಿ ತಟ್ಟನೆ ಎದ್ದುಬಿಟ್ಟಳು. ಮುಕ್ಕಣ್ಣನೂ ಅವಳನ್ನು ಹಿಂಬಾಲಿಸಿಕೊಂಡು ಹೊರಟ.

ಅವಳನ್ನು ಮನಸ್ಸಿನಲ್ಲಿಯೆ ವಂದಿಸುತ್ತ ಮರುಳಯ್ಯ ಪ್ರಾರ್ಥನೆ ಮುಂದುವರಿಸಲೆತ್ನಿಸಿದ.

" ನಮಸ್ಕಾರ ಮಾತಾಜೀ
ನಮಸ್ಕಾರ ಮಾತಾಜೀ

ಆದರೆ....ಇಲ್ಲ....ಮಾತಾಜಿಯ ಮುಖ ಅವನ ಕಣ್ಣೆದಿರು ಬರಲಿಲ್ಲ. ಅದರ ಬದಲು ಹದಿನೇಳರ ಯುವತಿಯೊಬ್ಬಳ ಆಕರ್ಷಕ ಮುಖಮುದ್ರೆ ಕಾಣಿಸಿಕೊಂಡಂತಾಯಿತು. ಮರುಳಯ್ಯ ಬೆಚ್ಚಿ ಆ ಮುಖವನ್ನೆ ಸೂಕ್ಷ್ಮವಾಗಿ ದಿಟ್ಟಿಸಿದ. ಅದು ಕಮಲಳ ಮುಖದ ಹಾಗಂತೂ ಇರಲಿಲ್ಲ. ಕಮಲಳದು ದುಂಡು ಮೊಗವಾದರೆ ಇದು ಬಾದಾಮಿಯಾಕಾರದ್ದು. ಕತ್ತರಿಸಿ ತಯಾರಿಸಿದಂತಿದ್ದ ಹುಬ್ಬುಗಳ ಕೆಳಗೆ ಚಂಚಲವಾಗಿ ಚಲಿಸುವ ತುಂಟಗಣ್ಣುಗಳು. ಚುಂಬನಕ್ಕೆಂದೇ ಮಾಡಿದಂತಿದ್ದ ಚೆಂದುಟಿಗಳು.

ಯಾರು? ಯಾರಿವಳು ಈ ಚೆನ್ನೆ?

ಪದ್ಮಾವತಿಯೆ?

ಕುಳಿತಿದ್ದ ಹಾಗೆಯೆ ಮರುಳಯ್ಯನ ಮೈಯಲ್ಲಿ ಬೆವರೂರಿತು. ಮಾತಾಜಿಯ ಪ್ರಾರ್ಥನೆ ಮಾಡು ಮಾಡುತ್ತಾ ತಾನು ಮಾಡುತ್ತಿರುವುದು ನೆರೆಮನೆಯ ಹೆಣ್ಣಿನ ಧ್ಯಾನವನ್ನು! ಆತ ಜುಗುಪ್ಸೆಯಿಂದ ಕತ್ತು ಅಲುಗಾಡಿಸಿದ, ಕಿವಿಗಳನ್ನು ಹಿಡಿದು ಎಳೆದುಕೊಂಡ, ಕೆನ್ನೆ ಕೆನ್ನೆ ಬಡಿದುಕೊಂಡ. ಛೆ.... ಛೆ....ಎಂಥ ಅಧಃಪತನ ಇದು! ತಾನು ಹೊರಟಿರುವುದೆಲ್ಲಿಗೆ? ನಿಜವಾಗಿ ತಾನು ಉರುಳುತ್ತಿರುವುದು ಎಂಥ ಗರ್ತಕ್ಕೆ!

ಪದ್ಮಾವತಿ....ಪದ್ಮಾವತಿ....

ತನ್ನ ಪತ್ನಿಯನ್ನೊಳಗೊಂಡು ಲೋಕದೆಲ್ಲ ಸ್ತ್ರೀಯರೂ ತನಗೆ ತಾಯಂದಿರಿದ್ದ ಹಾಗೆ ಅಲ್ಲವೆ? ಶ್ರೀ ರಾಮಕೃಷ್ಣಪರಮಹಂಸರು ಸ್ತ್ರೀಯರನ್ನು ಅದೇ ದೃಷ್ಟಿಯಿಂದ ಕಾಣಲಿಲ್ಲವೆ? ಕರಾಚೂರಿನ ಮಹಾಗುರುವೂ ಕೂಡಾ ಸ್ತ್ರೀಯರ ವಿಚಾರವಾಗಿ ಅದೇ ದೃಷ್ಟಿಯಿಟ್ಟುಕೊಂಡಿರುವರಲ್ಲವೆ! ಅವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು, ಸಾಕ್ಷಾತ್ಕಾರದ ಗುರಿಯ ಕಡೆಗೆ ಸಾಗಿರುವ ತಾನು ನೆರೆಮನೆಯ ಹೆಣ್ಣಿನ ಬಗೆಗೆ....

"ಥೂ....ಥೂ....ಥೂ....ಎಂಥಾ ಹೇಸಿ ಮನಸು!"

ಹಾಗೆ ಹೇಳಿಕೊಳ್ಳುತ್ತಿದ್ದಂತೆಯೆ ಅವನ ಬಗೆಗಣ್ಣಿನಿದಿರು ಪುನಃ ಪದ್ಮಾವತಿಯ ಆಕೃತಿಯೆ ಕಾಣಿಸಿಕೊಂಡಂತಾಯಿತು. ಕೈಗಳೆರಡು ರಭಸದಿಂದ ಹಾರಿ ಬಂದು ಅವಳನ್ನು ಹಿಡಿದುಕೊಂಡಂತಾಯಿತು. ಆ ಹಿಡಿತದಿಂದ ತಪ್ಪಿಸಿಕೊಳ್ಳಲು ಅವಳು ಪ್ರಯತ್ನಿಸುತ್ತಿದ್ದಂತೆಯೇ ಆ ಕ್ರೂರ ಕೈಗಳು ಅವಳ ಸೀರೆ ರವಿಕೆಗಳನ್ನು ಹರಿದೊಗೆದು ಅವಳನ್ನು ಪೂರ್ಣವಾಗಿ ಬತ್ತಲೆಗೊಳಿಸಿದಂತಾಯಿತು.

ಹ ಹ ಹ್ಹ ಹ್ಹ....

ಕ್ರೂರಕೈಗಳ ಆ ವ್ಯಕ್ತಿ ವಿಕಟವಾಗಿ ನಕ್ಕಂತಾಯಿತು; ಕೋರೆದಾಡೆಗಳ ಒರಟು ಕೂದಲುಗಳ ಕೆಂಪುಕಣ್ಣುಗಳ ಭಯಂಕರಾಕಾರದ ಶಿಲಾಯುಗದ ವ್ಯಕ್ತಿ.

ಆ ರಾಕ್ಷಸನ ಹಿಡಿತದಿಂದ ತಪ್ಪಿಸಿಕೊಂಡು ಓಡಿಹೋಗವೆಳಸುತ್ತಿದ್ದಳು ಪದ್ಮಾವತಿ. ಅವನ ಹಿಡಿತ ಸಡಿಲಾಗಲಿಲ್ಲ. ಆ ನಗ್ನ ದೇಹವನ್ನು ಒರಟಾಗಿ ಎಳೆದು ಅದನ್ನು ಬಿಗಿಯಾಗಿ ತಬ್ಬಿಕೊಂಡನಾತ........

ನೋಡುತ್ತಿದ್ದ ಮರುಳಯ್ಯನ ಮೈ ಮತ್ತೆ ಬೆವರಿತು. ಆ ದೇಹದ ಆಲಿಂಗನ ಸುಖವನ್ನು ತಾನೇ ಪಡೆದಂತೆ ಭಾಸವಾಗಿ ಅವನ ಎದೆ ಹುಚ್ಚೆದ್ದು ಕುಣಿಯಿತು. ನಿಧಾನವಾಗಿ ರಾಕ್ಷಸ ವ್ಯಕ್ತಿ ಕರಗಿ ಹೋಗಿ ಅದರ ಬದಲು ಇನ್ನೊಂದು ವ್ಯಕ್ತಿ ಕಾಣಿಸಿಕೊಂಡಿತು.

ಯಾರು ಈ ಹೊಸ ವ್ಯಕ್ತಿ?

—ಇನ್ನಾರೂ ಅಲ್ಲ; ತಾನೇ.

ಅಂದರೆ? ಪದ್ಮಾವತಿಯನ್ನು ತಬ್ಬಿಕೊಂಡ ರಾಕ್ಷಸ ವ್ಯಕ್ತಿಯೂ ತಾನೇ

ಆದಂತಾಯಿತು........

ಪರಸ್ತ್ರೀಯರ ಮೇಲಾಸೆ....ಆಲಿಂಗನ....ಚುಂಬನ....ಬಲಾತ್ಕಾರ....

ಇದು ತನ್ನ ನಿಜವಾದ ಅಂತರಂಗ....

ಅಧ್ಯಾತ್ಮ....ಯೋಗಾಭ್ಯಾಸ....ಸಾಕ್ಷಾತ್ಕಾರ....

ಎಲ್ಲ ಸುಳ್ಳು. ಎಲ್ಲ ಜಳ್ಳು.

ಎಲ್ಲ 'ಬೋಗಸ್'....

ಬ್ರಹ್ಮಚರ್ಯವ್ರತ....ಹೆಂಡತಿಯಿಂದ ದೂರ ಮಲಗಿಕೊಳ್ಳುವುದು....

ಮುಟ್ಠಾಳತನ....ಅವಿವೇಕ....'ನಾನ್ಸೆನ್ಸ್'....

"ಕಮಲಮುಖೀ....ಕಮಲಮುಖೀ!" ತನಗರಿಯದಂತೆಯೆ ಆತ ಕೂಗಿ ಕರೆದ.

"ಏನು? ಏನು ದೇವ?" ಎಂದು ಆಕೆ ಅಡುಗೆಮನೆಯಿಂದಲೇ ಕೇಳಿದಳು.

"ಇಲ್ಲಿ ಬರ್ರಿ. ಬೇಗ ಬರ್ರಿ, ಬೇಗ ಬರ್ರಿ." ಎಂದು ಆತ ಮತ್ತೆ ಕೂಗಿದ. ಆ ಧ್ವನಿಯಲ್ಲಿ ಅವಸರವಿತ್ತು, ಆತುರವಿತ್ತು, ಉದ್ರೇಕವಿತ್ತು.

ಏನಾಯಿತೋ ಏನೋ ಎಂದು ಗಾಬರಿಗೊಂಡು ಪಾತ್ರೆಗಳನ್ನು ಹಾಗೆಯೆ ಬಿಟ್ಟು ಓಡಿ ಬಂದಳು ಕಮಲಮುಖಿ.

ಗುಡ್ಡ ಹತ್ತಿ ಬಂದವರು ಉಸಿರು ಬಿಡುವಂತೆ ವೇಗವಾಗಿ ಉಸಿರು ಬಿಡುತ್ತ ಅವಳು ಬರುವುದನ್ನೆ ಕಾಯುತ್ತ ನಿಂತುಕೊಂಡಿದ್ದ ಮರುಳಯ್ಯ.

ಕೊಟಡಿಯಲ್ಲಿನ ದೀಪ ಆರಿ ಹೋಗಿತ್ತು. ಹೊರಗೆ ಇನ್ನೂ ಬೆಳಕು ಹರಡಿಕೊಂಡಿರಲಿಲ್ಲ. ಕೊಟಡಿಯಲ್ಲಿ ಮಬ್ಬುಗತ್ತಲು.

"ದೀಪ ಹಾಕಬೇಡ್ರಿ ಕಮಲಮುಖೀ!"

ಅವನ ಧ್ವನಿ ಎಂದಿನಂತಿರಲಿಲ್ಲವೆಂಬುದರ ಅರಿವಾಗುತ್ತಲೂ ಅವಳು ಒಳಗೆ ಬರದೆ ಬಾಗಿಲಲ್ಲಿಯೇ ನಿಂತುಕೊಂಡು,

"ಏನಾಯ್ತು?" ಎಂದು ಕೇಳಿದಳು.

"ಏನಿಲ್ಲ. ಏನಿಲ್ಲ. ಇಲ್ಲಿ ಬರ್ರಿ."

ಅವಳು ನಿಧಾನವಾಗಿ ಹೆಜ್ಜೆ ಹಾಕುತ್ತ ಅವನ ಹತ್ತಿರ ಬಂದು ನಿಂತುಕೊಂಡಳು. ಒಲೆಯಿಂದ ಚಿಮ್ಮುವ ಝಳದಂತೆ ಅವನ ಮೂಗಿನಿಂದ ಬಿಸಿ

ಯುಸಿರು ಚಿಮ್ಮಿ ಬರತೊಡಗಿತು.

"ಕಮಲಮುಖೀ....ಕಮಲಮುಖೀ....ಕಮಲಾ...." ಎನ್ನುತ್ತಾ ಆತ ಅವಳನ್ನು ತಬ್ಬಿಕೊಂಡ. ಅವಳು ಚಕಿತಳಾಗಿ, ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಗೊಳಿಸದೆ ಮೂಕ ಬೊಂಬೆಯಂತೆ ನಿಂತುಕೊಂಡಿದ್ದಳು.

ಅರೆಕ್ಷಣದಲ್ಲಿಯೆ ಮರುಳಯ್ಯನ ಹಿಡಿತ ಸಡಿಲಾಯಿತು. ವಿದ್ಯುಚ್ಛಕ್ತಿಯ ಸ್ಪರ್ಶವಾದವನಂತೆ ನರಳುತ್ತಾ ಆತ ಅವಳಿಂದ ದೂರ ಸರಿದು ಮತ್ತೆ ಚಾಪೆಯ ಮೇಲೆ ಕುಸಿದು ಕುಳಿತು ಮುಖವನ್ನು ಕೈಗಳಲ್ಲಿ ಮುಚ್ಚಿಕೊಂಡ. ಅವನ ಅಂತರಂಗದಲ್ಲಿ ಬಗೆ ಬಗೆಯ ಭಾವನೆಗಳ ಬಿರುಗಾಳಿ ಮೊರೆಯತೊಡಗಿತು.

ತಪ್ಪು. ತಾನು ಉದ್ರೇಕದ ವಶನಾದುದು ದೊಡ್ಡ ತಪ್ಪು.

ಬ್ರಹ್ಮಚರ್ಯವೇ ತನಗಾಗಿ ಹೇಳಿ ಮಾಡಿಸಿದ ಉಪಾಯ.

ಆ ಹಾದಿಯಲ್ಲಿ ಮುಂದುವರಿದರೇನೇ ತನ್ನ ಜನ್ಮ ಸಾರ್ಥಕ.

"ಓ ಮಹಾಮಾತೆ, ಮಹಾಗುರುವೆ, ಕಾಪಾಡಬಾರದೇ ನಿಮ್ಮ ಈ ಕಂದನನ್ನ ?"

ಬಂದ ಹಾಗೇ ಹಿಂದಿರುಗಿ ತನ್ನ ಕೆಲಸಕ್ಕೆ ನಡೆದಳು ಕಮಲ—ಅವಳ ಹೃದಯವೂ ಅಳುತ್ತಿತ್ತು. ಕಣ್ಣುಗಳಲ್ಲಿ ಕಂಬನಿ ಕಾಣಿಸಿಕೊಳ್ಳಲಿಲ್ಲ, ಅಷ್ಟೆ. ಕಣ್ಣೀರು ಸುರಿಸುವುದರಿಂದ ಯಾವ ಪ್ರಯೋಜನವೂ ಆಗದೆಂಬುದನ್ನು ಅವಳು ಎಂದೋ ಕಂಡುಕೊಂಡಿದ್ದಳು.

ಮರುಳಯ್ಯ ಮತ್ತೆ ಎದ್ದು ಕೊಟಡಿಯ ಬಾಗಿಲು ಮುಚ್ಚಿ, ಚಿಲಕ ಹಾಕಿ ಭದ್ರಪಡಿಸಿದ, ಗುಂಡಿಯನ್ನೆಳೆದು ವಿದ್ಯುದ್ದೀಪವನ್ನು ಬೆಳಗಿಸಿದ. ಟ್ರಂಕಿನ ಬೀಗ ತೆಗೆದು ಅದರಲ್ಲಿದ್ದ ವಹಿಯೊಂದನ್ನು ಕೈಯಲ್ಲಿ ಹಿಡಿದು ಮೇಜಿನ ಬಳಿ ಬಂದು ಕುಳಿತುಕೊಂಡ. ಹಲವು ಪುಟಗಳನ್ನು ಮಗುಚಿ ಹಾಕಿ ತೆರವಾಗಿದ್ದ ಪುಟದಿಂದ ಬರೆಯಲಾರಂಭಿಸಿದ.

೨

ಬರೆಯುವುದಾದ ಬಳಿಕ ಪುನಃ ಆ ವಹಿಯನ್ನು ಕಪಾಟಿನಲ್ಲಿಟ್ಟು ಬೀಗ ಹಾಕಿ ಆತ ಬಾಗಿಲು ತೆಗೆದು ಪ್ರಾತರ್ವಿಧಿಗಳನ್ನು ತೀರಿಸಲೆಂದು ಹಿತ್ತಲಿಗೆ ಬಂದಾಗ ಚೆನ್ನಾಗಿ ಬೆಳಕಾಗಿತ್ತು. ನಲ್ಲಿಯ ಹತ್ತಿರ ನಿಂತು ಹಲ್ಲುಜ್ಜಿಕೊಳ್ಳುತ್ತಿದ್ದ ಮುಕ್ಕಣ್ಣ ನಗುನಗುತ್ತಾ ಕೇಳಿದ :

“ ಪ್ರಾರ್ಥನೆ ಮುಗೀತೇನ್ರೀ ? ”

ಮರುಳಯ್ಯ ಉತ್ತರವೀಯಲಿಲ್ಲ ; ಮುಕ್ಕಣ್ಣನ ಕಡೆ ದೃಷ್ಟಿಯನ್ನೂ ತಿರುಗಿಸದೆ ನೇರವಾಗಿ ಕಕ್ಕಸಕ್ಕೆ ನಡೆದ.

ಆತ ಹಿಂದಿರುಗಿ ಬರುವುದರೊಳಗಾಗಿ ಸ್ನಾನದ ನೀರು ಸಿದ್ಧವಾಗಿತ್ತು. ಮರುಳಯ್ಯ ಮೌನವಾಗಿಯೆ ಸ್ನಾನ ಮುಗಿಸಿದ. ಏನನ್ನೋ ಹೇಳಬೇಕೆಂದುಕೊಂಡಿದ್ದ ಕಮಲ ಮತ್ತೇನನ್ನೊ ಯೋಚಿಸಿ ನಾಲಗೆಯ ಮೇಲೆ ಮೂಡಿದ್ದ ಮಾತನ್ನು ಅಲ್ಲಿಯೆ ತಡೆ ಹಿಡಿದಳು.

ಎಷ್ಟೋ ತಿಂಗಳುಗಳಿಂದ ಹಾಗೆಯೆ ನಡೆದು ಬಂದಿತ್ತು. ಗಂಡಹೆಂಡರಲ್ಲಿ ವಿಶೇಷವಾದ ಮಾತು ನಡೆಯುತ್ತಿರಲಿಲ್ಲ. ಮರುಳಯ್ಯನಂತೂ ಮೊದಲಿನಿಂದಲೂ ಮಿತ ಭಾಷಿ. ಸಂಸಾರಕ್ಕಾರಂಭಿಸಿದಂದಿನಿಂದ ಮತ್ತಷ್ಟು ಹೆಚ್ಚಿತ್ತು ಮೌನವೃತ್ತಿ. ತವರುಮನೆಯಲ್ಲಿ ವಾಚಾಳಿಯೆನಿಸಿಕೊಂಡಿದ್ದ ಕಮಲಳೂ ಈ ಮಿತಭಾಷಿಯ ಸಹವಾಸದಲ್ಲಿ ಮೂಕಳಾಗಬೇಕಾಗಿ ಬಂದಿತ್ತು.

ಮನೆಯಲ್ಲಿನ ಕಾಳುಕಡ್ಡಿ ಮತ್ತಿತರ ಸಾಮಗ್ರಿಗಳು ತೀರಿದಾಗ ಅವಳು ಆ ವಿಚಾರ ಪ್ರಸ್ತಾಪಿಸುವುದು ಅನಿವಾರ್ಯವಾಗುತ್ತಿತ್ತು. “ ಆಯ್ತು. ಇವತ್ತು ತರ್ತೀನಿ,” ಎಂದಿಷ್ಟೆ ಹೇಳಿ ಆ ಮಾತನ್ನು ಅಲ್ಲಿಗೇ ಮುಗಿಸುತ್ತಿದ್ದ ಮರುಳಯ್ಯ.

ಸಾಯಂಕಾಲ ಶಾಲೆಯಿಂದ ಬರುತ್ತಾ ಆ ವಿಷಯ ನೆನಪಾದರೆ ಸಾಮಾನು ಮನೆಗೆ ಬರುತ್ತಿತ್ತು; ಇಲ್ಲವಾದರಿಲ್ಲ.

ಮತ್ತೊಂದು ಬಾರಿ ಎಚ್ಚರಿಸುವಳು ಕಮಲ. ಆ ದಿನ ಮಾತ್ರ ಆತ ಆ ವಿಚಾರವನ್ನು ಮರೆಯದೆ ಸಾಮಗ್ರಿಗಳನ್ನು ತಂದು ಹಾಕುತ್ತಿದ್ದ.

ಈ ದಿನ ಮನೆಯಲ್ಲಿ ಬೇಳೆಯಿರಲಿಲ್ಲ, ಸೌದೆಯಿರಲಿಲ್ಲ. ಉಳಿದಿದ್ದ ನಾಲ್ಕು ತುಂಡುಗಳನ್ನು ನೀರೊಲೆಗೆ ಹಾಕಿ ನೀರು ಕಾಯಿಸಿದ್ದಳು ಕಮಲ. ಮಧ್ಯಾಹ್ನದ ಅಡುಗೆಗೆ ಆ ಕೂಡಲೇ ಕಟ್ಟಿಗೆ ಅಗತ್ಯವಾಗಿತ್ತು. ಸೌದೆ ತೀರಿದ ಸಂಗತಿಯನ್ನು ಅವಳು ಮುನ್ನಾದಿನವೆ ತಿಳಿಸಿದ್ದರೂ ಆತ ಅದನ್ನು ಲಕ್ಷ್ಯಕ್ಕೆ ತಂದುಕೊಂಡಿರಲಿಲ್ಲ. ಸಂಸಾರದ ಬೇಕು ಬೇಡಗಳನ್ನು ಗಮನಿಸುವ ಗಂಡಸರು ಇಂಥ ಸಂಗತಿಗಳನ್ನು ತಾವಾಗಿಯೆ ತಿಳಿದುಕೊಳ್ಳುತ್ತಾರೆ. ಮರುಳಯ್ಯನಿಗೆ ಮಾತ್ರ ಇವುಗಳೆಲ್ಲಾ 'ಕ್ಷುಲ್ಲಕ ವಿಷಯ'ಗಳು. ಅವನ ಲಕ್ಷ್ಯವೆಲ್ಲವೂ ಪೂರ್ಣ ಯೋಗದಲ್ಲಿ. ಸಾಧ್ಯವಾದಷ್ಟು ಬೇಗ ಸಾಧನೆಯಲ್ಲಿ ಮುಂದುವರಿದು ಸಾಕ್ಷಾತ್ಕಾರ ಪಡೆಯುವುದಕ್ಕಾಗಿ ಆತ ಹಂಬಲಿಸುತ್ತಿದ್ದ. ಆ ಹಾದಿಯಲ್ಲಿ ಸಂಸಾರವೊಂದು ಗುಡ್ಡದಂತೆಯೂ ಕಮಲಮುಖಿ ಒಂದು ಹಗ್ಗದಂತೆಯೂ ಅಡ್ಡ ಬರುತ್ತಿದ್ದಂತೆ ಅವನಿಗೆ ತೋರುತ್ತಿತ್ತು.

ಆ ಗುಡ್ಡವನ್ನು ಕೊರೆದು ನುಗ್ಗಿ ಆ ಹಗ್ಗವನ್ನು ಹರಿದು ಬಿಸುಟು ದೃಢ ಸಂಕಲ್ಪದಿಂದ ಮುಂದೆ ಸಾಗಬೇಕೆಂದು ಆತ ಯೋಚಿಸಿದ್ದುದು ಸಾವಿರ ಬಾರಿ. ಅದಕ್ಕೆ ಅವಶ್ಯವಿದ್ದ ಮಾನಸಿಕ ಸ್ಥೈರ್ಯವೂ ಅವನಲ್ಲಿರಲಿಲ್ಲ.

ಸಂಸಾರವನ್ನು ಪೂರ್ತಿಯಾಗಿ ಮುರಿದು ಹಾಕುವುದೇ?

ಕಮಲಳನ್ನು ಪೂರ್ತಿಯಾಗಿ ತ್ಯಜಿಸಿ ಬಿಡುವುದೇ?

ಕಮಲ ಏನು ತಪ್ಪು ಮಾಡಿದಾಳೆ? ಅವಳನ್ನೇಕೆ ಬಲಿ ತೆಗೆದುಕೊಳ್ಳಬೇಕು?

ತಾನೇನೋ ಎಲ್ಲವನ್ನೂ ಬಿಟ್ಟು ಕರಾಚೂರಿಗೆ ಹೋಗಿ ಆಶ್ರಮದಲ್ಲಿ ಸನ್ಯಾಸಿಯಂತೆ ಇದ್ದು ಬಿಡಬಹುದು.

ತನ್ನ ಹಾಗೆ ಕಮಲ ಇರಲು ಸಾಧ್ಯವೆ?

ತನ್ನಂತೆ ಅವಳನ್ನೂ ಸಾಧಕಳನ್ನಾಗಿ ಮಾಡಲು ಇಷ್ಟು ದಿನ ಯತ್ನಿಸಿದ್ದುದಾಯಿತು. ಈ ವಿಚಾರದಲ್ಲಿ ಅವಳಿಗೆ ಕೊಂಚವೂ ಆಸಕ್ತಿಯಿಲ್ಲ. ಅವಳಾದರೂ ಏನು ಮಾಡಿಯಾಳು?

ಶ್ರೀ ರಾಮಕೃಷ್ಣ ಪರಮಹಂಸರಿಗೆ ಶ್ರೀ ಶಾರದಾಮಣಿದೇವಿ ಇದ್ದ ಹಾಗೆ ಅವಳು ತನ್ನ ಜೊತೆಗಿರುವುದಾದರೆ ಚಿಂತೆಯೇನೂ ಇಲ್ಲ. ಆದರೆ ...

ಹಾಗೆ ಯೋಚಿಸುತ್ತಾ ಆತ ಅವಳನ್ನು ಕೂಗುವನು :

" ಕಮಲಮುಖೀ, ಓ ಕಮಲಮುಖೀ ! "

ಹೆಂಡತಿಯನ್ನಾತ ಸಂಬೋಧಿಸುತ್ತಿದ್ದುದು ಹಾಗೆ. " ಕಮಲಾ " ಎಂದು ಏಕವಚನದಲ್ಲಿ ಅವಳನ್ನು ಕರೆಯುವುದು ಅಗೌರವದ, ಅನಾಗರಿಕತೆಯ ಲಕ್ಷಣ ವೆಂದೇ ಅವನು ಭಾವಿಸಿದ್ದ. " ಅವಳು ಮಾತ್ರ ನನಗೆ ರೀ ರೀ ಅನ್ನಬೇಕು, ನಾನ್ಯಾಕೆ ಅವಳಿಗನ್ನಬಾರದು ? ಬಾರೇ ಹೋಗೇ ಅಂತ ಆಡುವುದು ಎಂಥ ಅಸಂಸ್ಕೃತತನ ! ಅವಳೂ ಮನುಷ್ಯಳೇ ಅಲ್ಲವೆ ? " ಎಂದುಕೊಂಡು ಆತ ಮೊದಲಿನಿಂದಲೂ ಅವಳನ್ನು ಬಹುವಚನದಲ್ಲಿಯೆ ಸಂಬೋಧಿಸುತ್ತ ಬಂದಿದ್ದ. ಹಾಗೆಲ್ಲ ಕರೆಯಬಾರದೆಂದು ಕಮಲ ಎಷ್ಟೋ ಬಾರಿ ಕೇಳಿಕೊಂಡಿದ್ದಳಾದರೂ ಮರುಳಯ್ಯ ತನ್ನ ಪದ್ಧತಿಯನ್ನು ತ್ಯಜಿಸಿರಲಿಲ್ಲ.

" ಗಂಡಹೆಂಡಿರೆಂದರೆ ಇಬ್ಬರೂ ಸಮಾನರು. ನಾನು ಹೆಚ್ಚಲ್ಲ, ನೀವು ಕಡಿಮೆಯಲ್ಲ. ನನಗಿರುವಷ್ಟೇ ಮರ್ಯಾದೆ ನಿಮಗೂ ಅದ. ನನಗಿರುವಷ್ಟೇ ಅಧಿಕಾರ ನಿಮಗೂ ಅದ. ನಿಮ್ಮನ್ನ ಮರ್ಯಾದೆಯಿಂದ ಮಾತಾಡಿಸದಿದ್ದರೆ ನನ್ನ ತತ್ವಗಳಿಗೆ ಅರ್ಥವಿಲ್ಲದಂತಾಗ್ತದ," ಎಂದು ಆತ ವಾದಿಸಿದ್ದ.

" ಹೋಗಲಿ. ಕಮಲಾ ಅಂತ ಕರೀರಿ, ಸಾಕು. ಕಮಲಮುಖಿ ಅಂದರೇನದು ವಿಚಿತ್ರ ? "

ಮರುಳಯ್ಯನಿಗೆ ಮಾತ್ರ ಅದರಲ್ಲಿ ವೈಚಿತ್ರ್ಯವಾವುದೂ ಕಾಣಿಸಿರಲಿಲ್ಲ.

" ಕಮಲಮುಖಿ, ಇಲ್ಲಿ ಬರ್ರಿ," ಎನ್ನುತ್ತಿದ್ದನಾತ.

" ಮೊನ್ನೆ ಶ್ರೀ ರಾಮಕೃಷ್ಣರ ಚರಿತ್ರೆ ಓದಲು ಸುರುಮಾಡಿದ್ದಿರಲ್ಲಾ, ಮುಗಿಸಿದಿರಾ ? " ಎಂದು ಕೇಳುತ್ತಿದ್ದ. ಮೂರು ವರ್ಷಗಳ ಹಿಂದಿನ ಮಾತು ಅದು.

" ಸ್ವಲ್ಪ ಸ್ವಲ್ಪ ಓದೀನಿ," ಎಂದು ನಿಜವನ್ನೆ ಹೇಳುತ್ತಿದ್ದಳಾಕೆ.

" ಇನ್ನೂ ಮುಗಿಸಲಿಲ್ಲೇನು ? " ಎಂದು ಬೇಸರದ ಧ್ವನಿಯಲ್ಲಿ ಕೇಳುತ್ತಿದ್ದ ಮರುಳಯ್ಯ.

" ನನಗದು ಹಿಡಿಸೂದಿಲ್ಲ," ಎಂದು ಸತ್ಯವನ್ನೇ ಹೇಳುತ್ತಿದ್ದಳಾಕೆ.

ವೇದಾಂತ ಮತ್ತು ವೇದಾಂತಿಗಳ ಚರಿತ್ರೆ ಎಂದರೆ ಅವಳಿಗೆ ತಲೆನೋವು ಬಂದುಬಿಡುತ್ತಿತ್ತು. ಕತೆ ಕಾದಂಬರಿಗಳನ್ನು ಮಾತ್ರ ಅವಳು ಬಹಳ ಉತ್ಸಾಹ ದಿಂದ ಓದುತ್ತಿದ್ದಳು. ಮರುಳಯ್ಯನಿಗೂ ಕಾದಂಬರಿಗಳ ಬಗೆಗೆ ಪ್ರೀತಿಯಿದ್ದಿ

ತಾವನೂ ಅದನ್ನಾತ ಬಹಿರಂಗವಾಗಿ ವ್ಯಕ್ತಗೊಳಿಸುತ್ತಿರಲಿಲ್ಲ. ಕತೆ, ಕಾದಂಬರಿ, ನಾಟಕಗಳೆಂದರೆ ಅಗ್ಗದ ಅಶ್ಲೀಲ ಪುಸ್ತಕಗಳು, ಅವುಗಳನ್ನೋದುವುದರಿಂದ ನೈತಿಕ ಅಧಃಪತನವಾಗುವುದು ಎಂದು ಮೊದಲಾಗಿ ಆತ ಹೇಳುತ್ತಿದ್ದ.

"ಶೃಂಗಾರ ಸಾಹಿತ್ಯ ಓದಿ ಓದಿಯೇ ಹಿಂದುಸ್ಥಾನ ಪರತಂತ್ರನಾದದ್ದು ಕಮಲಮುಖೀ. ಪೇಶ್ವೆ ಬಾಜೀರಾಯನ ಲಂಪಟತನದಿಂದಲೇ ನಮಗೆ ದಾಸ್ಯ ಬಂದದ್ದು. ನಮ್ಮ ಸಂಸ್ಕೃತಿ ಅಂದರೆ ಬಹಳ ಉಚ್ಚ ಸಂಸ್ಕೃತಿ. ಅದನ್ನ ತಿಳುಕೊಳ್ಳಬೇಕಾದರೆ ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದ ಕರಾಚೂರಿನ ಮಹಾಗುರುಗಳ ಚರಿತ್ರೆಗಳನ್ನ, ಅವರ ತತ್ವಜ್ಞಾನಗಳನ್ನ ಓದಿಕೊಳ್ಳಬೇಕು."

"ನನಗೇನು ಬೇಡ ತಾಯೀ. ವೇದಾಂತಕ್ಕೇನು ವಯಸ್ಸೇ ಇದು?" ಎನ್ನುವಳು ಕಮಲ.

"ತ್ಚ್... ತ್ಚ್....ತ್ಚ್... ವಯಸ್ಸಿಗೂ ಇದಕ್ಕೂ ಏನು ಸಂಬಂಧ? ಶ್ರೀ ರಾಮಕೃಷ್ಣರೂ ಕೂಡಾ ಚಿಕ್ಕವಯಸ್ಸಿನವರಿರುವಾಗಲೇ ..." ಎಂದು ಮರುಳಯ್ಯ ಆರಂಭಿಸುವನು.

"ನಿಮಗೊಂದು ಹುಚ್ಚು. ಆ ರಾಮಕೃಷ್ಣರದು....ಅವರ ಹಾಗೆ ನೀವೂ ಯಾಕೆ ಸನ್ಯಾಸಿ ಆಗಲಿಲ್ಲ" ಮದುವೆಯನ್ನ್ಯಾಕೆ ಮಾಡಿಕೊಂಡಿರಿ?" ಎಂದು ಅವಳು ಬೇಸರದಿಂದ ನುಡಿಯುವಳು.

"ಅಯ್ಯೋ....ಅದಕ್ಕೇ ಹೇಳಿದ್ದು ನಾನು....ಅವರ ಚರಿತ್ರೆ ಓದಿರೀ ಅಂತ. ಶ್ರೀ ರಾಮಕೃಷ್ಣ ಪರಮಹಂಸರಿಗೂ ಮದುವೆಯಾಗಿತ್ತು ಕಮಲಮುಖೀ. ಅವರಿಗೂ ಹೆಂಡತಿಯಿದ್ದಳು. ಶ್ರೀ ಶಾರದಾಮಣೀದೇವಿ ಅಂತ. ಗಂಡನ ಹಾದಿಯಲ್ಲೇ ನಡೆದು ಅವರೂ ಮಹಾಮಾತೆ ಅನಿಸಿಕೊಂಡರು. ನೀವೂ ಅವರ ಹಾಗೇ ಆಗಬೇಕು ಕಮಲಮುಖಿ!"

ಅವಳಿಗೆ ಒಳಗೊಳಗೇ ನಗುವುಕ್ಕಿ ಬರುವುದು. ಗಂಡನ ಮರುಳತನದ ಬಗೆಗೆ ಕನಿಕರವೆನ್ನಿಸುವುದು.

"ಎಲ್ಲರೂ ಅವರ ಹಾಗೇ ಆಗೂದು ಎಲ್ಲಿ ಶಕ್ಯ ಅದ? ನಮ್ಮಂಥ ಸಾಧಾರಣ ಮಂದಿ...."

ಅವಳನ್ನು ನಡುವೆಯೆ ತಡೆದು ಮರುಳಯ್ಯ ಹೇಳುವನು.

"ಛೆ, ಛೆ, ಛೆ, ಹಾಗಲ್ಲ. ಹಾಗಲ್ಲ. ನೀವು ತಿಳಿದಿರೂದು ಪೂರಾ ತಪ್ಪು. ಶ್ರೀ ಶಾರದಾಮಣೀದೇವಿಯವರೂ ಕೂಡಾ ನಿಮ್ಮ ಹಾಗೇ ನಮ್ಮ ಹಾಗೇ ಸಾಧಾರಣರೇ ಆಗಿದ್ದರು. ನೀವಾದರೂ ಸ್ವಲ್ಪ ಸ್ವಲ್ಪ ಇಂಗ್ಲೀಷು ಕಲಿತೀರಿ. ಪುಸ್ತಕ ಗಿಸ್ತಕ ಓದಿಕೊಂಡೀರಿ. ಶಾರದಾಮಣಿದೇವಿಯವರಿಗೆ ಇದ್ಯಾವುದೂ ಗೊತ್ತಿರಲಿಲ್ಲ. ಅಂಥಾ ಸಾಧಾರಣ ಹೆಂಗಸು ಶ್ರೀ ರಾಮಕೃಷ್ಣಪರಮಹಂಸರ ಸಹವಾಸದಲ್ಲಿ ಮಹಾ ಅಧ್ಯಾತ್ಮಿಯಾದರು. ಇವತ್ತು ಲೋಕಕ್ಕೆ ಲೋಕವೆಲ್ಲ ಅವರನ್ನ ಪೂಜೆ ಮಾಡ್ತದ."

ಲೋಕವೆಲ್ಲವೂ ಅವರನ್ನು ಪೂಜಿಸುವುದೆಂಬುದು ಅತಿಶಯೋಕ್ತಿಯೆಂದು ಕಮಲ ಬಲ್ಲಳು. ಇವರ ಕೈಹಿಡಿದು ಇವರ ಜೊತೆಗೆ ಸಂಸಾರ ಹೂಡುವ ಮೊದಲು ತನಗೇ ತಿಳಿದಿರಲಿಲ್ಲವಲ್ಲ ರಾಮಕೃಷ್ಣ, ಶಾರದಾಮಣಿಯವರ ಹೆಸರು? ಶಿವ-ಪಾರ್ವತಿ, ಸತ್ಯವಾನ್-ಸಾವಿತ್ರಿ, ರಾಮ-ಸೀತಾ, ರಾಧಾ-ಕೃಷ್ಣ ಎಲ್ಲರೂ ಗೊತ್ತು ತಮಗೆ. ರಾಮಕೃಷ್ಣ-ಶಾರದಾಮಣಿ...."

ಮರುಳಯ್ಯ ಮುಂದುವರಿಸುತ್ತಿದ್ದ.

"ಶಾರದಾಮಣಿದೇವಿ ದೊಡ್ಡಾಕೆಯಾಗಿ ಶ್ರೀ ರಾಮಕೃಷ್ಣರ ಹತ್ತಿರ ಬಂದಾಗ ಗುರುದೇವರಿಗೆ ದೇವರ ಹುಚ್ಚು ಪೂರಾ ಹಿಡಿದುಬಿಟ್ಟಿತ್ತು. ಪೂರ್ಣ ಬ್ರಹ್ಮಚರ್ಯದಿಂದಿದ್ದು ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬೇಕಂತ ನಿಶ್ಚಯಿಸಿದ್ದರು. ಅದಕ್ಕೆಂದೇ, ಹೆಂಡತಿ ಬಂದು ಎದುರಿಗೆ ನಿಂತಾಗ ಸ್ಪಷ್ಟವಾಗಿ ಹೇಳಿದರು. 'ನೀನು ನನ್ನ ಹೆಂಡತಿ ಅನ್ನೂದು ನಿಜ. ನಿನಗೆ ಇಚ್ಛೆ ಇದ್ದರೆ ಹೇಳು. ನಿನ್ನ ಸಂಗಡ ಸಂಸಾರ ಮಾಡ್ತೀನಿ—ಅದು ನನ್ನ ಕರ್ತವ್ಯ ಅಂತ ತಿಳಿದು' ಅಂತ. 'ನಿಮ್ಮಿಚ್ಛೆಯೇ ನನ್ನ ಇಚ್ಛೆ,' ಅಂದರು ಆ ಮಹಾತಾಯಿ. ಅದಕ್ಕೆ ಗುರುದೇವರು, 'ಜಗತ್ತಿನ ಸ್ತ್ರೀಯರೆಲ್ಲಾ ನನ್ನ ತಾಯಂದಿರಂತ ನಾನು ಭಾವಿಸಿದ್ದೀನಿ. ಹಾಗೇ ನೀನೂ ನನ್ನ ತಾಯಿ ಅಂತ ಭಾವಿಸ್ತೀನಿ,' ಅಂದರು. 'ಹಾಗೇ ಆಗಲಿ ಗುರುದೇವಾ,' ಅಂದರು ಮಹಾತಾಯಿ. ಅಂದಿನಿಂದ ಅವರೂ ಶ್ರೀ ರಾಮಕೃಷ್ಣರನ್ನ ತಮ್ಮ ಗುರು ಅಂತ ಭಾವಿಸಿಕೊಂಡು ದೇವರನ್ನೊಲಿಸಲು ತಪಸ್ಸು ಮಾಡಿದರು.. ಗೊತ್ತಾತೇ ಕಮಲಮುಖೀ? ಶ್ರೀ ಶಾರದಾಮಾತೆಯವರ ಹಾಗೇ ನೀವೂ ಕೂಡಾ ನನ್ನ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು...."

ಕಮಲಳಿಗೆ ಮತ್ತೆ ನಗುವುಕ್ಕಿ ಬರುವುದು. ತನ್ನಷ್ಟಕ್ಕೆ ತಾನೆ ಹೇಳಿ

ಕೊಳ್ಳುವಳು. “ತಾವೂ ರಾಮಕೃಷ್ಣರ ಅವತಾರ ಅಂತಲೇ ಇವರು ತಿಳು ಕೊಂಡು ಬಿಟ್ಟಿದಾರೇನೊ. ಅದಕ್ಕೇ ಮತ್ತೆ ಮತ್ತೆ ಅವರ ಹೆಸರು ಹೇಳೂದು. ಎಲ್ಲರೂ ಹಾಗೆ ಆಗೂದು ಅಶಕ್ಯ ಅನ್ನೂದು ಇವರ ತಲೆಗೆ ತಿಳಿಯೂದಿಲ್ಲಲ್ಲ? ನನ್ನ ಹಣೇಬರಹ...”

ಮಲಗುವ ಕೊಟಡಿಯಲ್ಲಿ ಶ್ರೀ ರಾಮಕೃಷ್ಣ, ಶಾರದಾಮಾತೆ, ಕರಾಚೂರಿನ ಮಹಾಗುರು ಮತ್ತು ಮಹಾಮಾತೆಯರ ದೊಡ್ಡ ದೊಡ್ಡ ಚಿತ್ರಪಟಗಳನ್ನು ತೂಗ ಹಾಕಿ ದಿನವೂ ಅವುಗಳನ್ನು ಪೂಜಿಸುತ್ತಿದ್ದ ಮರುಳಯ್ಯ; ಅವುಗಳಿಗೆ ನೈವೇದ್ಯ ತೋರಿಸಿದ ತರುವಾಯ ಅನ್ನ ಸ್ವೀಕರಿಸುತ್ತಿದ್ದ. ಆಗಾಗ, ಆಯಾ ಮಹಾವ್ಯಕ್ತಿಗಳ ಜನ್ಮದಿನ ಮರಣದಿನಗಳಂದು ವಿಶೇಷ ಪೂಜೆಯನ್ನು ನಡೆಸುತ್ತಿದ್ದ. ಆಗ ವಿಶೇಷ ಭಜನೆ, ವಿಶೇಷ ಪ್ರಾರ್ಥನೆ, ವಿಶೇಷ ಗದ್ದಲ. ಅದಾವುದರಲ್ಲೂ ಆಸಕ್ತಿಯಿರದಿದ್ದರೂ ಕಮಲಳೂ ಅದರಲ್ಲಿ ಭಾಗವಹಿಸಬೇಕಾಗುತ್ತಿತ್ತು. ಗದ್ದಲವೆಲ್ಲಾ ಮುಗಿದ ಬಳಿಕ ಆ ಪಟಗಳಿಗೆ ಆರತಿಯನ್ನು ಬೆಳಗಬೇಕಾಗುತ್ತಿತ್ತು. ಎಲ್ಲವೂ ಕೊನೆಗಂಡ ತರುವಾಯ ಮರುಳಯ್ಯ ಸಮಾಧಿಯಿಂದೆದ್ದವರ ಹಾಗೆ ನಟಿಸುತ್ತಾ ಹೆಂಡತಿಯ ಕಾಲು ಹಿಡಿದುಕೊಂಡು ಅವಳಿಗೂ ನಮಸ್ಕರಿಸಿ,

“ಮಹಾತಾಯಿಾ, ಮಹಾಕಾಳೀ, ಜಗದಂಬೇ, ಕಾಪಾಡು, ಕಾಪಾಡು. ಶ್ರೀ ರಾಮಕೃಷ್ಣರನ್ನ ಉದ್ಧರಿಸಿದಾಕೆ ನೀನು. ವಿವೇಕಾನಂದರನ್ನ ಉದ್ಧರಿಸಿದಾಕೆ ನೀನು. ಕರಾಚೂರಿನ ಮಹಾಗುರುವನ್ನು ಎತ್ತಿಹಿಡಿದಾಕೆ ನೀನು. ನನ್ನನ್ನು ಉದ್ಧರಿಸು. ಕೃಪೆಮಾಡು, ಕೃಪೆಮಾಡು.” ಎನ್ನುತ್ತಾ ಅವಳನ್ನು ತಬ್ಬಿಕೊಳ್ಳುವನು.

ಅವಳು ತಬ್ಬಿಬ್ಬಾಗಿ, ಅವನ ಹಿಡಿತದಿಂದ ತಪ್ಪಿಸಿಕೊಂಡು ಕೊಟಡಿಯಿಂದ ಜಾರಿಕೊಳ್ಳುವಳು.

“ದಿನದಿಂದ ದಿನಕ್ಕೆ ಇವರ ತಲೆ ಹೆಚ್ಚೆಚ್ಚು ಕೆಡಲಿಕ್ಕೆ ಹತ್ತಿತು. ಇನ್ನೇನು ಮಾಡೂದು? ಯಾರಿಗೆ ಹೇಳೂದು?” ಎಂದು ಚಿಂತಿಸುವಳಾಕೆ.

ಅವಳು ಹೇಳುವುದಾದರೂ ಯಾರಿಗೆ?

ತಂದೆತಾಯಿ ತೀರಿಕೊಂಡಂದಿನಿಂದ ತವರುಮನೆಯೂ ಇಲ್ಲದಂತಾಗಿತು ಅವಳ ಪಾಲಿಗೆ.

ಅಣ್ಣನೊಬ್ಬನಿದ್ದ. ನಿಜ. ತಂಗಿಯಲ್ಲಿ ಅವನಿಗೆ ಪ್ರೇಮವೂ ಇತ್ತು.

ಅವನಿಗೂ ಮದುವೆಯಾಗಿ ಅವನ ಹೆಂಡತಿ ಮನೆಗೆ ಬಂದ ತರುವಾಯ ಅವಳೇ ಅವನ ಪ್ರೇಮಕ್ಕೆಲ್ಲ ಒಡತಿಯಾಗಿದ್ದಳು. ಕಮಲಳನ್ನು ಕಂಡರೆ ಅವಳಿಗಾಗದು. ಎಂತಲೇ ಓರೆಕೋರೆನಗರದಲ್ಲಿ ಸಂಸಾರ ಹೂಡಿದ ಬಳಿಕ ತವರೂರಿನತ್ತ ಸುಳಿಯುವ ಮನಸ್ಸು ಬಂದಿರಲಿಲ್ಲ ಕಮಲಳಿಗೆ. ಅಣ್ಣನೆಂಬ ಪ್ರಾಣಿ ಪೂರ್ಣವಾಗಿ ಹೆಂಡತಿಯ ಅಧೀನವಲ್ಲಿದ್ದ. ತಂಗಿಯ ಸಂಸಾರದ ತೊಂದರೆ ತಾಪತ್ರಯಗಳತ್ತ ಅವನ ಚಿತ್ತ ಹೊರಳುತ್ತಿರಲಿಲ್ಲ.

ಇನ್ನು ಯಾರೆದುರಿಗೆ ತನ್ನ ಸಮಸ್ಯೆಗಳನ್ನು ಹೇಳಬೇಕು ಕಮಲ?

ಆ ಒಬ್ಬ ಅಣ್ಣನನ್ನು ಬಿಟ್ಟು ಬೇರೆ ಆಪ್ತರಿರಲಿಲ್ಲ. ದೂರದ ಸಂಬಂಧಿಕರು ಕೆಲವರಿದ್ದರಾದರೂ ಅವರೆಲ್ಲ ಇದ್ದುದು ದೂರದೂರದ ಊರುಗಳಲ್ಲಿ. ಕಮಲಳೆಂಬ ಒಂದು ಆಪ್ತವ್ಯಕ್ತಿ ಈ ಲೋಕದಲ್ಲಿರಬಹುದೆಂಬ ಅರಿವಾದರೂ ಅವರಿಗಿದ್ದಿತೊ ಇಲ್ಲವೊ....

ಇನ್ನು ಅವಳು ಹೇಳಿಕೊಳ್ಳುವುದಾದರೂ ಯಾರ ಹತ್ತಿರ?

ತವರೂರಿನಲ್ಲಿ ಅವಳೊಡನೆ ಕೂಡಿ ಬೆಳೆದ, ಕೂಡಿ ಓದಿದ ಗೆಳತಿಯರಿದ್ದರು, ದೂರದೂರದ ನಗರಗಳಲ್ಲಿ. ಅನೇಕ ವರ್ಷಗಳಿಂದ ಅವರ ಸಂಪರ್ಕ ತಪ್ಪಿಹೋಗಿತ್ತು.

ಓರೆಕೋರೆನಗರಕ್ಕೆ ಬಂದ ಬಳಿಕ ನೆರೆಹೊರೆಯ ಹೆಂಗಸರ ಪರಿಚಯವಾಗಿತ್ತು, ನಿಜ. ಆ ಪರಿಚಯ ಬೆಳೆದು ಗಾಢ ಮೈತ್ರಿಯಾಗಿ ಪರಿಣಮಿಸಿರಲಿಲ್ಲ. ಪದ್ಮಾವತಿ ನೆರೆಮನೆಗೆ ಬಂದಂದಿನಿಂದ ಅವಳೊಡನೆ ಸಲಿಗೆ ಬೆಳೆಯುತ್ತಿತ್ತು, ಅಷ್ಟೆ. ಆದರೂ, ಅವಳೆದುರಿಗೂ ಕೂಡಾ ಮನಸ್ಸು ಬಿಚ್ಚಿ ಮಾತನಾಡುವಷ್ಟು ಮುಂದೆ ಹೋಗಿರಲಿಲ್ಲ ಕಮಲ. ವಿಚಿತ್ರ ಸ್ವಭಾವದ ಆ ಗಂಡನ ಸಹವಾಸದಲ್ಲಿ ಅವಳ ಸ್ವಭಾವವೂ ವಿಚಿತ್ರವಾದ ರೀತಿಯಲ್ಲಿ ಬದಲುಗೊಂಡಹಾಗಿತ್ತು.

ಅವಳ ಎದೆಯ ತಳಮಳ ಒಂದೊಂದು ಬಾರಿ ಚಿಲುಮೆಯ ನೀರಿನಂತೆ ಹೊರಹೊಮ್ಮಿದರೆ ಒಂದೊಂದು ಬಾರಿ ಮರುಭೂಮಿಯ ಸೆಲೆಯಂತೆ ಇದ್ದುದಿದ್ದಲ್ಲಿಯೆ ಅದೃಶ್ಯವಾಗುವುದು. ಏಕಾಕಿಯಾಗಿದ್ದ ಜೀವಕ್ಕೆ ಯಾರಾದರೂ ಜೊತೆಯೋ, ಸ್ನೇಹವೋ ಬೇಕೆಂದು ಒಮ್ಮೆ ಅನ್ನಿಸಿದರೆ ಮರುಕ್ಷಣವೇ ಎಲ್ಲವೂ ಬೇಡವೆನ್ನಿಸುವುದು.

ನ್ಯಾಯವಾಗಿ ತನಗೆ ಸಲ್ಲಬೇಕಿದ್ದ ಗಂಡನ ಜೊತೆಯಲ್ಲಿಯೇ ಇಲ್ಲದಂತಾಗಿರುವಾಗ ಬೇರೆಯವರ ಜೊತೆಯಿಂದೇನಾಗಬೇಕು?

ಎಂತಲೇ, ಪದ್ಮಾವತಿಯೊಡನೆ ಕಮಲಳಿಗೆ ಅಂಥ ಆತ್ಮೀಯತೆಯೇನೂ ಬೆಳೆದು ಬಂದಿರಲಿಲ್ಲ. ಪದ್ಮಾವತಿ ಮಾತ್ರ ಅವಳನ್ನು ಹಾಗೇಯೇ ಬಿಡದೆ ದಿನಗಳೆದ ಹಾಗೆಲ್ಲ ಹೆಚ್ಚು ಹೆಚ್ಚಿನ ಸಲಿಗೆ ತೋರುತ್ತ ಬಂದಿದ್ದಳು. ಅವಳು ವ್ಯಕ್ತಗೊಳಿಸುತ್ತಿದ್ದ ಅಕೃತ್ರಮ ಪ್ರೀತಿಯನ್ನನುಭವಿಸಿದ ಹಾಗೆಲ್ಲ ಕಮಲಳಿಗೆ ವಿಚಿತ್ರವಾದ ಸಂಕಟವಾಗುವುದು, ಸುಖವೂ ಆಗುವುದು. ಆದರೆ ಆ ಸುಖ ಹೆಚ್ಚು ಸಮಯ ಉಳಿಯುತ್ತಿರಲಿಲ್ಲ.

೩

" ಇನ್ನೂ ಅಡಿಗೆಯಾಗಲಿಲ್ಲೇನ್ರೀ ಕಮಲಮುಖೀ ? " ಎಂದು ಆಶ್ಚರ್ಯದಿಂದ ಕೇಳಿದ ಮರುಳಯ್ಯ.

ದಿನವೂ ಹತ್ತು ಗಂಟೆಗೆಲ್ಲ ಅಡುಗೆ ಸಿದ್ಧವಾಗಿರುತ್ತಿತ್ತು. ಗುರುಗಳಿಗೂ, ಮಾತೆಯರಿಗೂ ನೈವೇದ್ಯ ಅರ್ಪಿಸಿ, ನಿಧಾನವಾಗಿ ಊಟ ಮಾಡಿ ಹತ್ತು ನಿಮಿಷ ವಿರಮಿಸಿಕೊಂಡು ಶಾಲೆಗೆ ಹೊರಡುತ್ತಿದ್ದ ಮರುಳಯ್ಯ.

ಈ ದಿನ ಮಾತ್ರ ಹತ್ತು ಗಂಟೆಯಾದರೂ ಅಡುಗೆಯಿಲ್ಲ....

ಅಡುಗೆಯ ಮನೆಯ ಬಾಗಿಲಲ್ಲಿ ನಿಂತು ಆತ ಕೇಳಿದ :

" ಏನಾಯ್ತು ಕಮಲಮುಖೀ ? "

ಅವಳು ತಕ್ಷಣ ಉತ್ತರವೀಯಲಿಲ್ಲ ; ಒಂದು ನಿಮಿಷ ಸುಮ್ಮನಿದ್ದು ಅನಂತರ ನಿಧಾನವಾಗಿ ಹೇಳಿದಳು :

" ಏನಾತು ಅನ್ನೂದು ಸ್ವಲ್ಪ ನೋಡಿದರೆ ತಿಳಿದೀತು. ನಿಮಗೆ ಯಾತರ ಕಡೆಗೂ ಲಕ್ಷ್ಯ ಇಲ್ಲ. ನಾನಾರೆ ಏನು ಮಾಡಲಿ ? "

ಆ ಧಾಟಿಯಲ್ಲಿ ಆಕೆ ಮಾತನಾಡುವುದು ಹೊಸ ವಿಷಯವೇನೂ ಆಗಿರಲಿಲ್ಲ. ಎಂತಲೇ, ಮರುಳಯ್ಯ ಅಪ್ರತಿಭನಾಗದೆ ಸಮಾಧಾನದಿಂದಲೇ ಹೇಳಿದ :

" ನನಗಂತೂ ಲಕ್ಷ್ಯ ಇಲ್ಲ ಅನ್ನೂದು ನಿಮಗೇನು ಗೊತ್ತಿಲ್ಲೇನು ? ಸುಧಾರಿಸಿಕೊಂಡು ಹೋಗಬೇಕಂತ ಎಷ್ಟು ಸಾರಿ ಕೈ ಮುಗಿದು ಕೇಳಿಕೊಂಡಿಲ್ಲ ನಾನು ? ನೀವಿನ್ನೂ ನಿಮ್ಮ ಪದ್ಧತಿ ಬಿಡಲಿಲ್ಲ. ಈಗೇನಾತು ಅಂತೀನಿ...."

" ಒಲೆಗೆ ಹಾಕೂದಕ್ಕೆ ಕಟ್ಟಿಗೇನೇ ಇಲ್ಲದಿದ್ದರೆ ಅಡಿಗೆ ಆದರೂ ಹ್ಯಾಗೆ ಮಾಡೂದು ಅಂತೀನಿ...."

ಆಗ ಮಾತ್ರ ಮರುಳಯ್ಯ ಚಕಿತನಾದ, ಹಣೆ ಬಡಿದುಕೊಳ್ಳುತ್ತಾ ಹೇಳಿದ :

" ಮುಂಜಾನೆ ನೆನಪು ಮಾಡಿದ್ದರೆ ತಂದು ಕೊಡ್ತಿದ್ದೆನಲ್ಲ ? "

"ಮಹಾಗುರುಗಳ ಧ್ಯಾನದಲ್ಲಿರುವ ನಿಮ್ಮನ್ನ ಮಾತಾಡಿಸಿ ನಿಮ್ಮ ಸಮಾಧಿ ಮುರಿದ ಪಾಪ ಕಟ್ಟಿಕೊಳ್ಳೊದ್ಯಾಕೆ ಅಂತ...."

ನಡೆದುದರಲ್ಲಿ ಅವಳ ತಪ್ಪೇನೂ ಇಲ್ಲವೆಂದು ಮನವರಿಕೆಯಾದೊಡನೆ ಮರುಳಯ್ಯ ತನ್ನನ್ನು ತಾನೇ ಸಾವರಿಸಿಕೊಂಡು,

"ಆತಲ್ಲ. ನನ್ನದೇ ತಪ್ಪು. ನನ್ನದೇ ತಪ್ಪು. ಹೋಗಲಿ. ಇದೊಂದು ದಿನ ಊಟ ಇರದಿದ್ದರೇನು ನಾನು ಸಾಯೂದಿಲ್ಲ. ಉಪವಾಸ ಮಾಡಿದಷ್ಟೂ ಯೋಗಸಾಧನೆಗೊಳ್ಳೆಯದೇ ಅಂತ ಮಹಾಗುರು ಹೇಳಿದಾರೆ," ಎಂದು ನುಡಿದು ಶಾಲೆಗೆ ಹೊರಟು ಬಿಟ್ಟ. ತಾನೇನೊ ಹಸಿವೆಯನ್ನು ತಡೆದುಕೊಳ್ಳಬಹುದು, ತನ್ನಿಂದಾಗಿ ಕಮಲಳೂ ಏಕೆ ಉಪವಾಸವಿರಬೇಕು? ಎಂಬ ವಿಚಾರ ಮಾತ್ರ ಆಗ ಅವನಿಗೆ ಹೊಳೆಯಲಿಲ್ಲ.

ಅಂದು ಶಾಲೆಯಲ್ಲಿ ಪಾಠ ಹೇಳುವಾಗ ಅವನ ಸ್ಥಿತಿ ಎಂದಿಗಿಂತಲೂ ವಿಚಿತ್ರವಾಗಿತ್ತು. ಇಂಗ್ಲೆಂಡಿನ ಚರಿತ್ರೆಯನ್ನು ವಿವರಿಸುತ್ತಿದ್ದ ಹಾಗೆ ಅಂದು ಬೆಳಗ್ಗೆ ನಡೆದುದೆಲ್ಲವೂ ಅವನ ತಲೆಯಲ್ಲಿ ಸುತ್ತುತ್ತಿತ್ತು. ಮುಕ್ಕಣ್ಣನಿಗೂ ತನಗೂ ನಡೆದ ಚಮತ್ಕಾರಿಕ ಚಕಮಕಿ....ಮುಕ್ಕಣ್ಣ ಹಾಡಿದ ಹಾಡುಗಳು... ಎದೆಯ ಪರಿಮಳ....ಕಮಲಳನ್ನು ತಾನು ಕೂಗಿ ಕರೆದು ತಬ್ಬಿಕೊಂಡದ್ದು....

ಸರಿ. ಕ್ರಾಮ್‌ವೆಲ್ ವಿಚಾರ ಹೇಳುತ್ತಿದ್ದ ಹಾಗೇ ಮರುಳಯ್ಯ ಅದನ್ನು ಮರೆತು ಕಮಲಳ ಎದೆಯ ಪರಿಮಳವನ್ನು ಬಣ್ಣಿಸತೊಡಗಿದ!

ಮರುಳಯ್ಯ ಮಾಸ್ತರರ ಅಧ್ಯಾತ್ಮದ ಹುಚ್ಚು ವಿದ್ಯಾರ್ಥಿಗಳಿಗೂ ಪರಿಚಿತವಾದುದೇ ಆಗಿತ್ತು. ಅವರು ಹೇಳುವ ಪಾಠಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವೆಂದು ದೂರುವವರಿಗೂ ಕೊರತೆಯಿರಲಿಲ್ಲ. ಇತಿಹಾಸ ಕಲಿಸುತ್ತಿದ್ದ ಸಮಯದಲ್ಲಿ ಮರುಳಯ್ಯ ಶ್ರೀ ರಾಮಕೃಷ್ಣರ ಚರಿತ್ರೆ ವರ್ಣಿಸುತ್ತಿದ್ದುದೂ ಇತ್ತು. ಕರಾಜೂರಿನ ಮಹಾಗುರು ಮಹಾಮಾತೆಯರೂ ಆಗಾಗ ತಲೆಹಾಕುತ್ತಿದ್ದರು. ಅದರಿಂದಾಗಿ ಮರುಳಯ್ಯ ವಿದ್ಯಾರ್ಥಿ ವೃಂದಕ್ಕೆಲ್ಲ ಹಾಸ್ಯಾಸ್ಪದ ವ್ಯಕ್ತಿಯಾಗಿದ್ದ. ಅವನಿಂದ ಯಾವ ಉಪಯೋಗವೂ ಇಲ್ಲವೆಂದು ಹೆಡ್ ಮಾಸ್ತರರಿಗೆ ದೂರಿಕೊಂಡ ವಿದ್ಯಾರ್ಥಿಗಳೂ ಇದ್ದರು. ಆದರೂ, ಹೆಡ್ ಮಾಸ್ತರ್ ಶರಣಪ್ಪನವರಿಗೆ ಮರುಳಯ್ಯನ ಬಗೆಗೆ ವಿಶೇಷ ಪಕ್ಷಪಾತವಿದ್ದುದರಿಂದ ಆತ ಅಷ್ಟು ದಿನ ಆ ಶಾಲೆಯಲ್ಲಿಯೆ ಉಳಿದುಕೊಂಡಿದ್ದ. ಮರುಳಯ್ಯನ

ಹಾಗೆ ಶರಣಪ್ಪನವರೂ ಅಧ್ಯಾತ್ಮವಾದಿಗಳಾಗಿದ್ದುದೇ ಆ ಪಕ್ಷಪಾತ ನೀತಿಗೆ ಕಾರಣವಾಗಿತ್ತು. ಕರಾಚೂರಿನ ಮಹಾಗುರು ಮಹಾಮಾತೆಯರ ಶಿಷ್ಯ, ಶಿಷ್ಯೆಯರೆಲ್ಲ ಕೂಡಿ ಸ್ಥಾಪಿಸಿದ್ದ ‘ ಯೋಗ ಮಂಡಲ ’ದಲ್ಲಿ ಶರಣಪ್ಪನವರೂ ಒಬ್ಬ ಪ್ರಮುಖರು. ಸಂಸಾರದಲ್ಲಿ ಅವರಿಗೂ ಆಸಕ್ತಿಯುಳಿದಿರಲಿಲ್ಲವಾದರೂ ವ್ಯಾವಹಾರಿಕ ಬುದ್ಧಿಗೆ ಮಾತ್ರ ಅವರು ತಿಲಾಂಜಲಿಯಿತ್ತಿರಲಿಲ್ಲ. ಪೂರ್ಣ ವಿರಕ್ತರೂ ಕೂಡಾ ಈ ಲೋಕದಲ್ಲಿರುವ ವರೆಗೆ ವ್ಯವಹಾರವನ್ನರಿತು ವರ್ತಿಸುವುದವಶ್ಯವೆಂದು ಅವರು ಭಾವಿಸಿದ್ದರು. ಅಂತೆಯೆ, ಹೈಸ್ಕೂಲಿನಲ್ಲಿ ತಮ್ಮ ಕರ್ತವ್ಯಗಳನ್ನು ತಕ್ಕ ಮಟ್ಟಿಗೆ ಸಮರ್ಪಕವಾಗಿಯೆ ನಡೆಸುತ್ತಿದ್ದರು. ಪಾಠ ಹೇಳುವುದರಲ್ಲಿ ಅವರು ವ್ಯಕ್ತಗೊಳಿಸುತ್ತಿದ್ದ ಕೌಶಲ್ಯ ಅಷ್ಟಕ್ಕಷ್ಟೆ ಇದ್ದಿತಾದರೂ ಮರುಳಯ್ಯನ ಹಾಗೆ ಅವರು ಹಾಸ್ಯಾಸ್ಪದರಾಗಿರಲಿಲ್ಲ. ವಿದ್ಯಾರ್ಥಿಗಳೆದುರಿಗೆ ಅಪ್ರಾಸಂಗಿಕವಾಗಿ ಅಧ್ಯಾತ್ಮ ವಿಚಾರಗಳನ್ನು ಪ್ರಸ್ತಾಪಿಸಬಾರದೆಂದು ಮರುಳಯ್ಯನಿಗೆ ಅವರು ಎಷ್ಟೋ ಬಾರಿ ಸೂಚಿಸಿದ್ದರೂ ಆತ ತನ್ನ ವಿಚಿತ್ರ ರೀತಿಯನ್ನು ತ್ಯಜಿಸಿರಲಿಲ್ಲ.

ಆ ದಿನವಂತೂ ಆತನ ವಿಚಿತ್ರ ಮನೋವೃತ್ತಿಯ ಅತಿರೇಕವೇ ಪ್ರದರ್ಶಿತವಾದಂತಾಯಿತು.

“ ಇಂಗ್ಲೆಂಡಿನ ಸರ್ವಾಧಿಕಾರಿ ಕ್ರಾಮ್‌ವೆಲ್ ಕೈಗೊಂಡ ಕ್ರಮ ಏನು ಅಂದರೆ....ಕಮಲಳ ಎದೆಯ ಪರಿಮಳ....ಪರಿಮಳ....ಹಾ....ಹಾ....ಏನು ಹೇಳುತ್ತಿದ್ದೆ ? ಪರಿಮಳ....” ಎನ್ನುತ್ತಾ ಮರುಳಯ್ಯ ಎಳೆ ಮಗುವಿನಂತೆ ತಡವರಿಸುತ್ತಿದ್ದ ಹಾಗೇ ವರ್ಗದಲ್ಲೆಲ್ಲ ನಗೆಯ ಕೋಲಾಹಲಕ್ಕಾರಂಭವಾಯಿತು. ಅಂಥ ಸಂದರ್ಭಗಳನ್ನೇ ಕಾದುಕೊಂಡಿರುವ ವಿದ್ಯಾರ್ಥಿಗಳು ಡೆಸ್ಕುಗಳನ್ನು ತಟ್ಟಿ ಕುಟ್ಟಿ ಕೇಕೆ ಹಾಕಿದರು. ವಿದ್ಯಾರ್ಥಿನಿಯರು ಲಜ್ಜಿತರಾಗಿ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಕುಳಿತರು.

“ ಮನೆಯವರು ಊರಲ್ಲಿದ್ದಾರೋ ಇಲ್ಲೋ ! ಪಾಪ....ಪಾಪ....” ಎಂದು ವಿದ್ಯಾರ್ಥಿಯೊಬ್ಬ ಕೂಗಿಕೊಂಡ.

“ ಹುಚ್ಚರಾಸ್ಪತ್ರೆ....ಹುಚ್ಚರಾಸ್ಪತ್ರೆ ! ” ಎಂದು ಕೂಗಿದ, ಇನ್ನೊಬ್ಬ.

ಮರುಳಯ್ಯನ ಶರೀರವೆಲ್ಲ ಮತ್ತೆ ಬೆವತುಕೊಂಡಿತು, ಮುಖಕ್ಕೆ ರಕ್ತವೇರಿತು, ತುಟಿ ನಡುಗತೊಡಗಿದುವು, ಕಾಲು ಕಂಪಿಸತೊಡಗಿದುವು. ಮತ್ತೆ

ಯಾರದೋ ಮುಖ ಕಾಣಿಸಿಕೊಂಡಿತು ಕಣ್ಣೆದಿರು. ಕಮಲಮುಖಿಯೆ? ಪದ್ಮಾವತಿಯೆ?

ಪದ್ಮಾವತಿ....ಪದ್ಮಾವತಿ....

ತನ್ನ ದೇಹದಲ್ಲಿನ ಶಕ್ತಿಯೆಲ್ಲವೂ ಕಾಲುಗಳ ಮೂಲಕ ಇಳಿದು ಭೂಮಿಯಲ್ಲಿ ಇಂಗಿಹೋದಂತಾಯಿತು. ವರ್ಗದಲ್ಲಿಯೆ ನಿಂತುಕೊಂಡರೆ ತಾನು ಮೂರ್ಛೆಹೋಗಬಹುದೆಂದೂ ಅವನಿಗನ್ನಿಸಿತು. ಮೇಜಿನ ಮೇಲಿದ್ದ ಪುಸ್ತಕಗಳನ್ನು ಅವಸರದಿಂದೆತ್ತಿಕೊಂಡು ಆತ ಹೊರಟು ನಡೆದ.

ಶಿಕ್ಷಕರ ಕೊಟಡಿಯ ಬಳಿ ಆತ ಬರುತ್ತಿದ್ದಂತೆ ಎದುರಿನಿಂದ ಬಂದ ಶರಣಪ್ಪನವರು ಕೇಳಿದರು :

" ಏನ್ರೀ ಅದು ? ಏನು ಗದ್ದಲ ? "

" ಯಾಕೋ ತಲೆ ತಿರುಗಿದಂತಾಯ್ತು. ಏನೋ ಹೇಳುತ್ತಾ ಏನೋ ಹೇಳಿ ಬಿಟ್ಟೆ. ಹುಡುಗರು ಗದ್ದಲ ಮಾಡಿದರು."

ಶರಣಪ್ಪನವರು ಆತನನ್ನು ತಮ್ಮ ಕೊಟಡಿಗೇ ಕರೆದೊಯ್ದು ಕೂಡ್ರಿಸಿ ಪೇದೆಯನ್ನು ಕೂಗಿ ನೀರು ತರಲು ತಿಳಿಸಿದರು. ಮರುಳಯ್ಯ ನೀರು ಕುಡಿದು ಸುಧಾರಿಸಿಕೊಂಡ ಬಳಿಕ ಅವರು ಮಾತನಾಡಿದರು :

" ಮತ್ತೇನಾತು ಇವತ್ತು ? ತಲೆನೋವೋ ಏನು ? "

" ಇಲ್ರೀ. ಏನಾತೋ ಗೊತ್ತಾಗೂದಿಲ್ಲ. ಅಂತೂ ನಾಲಗೆಯ ಮ್ಯಾಲ ಹಿಡಿತ ಉಳೀಲಿಲ್ಲ."

" ಇವತ್ತು ಊಟ ಮಾಡಿ ಬಂದೀರೋ ಇಲ್ಲೋ ? "

ಮರುಳಯ್ಯ ಚಕಿತನಾದ. " ನಿಮಗೆ ಹ್ಯಾಗೆ ಗೊತ್ತಾತು ಸಾರ್ ? "

" ನನಗೇ ಯಾಕೆ ? ನಿಮ್ಮ ಮಾರಿ ನೋಡಿದರೆ ಯಾರಿಗಾದರೂ ಗೊತ್ತಾದೀತು. ಬರೀಹೊಟ್ಟೆಯಿಂದ ಕ್ಲಾಸ್ ತಗೊಳ್ಳಲಿಕ್ಕೆ ಹೋದರೆ ಹೀಗಾಗೂದೂ ಸಹಜ."

ಬರಿಹೊಟ್ಟೆಗೂ ತನಗೆ ಹಾಗಾದುದಕ್ಕೂ ಏನೂ ಸಂಬಂಧವಿರಲಿಲ್ಲವೆಂಬುದು ಗೊತ್ತಿದ್ದರೂ ಮರುಳಯ್ಯ, " ಇರಬಹುದು. ಅದೂ ನಿಜವಿರಬಹುದು," ಎಂದು ತನ್ನಲ್ಲಿಯೆ ಹೇಳಿಕೊಳ್ಳುತ್ತಾ ಮುಖದ ಮೇಲಿನ ಬೆವರನ್ನು ಒರೆಸತೊಡಗಿದ.

ಪೇದೆಯನ್ನು ಕಳಿಸಿ ಶರಣಪ್ಪನವರು ಕೇಳಿದರು :

" ಯಾಕೆ ? ಇವತ್ತು ಅಡಿಗೆಯಾಗಿರಲಿಲ್ಲೇನು ? "

" ಸ್ವಲ್ಪ ತಡಾ ಆಯ್ತ್ರೀ."

" ಸರಿ. ಈಗ ಹೋಗಿ ಊಟ ಮಾಡಿ ಬರ್ರಿ. ಅಥವಾ ಇವತ್ತು ಪೂರಾ ರಜ ಬೇಕಾದರೂ ತಗೋಬಹುದು."

" ಛೆ. ಛೆ. ಅದೇನೂ ಬೇಡ್ರೀ."

" ನಾ ಹೇಳೂದು ಕೇಳ್ರಿ. ನಿಮ್ಮ ಮೈಯ್ಯಾಗ ಸ್ವಸ್ಥ ಇಲ್ಲ. ನಿಮಗೀಗ ವಿಶ್ರಾಂತಿ ಬೇಕು."

ತನ್ನ ಮೈಗೆ ಏನೂ ಧಾಡಿಯಾಗಿಲ್ಲ, ಎಲ್ಲ ಆಗಿರುವುದೂ ಮನಸ್ಸಿಗೆ. ಅದು ಸ್ವಸ್ಥವಾದರೆ ಮಾತ್ರ ಎಲ್ಲವೂ ಸ್ವಸ್ಥವಾಗುವುದು. ವಿಶ್ರಾಂತಿ ? ಶಾಂತಿ ? ಎಲ್ಲಿಯ ವಿಶ್ರಾಂತಿ ? ಎಲ್ಲಿಯ ಶಾಂತಿ ? ತನ್ನ ಮಾನಸಿಕ ಹೋರಾಟಕ್ಕೆ ಮುಕ್ತಾಯವೇ ಇಲ್ಲವೊ ಏನೋ. ಈ ವಿಚಾರವನ್ನೆಲ್ಲ ಶರಣಪ್ಪನವರೆದುರಿಗೆ ಹೇಗೆ ಹೇಳುವುದು ?

ಹೇಳಲಿಲ್ಲ ಮರುಳಯ್ಯ.

" ಏನೋ ಪಿತ್ತ ಆಗಿರಬೇಕು ಸಾರ್. ಅದಕ್ಕೆಲ್ಲಾ ರಜ ಯಾಕೆ ? "

" ನಾ ಹೇಳೂದು ಕೇಳ್ರಿ. ಇವತ್ತು ಮಾತ್ರ ಕ್ಲಾಸ್ ತಗೊಳ್ಳೂದು ಬೇಡ."

ಶರಣಪ್ಪನವರು ಅಷ್ಟು ಹೇಳಿದರೂ ಮರುಳಯ್ಯ ರಜ ತೆಗೆದುಕೊಳ್ಳಲು ಒಡಂಬಡಲಿಲ್ಲ. ರಜ ತೆಗೆದುಕೊಂಡಾದರೂ ಮಾಡುವುದೇನನ್ನು ? ಹೋಗುವುದೆಲ್ಲಿಗೆ ? ಮನೆಗೆ ತಾನೇ ಹೋಗುವುದು ? ಅಲ್ಲಿಯಾದರೂ ಮಾಡುವುದೇನನ್ನು ? ಅಲ್ಲಿಯಾದರೂ ತನ್ನ ಮನಸ್ಸಿಗೆ ಶಾಂತಿ ಲಭಿಸುವುದು ಅಷ್ಟರಲ್ಲೇ ಇದೆ....

ಅಂದು ಸಾಯಂಕಾಲ ಶಾಲೆ ಬಿಟ್ಟ ಬಳಿಕ ಆತನೊಬ್ಬನೇ ಮನೆಯ ಕಡೆ ಹೊರಟಿದ್ದ. ಹಾಗೆ ಶರಣಪ್ಪನವರೂ ಬಂದು ಅವನನ್ನು ಕೂಡಿಕೊಂಡರು.

" ಬಹಳ ಹಸಿವಾಗಿರಬೇಕಲ್ರೀ ? "

" ಏನಿಲ್ಲ ಸಾರ್. ಏನಿಲ್ಲ."

" ಮಧ್ಯಾಹ್ನ ಕ್ಲಾಸಿನಲ್ಲಿ ನಿಮ್ಮ ತಲೆ ತಿರುಗೂದಕ್ಕೆ ನಿಮ್ಮ ಉಪವಾಸ

ಕಾರಣವಲ್ಲ ಅನ್ನೂದು ಆಮೇಲೆ ಗೊತ್ತಾತು ನನಗೆ." ಎಳೆ ಮಕ್ಕಳಂತೆ ನಗುನಗುತ್ತ ಶರಣಪ್ಪನವರು ಹೇಳಿದರು : "ವಿದ್ಯಾರ್ಥಿಗಳ ಮುಂದೆ ಆಡಬಾರದಂಥಾ ಮಾತು ಥಟ್ಟನೆ ಆಡಿಬಿಟ್ಟರಂತಲ್ಲ ?"

ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತದೆ ನಿಧಾನವಾಗಿ ಅಡಿಯಿಡುತ್ತ ನಡೆದಿದ್ದ ಮರುಳಯ್ಯ. ಆತ ಮಾತನಾಡದಿರಲು ಶರಣಪ್ಪನವರೇ ಮತ್ತೆ ಹೇಳಿದರು :

"ಹೌದು. ಹಾಗೂ ಆಗ್ತದ ಆಗಾಗ. ತಾರುಣ್ಯದಲ್ಲಿ ಹಾಗಾಗೂದೂ ಸಹಜ. ಇಂಥಾ ಅನುಭವ ಎಲ್ಲರಿಗೂ ಬರ್ತಾವೆ."

ಆಗ ಮರುಳಯ್ಯ ತಲೆಯೆತ್ತಿ ಶರಣಪ್ಪನವರನ್ನೇ ಕುತೂಹಲದಿಂದ ದಿಟ್ಟಿಸುತ್ತ ಕೇಳಿದ.

"ಎಲ್ಲರಿಗೂ ?"

"ಹೌದು. ಎಲ್ಲರಿಗೂ ಇಂಥಾ ಅನುಭವ ಆಗ್ತದ....ನನಗೂ....ನನಗೂ ಆಗಿತ್ತು. ಏಳೆಂಟು ವರ್ಷ ಹೋದ ಮೇಲೆ ಎಲ್ಲಾ ತಂತಾನೇ ನಿಂತು ಹೋಯ್ತು. ನಿಮಗೆ ಇದೆಲ್ಲಾ ಹೊಸದು. ಅದಕ್ಕೆ...."

ಮಾತನಾಡುತ್ತಿದ್ದ ಹಾಗೆ ಅವರು ನಗರ ಸಭೆಯ ಉಪವನದಲ್ಲಿ ಪ್ರವೇಶಿಸಿದ್ದರು. ಜನರಿಲ್ಲದ ತಾಣವೊಂದನ್ನಾರಿಸಿ ಕುಳಿತುಕೊಳ್ಳುತ್ತ ಶರಣಪ್ಪನವರೆಂದರು :

"ಇದೆಲ್ಲಾ ನಮ್ಮ ನಮ್ಮ ಪ್ರೈವೇಟ್ ವಿಷಯ. ಯಾರ ಮುಂದೂ ಹೇಳಬಾರದು. ಆದರೆ ಇವತ್ತು ನಿಮಗಾದದ್ದನ್ನ ನೋಡಿದ ಮೇಲೆ ನಿಮಗೊಬ್ಬರಿಗೆ ಹೇಳೂದು ಅಗತ್ಯ ಅನಿಸಿತು. ನಿಮಗೆ ಸಾಧ್ಯ ಇದ್ದಷ್ಟು ಸಹಾಯ ಮಾಡೋಣಾಂತಲೇ ಸನ್ನಿಚ್ಛೆ...."

"ನನ್ನ ಮೇಲೆ ನಿಮ್ಮದು ಬಹಳ ಉಪಕಾರವಾಯ್ತು ಸಾರ್."

"ಉಪಕಾರ ?" ಶರಣಪ್ಪನವರು ದೇಶಾವರಿ ನಗು ಬೀರುತ್ತ ಹೇಳಿದರು. "ಉಪಕಾರ ? ಯಾರ ಮೇಲೆ ಯಾರ ಉಪಕಾರ ? ನೀವು ಯಾರು ? ನಾನು ಯಾರು ? ನಾವಿಬ್ಬರೂ ಆ ಮಹಾ ಜೀವದ ಅಂಶಗಳೇ ಅಲ್ಲೇನು ? ಹೀಗಿರುವಾಗ ನಿಮಗೆ ನಾನು ಮಾಡುವ ಉಪಕಾರ ಅಂದರೆ ಅಹಂಕಾರ ಆದೀತು. ಇರಲಿರಲಿ. ನಾನೊಂದು ಮಾತು ಕೇಳ್ತೀನಿ. ಸ್ವಲ್ಪಾನೂ ನಾಚಿಕೊಳ್ಳದೆ

ಉತ್ತರ ಕೊಡ್ತೀರಾ ?"

"ಕೇಳ್ರಿ ಸಾರ್."

"ನೀವೂ ಕೂಡಾ ನನ್ನ ಹಾಗೆ ಬ್ರಹ್ಮಚರ್ಯ ಪಾಲನೆ ಮಾಡ್ತಾ ಇದೀರಿ ಅಂತ ಮೊನ್ನೆ ಮಂಡಲದಲ್ಲಿ ಯಾರೋ ಹೇಳ್ತಿದ್ದರು. ಎಷ್ಟು ದಿನ ಆಯ್ತೀ ಸುರೂ ಮಾಡಿ ?"

"ಸುಮಾರು ಆರು ತಿಂಗಳಾಗ್ತಾ ಬಂತು."

"ನಿಮ್ಮ ಮನೆಯವರನ್ನು ಕೇಳಿ ಅವರೂ ಒಪ್ಪಿದ ಮೇಲೇ ಮಾಡ್ತಾ ಇದೀರೋ, ಅಥವಾ....ಕೆ"

"ಅವರನ್ನೂ ಕೇಳಿಯೇ ಮಾಡ್ತಾ ಇದೀನಿ."

"ಅವರು ಮನಸಾ ಒಪ್ಪಿದಾರೋ ಇಲ್ಲೋ ?"

"ಹೌದು ಸಾರ್."

"ನೀವೂ ಮನಸಾ ಇದಕ್ಕೆ ಕೈಹಾಕೀರೋ ? ಅಥವಾ....?"

"ಮೊದಲಿಂದಲೂ ನನಗೆ ಇದು....ಅಂದರೆ....ಇದು....ಅಂದರೆ ಬೇಸರವೇ. ಅದಕ್ಕೆ ...ಅದಕ್ಕೆ...." ಎಂದು ತೊದಲಿದ ಮರುಳಯ್ಯ

"ಇಷ್ಟ್ಯಾಕೆ ನಾಚಿಕೊಳ್ತೀರೀ? ಇದರಾಗೆಲ್ಲ ಏನದ ಅಂಥಾದ್ದು ? ಸರಳ ಹೇಳಿಬಿಡಿರಲ್ಲ? ಮೊದಲಿನಿಂದಲೂ ಬೇಸರ ಇದ್ದರೆ ಮದುವೆಯಾಕೆ ಆಗ ಬೇಕಾಗಿತ್ತು ?"

"ಆದದ್ದೇ ದೊಡ್ಡ ತಪ್ಪಾಯ್ತು ಸಾರ್. ಯಾರದೋ ಮಾತು ಕೇಳಿ ಆಗಿ ಬಿಟ್ಟೆ—ದಾಕ್ಷಿಣ್ಯಕ್ಕಾಗಿ."

ಆ ಮಾತನ್ನಾಡುವಾಗ ಮರುಳಯ್ಯನ ನಾಲಗೆ ಒಳಗೊಳಗೇ ಸೆಳೆಯುತ್ತಿತ್ತು. ತಾನು ಆಡುತ್ತಿದ್ದುದು ಸುಳ್ಳು. ಅಪ್ಪಟ ಸುಳ್ಳು. ಆ ವಿಷಯದ ಬಗೆಗೆ ತನಗೆ ಮೊದಲಿನಿಂದಲೂ ಬೇಸರವಿದ್ದಿತೆಂಬುದೂ ಸುಳ್ಳು. ಯಾರೋ ಒಬ್ಬರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ತಾನು ಮದುವೆಯಾದುದೂ ಸುಳ್ಳು. ಮದುವೆಯ ಬಗೆಗೆ ತನಗೇ ಅವಸರವಿತ್ತು. ಎಂಥದಾದರೂ ಸರಿಯೆ, ಒಂದು ಹರೆಯದ ಹೆಣ್ಣು ತನೆಗೆ ಬೇಕಾಗಿತ್ತು. ಎಂತಲೇ ಜ್ಯೂನಿಯರ್ ಬಿ.ಎ. ವರ್ಗದಲ್ಲಿರುವಾಗಲೇ ಹಲವರು ಗೆಳೆಯರನ್ನು ಕಾಡಿಸಿ, ಪೀಡಿಸಿ, ಕಮಲಳ ಅಣ್ಣನ ಸ್ನೇಹಿತನಾಗಿದ್ದ ಚೆನ್ನಬಸಪ್ಪನ ಮಧ್ಯಸ್ತಿಕೆಯಿಂದ ಮದುವೆಯನ್ನು ಗೊತ್ತುಪಡಿಸಿ

ಕೊಂಡು ಅವಸರವಸರದಿಂದಲೇ ಅಕ್ಷತೆ ಹಾಕಿಸಿಕೊಂಡಿದ್ದ. ತನ್ನ ಅವಸರವನ್ನು ಕಂಡು ಗೆಳೆಯರು ಹಾಸ್ಯಮಾಡಿದ್ದೇ ಮಾಡಿದ್ದು. ಆ ಅವಸರಕ್ಕೆ ಕಾರಣವೇನೆಂಬುದು ಅವರಿಗಾದರೂ ಹೇಗೆ ತಿಳಿಯಬೇಕು ?

ಆದರೆ........

ಮದುವೆಯಾಗಿ ಸಂಸಾರಕ್ಕಾರಂಭವಾದ ಕೆಲದಿನಗಳಲ್ಲಿಯೆ ತನಗೆ ಈ ವಿಷಯದ ಬಗೆಗೆ ಬೇಸರವೆನ್ನಿಸಿದುದು ನಿಜ—ಆಗಲೂ ಅದು ಪೂರ್ತಿಯಾಗಿ ತ್ಯಾಜ್ಯವೆನಿಸಲಿಲ್ಲ. ಒಮ್ಮೊಮ್ಮೆ ಬೇಕು ಅನ್ನಿಸುವುದು ; ಒಮ್ಮೊಮ್ಮೆ ಬೇಡ ಅನ್ನಿಸುವುದು ......

ಅಂಥಹ ಮನಃಸ್ಥಿತಿಯಲ್ಲಿಯೆ ತಾನು ಕರಾಚೂರಿನ ಗುರುಗಳ ನಾದಕ್ಕೆ ಬಿದ್ದುದು........ಅನಂತರ ಯೋಗಾಭ್ಯಾಸದ ಯತ್ನ....ಬ್ರಹ್ಮಚರ್ಯವ್ರತದ ಕಲ್ಪನೆ........

ಅದೂ ಸಮರ್ಪಕವಾಗಿ ನಡೆಯಲಿಲ್ಲ.

ಈ ದಿನ ಬೆಳಗ್ಗೆಯಷ್ಟೆ ತನಗಾದ ಉದ್ರೇಕ........

ಪದ್ಮಾವತಿಯ ಬಗೆಗೆ ಹೇಸಿ ವಿಚಾರ........

ಸುಳ್ಳು ; ತಾನಾಡುವುದೆಲ್ಲ ಸುಳ್ಳು. ಶರಣಪ್ಪನವರು ತನಗಿಂತ ಹಿರಿಯರು. ಇಂಥ ವಿಚಾರಗಳಲ್ಲಿ ತನಗಿಂತಲೂ ಹೆಚ್ಚು ಅನುಭವವುಳ್ಳವರು. ಯಾರಿಗೆ ಗೊತ್ತು ! ಅವರ ಬ್ರಹ್ಮಚರ್ಯವೂ ತನ್ನ ಬ್ರಹ್ಮಚರ್ಯದಂಥದೇ ಆಗಿದೆಯೊ ಏನೊ. ಅವರವರ ಗುಟ್ಟು ಅವರವರಿಗೇ ಗೊತ್ತು. ತನ್ನ ಆತ್ಮದ ಅಧ್ಯಾತ್ಮದ ಸ್ವರೂಪವೆಂಥದೆಂಬುದು ಈ ದಿನ ಬೆಳಗ್ಗೆ ಗೊತ್ತಾಯಿತಲ್ಲ? ಮಧ್ಯಾಹ್ನ ವರ್ಗದಲ್ಲಿ ಗೊತ್ತಾಯಿತಲ್ಲ ? ಶರಣಪ್ಪನವರು........

“ತ್ಚ....ತ್ಚ....ತ್ಚ....ಆಗಬಾರದ್ದು ಆಗಿಹೋಯ್ತು. ನಮ್ಮಂಥವರು ಮದುವೆಯನ್ನೇ ಆಗಬಾರದು. ಅಂದರೆ ಯಾವ ತೊಂದರೆಯೂ ಇರೂದಿಲ್ಲ. ವಿವೇಕಾನಂದರ ಹಾಗೆ ಅವಿವಾಹಿತರಾಗಿದ್ದರೇ ಉತ್ತಮ. ಆದರೇನು ಮಾಡೂದು ಮರುಳಯ್ಯ ? ಆದದ್ದು ಆಗಿ ಹೋಯ್ತಲ್ಲ ? ”

“ ಇದ್ದದ್ದರಲ್ಲೇ ಒಂದು ಹಾದಿ ಹುಡುಕಬಹುದಲ್ಲ ಸಾರ್ ? ”

“ಹುಡುಕಬಹುದಲ್ಲ. ಹೌದು. ಹುಡುಕಬಹುದು. ನಾನೂ ಈಗ ಹುಡುಕಿಕೊಂಡಿಲ್ಲೇನು ? ಸುಮಾರು ಹದಿನೈದು ವರ್ಷ ಆಗುತ್ತಾ ಬಂತು. ಈಗ

ಮಾತ್ರ ಮೊದಲಿನ ಹಾಗೆ ಮನಸು ಚಂಚಲವಾಗೂದಿಲ್ಲ. ನಿಮಗೆ ಆಗಾಗ...."

"ಹೌದು ಸಾರ್. ಆಗಾಗ ಆಗ್ತದ. ಇದಕ್ಕೇನುಪಾಯ ಮಾಡೂದು ಅಂತ ವಿಚಾರಮಾಡ್ತಾ ಇದೀನಿ."

"ಸಮೀಪದಲ್ಲಿ ಬೆಂಕಿ ಇರುವಾಗ ಬೆಣ್ಣೆ ಕರಗೂದೂ ಸಹಜ."

"ಅಂದರೆ?"

"ಅಂದರೆ? ನಿಮ್ಮ ಮನೆಯವರು ರಾತ್ರಿ ಎಲ್ಲಿ ಮಲಗಿರುತ್ತಾರೆ?"

"ನನ್ನ ಕೋಣೆಯಲ್ಲೇ. ಯಾಕೆ?"

"ಯಾಕೆ ಅಂತ ಕೇಳ್ತೀರಲ್ರೀ ಮತ್ತೆ ಬ್ರಹ್ಮಚರ್ಯ ಪಾಲಿಸುವವನು ಹೆಂಡತಿಯ ಸಂಗಡ ಒಂದೇ ಕೋಣೆಯೊಳಗೆ ಮಲಗಿಕೊಂಡರೆ ಹ್ಯಾಗೆ? ಇದೇ ಮಾಡುತ್ತಿರುವ ತಪ್ಪು. ನಿಮಗೆ ವ್ಯವಹಾರ ಏನೇನೂ ತಿಳಿಯೂದಿಲ್ಲ ಅನ್ನೂದು ಇದಕ್ಕೇ...."

"ನೀವು ಹ್ಯಾಗೆ ಮಾಡ್ತೀರಿ ಸಾರ್?" ಹೆದರುತ್ತ ಹೆದರುತ್ತ ಕೇಳಿದ ಮರುಳಯ್ಯ.

"ನಾನು? ನನ್ನ ಉಪಾಯ?" ಎಂದು ಹೇಳುತ್ತಾ ಶರಣಪ್ಪನವರು ತಡೆದು ನಿಂತರು. ಸೌತೇಕಾಯಿಯಾಕಾರದ ಅವರ ರಕ್ತಹೀನ ಮುಖದ ಮೇಲೆ ಕೊಂಚ ಬಣ್ಣವೇರಿದಂತಾಯಿತು. "ಇವತ್ತು ಬೇಡ. ಇನ್ನೆಂದಾದರೂ ಹೇಳುತೀನಂತೆ" ಎಂದು ಹೇಳಿ ಅವರು ಆ ಮಾತು ಮುಗಿಸಿದರು.

ವಿಲಕ್ಷಣವಾದ ಕುತೂಹಲ ಕುಣಿಯತೊಡಗಿತ್ತು ಮರುಳಯ್ಯನ ಮನಸ್ಸಿನಲ್ಲಿ. ಹೆಂಡತಿಯನ್ನು ಬೇರೆ ಕಡೆ ಬಿಟ್ಟು ಶರಣಪ್ಪನವರೊಬ್ಬರೇ ಮಲಗಿಕೊಳ್ಳುತ್ತಿರಬಹುದೇ? ಅವರ ಹೆಂಡತಿ ಸುಮ್ಮನಿರಬಹುದೇ?

ಮತ್ತೆ ಆ ವಿಚಾರವನ್ನೆತ್ತದೆ ಶರಣಪ್ಪನವರು ಇನ್ನೊಂದು ವಿಷಯ ಪ್ರಸ್ತಾಪಿಸಿದರು:

"ಬಹಳ ದಿನದಿಂದ ನಿಮಗೊಂದು ಮಾತು ಹೇಳೂದಿತ್ತು. ಹಿಂದೆ ಒಂದೆರಡು ಸಲ ಹೇಳಿದ್ದೆ: ಈಗ ಕಡೆಯದಾಗಿ ಹೇಳಬೇಕು. ನೀವು ನಮ್ಮವರು, ಸಂಭಾವಿತರು, ಅಧ್ಯಾತ್ಮದಲ್ಲಿ ಪ್ರೀತಿಯುಳ್ಳವರು ಅಂತ ನಿಮ್ಮ ಬಗ್ಗೆ ನನಗೆ ಅಭಿಮಾನ. ನಿಮ್ಮ ವಿರುದ್ಧ ಹುಡುಗರಿಂದ ಎಷ್ಟು ತಕರಾರು ಬಂದರೂ ಲಕ್ಷ್ಯಕೊಡದೆ ಇಷ್ಟು ದಿವಸ ಸುಮ್ಮನಿದ್ದೆ. ಆದರೆ ಇನ್ನು ಮುಂದೆ ಮಾತ್ರ

ಹೀಗೇ ಇರಲಿಕ್ಕಾಗೂದಿಲ್ಲ. ಯಾರೋ ನಿಮಗಾಗದವರು ನಿಮ್ಮ ಬಗ್ಗೆ ಹೈಸ್ಕೂಲ್ ಕಮಿಟಿ ಚೇರ್ಮನ್ನರಿಗೆ ತಕರಾರು ಮಾಡಿರಬೇಕು. ಅವರು ನನ್ನ ಜವಾಬು ಕೇಳಿದಾರೆ."

"ಯಾತರ ಬಗ್ಗೆ ?"

"ನಿಮಗೆ ಪಾಠ ಹೇಳೂದು ಬರೂದಿಲ್ಲ, ನೀವು ಬರೇ ವೇದಾಂತ ಹೇಳುತ್ತೀರಿ, ನಿಮ್ಮಿಂದ ಉಪಯೋಗ ಇಲ್ಲ ಅಂತ. ನನಗೆ ಇದೆಲ್ಲಾ ಗೊತ್ತಿದ್ದರೂ ನಾನು ಅಭಿಮಾನಕ್ಕೆ ಬಿದ್ದು ಸುಮ್ಮನಿದೀನಿ ಅಂತ ನನ್ನ ಮೇಲೂ ತಕರಾರು ಮಾಡಿದಾರೆ. ಅದಕ್ಕೆ ಚೇರ್ಮನ್ನರು ನಿಮಗೆ ಕೊನೆಯ ಎಚ್ಚರಿಕೆ ಕೊಟ್ಟು ಅದರಿಂದಲೂ ನೀವು ಸುಧಾರಿಸದಿದ್ದರೆ ನಿಮ್ಮನ್ನು ಕೆಲಸದಿಂದ ಕಿತ್ತುಹಾಕಬೇಕಾಗುವದಂತ ತಿಳಿಸಲು ನನಗೆ ಬರೆದಾರೆ."

ಉಪವನದಲ್ಲಿನ ಗಿಡಗಳಂತೆಯೆ ಮರುಳಯ್ಯ ನಿಶ್ಚಲವಾಗಿ ಕುಳಿತುಕೊಂಡಿದ್ದ. ಒಂದಿಲ್ಲೊಂದು ದಿನ ಇಂಥ ಸಂದರ್ಭವನ್ನು ತಾನು ಎದುರಿಸಬೇಕ್ಕಾಗುದೆಂದು ಆತ ಎಷ್ಟೋ ದಿನಗಳ ಹಿಂದೆಯೆ ಊಹಿಸಿಕೊಂಡಿದ್ದ. ಹೈಸೂಲಿನ ವ್ಯಾವಹಾರಿಕ ಪ್ರಪಂಚದಲ್ಲಿ ತಾನು ಬಹಳ ವರ್ಷ ಬದುಕಿ ಉಳಿಯುವುದು ಕಷ್ಟ ....ತನ್ನಂಥವನಿಗೆ ಸರಿಯಾದ ಕ್ಷೇತ್ರವಲ್ಲ ಶಿಕ್ಷಣಪ್ರಪಂಚ....

ಆದರೂ ಆತ ಹೊಟ್ಟೆಯ ಪಾಡಿಗಾಗಿ ಆ ಕ್ಷೇತ್ರದಲ್ಲೇ ಇರಬೇಕಾದುದು ಅನಿವಾರ್ಯವಾಗಿತ್ತು. ಹೊಟ್ಟೆ ಬಟ್ಟೆಗಳ ಸಮಸ್ಯೆಯಾದರೂ ಅದರಿಂದ ಪರಿಹಾರವಾಗಿತ್ತು.

ಇನ್ನು ಆ ಆಧಾರವೂ ಕಳಚಿಬೀಳುವುದೇ ?

ಶರಣಪ್ಪನವರು ಮುಂದುವರಿಸಿದ್ದರು :

"ನೀವು ನಿಶ್ಚಿತವಾಗಿ ಸುಧಾರಿಸುವಿರಂತ ಚೇರ್ಮನ್ನರಿಗೆ ನಾನು ಭರವಸೆ ಕೊಟ್ಟಿದ್ದೀನಿ. ಸದ್ಯಕ್ಕೇನು ನಿಮ್ಮ ನೌಕರಿ ಹೋಗುವ ಅಂಜಿಕೆ ಇಲ್ಲ. ಆದರೆ, ಇನ್ನು ಮುಂದೆ ಮಾತ್ರ ನೀವು ಬಹಳ ಹುಷಾರಾಗಿ ಪಾಠ ಹೇಳಬೇಕು, ನೋಡಿರಿ. ಇವತ್ತು ನಡೆದಂಥಾ ಪ್ರಸಂಗ ಮತ್ತೊಮ್ಮೆ ನಡೆದೀತು ಅಂದರೆ ನಾನೂ ನಿಮ್ಮನ್ನುಳಿಸಿಕೊಳ್ಳಲಿಕ್ಕಾಗೂದಿಲ್ಲ. ಏನು, ಏನಂತೀರಿ ?"

"ಹಾಗೇ ಮಾಡ್ತೀನ್ರೀ. ಈ ಸಾಲೆಯೊಳಗೆ ನಾನು ತಡಿಯೂದು ಕಷ್ಟ ಅನ್ನೂದು ನನಗೂ ಗೊತ್ತದ. ನನ್ನ ಮನಸ್ಸೇ ಇರೂದಿಲ್ಲ ಇಲ್ಲಿ. ಏನು

ಮಾಡೂದು ? ಸಂಸಾರದ ಭಾರ ಒಂದಿರದಿದ್ದರೆ.... ಇರದಿದ್ದರೆ....?

"ಇರದಿದ್ದರೇನು ಮಾಡ್ತಿದ್ದಿರಿ ?"

ಶರಣಪ್ಪನವರ ಪ್ರಶ್ನೆಗೆ ಆ ಕೂಡಲೇ ಉತ್ತರವೀಯಲಾಗಲಿಲ್ಲ ಮರುಳಯ್ಯನಿಗೆ. ಸಂಸಾರದ ಭಾರವಿರದಿದ್ದರೆ ತಾನೇನನ್ನು ಮಾಡಬಹುದಾಗಿತ್ತು ? ಸಂಪೂರ್ಣ ಸನ್ಯಾಸಿಯಾಗಿ ಕರಾಚೂರಿಗೆ ಹೋಗಿ ಅಲ್ಲಿಯೆ ಇದ್ದು ಬಿಡಬಹುದಾಗಿತ್ತೇ ? ಅಲ್ಲಿರುವುದಕ್ಕೂ ಹಣ ಅಗತ್ಯವಲ್ಲವೆ ? ಉಚಿತವಾಗಿ ಊಟವಿಡಲು ಅದೇನು ದಾಸೋಹದ ಮಠವೆ ?

"ವ್ಯವಹಾರ ನೋಡಿಕೊಂಡು ನಡೀಬೇಕು ಮರುಳಯ್ಯ. ಸಂಸಾರದಲ್ಲಿದ್ದೂ ಇಲ್ಲದಂತಿರಬೇಕು. ಮಹಾಗುರು, ಮಹಾಮಾತೆ ಇಬ್ಬರೂ ಹೇಳೂದು ಅದೇ ಅಲ್ಲೇನು ?"

"ಹೌದೌದು" ಎಂದ ಮರುಳಯ್ಯ.

"ಈಗ ನಾನಿಲ್ಲೇನು ? ಸಂಸಾರಿಯಾಗಿದ್ದುಕೊಂಡೇ ಅಧ್ಯಾತ್ಮವನ್ನೂ ಸಾಧಿಸುತ್ತಿದ್ದೀನಲ್ಲ ? ನೀವೂ ಹಾಗೇ ಯಾಕೆ ಮಾಡಬಾರದು ? ಎಷ್ಟು ಜನ ಮಾಡೂದಿಲ್ಲ ? ಯೋಗಮಂಡಲದ ಸದಸ್ಯರೆಲ್ಲಾ ಸಂಸಾರಿಗಳೇ ಅಲ್ಲೇನು ? ಸುಚರಿತರಾಯರು, ಸುಲಲಿತಾದೇವಿ, ಕುಬೇರಪ್ಪನವರು, ನಾಗೇಂದ್ರಪ್ಪನವರು, ಉಳ್ಳಾಗಡ್ಡಿ ಉಳಿವೆಪ್ಪನವರು ಇನ್ನುಳಿದವರು ಎಲ್ಲಾ ಸಂಸಾರಿಗಳೇ ಅಲ್ಲೇನು ? ಒಂದೊಂದೇ ಅಲ್ಲ, ನಾಲ್ಕು ನಾಲ್ಕು ಸಂಸಾರ ಕಟ್ಟಿಕೊಂಡಾರೆ ಒಬ್ಬೊಬ್ಬರೂ. ಆದರೂ ಅವರೆಲ್ಲಾ ಕರಾಚೂರಿನ ಮಹಾಗುರು, ಮಹಾಮಾತೆಯರ ಭಕ್ತರಾಗಿದಾರೆ !"

"ಅಂದರೆ ? ಈ ಜನರ ನಡತೆ ನೆಟ್ಟಗಿಲ್ಲ ಅಂತ ಮಂದಿ ಮಾತಾಡೂದು ನಿಜ ಅಂತೀರಾ ಸಾರ್ ?"

"ನಿಜ ಅಂತ ಅಂತಾರಪ್ಪ. ಸ್ವಲ್ಪ ಸ್ವಲ್ಪ ನಿಜ ಅನ್ನೂದೂ ನಿಜ...." ಎಂದು ನಗುನಗುತ್ತ ನುಡಿದು ಶರಣಪ್ಪನವರು ಎದ್ದುಬಿಟ್ಟರು.

"ಹಾಗಾದರೆ........"

"ಮೊಲೆಯ ಮೇಲಿರ್ಪ ಯೋಗಿಗಳುಂಟು....ಶಿಲೆಯ ಮೇಲಿರ್ಪ ಭೋಗಿಗಳುಂಟು ಅಂತ ರತ್ನಾಕರ ಹೇಳಿಲ್ಲೇನು ?" ಎಂದು ಹೇಳಿ ಮತ್ತೆ ನಗುತ್ತಾ ಅವನನ್ನು ಬೀಳ್ಕೊಂಡು ಹೊರಟರು ಶರಣಪ್ಪನವರು.

ಸಾರ್ವಜನಿಕ ವಾಚನಾಲಯದೆದುರಿನಲ್ಲಿ ಆತ ಹೊರಟಿದ್ದ ಹಾಗೆ ಅದೇ ಶಾನೆ ವಾಚನಾಲಯದಿಂದ ಹೊರ ಬಂದ ಮುಕ್ಕಣ್ಣ ಕೇಳಿದ:

"ಮನೆಗೆ ಹೊರಟಿರಾ ಮರುಳಯ್ಯನವರೆ?"

"ಹೂಂ." ಎಂದ ಮರುಳಯ್ಯ.

"ಮಾರ್ಕೆಟ್ಟಿಗೆ ಹೋಗಿ ಆಮೇಲೆ ಹೋದರಾಯಿತು. ಬರ್ತೀರಾ?" ಎಂದ ಮುಕ್ಕಣ್ಣ.

"ಏನೂ ಬೇಡ್ರಿ. ನಾ ಹೀಗೇ ಹೋಗ್ತೀನಿ" ಎಂದ ಮರುಳಯ್ಯ.

"ಅರೆ! ಏನ್ರಿ ಹೀಗಂತೀರಿ? ಕಾಯಿಪಲ್ಯ ತಗೊಳ್ಳೊದಿಲ್ಲೇನು?"

"ಇಲ್ಲ."

"ಬರ್ರಿ. ಬರ್ರಿ. ಸ್ವಲ್ಪ ತಗೊಂಡು ಹೋಗೂಣು. ನಾನೂ ಬರ್ತೀನಲ್ಲ ಮನೆಗೇ."

ಆ ಸಮಯದಲ್ಲಿ ಮುಕ್ಕಣ್ಣನ ಜೊತೆಗೆ ಅಲೆಯುವುದಕ್ಕೆ ಮರುಳಯ್ಯ ನಿಗಿಷ್ಟವಿರಲಿಲ್ಲ. ಆದರೂ ಆತ ನೆರೆಮನೆಯ ಗೃಹಸ್ಥ. ಕಾರಣವಿಲ್ಲದೆ ಅವನ ಸಹವಾಸವನ್ನು ನಿರಾಕರಿಸುವುದು ಸಜ್ಜನಿಕೆಯಲ್ಲ. ಕೊನೆಗೂ ಮರುಳಯ್ಯ ಅವನೊಡನೆ ಮಾರುಕಟ್ಟೆಗೆ ಹೊರಡಲೇ ಬೇಕಾಗಿ ಬಂದಿತು.

'ಮಿತ್ರಸಮಾಜ'ದ ಹತ್ತಿರ ಬಂದೊಡನೆ ಮುಕ್ಕಣ್ಣನಿಗೆ ಚಹ ಸೇವಿಸುವ ಲಹರಿ ಬಂತು. "ಸ್ವಲ್ಪ ತಿಂಡಿಕಾಫಿ ತಗೊಂಡು ಹೋಗೋಣ ಬರ್ರಿ," ಎಂದನಾತ.

"ಬೇಡ. ಬೇಡ. ನಾನೇನೂ ತಿನ್ನುವದಿಲ್ಲ."

"ಕಾಫಿ ಕೂಡಾ ತಗೊಳ್ಳೊದಿಲ್ಲೇನು?"

"ಇಲ್ಲರೀ. ಮೂರು ವರ್ಷದಿಂದ ಎಲ್ಲಾ ಬಿಟ್ಟುಬಿಟ್ಟೇನಿ."

ಯೋಗಸಾಧನೆಗಾರಂಭಿಸಿದಂದಿನಿಂದ ಚಹ–ಕಾಫಿ–ತಿಂಡಿ ಎಲ್ಲವನ್ನೂ ತ್ಯಜಿಸಿ ಬಿಟ್ಟಿದ್ದ ಮರುಳಯ್ಯ. ಮನಸ್ಸನ್ನು ಹತೋಟಿಗೆ ತಂದುಕೊಳ್ಳುವ ಮೊದಲು ನಾಲಗೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಅವಶ್ಯವೆಂದು ಕರಾಚೂರಿನ ಗುರುಗಳು ಹೇಳಿಲ್ಲವೆ?

"ಇರಲಿ ಬರ್ರೀ. ಕಾಫಿ ಕುಡಿಯೂದರಿಂದ ಅಧ್ಯಾತ್ಮ ಏನೂ ಕೆಟ್ಟು ಹೋಗೂದಿಲ್ಲ. ಕರಾಚೂರಿನ ಮಹಾಗುರು, ಮಹಾಮಾತೆಯರೇ ಕುಡೀತಾ

ರಂತೆ!" ಎಂದು ಲೇವಡಿ ಮಾಡಿದ ಮುಕ್ಕಣ್ಣ.

"ಅವರು ಕುಡೀತಾರಂತ ಯಾರು ಹೇಳಿದರು ನಿಮಗೆ?"

"ಯಾರ್‍ಯಾಕೆ ಹೇಳಲಿಕ್ಕೆ ಬೇಕು? ನಾನು ಸ್ವತಃ ನೋಡಿದ್ದೀನಿ. ಕಾಫಿ, ಬ್ರೆಡ್ಡು, ಬಿಸ್ಕೀಟು, ಬೆಣ್ಣೆ ಎಲ್ಲಾ ಹೊಡೀತಾರೆ. ಆಶ್ರಮದ ಶಿಷ್ಯ, ಶಿಷ್ಯೆಯರಂತೂ ಇನ್ನೂ ಏನೇನನ್ನೋ ಮುಕ್ಕುತ್ತಾರೆ," ಎಂದು ಹೇಳಿ ಮರುಳಯ್ಯನ ಕೈ ಹಿಡಿದು ಬಲವಂತದಿಂದಲೇ ಚಹದಂಗಡಿಗೆಳೆದೊಯ್ದ ಮುಕ್ಕಣ್ಣ.

"ಮಧ್ಯಾಹ್ನ ಊಟವೂ ಆಗಲಿಲ್ಲ ನಿಮ್ಮದು. ಹಸಿವಾಗಿರಬೇಕಲ್ಲ? ಒಂದು ವಡೆ ಆದರೂ ತಗೊಳ್ಳಿರಿ."

"ಬೇಡ ಬೇಡ, ಮುಕ್ಕಣ್ಣ. ಒತ್ತಾಯ ಮಾಡಬೇಡ್ರಿ. ಪೂಜೆ ಮಾಡದೆ ಹಾಗೇ ಏನನ್ನೂ ತಿನ್ನೂದಿಲ್ಲ ನಾನು."

"ನಮ್ಮ ಪೂಜೆ ಅಂದರೆ ಇದೇ ಅಪ್ಪ—ಉದರಪೂಜೆ. ನಿಮ್ಮ ಹಣೆಯೊಳಗೇ ಈ ಸುಖ ಬರೆದ ಹಾಗಿಲ್ಲ. ಕರಾಚೂರಿನ ಗುರುಗಳ ಶಿಷ್ಯರು ಅಂತ ಹೇಳಿಕೊಳ್ಳುವ ನೀವು ಇಷ್ಟು ಕಟ್ಟುನಿಟ್ಟಾಗಿರೂದು ನೋಡಿದರೆ ನನಗೆ ಬಹಳ ಆಶ್ಚರ್ಯವಾಗ್ತದ. ಅಲ್ಲರೀ, ನಿಮ್ಮ ಮಂಡಲದ ಆ ಒಬ್ಬೊಬ್ಬ ಸದಸ್ಯರೂ ಎಷ್ಟು ರಸಿಕರಿದಾರೆ, ಏನೇನು ತಿನ್ನುತಾರೆ, ಏನೇನು ಕುಡೀತಾರೆ, ಏನೇನು ಮಾಡುತಾರೆ—ಯಾವುದೂ ನಿಮಗೆ ಗೊತ್ತಿದ್ದ ಹಾಗೆ ಕಾಣೂದಿಲ್ಲ."

ಶರಣಪ್ಪನವರ ಅಭಿಮತವನ್ನೇ ಮುಕ್ಕಣ್ಣನೂ ವ್ಯಕ್ತಗೊಳಿಸುತ್ತಿದ್ದ. ಯೋಗಮಂಡಲದ ಸದಸ್ಯರೆಲ್ಲರೂ ಚರಿತ್ರಹೀನರೇ ಹಾಗಾದರೆ? ಮಂಡಲದ ಸದಸ್ಯನಾಗಿರುವ ತನಗೇ ಈ ವಿಚಾರ ಗೊತ್ತಿಲ್ಲದಿರುವಾಗ ಮುಕ್ಕಣ್ಣನಿಗೆಂತು ಗೊತ್ತಾಯಿತು? ಬಹಳ ಘಾಟೀ ಇಸಮು ಅಂತ ಕಾಣುತ್ತದೆ ಈ ಮುಕ್ಕಣ್ಣ....

"ಅವರು ಸೆರೆ ಗಿರೆ ಕುಡೀತಾರೇನ್ರೀ ಮುಕ್ಕಣ್ಣ?"

"ಅಂದರೆ........? ನಿಮಗಿನ್ನೂ ಗೊತ್ತೇ ಇರಲಿಲ್ಲ ಅನ್ನಿರಿ ಹಾಗಾದರೆ? ಓರೆಕೋರೆ ನಗರಕ್ಕೆಲ್ಲ, ಜಿಲ್ಲೆಗೆಲ್ಲ ಗೊತ್ತಿರುವ ಸಂಗತಿ ನಿಮಗೊಬ್ಬರಿಗೆ ಮಾತ್ರ ಗೊತ್ತಾಗಲಿಲ್ಲ ಅನ್ನಿರಿ. ಎಂಥಾ ಹುಚ್ಚರಿದೀರ್‍ರೀ ನೀವು ಮರುಳಯ್ಯ?"

"ಇಲ್ಲ ಮಾರಾಯಾ. ಮಂಡಲದ ಸಭೆ ನಡೆದಾಗಂತೂ ಅವರು ಕುಡಿದಿರೂದಿಲ್ಲ."

" ಅವರು ಕುಡಿದು ಬಂದರೂ ಕೂಡಾ ನಿಮಗೆ ಗೊತ್ತಾಗಬೇಕಲ್ಲ? ಸೆರೆಯ ವಾಸನೆ ಆದರೂ ಹ್ಯಾಗಿರ್ತದ ಗೊತ್ತದೇನು ನಿಮಗೆ ? "

" ಇಲ್ಲರೀ. ಅದರ ಬಣ್ಣ ಆದರೂ ಹ್ಯಾಗಿರ್ತದೋ ಗೊತ್ತಿಲ್ಲ."

" ಅಂದಮೇಲೆ ಅವರು ಕುಡಿದಿದಾರನ್ನೂದು ನಿಮಗೆ ಹ್ಯಾಗೆ ತಿಳಿದೀತು? ಕುಡಿತದ ಸಂಗಡ ಮಾಂಸ, ಆಮೇಲೆ ಮೋಹಿನಿಯರ ಸಹವಾಸ. ಇದೂ ಗೊತ್ತಿಲ್ಲೇನು ನಿಮಗೆ ? "

" ಇಲ್ಲ ಮಾರಾಯಾ. ಅಂತೂ ಅವರೆಲ್ಲಾ ಇಂಥಾ ಮಂದಿ ಇದಾರಂತೀರಾ ? "

" ಊರಲ್ಲಿ ಎಷ್ಟು ಜನರಿಂದ ಹೇಳಿಸಲಿ ನಿಮಗೆ ಅವರ ಕಥೆಯನ್ನ? ಅಂಥವರ ಸಹವಾಸದಲ್ಲಿ ನೀವೂ ಕೆಟ್ಟು ಹೋದೀರಿ ಅಂತ ನಾನಿದನ್ನೆಲ್ಲಾ ನಿಮಗೆ ಹೇಳ್ತಾ ಇರೂದು. ಇಲ್ಲದಿದ್ದರೆ ನನಗಾದ್ರೂ ಯಾಕೆ ಬೇಕು ಇಲ್ಲದ ಉಪದ್ವ್ಯಾಪ? " ಅಷ್ಟು ಹೇಳಿ ಚಹ ಗುಟುಕರಿಸುತ್ತ ಮುಕ್ಕಣ್ಣ ಮತ್ತೆ ಹೇಳಿದ: " ಅಲ್ರೀ! ಅಧ್ಯಾತ್ಮದ ಹುಚ್ಚಿಗೂ ಒಂದು ಮಿತಿಯಿರಬೇಕೋ ಬೇಡವೊ? ಮನೆಯೊಳಗೆ ಕಟ್ಟಿಗೆ ಇಲ್ಲ ಅನ್ನೂದೂ ನಿಮ್ಮ ನೆನಪಿನಲ್ಲಿರೂದಿಲ್ಲಲ್ಲ? ನೀವೂ ಉಪವಾಸ........ನಿಮ್ಮಿಂದಾಗಿ ನಿಮ್ಮ ಮನೆಯವರಿಗೂ ಉಪವಾಸ...."

ಆಗ ಕಟ್ಟಿಗೆಯ ನೆನಪು ಬಂದು ಮರುಳಯ್ಯನಿಗೆ ಬಹಳ ನಾಚಿಕೆಯೆನ್ನಿಸಿತು. ತನ್ನಿಂದಾಗಿ ಕಮಲಮುಖಿಯೂ ಉಪವಾಸ ಬೀಳುವಂತಾಯಿತಲ್ಲ ಎಂದು ಕಳವಳವೂ ಆಯಿತು.

" ಈಗ ಹೋಗುತ್ತಾ ಕಟ್ಟಿಗೆ ಹೊರಿಸಿಕೊಂಡು ಹೋಗೋಣ ಮುಕ್ಕಣ್ಣ."

" ಹೂಂ! ಈಗ ಕಟ್ಟಿಗೆ ಒಯ್ದ್ಯೀರಿ. ಅವರು ಆಮೇಲೆ ಅಡಿಗೆ ಮಾಡ್ತಾರೆ! ಎಂಥಾ ಅವ್ಯವಹಾರಿ ನೀವು ಮರುಳಯ್ಯ? ನಿಮ್ಮಂಥವರು ಮದುವೆಯಾದರೂ ಯಾಕಾಗಬೇಕೋ ನನಗಂತೂ ತಿಳಿಯೂದಿಲ್ಲ."

" ಇವನಿಗೆ ಹೇಗೆ ತಿಳೀಬೇಕು? ನನ್ನೊಬ್ಬನನ್ನ ಬಿಟ್ಟು ಯಾರಿಗೂ ತಿಳಿಯುವಂತಿಲ್ಲ ಅದು," ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡು ಮರುಳಯ್ಯ ಮೌನವಾಗಿ ಕುಳಿತಿದ್ದ.

" ಕಟ್ಟಿಗೆ ಇಲ್ಲ ಅನ್ನುವ ಸಂಗತಿ ಆಗಲೇ ನಮ್ಮಾಕೆಗೆ ಗೊತ್ತಾಯಿತಂತ

ನೆಟ್ಟಗಾಯ್ತು. ಇಲ್ಲದಿದ್ದರೆ ಪಾಪ, ನಿಮ್ಮ ಮನೆಯವರು ಇಡೀ ದಿವಸ ಉಪವಾಸ ಇರಬೇಕಾಗ್ತಿತ್ತು," ಎಂದ ಮುಕ್ಕಣ್ಣ. "ಒಬ್ಬ ಹುಡುಗನ್ನ ಕಳಿಸಿ ಕಟ್ಟಿಗೆ ತರಿಸಿಕೊಟ್ಟೆವು ಆಗಲೆ. ಈಗ ನೀವು ಹೊರಿಸಿಕೊಂಡು ಹೋಗುವ ಕಾಟವೂ ತಪ್ಪಿತು."

ಚಹ ಕುಡಿದು ಮುಗಿಸಿ, ಒಂದು ಸಿಗರೇಟು ಹೊತ್ತಿಸಿ ಮುಕ್ಕಣ್ಣ ಎದ್ದು ನಡೆದ. ಕಾಯಿಪಲ್ಯ ತೆಗೆದುಕೊಂಡು ಮನೆಗೆ ಬರುತ್ತಿದ್ದಾಗ ಮತ್ತೆ ಯೋಗ ಮಂಡಲದ ವಿಚಾರವನ್ನೆತ್ತಿ,

"ನಿಮ್ಮ ಮಂಡಲದ ಮ್ಯಾನೇಜರ್ ಆಗಿದಾಳಲ್ಲಾ ಆ ಸುಲಲಿತ ದೇವಿ........ಆಕೆಯ ಇತಿಹಾಸ ನಿಮಗೆ ಗೊತ್ತದೇನು ಮರುಳಯ್ಯ?" ಎಂದು ಕೇಳಿದ.

ಸುಲಲಿತದೇವಿಯ ಇತಿಹಾಸ? ಅವಳಿಗೂ ಒಂದು ಇತಿಹಾಸವಿದೆಯೆ ಹಾಗಾದರೆ? ಮಂಡಲದ ಇತರ ಸದಸ್ಯರಂತೆ ಅವಳೂ ದುಶ್ಚರಿತ್ರಳೇ? ಮೂರು ವರ್ಷಗಳ ಕಾಲ ಅವಳೊಡನೆ ಒಂದೇ ಶಾಲೆಯಲ್ಲಿ ಕೂಡಿ ಕೆಲಸ ಮಾಡಿದ್ದರೂ ತನಗೇನೂ ಗೊತ್ತಾಗಲಿಲ್ಲವಲ್ಲ? ಹೊರಗಿನವನಾದ ಈ ಮುಕ್ಕಣ್ಣನಿಗೆ ಹೇಗೆ ಗೊತ್ತಾಯಿತೊ!

"ಅವಳದೂ ಗೊತ್ತಿಲ್ಲ ಅನ್ನಿರಿ ನಿಮಗೆ! ಗೊತ್ತುಮಾಡಿಕೊಳ್ಳುವ ಸ್ವಭಾವವೇ ನಿಮ್ಮದಲ್ಲ ಅಂತ ಕಾಣ್ತದ. ಅಂದ ಮೇಲೆ ನಿಮಗೆ ಇದೆಲ್ಲಾ ಗೊತ್ತಾಗೂದಾದರೂ ಹ್ಯಾಗೆ? ಒಂದು ಕಾದಂಬರಿ ಬರೆಯುವಷ್ಟು ಪುರಾಣ ದ ಆ ಪುಣ್ಯಾತ್ಮಳದು. ಓರೆಕೋರೆನಗರಕ್ಕೆಲ್ಲಾ ಅದು ಗೊತ್ತದ. ನಿಮಗೆ ಮಾತ್ರ ಗೊತ್ತಾಗಲಿಲ್ಲ. ನಿಮ್ಮದು ಅನ್ವರ್ಥಕನಾಮ ನೋಡಿರಿ ಮರುಳಯ್ಯ!" ಎಂದು ಹೇಳುತ್ತಾ ಗಹಗಹಿಸಿ ನಕ್ಕ ಮುಕ್ಕಣ್ಣ.

"ನಮ್ಮ ಹೆಡ್‌ಮಾಸ್ತರೂ ಅಂಥವರೇ ಏನ್ರೀ?" ಎಂದು, ವಿಸ್ಮಯ ಕುತೂಹಲ ಬೆರೆತ ಧ್ವನಿಯಲ್ಲಿ ಕೇಳಿದ ಮರುಳಯ್ಯ.

"ಅಂಥವರು ಅಂದರೆ....? ಡಾಕ್ಟರ್ ನಾಗೇಂದ್ರಪ್ಪ, ದೇಶಭಕ್ತ ವಿರುಪಣ್ಣ, ಕೋಟೆಯೂರು ಕುಬೇರಪ್ಪರಂಥವರೇನೂ ಅಲ್ಲ ಶರಣಪ್ಪನವರದು. ಆದರೂ ಅವರದೂ ಬೇಕಾದಷ್ಟು ಕಥೆ ಅದ. ಅದರ ಮೇಲೂ ಒಂದು ಕಾದಂಬರೀ ಬರೆಯಬಹುದು."

"ಒಬ್ಬೊಬ್ಬರ ಮೇಲೂ ಒಂದೊಂದು ಕಾದಂಬರೀ ಬರೆಯಬಹುದು ಅನ್ನಿರಿ ಹಾಗಾದರೆ!"

"ಖಂಡಿತವಾಗಿ. ಸ್ವತಃ ನಿಮ್ಮ ಮೇಲೇ ಒಂದು ಮೋಜಿನ ಕಾದಂಬರಿ ಬರೆಯಬಹುದಲ್ಲ!" ಎಂದ ಮುಕ್ಕಣ್ಣ.

ಮುಕ್ಕಣ್ಣನ ಮಾತಿನಲ್ಲಿ ಅತಿಶಯೋಕ್ತಿಯೇನೂ ಇಲ್ಲವೆಂದು ಮರುಳಯ್ಯ ತನ್ನಲ್ಲಿಯೆ ಹೇಳಿಕೊಂಡ. ಒಂದು ಕಾದಂಬರಿಯ ವಸ್ತುವಾಗುವಷ್ಟು ಅನುಭವಗಳನ್ನು ತಾನೂ ಪಡೆದುದಾಗಿದೆ. ಆದರೆ....ತನ್ನ ಅನುಭವಗಳೆಲ್ಲವನ್ನೂ ಇದ್ದಕ್ಕಿದ್ದಂತೆಯೆ ಚಿತ್ರಿಸಲು ಯಾವ ಕಾದಂಬರಿಕಾರನಿಗೂ ಧೈರ್ಯವಾಗಲಾರದೆಂದು ತೋರುತ್ತದೆ. ಇಂಥ ಅನುಭವಗಳನ್ನೊಳಗೊಂಡ ಕಾದಂಬರಿಯೊಂದೂ ಕನ್ನಡದಲ್ಲಿ ಇದು ವರೆಗಂತೂ ಪ್ರಕಟವಾಗಿರಲಾರದೆಂದು ಕಾಣುತ್ತದೆ. ಇತರ ಪ್ರಾಂತೀಯ ಭಾಷೆಗಳಲ್ಲಿ ಇಂಥ ಕಾದಂಬರಿಗಳು ಬಂದಿರಬಹುದೊ ಏನೊ. ಇಂಗ್ಲೀಷಿನಲ್ಲೂ ಬಂದಿರಲು ಸಾಕು. ತನ್ನ ಕೈಗೆ ಮಾತ್ರ ಅವು ಸಿಕ್ಕಲಿಲ್ಲ........

ಹಾಗೆ ಯೋಚಿಸುತ್ತಾ ಆತ ಹೇಳಿದ:

"ಹೀಗೆ ಜೀವಂತ ವ್ಯಕ್ತಿಗಳ ಮೇಲೆ ಕಾದಂಬರಿ ಬರೀಲಿಕ್ಕೆ ಬರ್‍ತದೇನು ಮುಕ್ಕಣ್ಣ?"

"ಜೀವಂತ ವ್ಯಕ್ತಿಗಳ ಮೇಲೆ ಬರೀದಿದ್ದರೆ ಮತ್ತೇನು ಸತ್ತ ವ್ಯಕ್ತಿಗಳ ಮೇಲೆ ಬರೀತಾರೇನು? ಕಾದಂಬರೀ ಅಂದರೆ ಜೀವನದ ಕಲಾತ್ಮಕ ಪ್ರತಿಬಿಂಬ. ಸುತ್ತಮುತ್ತಲಿನ ಜೀವನವನ್ನು ನೋಡಿಯೇ ಕಾದಂಬರಿಕಾರ ಕಾದಂಬರಿ ಬರೆಯೂದು."

"ಆದರೂ ಅದು ಫೋಟೋಗ್ರಾಫಿ ಆಗಬಾರದು, ಅಲ್ಲೇನು?"

"ಆಗಬಾರದು ನಿಜ. ಕಲೆಯ ಸಂಬಂಧ ಬರೂದು ಅಲ್ಲೇ. ಶರಣಪ್ಪನವರಂಥಾ ಹತ್ತು ಮಂದಿಯನ್ನ ನೋಡಿಕೊಂಡು ಆ ಹತ್ತೂ ಮಂದಿಯ ಪ್ರತೀಕವಾಗುವಂಥಾ ಒಂದು ಪಾತ್ರ ರೂಪಿಸುತಾನೆ ಕಾದಂಬರಿಕಾರ. ಹಾಗೆ ಮಾಡುವಾಗ ತನ್ನ ಕಲ್ಪನೆಯನ್ನೂ ಸ್ವಲ್ಪ ಸೇರಿಸುತಾನೆ. ಹೇಳೂದನ್ನ ಕಲೆಯ ರೂಪದಲ್ಲಿ ಹೇಳುತಾನೆ. ಜಗತ್ತಿನ ಮಹಾ ಮಹಾ ಕಾದಂಬರೀಕಾರರೆಲ್ಲ ಬರೆದಿರೂದು ಹೀಗೇ. ಹಾರ್ಡಿ, ಡೊಸ್ಟೊವಸ್ಕಿ, ಟಾಲ್‌ಸ್ಟಾಯ್, ಗಾರ್ಕಿ,

ಸ್ಟೆಂಢಾಲ್, ಝೋಲಾ, ಮಾಮ್ ಎಲ್ಲರೂ ಹೀಗೇ ಬರೆದಿದಾರೆ."

"ಸರಿಯಪ್ಪ. ನಾನು ಹೆಚ್ಚಾಗಿ ಕಾದಂಬರಿ ಓದಿಲ್ಲ. ನನಗೆ ಈ ವಿಷಯ ನಿಮ್ಮಷ್ಟು ಗೊತ್ತಿಲ್ಲ," ಎಂದು ನುಡಿದು ಆ ಮಾತು ಮುಗಿಸಿದ ಮರುಳಯ್ಯ.

೪

“ ಮಧ್ಯಾಹ್ನ ಊಟ ಮಾಡಿದಿರಾ ಕಮಲಮುಖಿ ? ”

ಮರುಳಯ್ಯನ ಪ್ರಶ್ನೆಗೆ ಕಮಲಳಿಂದ ಉತ್ತರ ಬರಲಿಲ್ಲ.

“ ಕಟ್ಟಿಗೆಯಂತೂ ಆಗಲೇ ಬಂದಿತ್ತು ಅಂದ ಮೇಲೆ ಅಡಿಗೆ ಮಾಡಿಕೊಂಡು ಉಂಡಿರಲೇ ಬೇಕು,” ಎಂದುಕೊಂಡು ಮರುಳಯ್ಯ ತನ್ನ ಕೊಟಡಿಗೆ ನಡೆದ. ಮತ್ತೆ ಸಾಯಂಕಾಲದ ಶೀರ್ಷಾಸನವಾಗಬೇಕು. ಅನಂತರ ಧ್ಯಾನ ಪ್ರಾರ್ಥನೆ, ಪೂಜೆ ನಡೆಯಬೇಕು. ಆಗಲೇ ತುಂಬ ವೇಳೆಯಾಗಿತ್ತು. ಮರುಳಯ್ಯ ಅವಸರದಿಂದ ಒಟ್ಟಿ ತೆಗೆಯತೊಡಗಿದ.

ಆತ ಎಲ್ಲವನ್ನೂ ಮುಗಿಸಿ, ಊಟವನ್ನೂ ತೀರಿಸಿ ಕೊಟಡಿಗೆ ಬಂದು ಮಹಾಮಾತೆಯ “ ವಚನಾಮೃತ ”ವನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದ ಹಾಗೇ ಮುಕ್ಕಣ್ಣನ ಮುಖ ಬಾಗಿಲಲ್ಲಿ ಕಾಣಿಸಿಕೊಂಡಿತು. ಅವನೊಡನೆ ಹರಟೆಗೆ ತೊಡಗುವ ಮನಸ್ಸು ಮರುಳಯ್ಯನಿಗಿರಲಿಲ್ಲವಾದರೂ ಬಾಗಿಲಿಗೆ ಬಂದವನನ್ನು ಹಾಗೆಯೆ ಸಾಗಹಾಕುವಂತಿರಲಿಲ್ಲವಾದುದರಿಂದ ಮುಕ್ಕಣ್ಣನನ್ನು ಒಳಗೆ ಕರೆಯಲೇ ಬೇಕಾಯಿತು.

ವಿರಾಮಕುರ್ಚಿಯ ಮೇಲೆ ದೇಹವನ್ನೊರಗಿಸಿ ಗೋಡೆಗಳ ಮೇಲಿನ ಚಿತ್ರಗಳನ್ನು ದಿಟ್ಟಿಸುತ್ತಾ ಮುಕ್ಕಣ್ಣ ಕೇಳಿದ :

“ ಊಟ ಆಯ್ತೇ ಮರುಳಯ್ಯನವರೆ ? ”

“ ಆಯ್ತಲ್ಲ. ನಿಮ್ಮದು ? ”

“ ಆಯ್ತು. ಹಾಗೇ ಸ್ವಲ್ಪ ಹೊತ್ತು ಮಾತಾಡಿ ಹೋಗೋಣಂತ ಬಂದೆ. ನಿಮ್ಮ ರೂಮಿನಲ್ಲಿ ಸಿಗರೇಟು ಸೇದಲಿಕ್ಕೆ ಅಪ್ಪಣೆ ಆದನೋ ಇಲ್ಲೋ ?”

ಸಿಗರೇಟು ಬೀಡಿಗಳ ಹೊಗೆಯೆಂದರೆ ಮರುಳಯ್ಯನಿಗಾಗದು. ಚಿಕ್ಕ ವಯಸ್ಸಿನಲ್ಲಿ ಹಳ್ಳಿಯಲ್ಲಿ ದನ ಕಾಯುತ್ತಿದ್ದಾಗ ಆತ ಒಂದೆರಡು ವರ್ಷ, ಮನೆಯವರಿಗೆ ಗೊತ್ತಾಗದಂತೆ ಬೀಡಿ ಸೇದಿದ್ದನಾದರೂ ಹೈಸ್ಕೂಲಿಗೆ ಸೇರಿದ ತರುವಾಯ ಆ ಚಟವನ್ನು ಪೂರ್ತಿಯಾಗಿ ತ್ಯಜಿಸಿಬಿಟ್ಟಿದ್ದ. ಅವನ ದೇಹ

ಪ್ರಕೃತಿ ಅತ್ಯಂತ ಸೂಕ್ಷ್ಮವಾಗಿದ್ದುದೂ ಅದಕ್ಕೊಂದು ಕಾರಣವಾಗಿತ್ತು. ಧೂಮಪಾನ ಮಾಡಿದರೆ ಆತನಿಗೆ ಕ್ಷಯರೋಗ ಅಂಟಿಕೊಳ್ಳುವುದು ಖಚಿತವೆಂದು ಡಾಕ್ಟರೊಬ್ಬರು ಎಚ್ಚರಿಕೆ ಕೊಟ್ಟಮೇಲಂತೂ ಬೀಡಿ ಸಿಗರೇಟುಗಳನ್ನು ಆತ ಒಂದು ಬಾರಿಯೂ ಮುಟ್ಟಿರಲಿಲ್ಲ. ಯೋಗಾಭ್ಯಾಸಕ್ಕಾರಂಭಿಸಿದ ಬಳಿಕ ಹೊಗೆಸೊಪ್ಪಿನ ವಾಸನೆಯನ್ನೂ ಆತ ಸಹಿಸುತ್ತಿರಲಿಲ್ಲ.

ಆದರೆ, ಮುಕ್ಕಣ್ಣನಿಗೆ ಅದೆಲ್ಲವನ್ನು ಹೇಗೆ ಹೇಳುವುದು? ದಿನವೊಂದಕ್ಕೆ ನಾಲ್ಕೈದು ಪೆಟ್ಟಿಗೆಗಳಷ್ಟು ಸಿಗರೇಟು ಸುಡುವ ಭೂಪ ಆತ. ಕುಳಿತಲ್ಲಿ ನಿಂತಲ್ಲಿ ಸಿಗರೇಟು ಬೇಕು ಅವನಿಗೆ.

ಮರುಳಯ್ಯನ ಅಪ್ಪಣೆಗಾಗಿ ಕಾಯದೆ ಮುಕ್ಕಣ್ಣ ಸಿಗರೇಟು ಹೊತ್ತಿಸಿ ಮೂಗಿನಿಂದ ಹೊಗೆಯುಗುಳುತ್ತ, ಕರಾಚೂರಿನ ಮಹಾಗುರುವಿನ ಚಿತ್ರವನ್ನು ತುಂಟತನದಿಂದ ದಿಟ್ಟಿಸುತ್ತ ಹೇಳಿದ:

"ಎಷ್ಟು ಚಲೋ ಅದ ಅಲ್ರೀ ಈ ಫೋಟೋ? ಮಾತಾಜಿಯ ಫೋಟೋ ಕೂಡಾ ಬಹಳ ಚಂದ ಅದ. ಎಲ್ಲಿ ಸಿಕ್ಕವು ನಿಮಗಿವು?"

"ಇಲ್ಲೆಲ್ಲಿ ಸಿಗುತಾವೆ? ಕರಾಚೂರಿನಿಂದಲೇ ತರಿಸಿದೀನಿ ಡೈರೆಕ್ಟ್ ಆಗಿ."

"ಆಶ್ರಮದಿಂದಲೇ?"

"ಹೌದು. ಆಶ್ರಮದಿಂದಲೇ. ಅಲ್ಲೊಂದು ಪಬ್ಲಿಸಿಟಿ ಡಿಪಾರ್ಟ್ಮೆಂಟೂ ಅದ ಅಲ್ಲ? ಫೋಟೋ, ಪುಸ್ತಕ ಎಲ್ಲಾ ಸಪ್ಲೈ ಮಾಡ್ತಾರೆ ಅವರೆ."

"ಏನಡ್ಡಿಯಿಲ್ಲ, ಏನಡ್ಡಿಯಿಲ್ಲ. ಅದೂ ಒಂದು ನಾಟಕ ಕಂಪೆನಿ ಇದ್ದ ಹಾಗೇ ಅದ. ಪಬ್ಲಿಸಿಟಿ ಕೂಡಾ ಅಗತ್ಯವಾಗಿ ಬೇಕೇ ಬೇಕಲ್ಲ! ನಾನೂ ಒಮ್ಮೆ ಹೋಗಿದ್ದೆ—ಆಶ್ರಮಕ್ಕೆ. ಎಲ್ಲಾ ನೋಡಿಕೊಂಡು ಬಂದೀನಿ. ಗುರುಗಳ ದರ್ಶನ ಮಾತ್ರ ಸಿಕ್ಕಲಿಲ್ಲ. ವರ್ಷದಲ್ಲಿ ಎರಡು ಸಲ ಮಾತ್ರ ಸಾಮಾನ್ಯ ಜನರಿಗೆ ದರ್ಶನ ಅಲ್ಲೇನು? ಅದಕ್ಕೂ ಮೊದಲೇ ಅಪ್ಪಣೆ ಬೇಕಾಗ್ತದಂತೆ. ನೀವು ಹೋಗಿದ್ದಿರೇನ್ರಿ ಎಂದಾ'ರ?"

ಮುಕ್ಕಣ್ಣನ ವಾಗ್ಬಾಣಗಳಿಂದ ಅಪ್ರತಿಭನಾಗಿದ್ದರೂ ಅವನ್ನು ವ್ಯಕ್ತಗೊಳಿಸದೆ ಮರುಳಯ್ಯನೆಂದ:

"ಆ ಯೋಗ ಇನ್ನೂ ಬರಲಿಲ್ಲ."

"ಓಹ್ಹೊ! ಅದಕ್ಕೂ ಯೋಗ ಬರಬೇಕೇನು? ಯೋಗ....ಯೋಗ.... ಯೋಗ....ಯೋಗಿಗಳ ಆಶ್ರಮ ಅಂದ ಮೇಲೆ ಎಲ್ಲಾದಕ್ಕೂ ಯೋಗ ಬೇಕೇ ಬೇಕು. ನಿಜ. ನಿಜ...."

"ಇಷ್ಟು ಹಗುರಾಗಿ ಮಾತಾಡಬಾರದು ಆಶ್ರಮದ ಬಗ್ಗೆ, ಮುಕ್ಕಣ್ಣ," ಎಂದು ನೊಂದ ಧ್ವನಿಯಲ್ಲಿ ನುಡಿದ ಮರುಳಯ್ಯ.

"ಇಲ್ಲ. ಇಲ್ಲ. ನಾನು ಸೀರಿಯಸ್ಸಾಗೇ ಮಾತಾಡ್ತಾ ಇದೀನಿ. ತಪ್ಪು ತಿಳಕೋಬೇಡಿರಿ. ದೇಶದಲ್ಲಿ ಸಾವಿರಾರು ಜನರಿಗೆ ಹುಚ್ಚು ಹಿಡಿಸಿರುವ ಈ ಕರಾಚೂರಿನ ಆಶ್ರಮ ಹ್ಯಾಗದೋ ನೋಡೋಣ ಅಂತ ಕುತೂಹಲದಿಂದಲೇ ನಾನಲ್ಲಿಗೆ ಹೋಗಿದ್ದೆ. ನೋಡಿದ ಮೇಲೆ ನನಗೇನನಿಸಿತು ಹೇಳಲಾ?"

ಮರುಳಯ್ಯ ಸುಮ್ಮನೆ ಕತ್ತು ಕೊಡಹಿದ. ಒಂದು 'ದಂ' ಹೊಗೆ ಕುಡಿದು ನಿಧಾನವಾಗಿ ಅದನ್ನು ಹೊರಹಾಕುತ್ತ ಮುಕ್ಕಣ್ಣ ಆರಂಭಿಸಿದ:

"ಜೀವನದಲ್ಲಿ ದಿವ್ಯತ್ವ ತರುವುದು ಇವರ ಉದ್ದೇಶವಂತೆ. ಅದಕ್ಕಾಗಿ ಸಾಧಕರ ಆಶ್ರಮ. ಸರಿ. ಯಾರೂ ಬೇಡ ಅನ್ನಲಾರದು. ಆದರೆ ಆಶ್ರಮ ಅಂದ ಮೇಲೆ ಒಂದು ಸಂಸ್ಥೆ ಒಂದು ಘಟನೆ ಬೇಕೋ ಬೇಡವೋ? ಕರಾಚೂರಿನಲ್ಲಿ ಮಾತ್ರ ಸಾರ್ವಜನಿಕ ಸ್ವರೂಪದ ಸಂಸ್ಥೆ ಅನ್ನೂದೇ ಇಲ್ಲ. ಆಶ್ರಮವೇನೋ ಅದ. ಅದಕ್ಕೆ ಸೇರಿದ ಕಟ್ಟಡಗಳೂ ಅದಾವೆ. ದೊಡ್ಡ ದೊಡ್ಡ ಶ್ರೀಮಂತರಾದ ಶಿಷ್ಯ, ಶಿಷ್ಯೆಯರು ತಮ್ಮ ಆಸ್ತಿಪಾಸ್ತಿ ಎಲ್ಲಾ ಆಶ್ರಮಕ್ಕೆ ಬರೆದು ಕೊಟ್ಟದಾರೆ. ಆದರೆ ಅವುಗಳ ಒಡೆತನ ಮಾತ್ರ ಗುರೂಜಿಯುವರದು, ಅಥವಾ ಮಾತಾಜಿಯುವರದು. ದಿವ್ಯತ್ವದ ಮೊದಲನೆಯ ಉದಾಹರಣೆ ಅಂದರೆ ಈ ಆಸ್ತಿಯ ಮೋಹ....

"ಕರಾಚೂರು ದೊಡ್ಡ ನಗರ. ಮದರಾಸು, ಮುಂಬಯಿಗಳಷ್ಟು ದೊಡ್ಡದಲ್ಲ, ನಮ್ಮ ಓರಿಕೋರೆಗಿಂತ ಎರಡು ಪಟ್ಟು ದೊಡ್ಡದಿರಬಹುದು ಅನ್ನೋಣ. ಇಲ್ಲಿಗಿಂತ ಹೆಚ್ಚು ದಾರಿದ್ರ್ಯ, ಹೆಚ್ಚು ದೈನ್ಯತೆ ಅಲ್ಲಿ ಅದ. ಎಷ್ಟೋ ಜನ ಬಡವರಿಗೆ ಒಂದು ಲಂಗೋಟಿ ಬಿಟ್ಟರೆ ಬೇರೆ ಅರಿವೆ ಸಿಕ್ಕುವದಿಲ್ಲ. ಕೆಲಸಕ್ಕಿಲ್ಲದೆ ಹೊಟ್ಟೆಗಿಲ್ಲದೆ ಕಂಗಾಲಾದ ಹುಡುಗರು, ಹುಡುಗಿಯರು ಆ ನಗರದಲ್ಲೆಲ್ಲಾ ಕಾಣಿಸುತಾರೆ. ಇಂಥಾ ಘೋರ ದಾರಿದ್ರ್ಯದ ನಟ್ಟನಡುವೆ, ಅದರ ಅರಿವೂ ಇಲ್ಲದವರಂತೆ ಸುಂದರ ಸುಂದರ ಬಂಗಲೆಗಳಲ್ಲಿ ದಿವ್ಯಜೀವನ ನಡಸು

ತಾರೆ ನಿಮ್ಮ ಸಾಧಕರು. ಅವರಿಗೆ ತಿರುಗಾಡಲು ಕಾರುಗಳೇನು....ರಿಕ್ಷಾ ಗಳೇನು....ಅವರು ತೊಡುವ ಸಿಲ್ಕ್ ಬಟ್ಟೆಗಳೇನು....ಅವರು ತಿನ್ನುವ ಆಹಾರ ವೆಂಥಾದ್ದು....ಅವರು ಕುಡಿಯುವ ಮದ್ಯ ಎಂಥಾದ್ದು....ಅವರ ಧ್ಯಾನ....ಅವರ ಪ್ರಾರ್ಥನೆ....ಅವರ ಸಾಂಸ್ಕೃತಿಕ ಚಟುವಟಿಕೆಗಳು....ಅವರ ನಾಟಕ....ಅವರ ನರ್ತನ....ಅವರ ಸಂಗೀತ....ಅದೆಲ್ಲಾ ಹೃದಯಹೀನರ ಗುಂಪು ಅಂತ ನನಗನಿಸಿತು. ಆಶ್ರಮದಲ್ಲಿರುವ ಸಾಧಕರಾದರೂ ಎಂಥವರು? ಕುಬೇರಪ್ಪನಂಥ ದೊಡ್ಡ ಜಮೀನ್ದಾರರು, ನಾಗೇಂದ್ರಪ್ಪನಂಥ ಲಂಪಟರು, ಉಳ್ಳಾಗಡ್ಡಿ ಉಳಿವೆಪ್ಪನಂಥ ಬಂಡವಾಳಗಾರರು........ಎಲ್ಲರೂ ಇಂಥವರೇ ಇರಲಿಕ್ಕಿಲ್ಲ. ನಿಮ್ಮಂಥ ಮರುಳರೂ ಕೆಲವರಿರಬಹುದು. ಆದರೆ ಮೆಜಾರಿಟಿ ಮಾತ್ರ ಲಂಪಟರದೇ. ಕರಾಚೂರಿನಂಥ ದೂರದ ನಗರದಲ್ಲಿ ಇವರ ಪರಿಚಯದ ಜನ ಕಡಿಮೆ. ಇವರು ಅಲ್ಲಿ ಏನು ಮಾಡಿದರೂ ಕೇಳುವರ್‍ಯಾರೂ ಇಲ್ಲ. ಆಶ್ರಮದ ಸಾಧಕರು ಗಂಡಸರು ಹೆಂಗಸರು ಎಲ್ಲಾ ಸಮಾನರಷ್ಟೆ. ಗಂಡು ಹೆಣ್ಣು ಅನ್ನುವ ಭೇದಭಾವವಂತೂ ಇಲ್ಲೇ ಇಲ್ಲವಲ್ಲ? ಇಂಥಾ ಪ್ಯಾರಿಸ್ ವಾತಾವರಣ ಅಲ್ಲಿ ಅದ ಅಂತಲೇ ಕೋಟೆಯೂರು ಕುಬೇರಪ್ಪನಂಥವರು ಮೇಲಿಂದ ಮೇಲೆ ಅಲ್ಲಿ ಹೋಗಿ ಬರೂದು. ಗುರು ಅಂತೂ ಮುದುಕ. ಮಾತಾಜಿಯಂತೂ ಮುದುಕಿ. ಅವರಿಗೆ ಇದೆಲ್ಲಾ ಹ್ಯಾಗೆ ಗೊತ್ತಾದೀತು? ನಡಸಿದಾರೆ ಆಯ್ತು ಈ ಶಿಷ್ಯರು ಮೋಜನ್ನ...."

"ಯಾವ ಆಧಾರದ ಮೇಲೆ ಹೇಳ್ತೀರಿ ಇದನ್ನೆಲ್ಲ ನೀವು?"

"ಸ್ವಂತ ಅನುಭವಕ್ಕಿಂತ ಹೆಚ್ಚಿನ ಆಧಾರ ಬೇಕೇನ್ರೀ ಮರುಳಯ್ಯ? ನಾನಲ್ಲಿಗೆ ಹೋದಾಗ ಇದೇ ಕುಬೇರಪ್ಪ ಅಲ್ಲಿದ್ದ, ಚಂದಾದ ಬಾಡಿಗೆ ಮನೆ ಹಿಡಿದು. ನಾನು ಅವನ್ನ ಮೊದಲೇ ನೋಡಿದ್ದೆ, ಇಲ್ಲೇ. ಅವ ಮಾತ್ರ ನನ್ನ ನೋಡಿಲ್ಲ. ಎರಡು ದಿವಸ ಅವನ ಹಿಂದೆ ಹಿಂದೇ ತಿರುಗಿದೆ. ಅವನ ಚಮತ್ಕಾರ ಎಲ್ಲಾ ಗೊತ್ತಾಯ್ತು........ಅವನ ಸಂಗಡ ಜೈಸೇ ಹೊಡೀತಿದ್ದ ಹೆಂಗಸು ಯಾರು ಅಂತೀರಿ? ದೇಶಭಕ್ತ ಧುರಂಧರರಾಯರ ಹೆಂಡತಿ....ಹೆಂಡತಿ...."

"ನಿಜವಾಗಿಯೂ?" ಬೆರಗುಗೊಂಡು ಪ್ರಶ್ನಿಸಿದ ಮರುಳಯ್ಯ.

"ಇನ್ನೂ ಸಂಶಯ ಹೋಗಲಿಲ್ಲೇನು ನಿಮಗೆ ನನ್ನ ಬಗ್ಗೆ? ಸುಳ್ಳು ಹೇಳೂದಕ್ಕೆ ಕಾರಣವಾದರೂ ಏನು? ಅದರಿಂದ ನನಗೆ ಲಾಭ ಆದರೂ

ಲಂಪಟರು ಮಜಾ ಹೊಡೀತಾರೆ...."

"ಇಂಥಾ ಮಂದಿ ಎಲ್ಲಾ ಕಡೆಗೂ ಇರುವವರೇ ಮುಕ್ಕಣ್ಣ. ಗಾಂಧೀಜಿಯವರ ಆಶ್ರಮದಲ್ಲೂ ಇರಲಿಲ್ಲೇನು ?"

"ಇದ್ದರು. ಎಲ್ಲೋ ಒಬ್ಬಿಬ್ಬರು ಅಷ್ಟೆ. ಅವರಾದರೂ ದೇಶಕ್ಕಾಗಿ ದುಡೀತಿದ್ದವರು. ಅವರಿಂದ ಜನರಿಗೆ ಉಪಯೋಗ ಆಗುವ ಕೆಲಸ ಆದರೂ ಆಗುತ್ತಿತ್ತು. ಈ ಕರಾಚೂರಿನ ಆಶ್ರಮದಿಂದ ಏನು ಉಪಯೋಗ ಆಯ್ತು ದೇಶಕ್ಕೆ ?"

"ಅದೆಲ್ಲಾ ಇಷ್ಟು ಬೇಗ ಗೊತ್ತಾಗುವಂಥಾದ್ದಲ್ಲ. ದಿವ್ಯತೆ ಅನ್ನೋದು ಬಹಳ ಮೆಲ್ಲಗೆ, ಒಳಗಿನಿಂದ ಅರಳುತದ ಅಂತ ಮಹಾಗುರು ಹೇಳಿದಾರೆ...."

"ಮಹಾಗುರು ಹೇಳಿದರು— ಅದನ್ನ ನೀವು ವೇದವಾಕ್ಯ ಅಂತ ತಿಳಿದು, ಕುಳಿತಲ್ಲಿ ನಿಂತಲ್ಲಿ ಉರು ಹೊಡೀತಾ ಹೊರಟಿರಿ. ನಿಮಗೆ ಸ್ವತಂತ್ರ ವ್ಯಕ್ತಿತ್ವ ಸ್ವಲ್ಪ ಕೂಡಾ ಬೇಡವೇನು ?"

"ನಮ್ಮ ವ್ಯಕ್ತಿತ್ವ, ನಮ್ಮ ಬುದ್ಧಿ, ನಮ್ಮ ಸರ್ವಸ್ವ ಎಲ್ಲಾ ಮೊಟ್ಟ ಮೊದಲು ಮಹಾಗುರುವಿಗೆ ಸರೆಂಡರ್ ಮಾಡಬೇಕು ಅಂತ ನೇಮವೇ ಅದ, ಮುಕ್ಕಣ್ಣ."

"ಅಂದರೆ....ನೀವು ಅವರ ದಾಸಾನುದಾಸದಾಸರಾಗಬೇಕು, ಎಲ್ಲಾದಕ್ಕೂ ಅವರನ್ನೇ ಅವಲಂಬಿಸಬೇಕು, ಅವರ ಬೊಗಸೆಯಿಂದಲೇ ನೀರು ಕುಡೀಬೇಕು, ಅವರ ಕೈ ಹಿಡುಕೊಂಡೇ ನಡೆದಾಡಬೇಕು. ಹೌದೋ ಅಲ್ಲೋ? ಇದು ಬರೀ ಚಿತ್ತದಾಸ್ಯ. ಮನುಷ್ಯನನ್ನ, ಮನುಷ್ಯನ ಮನಸ್ಸನ್ನ, ಚೇತನವನ್ನ ದುರ್ಬಲಗೊಳಿಸುವ ಈ ಯೋಗದಿಂದ ನಮ್ಮ ದೇಶ ಮತ್ತೆ ಪರತಂತ್ರವಾಗೂದು ಖಂಡಿತ...."

ಮರುಳಯ್ಯನಿಗೆ ನಿದ್ದೆ ಕವಿದು ಆಕಳಿಕೆ ತೂಕಡಿಕೆಗಾರಂಭವಾಗಿತ್ತು. ದಿನವೂ ಹತ್ತು ಗಂಟೆಗೆ ಸರಿಯಾಗಿ ಮಲಗಿಕೊಳ್ಳುವುದು ಅವನು ಅನುಸರಿಸಿಕೊಂಡು ಬಂದ ನಿಯಮಗಳಲ್ಲೊಂದು. ಈ ದಿನ ಮಾತ್ರ ಹತ್ತೂವರೆಯಾದರೂ ಮುಕ್ಕಣ್ಣ ಅಲ್ಲಿಂದ ಎದ್ದು ಹೊರಡುವ ಲಕ್ಷಣ ಕಾಣಿಸುತ್ತಿರಲಿಲ್ಲ. ಅವನನ್ನು ತೊಲಗಿಸುವುದು ಹೇಗೆಂಬುದೇ ಒಂದು ಸಮಸ್ಯೆಯಾಗಿತ್ತು ಮರುಳಯ್ಯನಿಗೆ.

"ಸರಿ. ಅಧ್ಯಾತ್ಮ ಅಂದರೆ ನಿಮಗಾಗದು. ಅದಕ್ಕೇ ನಿಮಗೆ ಹೀಗೆಲ್ಲಾ

ಅನಿಸ್ತದ. ನನ್ನ ವಿಚಾರ ಮಾತ್ರ ಬೇರೆ ಅದಾವೆ. ಸುಮ್ಮನೆ ವಾದ ಹಾಕೂದರಿಂದ ಉಪಯೋಗವಿಲ್ಲ ಮುಕ್ಕಣ್ಣ," ಎಂದು ಹೇಳಿ ಆತ ಆಕಳಿಸುತ್ತಾ ಮೇಲಕ್ಕೆದ್ದು ಹಾಸಿಗೆಯನ್ನು ಬಿಡಿಸತೊಡಗಿದ.

ಆಗಲೂ ಮುಕ್ಕಣ್ಣ ಅಲ್ಲಿಂದೇಳಲಿಲ್ಲ. ಮತ್ತೊಂದು ಸಿಗರೇಟು ಹೊತ್ತಿಸುತ್ತ ಆತನೆಂದ :

"ಇಷ್ಟು ಬೇಗ ನಿದ್ದೆ ಬಂತೇನು ನಿಮಗೆ? ಕರಾಚೂರಿನ ಶಿಷ್ಯರಾದ ನೀವೇ ಸುಖಪುರುಷರಪ್ಪ! ಜಗತ್ತಿನ ಚಿಂತೆಯಿಲ್ಲ, ಸ್ವಂತದ ಚಿಂತೆಯೂ ಇಲ್ಲ. ಮಲಗಿದ ಕೂಡಲೇ ನಿದ್ದೆಯೂ ಬರ್ತಿರಬೇಕು. ಏನಡ್ಡಿಯಿಲ್ಲ... ಏನಡ್ಡಿಯಿಲ್ಲ. ನನಗೆ ಮಾತ್ರ ಮಧ್ಯರಾತ್ರಿಯ ತನಕ ನಿದ್ದೆಯೇ ಬರುವದಿಲ್ಲ ಹಾಳಾದ್ದು...."

ನೆರೆಮನೆಯಿಂದ ಪದ್ಮಾವತಿಯ ನಗು ಕೇಳಬಂದಿತು. ಪಡಸಾಲೆಯಲ್ಲಿ ಕುಳಿತು ಈ ಮಾತುಗಳನಾಲಿಸುತ್ತಿದ್ದ ಕಮಲಳಿಗೂ ನಗು ತಡೆಯಲಾಗಲಿಲ್ಲ. "ಇವರ ತಲೆಯೊಳಗಿನ ಹುಚ್ಚನ್ನೆಲ್ಲಾ ತೆಗೆದುಹಾಕುತ್ತಿದಾರೆ ಮುಕ್ಕಣ್ಣನವರು. ಹೀಗೆ ಫಜೀತಿಯಾಗಬೇಕು ಇವರಿಗೆ!" ಎಂದು ಅವಳು ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತ, ಕೊಟಡಿಯಲ್ಲಿ ನಡೆದಿದ್ದ ವಾದವಿವಾದವನ್ನು ಕುತೂಹಲದಿಂದ ಕೇಳುತ್ತ ಕುಳಿತುಕೊಂಡಿದ್ದಳು.

ಮುಕ್ಕಣ್ಣ ಮತ್ತೆ ಆರಂಭಿಸಿದ್ದ :

"ನೋಡಿರಿ. ಎಲ್ಲಿಂದ ಎಲ್ಲಿಗೇ ಬಂದುಬಿಟ್ಟೆವು. ಮಾತಾಜಿಯವರ ವಿಷಯ ಹೇಳ್ತಾ ಇದ್ದೆನಲ್ಲ........ಮಾತಾಜಿ ಅಮೇರಿಕನ್ ಹೆಂಗಸು. ಗುರೂಜಿ ಭಾರತೀಯರು. ತಮ್ಮ ದೇಶವನ್ನೂ ಆಪ್ತೇಷ್ಟರನ್ನು ಬಿಟ್ಟು ಮಾತಾಜಿ ಕರಾಚೂರಿಗೆ ಬಂದು ಕಾಯಂ ಆಗಿ ತಳವೂರಿದರಲ್ಲ—ಆಗ ಅವರಿಗಿನ್ನೂ ನಲವತ್ತು ವರ್ಷ ವಯಸ್ಸು. ಮಹಾಗುರುವಿಗೂ ಆಗ ಬಹಳ ವಯಸ್ಸಾಗಿರಲಿಲ್ಲ. ಬಹಳವಾದರೆ ಐವತ್ತಾಗಿತ್ತೊ ಏನೊ. ಮಾತಾಜಿ ಆಗ ಬಹಳ ಸುಂದರಿಯಾಗಿದ್ದಿರಬೇಕು. ಈಗಲೂ ಕೂಡಾ ಆ ಸೌಂದರ್ಯ ಕಾಣಿಸ್ತದ ಅಂದ ಮೇಲೆ ಆಗ ಅವರೆಷ್ಟು ಮೋಹಿನಿಯಾಗಿರಬೇಡ........ಅಲ್ರೀ ಮರುಳಯ್ಯನವರೆ, ನಾನೊಂದು ಪ್ರಶ್ನೆ ಕೇಳ್ತೀನಿ. ಸಿಟ್ಟಾಗದೆ ಉತ್ತರ ಕೊಡ್ತೀರಾ? ಈ ಮಾತಾಜಿಗಿಂತ ಹೆಚ್ಚಿನ ಯೋಗ್ಯತೆಯ ಶಿಷ್ಯರು—ಅಂದರೆ ಗಂಡಸರು—ತಮ್ಮ ಹತ್ತರ ಇದ್ದರೂ ಅವರನ್ನೆಲ್ಲಾ ಬಿಟ್ಟು ಈ ಅಮೇರಿಕನ್ ಹೆಂಗಸಿಗೆ ಆಶ್ರಮದ ಯಜ

ಮಾನಿಕೆ ಒಪ್ಪಿಸಿ ಕೊಟ್ಟರಲ್ಲ ನಿಮ್ಮ ಮಹಾಗುರುಗಳು—ಅದಕ್ಕೆ ಕಾರಣ ಏನು ಅಂತೀನಿ........ಆಮೇಲೆ ಕೆಲವು ವರ್ಷಗಳ ಬಳಿಕ ಅವರು ಪೂರಾ ಏಕಾಂತ ವಾಸ ಸುರುಮಾಡಿದರು. ಗಂಡಸರಾದ ಶಿಷ್ಯರಾರಿಗೂ ಕೋಣೆಯೊಳಗೆ ಪ್ರವೇಶ ವಿರಲಿಲ್ಲ ಈ ಮಾತಾಜಿಯೊಬ್ಬರಿಗೆ ಮಾತ್ರ ಮಹಾಗುರುಗಳ ಕೋಣೆಯೊಳಗೆ ಹೋಗುವದಕ್ಕೆ ಅಪ್ಪಣೆಯಿತ್ತಲ್ಲ, ಅದಕ್ಕೆ ಕಾರಣ ಏನು ಅಂತೀನಿ ?

ಹಾಸಿಗೆಯಲ್ಲಿ ಹಾವು ಹರಿದಂತೆ ಭಾಸವಾಗಿ ಮರುಳಯ್ಯ ಭೀತನಾಗಿ ಎದ್ದುಬಿಟ್ಟ. ಅಧ್ಯಾತ್ಮಲೋಕದ ಸೂರ್ಯಚಂದ್ರರೆಂದು ಖ್ಯಾತಿ ಪಡೆದ ಆ ಮಹಾವ್ಯಕ್ತಿಗಳ ಬಗೆಗೆ ಇಂಥ ಸಂದೇಹ !

" ನೀ........ನೀ........ನೀವು ಅನ್ನೂದಾದರೂ ಏನು ? ನಿಮ್ಮ ಮನಸಿನಲ್ಲಿರೂದಾದರೂ ಏನು ? ಅವರವರಲ್ಲಿ ಸಂಬಂಧ ಇರಬಹುದು ಅಂತೀರಾ ? "

" ಅದನ್ನೇ ನಾನು ಕೇಳುತ್ತಿರೂದು. ಉತ್ತರ ಕೊಡಬೇಕಾದವರು ನೀವು. ಇಷ್ಟ್ಯಾಕೆ ಉದ್ರಿಕ್ತರಾಗ್ತೀರಿ ? ಉದ್ರೇಕ, ಸಿಟ್ಟು, ಕೋಪತಾಪ ಇವೆಲ್ಲಾ ಯೋಗಸಾಧನೆಗೆ ಆತಂಕ ಮಾಡುತಾವೆ ಅಂತ ಮಹಾಮಾತೆಯೇ ಹೇಳಿಲ್ಲೇನು. We don't react to anything; We only receive ಅಂತ ಕರಾಚೂರಿನ ಆಶ್ರಮದ ಕಾರ್ಯದರ್ಶಿಗಳೂ ಹೇಳಿದಾರೆ."

" ನಿಜ. ಆದರೆ....ನೀವು ಹೇಳೂದು ಎಂಥಾ ಭಯಂಕರ...."

" ಭಯಂಕರ ಏನದರೀ ಇದರಲ್ಲಿ ? ನನ್ನ ಮನಸಿನಲ್ಲಿ ಇದೊಂದು ಸಾಧಾರಣ ವಿಚಾರ ಬಂದದ, ಕೇಳುತಾ ಇದೀನಿ. ಉತ್ತರ ಕೊಡಬೇಕಾದವರು ನೀವು. ರಾಮಕೃಷ್ಣ, ಶಾರದಾಮಣಿದೇವಿಯವರೇನೊ ಗಂಡಹೆಂಡಿರಾಗಿದ್ದವರು. ಅವರಲ್ಲಿ ಗಂಡಹೆಂಡರ ಸಂಬಂಧ ಇರಲಿಲ್ಲ ಅನ್ನೂದನ್ನೂ ನಂಬಬಹುದು. ಅವರಿಬ್ಬರ ಫೋಟೋಗಳನ್ನು ಅಕ್ಕಪಕ್ಕದಲ್ಲಿ ಹಾಕಿದರೆ ನಡೆದೀತು. ಆದರೆ, ನಿಮ್ಮ ಈ ಕರಾಚೂರಿನ ಮಹಾಗುರು ಮಹಾಮಾತೆಯರ ಫೋಟೋಗಳನ್ನೂ ಅಕ್ಕಪಕ್ಕದಲ್ಲಿ ಹಾಕುತಾರಲ್ಲಾ, ಇದಕ್ಕೆ ಕಾರಣ ಏನು ಅಂತೀನಿ ? ರಾಧಾಕೃಷ್ಣ, ಶಿವಪಾರ್ವತಿ, ರಾಮಸೀತಾ ಜೋಡಿಗಳ ಹಾಗೆ ಇದೂ ಒಂದು ಜೋಡಿಯೇನು ? ಮಹಾಮಾತೆಯೊಬ್ಬರೇ ಗುರೂಜಿಯ ಕೋಣೆಯಲ್ಲಿ ಹೋಗುವದರ ಗುಟ್ಟಾದರೂ ಏನು ? ಆಶ್ರಮದ ಆಸ್ತಿಪಾಸ್ತಿಗಳೆಲ್ಲಾ ಮಾತಾಜಿಯ ಹೆಸರಿನಲ್ಲೇ ಇರುವದರ ರಹಸ್ಯ ಏನು ? "

" ಇದೆಲ್ಲಾ ಬಹಳ ಕೀಳು ಅಭಿರುಚಿ. ಹೊಲಸು ಕುತೂಹಲ."

" ಕೀಳು ಅಭಿರುಚಿ? ಯಾವ ವಿಮರ್ಶಕರ ಶಬ್ದಗಳನ್ನ ಪಾಠ ಮಾಡಿಕೊಂಡೀರಿ? ಕೀಳು ಅಭಿರುಚಿ ಎಲ್ಲಿ ಬಂತು ಇದರಲ್ಲಿ? ಅಧ್ಯಾತ್ಮದ ಹೆಸರಿನಲ್ಲಿ ಕರಾಚೂರಿನ ಆಶ್ರಮದಲ್ಲಿ ನಿಜವಾಗಿ ನಡೆದಿರೂದೇನು ಅನ್ನೂದನ್ನ ತಿಳಕೊಳ್ಳೂದು ಕೀಳು ಅಭಿರುಚಿ ಹ್ಯಾಗಾಗ್ತದ?........"

ಮರುಳಯ್ಯ ಮತ್ತೆ ಆಕಳಿಸಿದ, ಚಿಟಕೆ ಹೊಡೆದ; ಮುಕ್ಕಣ್ಣನ ಸವಾಲಿಗೆ ಸಮರ್ಪಕ ಉತ್ತರವೀಯಲು ಅವನಿಗೆ ಶಕ್ತಿ ಸಾಲದಾಯಿತು.

" ಹೊರಜಗತ್ತಿನ ಸಂಬಂಧ ಕಡಿದುಕೊಂಡು ಬಂದು ಯೋಗಸಾಧನೆಗೆ ನಿಂತ ಮಹಾಗುರು ಎಲ್ಲ ಶಿಷ್ಯರನ್ನೂ ಸಮವಾಗಿ ಕಾಣಬೇಕು. ಹೌದೋ ಅಲ್ಲೋ? ಮಹಾಮಾತೆಯೊಬ್ಬರನ್ನೇ ಹೆಚ್ಚು ಪ್ರೀತಿಯಿಂದ ನೋಡಿದರಲ್ಲ ಅವರು? ಹೆಣ್ಣಿಗೆ ಮರುಳಾಗದ ಅಣ್ಣಗಳು ಯಾವ ಜಗತ್ತಿನಲ್ಲಿ? ಮಹಾಗುರುಗಳೂ ಯಾಕೆ ಕಾಲು ಜಾರಿರಬಾರದು?"

" ನಿಜ. ಯಾಕೆ ಜಾರಿರಬಾರದು?" ಎಂದು ತನ್ನನ್ನು ತಾನೇ ಕೇಳಿಕೊಂಡ ಮರುಳಯ್ಯ. ಹಾಗೂ ಆಗುವುದು ಅಸಂಭವವೇನಲ್ಲ. ಎಂಥೆಂಥ ಮಹಾ ಋಷಿಗಳೂ, ತಪಸ್ವಿಗಳೂ ಹೆಣ್ಣನ್ನು ಕಂಡೊಡನೆಯೆ ಕರಗಿ ನೀರಾಗಿ ಹೋಗಲಿಲ್ಲ? ಮಹಾಗುರುಗಳೂ ಕೂಡಾ ಆಧುನಿಕ ಯುಗದ ತಪಸ್ವಿಯೇ ಅಲ್ಲವೆ? ಅವರ ತಪೋಭಂಗ ಮಾಡಲೆಂದು ಬಂದ ಮೇನಕೆಯೊ ಏನೊ ಈ ಮಾತಾಜಿ.... ..

ಆತ ಹಾಗೆ ಯೋಚಿಸುತ್ತಿದ್ದಂತೆಯೇ ನೆರೆಮನೆಯಿಂದ ಪದ್ಮಾವತಿ ಗಂಡನನ್ನು ಕೂಗಿದಳು: " ಬಹಳ ಹೊತ್ತಾಯ್ತು. ಹರಟೆ ಸಾಕುಮಾಡ ಬಾರದೇ?"

ಮುಕ್ಕಣ್ಣ ನಗುತ್ತಾ ಎದ್ದುಹೋದ.

" ಪಾರಾದೆನಪ್ಪಾ!" ಎಂದುಕೊಳ್ಳುತ್ತಾ ಮರುಳಯ್ಯ ಮಹಾಗುರುಗಳ ಚಿತ್ರದೆದುರಿಗೆ ಮಂಡಿಯೂರಿ ಕುಳಿತು ಅಂದಿನ ಕೊನೆಯ ನಮಸ್ಕಾರ ಸಲ್ಲಿಸುತ್ತಿದ್ದ ಹಾಗೇ ಕಮಲ ಕೊಟಡಿಯಲ್ಲಿ ಅಡಿಯಾಡಿಸಿದಳು. ಜೊತೆಯಲ್ಲೇ ಮಲ್ಲಿಗೆ ಹೂವುಗಳ ಮಾದಕ ಪರಿಮಳವೂ ಹರಿದು ಬಂತು.

ಬೆರಗುಗೊಂಡ ದೃಷ್ಟಿಯಿಂದ ಮರುಳಯ್ಯ ಪತ್ನಿಯನ್ನು ದಿಟ್ಟಿಸಿ

ನೋಡಿದ. ಅವಳ ಹುಬ್ಬುಗಳು ಕೊಂಚ ಬಾಗಿದ್ದುವು. ತುಟಿಗಳ ಮೇಲೆ ಮಂದಹಾಸ ನಲಿಯುತ್ತಿತ್ತು. ಮಲ್ಲಿಗೆಯ ಪರಿಮಳ ಮನಸ್ಸನ್ನು ಚಂಚಲಗೊಳಿಸುತ್ತಿದ್ದ ಹಾಗೇ ಮರುಳಯ್ಯ ವಿಸ್ಮಯದಿಂದ ಯೋಚಿಸುತ್ತಿದ್ದ: ಇದೇನು ಹೊಸ ರೀತಿಯಿದು! ಎಲ್ಲಿಂದ ಬಂತು ಈ ಮಲ್ಲಿಯ ಹೂವು? ಅರ್ಧಕ್ಕರ್ಧ ವಿರಾಗಿಣಿಯಂತಾಗಿದ್ದ ಕಮಲ ಇದ್ದಕ್ಕಿದ್ದ ಹಾಗೇ ಮತ್ತೆ ವಿಲಾಸಪ್ರಿಯಳಾದುದು ಹೇಗೆ? ಯಾರು ತಂದುಕೊಟ್ಟರೊ ಈ ಮಲ್ಲಿಗೆ ಹೂವನ್ನು? ಅವರ ಉದ್ದೇಶವೇನಿರಬಹುದು? ಮುಕ್ಕಣ್ಣನ ಹೆಂಡತಿ ಪದ್ಮಾವತಿಯೆ ಕೊಟ್ಟಿರಬಹುದೋ ಏನೊ. ಗಂಡನಂತೆಯೇ ಹೆಂಡತಿ. ಬಹಳ ಕಿಡಿಗೇಡಿಗಳು ಇಬ್ಬರೂ. ಇಂದ್ರಾದಿ ದೇವತೆಗಳು ವಿಶ್ವಾಮಿತ್ರನ ತಪೋಭಂಗ ಮಾಡಲು ಯತ್ನಿಸಿದ ಹಾಗೆ ಇವರು ತನ್ನ ವ್ರತಭಂಗ ಮಾಡಲು ಯತ್ನಿಸುತ್ತಿರುವರೋ ಏನೊ....!

—ಆದರೆ ...ತಾನು ವಿಶ್ವಾಮಿತ್ರನಲ್ಲ ಎಂಬುದನ್ನಿವರು ಮರೆತಿದ್ದಾರೆ.

ವಿಶ್ವಾಮಿತ್ರನಲ್ಲವಾದರೆ ತಾನು ಯಾರು? ಆ ಮಹರ್ಷಿಗಿಂತ ಹೆಚ್ಚಿನ ಯೋಗ್ಯತೆ ತನಗಿದೆಯೆ?

ಬೆಳಗ್ಗೆ ನಡೆದ ಘಟನೆಯೆ ಸಾಲದೇ ತನ್ನ ಯೋಗ್ಯತೆಯ ಮಟ್ಟವನ್ನು ಸ್ಪಷ್ಟಗೊಳಿಸಲು?

ಅಯ್ಯೋ ದೇವರೆ! ಈ ಆರು ತಿಂಗಳುಗಳ ಕಾಲ ತಾನು ಪಟ್ಟ ಶ್ರಮವೆಲ್ಲವೂ ವ್ಯರ್ಥವಾಗುವ ಹೊತ್ತು ಬಂದಿದೆಯೇ ಹೇಗೆ?

ಮತ್ತೆ ಅವನ ವಿಚಾರ ಬೇರೆ ದಿಕ್ಕು ಹಿಡಿದು ಹೊರಟಿತು. ಆರು ತಿಂಗಳುಗಳ ಕಾಲ ತಾನು ಪಟ್ಟ ಶ್ರಮವಾದರೂ ಎಂಥದು? ನಾನು ಆಚರಿಸಿದ್ದುದು ನಿಜವಾದ ಬ್ರಹ್ಮಚರ್ಯವ್ರತವೆಂದು ಆತ್ಮಸಾಕ್ಷಿಯಾಗಿ ಹೇಳುವಂತಿದೆಯೆ? ಈ ವ್ರತಾಚರಣೆಯಿಂದ ತಾನು ಸಂಪಾದಿಸಿದ ಶಕ್ತಿಯೆಷ್ಟು? ಎಷ್ಟು ಪೌಂಡು ಹೆಚ್ಚಾಗಿದೆ ತನ್ನ ತೂಕ? ಬ್ರಹ್ಮಚರ್ಯದ ಕಳೆ ಬಂದಿದೆಯೇ ತನ್ನ ಮುಖದ ಮೇಲೆ? ಕೆನ್ನೆಗಳು ತುಂಬಿಕೊಂಡಿವೆಯೆ? ಕಣ್ಣುಗಳ ಸುತ್ತಲಿನ ಕಪ್ಪು ಮಾಯವಾಗಿದೆಯೆ?

ಇಲ್ಲ. ಇಲ್ಲ. ಇದಾವುದೂ ಆಗಲಿಲ್ಲ.

ಮನಸ್ಸು ಚಂಚಲವಾಗುವುದಾದರೂ ನಿಂತು ಹೋಯಿತೇ?

ಇಲ್ಲ. ಅದೂ ಆಗಲಿಲ್ಲ.

ಹಾಗಾದರೆ....?

ವ್ಯರ್ಥ....ವ್ಯರ್ಥ....ಎಲ್ಲವೂ ವ್ಯರ್ಥ....ತನ್ನ ಜೀವನವೇ ವ್ಯರ್ಥ....

ತನ್ನ ಅವಿವೇಕದ ಪರಿಣಾಮವೇ ಅಲ್ಲವೆ ಇದೆಲ್ಲವೂ? ತಾನಾಗಿ ತನ್ನ ತಲೆಯ ಮೇಲೆ ಕಲ್ಲು ಹಾಕಿಕೊಂಡು ಅನ್ಯರನ್ನು ದೂಷಿಸುವುದು ಯಾವ ನ್ಯಾಯ? ಮುಕ್ಕಣ್ಣ, ಪದ್ಮಾವತಿ ಇಬ್ಬರೂ ಒಳ್ಳೆಯವರೆ. ತನ್ನ ಮತ್ತು ಕಮಲಳ ಸಂಸಾರ ಸುಖಮಯವಾಗುವಂತೆ ಮಾಡಲು ಯತ್ನಿಸುತ್ತಿರುವ ಸರಳ ಜೀವಿಗಳವರು. ಅವರನ್ನು ದೂಷಿಸುವುದಂತೂ ಅನ್ಯಾಯದ ಪರಮಾವಧಿ....

ಆದರೆ........ತಾನು ಹೀಗಾದುದರಲ್ಲಿ ನಿಜಕ್ಕೂ ತನ್ನದೇ ತಪ್ಪಿದೆಯೆ? ಜಗತ್ತಿನ ತಪ್ಪೇನೂ ಇಲ್ಲವೆ?

ತಪ್ಪು? ಯಾರ ತಪ್ಪು?

“ಕಾಶಿ....ಕಾಶಿಯ ತಪ್ಪು....ಎಲ್ಲಾ ಅವಳ ತಪ್ಪೇ....ಅವಳಿಂದಲೇ ನನ್ನ ಬಾಳು ಹಾಳಾದದ್ದು. ನನ್ನ ದೇಹ ಹಾಳಾದದ್ದು. ನನ್ನ ಜೀವನ ವ್ಯರ್ಥವಾದದ್ದು....”

ಮರುಳಯ್ಯ ಮುಖ ತಿರುಗಿಸಿ ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡ. ತನ್ನ ಹಾಸಿಗೆಯನ್ನು ಬಿಡಿಸಿ ಕಮಲಳೂ ಮಲಗಿಕೊಂಡಳು. ಮಲ್ಲಿಗೆಯ ಪರಿಮಳ ಕೊಟಡಿಯಲ್ಲೆಲ್ಲ ತುಂಬಿಕೊಂಡಿತ್ತು.

ಮರುಳಯ್ಯನ ನೆನಪು ಹಿಂದೆ ತಿರುಗಿ ಹದಿನೈದು ವರ್ಷಗಳಾಚೆ ನೆಗೆದು ಆತನ ಹಳ್ಳಿಯ ಹಿಂಭಾಗದಲ್ಲಿದ್ದ ಗುಡ್ಡದಲ್ಲಿ ಅಲೆಯುತ್ತಿತ್ತು. ಅಲ್ಲಿಯೂ ಪರಿಮಳವಿತ್ತು. ಅಲ್ಲಿಯೂ ಒಬ್ಬ ಹುಡುಗಿಯಿದ್ದಳು—ಗೌಡರ ಮಗಳು ಕಾಶಿ. ಶಾಲೆಗೆ ರಜವಿದ್ದುದರಿಂದ ದನಕಾಯುವ ಹುಡುಗರ ಸಂಗಡ ತಾನೂ ಗುಡ್ಡಕ್ಕೆ ಹೋಗುತ್ತಿದ್ದುದಿತ್ತು. ಒಂದು ತಿಂಗಳು ಹಾಗೆ ಗುಡ್ಡದಲ್ಲಿ ತಿರುಗಿದಾಗ ಕಾಶಿಯ ಬಗೆಗೆ ಮೋಹವುತ್ಪನ್ನವಾಗಿತ್ತು. ತನಗಿಂತ ಒಂದು ವರ್ಷ ಚಿಕ್ಕವಳಿರಬಹುದೇನೊ ಆಕೆ. ಸುಖವಾಗಿ ತಿಂದು ಬೆಳೆದ ಹುಡುಗಿ. ಗೌರವರ್ಣ. ದೊಡ್ಡ ದೊಡ್ಡ ಕಣ್ಣು. ಮಾಟವಾದ ಗಲ್ಲ....

ಆ ದಿನ ಸಾಯಂಕಾಲ, ಇತರ ದನಗಾಹಿಗಳೆಲ್ಲ ದೂರ ಇದ್ದಾಗ ಗಂಧದ ಗಿಡವೊಂದರ ಹತ್ತಿರ ತಾನು ಅವಳನ್ನು ತಡೆದು ನಿಲ್ಲಿಸಿದ್ದ.

" ಕಾಶೀ....ಕಾಶೀ...."

" ಏನೋ ? " ಎಂದಾಕೆ ಕೇಳಿದಳು—ಹಳ್ಳಿಯ ಹುಡುಗಿಯರಿಗೆ ಸಹಜವಾದ ಒರಟುತನದಿಂದ.

ತಾನು ಅವಳ ಕೈ ಹಿಡಿಯಲು ಮುಂದುವರಿದಿದ್ದ. ಎದೆ ಡವಡವನೆ ಹೊಡೆದುಕೊಳ್ಳುತ್ತಿತ್ತು. ಮೈಯಲ್ಲೆಲ್ಲ ಬೆವರು ಸುರಿಯುತ್ತಿತ್ತು.

" ಕಾಶೀ, ಕಾಶೀ, ನನ್ನ....ನನ್ನ...." ಎಂದು ತೊದಲಿದ್ದ.

ಕೈಯಲ್ಲಿದ್ದ ಕೋಲನ್ನು ಹಾಗೆ ಹೀಗೆ ತಿರುವುತ್ತಾ ತುಂಟತನದಿಂದ ನಗತೊಡಗಿದಳು ಕಾಶಿ.

" ಏನು ಹೇಳಾಕೋ ? ದನಾ ದೂರ ಹೋದವು...."

" ಕಾಶೀ, ಕಾಶೀ, ನೀ ನನ್ನ ಮಾಡಿಕೊಂಡೀಯಾ ? " ಕೊನೆಗೂ ತಾನು ತುಂಬ ಕಷ್ಟದಿಂದ ಆ ಪ್ರಶ್ನೆ ಕೇಳಿದುದಾಗಿತ್ತು.

ಅವಳು ಮೈಯನ್ನು ಅತ್ತ ಇತ್ತ ತಿರುಗಿಸುತ್ತ ನೆಲಕ್ಕೆ ಕೋಲು ಬಡೆದು ಗಟ್ಟಿಯಾಗಿ ನಕ್ಕುಬಿಟ್ಟು ಮೂಗುಮುರಿಯತ್ತ ಹೇಳಿದ್ದಳು :

" ಚಲೋ ರಾಜಾನಂಥಾ ಪೈಲ್ವಾನನ್ನ ಮಾಡಿಕೊಂತೀನಿ ನಾ. ನಿನ್ನಂಥಾ ಬರದಾಗಿನ ಹೆಣಾ ಯಾರು ಮಾಡಿಕೊಂಡಾರು ? ಇವನ ಬಣ್ಣಾ ನೋಡು, ರೂಪಾ ನೋಡು, ಕಾಲು ನೋಡು, ಕೈ ನೋಡು, ಕಣ್ಣು ನೋಡು, ಮೂಗು ನೋಡು....ನನ್ನಂಥಾಕೀನ ಮಾಡಿಕೊಳ್ಳೊ ಮಾರೀ ಏನು ನಿಂದು ? "

ಮತ್ತೆ ತಿರಸ್ಕಾರದ ನಗುನಗುತ್ತಾ ಹೊರಟು ಹೋಗಿದ್ದಳು ಕಾಶಿ.

ದನಗಳೆಲ್ಲ ಹಳ್ಳಿಗೆ ಹೋಗಿದ್ದುವು ; ದನಗಾಹಿಗಳೂ ಹೊರಟು ಹೋಗಿದ್ದರು.

ತಾನು ಮಾತ್ರ ಕತ್ತಲಾಗುವ ವರೆಗೂ ಗುಡ್ಡದಲ್ಲಿಯೇ ಕುಳಿತುಕೊಂಡಿದ್ದ.

ಕಾಶಿಯ ಕ್ರೂರ ನುಡಿಗಳಿಂದಾಗಿ ಅಂದು ತನ್ನ ಜೀವನಕ್ಕೆ ಕವಿದ ಕತ್ತಲು ದಿನದಿಂದ ದಿನಕ್ಕೆ ದಟ್ಟವಾಗುತ್ತ ಬಂದಿತ್ತು.

ತನ್ನದು ಕಪ್ಪು ಬಣ್ಣದ ಕುಳ್ಳ ದೇಹ, ಕೋಮಲ ಪ್ರಕೃತಿ. ಚರ್ಮ ಮತ್ತು ಮೂಳೆಗಳನ್ನು ಬಿಟ್ಟರೆ ಬೇರೇನೂ ಇದ್ದಂತಿಲ್ಲ ಶರೀರದಲ್ಲಿ. ಒಣಗಿದ ಕಟ್ಟಿಗೆಯಂಥಾ ಕೈಕಾಲುಗಳು. ಚಪ್ಪ ಮೂಗು, ಚಿಕ್ಕ ಕಣ್ಣು, ಪುಟ್ಟ ಹಣೆ, ಕರ್ಕಶ ಸ್ವರ. ತನ್ನಲ್ಲಿ ಯಾವ ವೈಶಿಷ್ಟ್ಯವಿದೆಯೆಂದು ಮಾಡಿಕೊಂಡಾಳು

ಕಾಶಿ? ಕಾಶಿಯೊಬ್ಬಳೇ ಏಕೆ, ಯಾವ ಹುಡುಗಿಯೂ ತನ್ನನ್ನು ಮನಸಾರೆ ಮೆಚ್ಚಿ ಮದುವೆಯಾಗಲಾರಳು....

........ಆಗದಿದ್ದರಿಲ್ಲ. ಆದರೆ, ಎಷ್ಟು ಕೆಟ್ಟ ಹುಡುಗಿ ಆ ಕಾಶಿ........ ಆಗುವುದಿಲ್ಲವೆಂದು ಹೇಳಿದ್ದರೆ ಸಾಕಾಗುತ್ತಿರಲಿಲ್ಲವೆ? ತನ್ನ ಕುರೂಪವನ್ನು ಆಡಿ ತೋರಿಸಿ, ಅಣಕಿಸಿ, ತನ್ನ ಹೃದಯವನ್ನು ಇರಿದು ಎಂದೆಂದೂ ಮಾಯ ದಂಥ ಗಾಯ ಮಾಡುವ ಅಗತ್ಯವೇನಿತ್ತು?

ಹೆಣ್ಣು...ಹೆಣ್ಣು...ಹೆಣ್ಣಿನ ಸ್ವಭಾವವೇ ಅಂಥದು....ಹೆಣ್ಣು ಅಂದರೆ ಸಾಕ್ಷಾತ್ ರಾಕ್ಷಸಿ.. ಯಾವ ಹೆಣ್ಣಿನ ವಿಚಾರವೂ ಬೇಡ ಇನ್ನು ಮೇಲೆ. ಹೆಣ್ಣಿನ ಸಹವಾಸವೇ ಬೇಡ....

ಹಾಗೆ ಯೋಚಿಸಿದರೂ ಕೂಡಾ ಕಾಶಿಯನ್ನು ಬೇಗ ಮರೆಯಲಾಗಲಿಲ್ಲ. ಅವಳ ಬಗೆಗೆ ದ್ವೇಷವೂ ಇತ್ತು; ಪ್ರೀತಿಯೂ ಇತ್ತು.....

ಪ್ರೀತಿ?

ಎಂಥ ಪ್ರೀತಿ ಅದು?

ಕಾಶಿಯಿಂದ ತಾನು ಬಯಸಿದ್ದುದೇನು? ಅವಳ ದೇಹವನ್ನೇ? ಅವಳ ಹೃದಯವನ್ನೇ?

ದೇಹವನ್ನು ಬಿಟ್ಟು ಹೃದಯದ ಮಾತೆಲ್ಲಿ ಬರುತ್ತದೆ? ಅವಳ ದೇಹವೂ ಬೇಕಾಗಿತ್ತು ತನಗೆ; ಹೃದಯವೂ ಬೇಕಾಗಿತ್ತು....

....ಹೃದಯಕ್ಕಿಂತ ಹೆಚ್ಚಾಗಿ ದೇಹ ಬೇಕಾಗಿತ್ತು....ಹೆಣ್ಣಿನ ಸಹವಾಸ ಬೇಕಾಗಿತ್ತು....

ಲಾವಣಿಗಳಿಂದ, ಬಯಲಾಟಗಳ ಹಾಡುಗಳಿಂದ ಉತ್ತೇಜಿತವಾಗಿದ್ದ ಕಾಮ ಹೆಡೆಗುತ್ತಿ ತಿರುಗುತ್ತಿತ್ತು—ಆ ಎಳೆವಯಸ್ಸಿನಲ್ಲಿಯೆ....

ಅಂದು, ಗಂಥದ ಗಿಡದಡಿಯಲ್ಲಿ, ಕಾಶಿ ತನ್ನನ್ನೇ ಮದುವೆಯಾಗಲು ಒಪ್ಪಿಕೊಂಡಿದ್ದಲ್ಲಿ ತಾನೇನನ್ನು ಮಾಡಬಹುದಾಗಿತ್ತು?

ಗುಡ್ಡದಲ್ಲಿ ದನಕಾಯುವ ಹುಡುಗ ಹುಡುಗಿಯರು ಏನು ಮಾಡು ತ್ತಿದ್ದರೊ, ಅದನ್ನೇ ಮಾಡುತ್ತಿದ್ದ ತಾನೂ........

ಅದೇ ಉದ್ದೇಶದಿಂದಲೇ ಅಲ್ಲವೆ, ತಾನು ಆ ಸಂಜೆ ಅವಳೊಬ್ಬಳನ್ನೇ ಅಲ್ಲಿ ತಡೆದು ನಿಲ್ಲಿಸಿದ್ದುದು?

ತನ್ನನ್ನು ತಿರಸ್ಕರಿಸಿ ಅಪಹಾಸ್ಯ ಮಾಡಿ ಅವಳು ಹೊರಟು ಹೋದಳು.

ಕತ್ತಲು ಕವಿಯಿತು....

ಆಗ....ಆಗ....

....

ಅಸ್ವಸ್ಥ ಚಿತ್ತದಿಂದ ಅತ್ತ ಹೊರಳಿದ ಮರುಳಯ್ಯ. ದೀಪವಿರಲಿಲ್ಲ ಕೊಟಡಿಯಲ್ಲಿ. ಮಲ್ಲಿಗೆಯ ಪರಿಮಳವನ್ನು ಚಿಮುಕಿಸುತ್ತ ಹೆಣ್ಣು ಮಲಗಿ ಕೊಂಡಿತ್ತು ತುಸು ದೂರದಲ್ಲಿ........

ಕಿಟಕಿಯ ಗಜಗಳಿಂದ ತೂರಿ ಬರುತ್ತಿದ್ದ ಬೀದಿಯ ದೀಪದ ಮಂದ ಬೆಳಕಿನಲ್ಲಿ ಅಸ್ಪಷ್ಟವಾಗಿ ಗೋಚರವಾಗುತ್ತಿದ್ದ ಹೆಣ್ಣಿನ ಉಬ್ಬುತಗ್ಗುಗಳು....

ಕಾಶಿ ...ಕಮಲ....

ಕಮಲಮುಖಿ....ತಾನು ಕೈಹಿಡಿದ ಹೆಣ್ಣು....ತನ್ನ ಪತ್ನಿ....

ತನ್ನ ಪತ್ನಿ ...ಅವಳೊಡನೆ ಕಳೆದ ಪ್ರಥಮ ರಾತ್ರಿ ...

ಕತ್ತಲು....ಕಾರ್ಗತ್ತಲು....ನಿರಾಸೆ....ಸೋಲು....

" ಅಯ್ಯೋ ದೇವರೇ ? ಶ್ರೀ ರಾಮಕೃಷ್ಣಾ, ವಿವೇಕಾನಂದ ಸ್ವಾಮೀ, ಕರಾಚೂರಿನ ಮಹಾಗುರುವೆ, ಮಹಾಮಾತೇ, ಕೂಡಲ ಸಂಗಮದೇವಾ, ಚೆನ್ನಮಲ್ಲಿಕಾರ್ಜುನಾ........"

" ವೈದ್ಯನ ನಾನರಿಯೆ, ಭವರೋಗವೈದ್ಯ ನೀನೆ ಹರಿಯೆ...."

" ಓಂ ! ತತ್ ! ಸತ್ ! ಓಂ ! "

....

ಮತ್ತೆ ಮಗ್ಗುಲು ಬದಲಿಸಿ ಕಿಟಕಿಯತ್ತ ತಿರುಗಿದ ಮರುಳಯ್ಯ.

—ಯೋಗವೂ ಸಾಧಿಸಲಿಲ್ಲ ; ಅಧ್ಯಾತ್ಮವೂ ಸಾಧಿಸಲಿಲ್ಲ. ಕರಾಚೂರಿನ ಮಹಾ ಬೆಳಕಿನಿಂದಲೂ ತನ್ನ ಬಾಳಕತ್ತಲು ತೊಲಗಲಿಲ್ಲ....

ತನಗಿನ್ನು ಯಾವ ಆಸೆಯೂ ಇಲ್ಲವೆ ?

೫

ಅಂದು ಕಮಲಳಿಗೆ ಹೂವು ತಂದುಕೊಟ್ಟವಳು ಪದ್ಮಾವತಿಯೆ. ಮರುಳಯ್ಯ ಊಹಿಸಿದ್ದುದೆಲ್ಲವೂ ನಿಜವೆ ಆಗಿತ್ತು. ಆ ರಾತ್ರೆಯೇ ಅವನ ಬ್ರಹ್ಮಚರ್ಯವ್ರತವನ್ನು ಮುರಿಯುವುದೆಂದು ಕಮಲಳೊಡನೆ ಮಾತನಾಡಿ ನಿಶ್ಚಯಿಸಿ ಹಲವು ಸಲಹೆಗಳನ್ನೂ ಇತ್ತು ಅವಳನ್ನು ತಯಾರುಮಾಡಿದ್ದಳು ಪದ್ಮಾವತಿ.

ಆರು ತಿಂಗಳುಗಳಿಂದ ಆ ಗಂಡಹೆಂಡಿರು ದೂರ ದೂರ ಮಲಗುತ್ತಿದ್ದ ಸಂಗತಿ ಪದ್ಮಾವತಿಗೆ ಗೊತ್ತಾದುದೂ ಅದೇ ದಿನ. ಅದಕ್ಕೆ ಮೊದಲು ಆ ವಿಚಾರವಾಗಿ ಅವಳು ಹೆಚ್ಚಾಗಿ ಯೋಚಿಸಿಯೇ ಇರಲಿಲ್ಲ. ಕಮಲಳ ಗಂಡ ಬೈರಾಗಿಯಂತಿರುವುದೇನೊ ಆ ಮನೆಗೆ ಬಂದ ಕೆಲ ದಿನಗಳಲ್ಲಿಯೆ ಗೊತ್ತಾಗಿ ಹೋಗಿತ್ತು. ಪ್ರಪಂಚದಲ್ಲಿ ಇಂಥವರೂ ಇರುವುದು ಸಹಜ, ಎಂದುಕೊಂಡು ಅವಳು ಆ ವಿಚಾರ ದೀರ್ಘವಾಗಿ ಯೋಚಿಸಿರಲಿಲ್ಲ.

ಆದರೆ, ಆ ದಿನ ಬೆಳಗ್ಗೆ ನಡೆದ ಹಾಡುಗಳ ಘರ್ಷಣೆಯಿಂದಾಗಿ ಅವಳ ಕುತೂಹಲ ಕೆರಳಿ ಎದ್ದಿತ್ತು. ಹಾಡು ಮುಗಿದ ಬಳಿಕ ಮರುಳಯ್ಯ ಕಮಲಳನ್ನು ಕಾತರತೆಯಿಂದ ಕೂಗಿ ಕರೆದಿದ್ದುದನ್ನು ಕೇಳಿ ಆ ಕುತೂಹಲ ಇನ್ನೂ ಅಧಿಕವಾಗಿತ್ತು.

" ಬೈರಾಗಿಗಳ ಹಾಡು ಹಾಡುತ್ತಿದ್ದವರು ಒಮ್ಮಿಂದೊಮ್ಮೆಲೆ ಹೆಂಡತಿಯನ್ನಾಕೆ ಕರೆದರು ? " ಎಂದು ಅವಳು ಮುಕ್ಕಣ್ಣನನ್ನು ಕೇಳಿದ್ದಳು.

" ಎದೆಯ ಪರಿಮಳ ಮೂಸಿನೋಡಲಿಕ್ಕಿರಬಹುದು," ಎಂದು ಹೇಳಿದ್ದನಾತ, ತುಂಟತನದಿಂದ ನಗುತ್ತ.

" ಛೀ ಬಿಡ್ರಿ. ಎಲ್ಲರೂ ನಿಮ್ಮ ಹಾಗೇ ಇರ್ತಾರೇನು ? " ಎಂದು ಅವಳು ಆಕ್ಷೇಪದ ಧ್ವನಿಗೈತ್ತಿದ್ದಳಾದರೂ " ಇದ್ದರೂ ಇರಬಹುದು. ಇವತ್ತು ಕಮಲಳನ್ನ ಕೇಳಿಯೇ ಬಿಡಬೇಕು," ಎಂದು ಮನಸ್ಸಿನಲ್ಲಿಯೆ ಹೇಳಿಕೊಂಡಿದ್ದಳು.

ಕಟ್ಟಿಗೆಯ ವಿಚಾರವಾಗಿ ಮರುಳಯ್ಯನಿಗೂ ಕಮಲಳಿಗೂ ನಡೆದ

ಮಾತುಗಳೂ ಅವಳ ಕಿವಿಗೆ ಬಿದ್ದಿದ್ದುವು. ಮರುಳಯ್ಯ ಶಾಲೆಗೆ ಹೊರಟು ಹೋಗುತ್ತಲೂ ಮೊಳಕಾಲುಗಳಲ್ಲಿ ಮುಖ ಮುಚ್ಚಿಕೊಂಡು ಮೂಕವಾಗಿ ರೋದಿಸುತ್ತಿದ್ದಳು ಕಮಲ.

"ಅವರು ಊಟ ಮಾಡದೆ ಹಾಗೇ ಹೋಗಿಬಿಟ್ಟರು, ನೋಡಿದಿರಾ? ಯಾರನ್ನಾದರೂ ಕರೆದು ಕಟ್ಟಿಗೆ ತರಿಸಿಕೊಡಿರಿ. ಅಥವಾ, ನಾನೇ ಸ್ವಲ್ಪ ಒಯ್ದುಕೊಟ್ಟು ಬರಲೇ?" ಎಂದು ಗಂಡನನ್ನು ಕೇಳಿದ್ದಳು ಪದ್ಮಾವತಿ.

"ಮೊದಲು ಹೋಗಿ ಅವರನ್ನ ಸಮಾಧಾನ ಮಾಡಿ ಬಾ. ಅಳುತಾ ಕೂತಿದಾರೊ ಏನೊ," ಎಂದು ಆತ ಹೇಳಿದ್ದ.

ಪದ್ಮಾವತಿಯ ಹೆಜ್ಜೆಗಳ ಸದ್ದು ಕೇಳುತ್ತಲೂ ಅಳುವನ್ನು ತಡೆದು ಕಂಬನಿಗಳನ್ನು ಮಿಡಿದುಕೊಂಡಿದ್ದಳು ಕಮಲ. ಪದ್ಮಾವತಿ ಅವಳ ಹತ್ತಿರ ಕುಳಿತು ಸ್ನೇಹದಿಂದ ಅವಳ ತಲೆ ನೇವರಿಸುತ್ತ,

"ಸಮಾಧಾನ ಮಾಡಿಕೋ ಬೇಕು ಕಮಲಾ. ಅತ್ತರೇನು ಬರ್ತದ?" ಎಂದು ಸಂತೈಸಿದ್ದಳು.

ಮತ್ತೆ ಅಳುವುಕ್ಕಿ ಬಂದಿತ್ತು ಕಮಲಳಿಗೆ. ಅನೇಕ ದಿನಗಳಿಂದ ಎದೆಯಲ್ಲಿಯೇ ಹೆಪ್ಪುಗಟ್ಟಿದ್ದ ದುಃಖವೆಲ್ಲ ಪದ್ಮಾವತಿಯ ಸಹಾನುಭೂತಿಗೆ ಕರಗಿ ಹರಿಯತೊಡಗಿತ್ತು.

"ಎಂಥಾ ಗಂಡಸರವ್ವಾ ನಿಮ್ಮವರು! ತಾವೂ ಉಪವಾಸ ಇರೂದಲ್ಲದೆ ನಿನ್ನನ್ನೂ ನರಳಿಸುತಾರಲ್ಲ! ಇವರಿಗೇನಾಗ್ಯದ ಅಂತೀನಿ?"

ಪರಕೀಯರೆದುರಿಗೆ ಗಂಡನನ್ನು ಟೀಕಿಸಿ ಮಾತನಾಡುವ ಚಟವಿರಲಿಲ್ಲ ಕಮಲಳಿಗೆ. ಎಂತಲೇ, ಪದ್ಮಾವತಿಯ ಮಾತಿಗೆ ಪ್ರತಿಯಾಗಿ ಅವಳೇನನ್ನೂ ಹೇಳಲಿಲ್ಲ.

ಪದ್ಮಾವತಿ ಮಾತ್ರ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಹೆಂಗಸರ ನಾಲಗೆಗೆ ಚಾಲನೆ ಕೊಡುವ ತಂತ್ರವನ್ನೆಲ್ಲಾ ಬಲ್ಲವಳು ಅವಳು. ಮತ್ತೆ ಆ ಮಾತು ಈ ಮಾತು ಆಡಿ ಕಮಲಳ ಗಾಂಭೀರ್ಯವನ್ನು ಕರಗಿಸಿ ಅವಳ ಅಂತರಂಗವನ್ನು ಭೇದಿಸಿದಳು.

ಕಟ್ಟಿಗೆ ತರಿಸಿಕೊಟ್ಟು, ಊಟ ಮಾಡಿ ಮುಕ್ಕಣ್ಣ ಕಾಲೇಜಿಗೆ ಹೋಗುತ್ತಲೂ ಪದ್ಮಾವತಿ ತನ್ನ ಊಟವನ್ನು ತಟ್ಟೆಯಲ್ಲಿ ತುಂಬಿಕೊಂಡು, ಮನೆಗೆ

ಬೀಗ ಹಾಕಿ, ಕಮಲಳ ಮನೆಗೇ ಬಂದು ಕುಳಿತಳು.

"ಅಡಿಗೆ ಏನು ಮಾಡಿದಿಯೇ ಕಮಲಾ?"

ಕಮಲ ಅನ್ನ ಬೇಯಿಸಿದ್ದಳಷ್ಟೆ. ಸಾರು ಮಾಡಲು ಬೇಳೆಯಿರಲಿಲ್ಲ, ಪಲ್ಯ ಮಾಡಲು ತರಕಾರಿಯಿರಲಿಲ್ಲ. ಅನ್ನಕ್ಕೆ ಸ್ವಲ್ಪ ಮಜ್ಜಿಗೆ ಸುರಿದು ಕಲಸಿ ತಿನ್ನಬೇಕಷ್ಟೆ. ಅದಕ್ಕೂ ಅವಳು ಅವಸರ ಮಾಡಬೇಕಾಗಿರಲಿಲ್ಲ.

ಗಂಡನ ಬಗೆಗೆ ಅವಳಿಗೆಷ್ಟೇ ಬೇಸರವಾಗಿದ್ದರೂ ಅವನು ಗಂಡನೇ ಅಲ್ಲವೆ? ಅವಳ ಜೊತೆಗೆ ಆತ ಎಷ್ಟೇ ಅನ್ಯಾಯದಿಂದ, ಅವಿವೇಕದಿಂದ ವರ್ತಿಸಿದರೂ ಅವನ ಬಗೆಗೆ ಅವಳಲ್ಲಿದ್ದ ಅತ್ಮೀಯತೆ ಪೂರ್ಣವಾಗಿ ಮಾಯ ವಾಗಿರಲಿಲ್ಲ. ತನ್ನ ಗಂಡ ಉಪವಾಸವಿರುವಾಗ ಯಾವ ಹಿಂದೂ ಗೃಹಿಣಿಗೆ ಅನ್ನಗ್ರಹಣದ ಬಗೆಗೆ ಉತ್ಸಾಹವಿರುತ್ತದೆ?

"ಹೂಂ. ಸುರು ಮಾಡೋಣು. ತಾಟು ತಗೋ," ಎಂದಳು ಪದ್ಮಾವತಿ.

"ಇದೋ ಈಗ ಅನ್ನ ಆಯ್ತು ಪದ್ಮಕ್ಕಾ. ಸ್ವಲ್ಪ ಉಮಗೊಳ್ಳಬೇಕು."

"ಉಮಗೊಳ್ತದ ಹೊಟ್ಟೆಯೊಳಗೆ. ತೆಗೆ. ತೆಗೆ," ಎಂದು ನಗುತ್ತಾ ನುಡಿದುದಲ್ಲದೆ ತಟ್ಟೆಯೊಂದನ್ನು ತಾನೇ ಎಳೆದುಕೊಂಡು ಅನ್ನದ ಗಡಿಗೆಗೆ ಸೌಟು ಹಾಕಿದಳು ಪದ್ಮಾವತಿ.

"ಅವರಿನ್ನೂ ಉಂಡಿಲ್ಲವಲ್ಲ ಪದ್ಮಕ್ಕಾ?"

"ಉಣ್ಣುತಾರಲ್ಲ ಬಂದು? ಎಲ್ಲಾ ನಾವೇ ತಿಂದುಬಿಡೂದಿಲ್ಲಲ್ಲ?"

"ಅವರು....?"

"ಓಹೊಹ್ಹೋ! ಯಜಮಾನರನ್ನ ಬಿಟ್ಟು ಹ್ಯಾಗೆ ಉಣ್ಣೂದು ಅಂತ ಚಿಂತೆ ಹೌದಲ್ಲೋ? ನೀನು ಮಹಾಪತಿವ್ರತೆ ಅನ್ನೂದನ್ನ ನಾನೊಪ್ಪಿಕೊಂಡೆ. ಈಗ ಮೊದಲು ಊಟ ಮುಗಿಸೋಣು."

ಪುಟ್ಟ ಮಗುವಿಗೆ ಒತ್ತಾಯದ ಪ್ರೇಮದಿಂದ ಊಟ ಮಾಡಿಸುವಂತೆ ಪದ್ಮಾವತಿ ಕಮಲಳಿಗೆ ಊಟ ಮಾಡಿಸಿದಳು.

ಊಟ ನಡೆದಿದ್ದ ಹಾಗೇ ಅಡ್ಡತಿಡ್ಡ ಮಾತು ತೆಗೆದು ಕಮಲಳ ಸಂಸಾರದ ಸತ್ಯಕಥೆಯನ್ನೆಲ್ಲ ತಿಳಿದುಕೊಂಡಳು. ಆರು ತಿಂಗಳುಗಳಿಂದಲೂ ಮರುಳಯ್ಯ ಹೆಂಡತಿಯನ್ನು ದೂರ ಮಲಗಿಸುತ್ತಿದ್ದ ಸಂಗತಿಯೂ ಹೊರಬಿತ್ತು.

"ಇದೇನು ಹುಚ್ಚುಚ್ಚಾಟ! ಇವರಿಗೇನು ವೈರಾಗ್ಯ ಬಂದದೋ

ಏನು ?" ಎಂದು, ಚಕಿತಳಾಗಿ ಕೇಳಿದಳು ಪದ್ಮಾವತಿ.

"ಏನೋ ಯಾರಿಗೆ ಗೊತ್ತವ್ವಾ !"

"ಇದು ಎಂದಿನಿಂದ ಸುರುವಾತು ಕಮಲಾ ?"

"ಸಂಸಾರ ಸುರು ಆದಾಗಿನಿಂದ ಹೀಗೇ ನಡದದ. ಇತ್ತಿತ್ತಲಾಗಿಯಂತೂ ಅವರಿಗೆ ಯಾವದೂ ಬೇಡವಾಗ್ಯದ."

"ಮದುವೆಯಾಗುವಾಗ ಇದ್ಯಾವ ಹುಚ್ಚೂ ಇರಲಿಲ್ಲೇನು ?"

"ಯಾರಿಗೆ ಗೊತ್ತವ್ವಾ ? ನಮಗೇನು ಮೊದಲಿಂದ ಇವರ ಗುರುತಿರಲಿಲ್ಲ. ಅಣ್ಣನ ಗೆಳೆಯರೊಬ್ಬರು ಮದುವೆಯನ್ನ ಗೊತ್ತುಮಾಡಿದರು. ಅಣ್ಣನೂ ಒಪ್ಪಿದ........"

"ನೀನು ?"

"ನಾನು ?" ಎಂದು ಹೇಳಿ ಕಮಲ ಅಷ್ಟಕ್ಕೇ ಮಾತು ನಿಲ್ಲಿಸಿದಳು. ಇವರನ್ನು ಮದುವೆಯಾಗಲು ತಾನು ಮನಃಪೂರ್ವಕವಾಗಿ ಒಪ್ಪಿದುದಿತ್ತೇ ? ಇಲ್ಲವೆಂದು ಹೇಳಿದರೆ ಪದ್ಮಾವತಿ ಏನು ತಿಳಿದುಕೊಳ್ಳುವಳೊ. ಇವರು ತನ್ನನ್ನು ನೋಡಲು ಬಂದ ದಿನ ಇವರ ರೂಪವನ್ನು ಕಂಡಾಗ ತನಗೇನನ್ನಿಸಿತ್ತು ? ಅಂದು ತನ್ನ ಹೃದಯದಲ್ಲಿ ಬೀಸಿದ ಬಿರುಗಾಳಿ........ಅಂದು ರಾತ್ರಿ ತಾನು ಸುರಿಸಿದ ಕಣ್ಣೀರು........ತಾನೇನನ್ನು ಮಾಡಲೂ ಸಾಧ್ಯವಿರಲಿಲ್ಲ. ತನ್ನನ್ನು ಇವರಿಗೆ ಕೊಡಲು ಅಣ್ಣ ಒಪ್ಪಿಕೊಂಡುದುದಾಗಿತ್ತು. ಅವನ ಇಚ್ಛೆಗೆ ವಿರುದ್ಧವಾಗಿ ತಾನು ವರ್ತಿಸುವಂತಿರಲಿಲ್ಲ. ತಾಯಿಯಾದರೂ ಬದುಕಿದ್ದಿದ್ದರೆ ಆಕೆ ತನ್ನ ಪರವಾಗಿ ವಾದಿಸಿ ಈ ಮದುವೆಯನ್ನು ತಡೆಯಬಹುದಾಗಿತ್ತು. ತಂದೆಯೂ ಇರಲಿಲ್ಲ, ತಾಯಿಯೂ ಇರಲಿಲ್ಲ. ತಾನು ಪೂರ್ಣವಾಗಿ ಅಣ್ಣನ ಅಧೀನದಲ್ಲಿದ್ದವಳು.

"ಇವರನ್ನೇನು ನೀನು ಮೆಚ್ಚಿ ಮದುವೆಯಾದ ಹಾಗೆ ಕಾಣೂದಿಲ್ಲ," ಎಂದಳು ಪದ್ಮಾವತಿ.

"ಛೆ. ಛೆ. ಹಾಗೇನೂ ಇಲ್ಲವ್ವಾ," ಎಂದು ಕಮಲ ಆಕ್ಷೇಪಿಸಿದಳಾದರೂ ಅದು ಮೇಲುಮೇಲಿನ ಮಾತೆಂಬುದನ್ನು ಪದ್ಮಾವತಿ ಕಂಡುಕೊಳ್ಳದಿರಲಿಲ್ಲ. ಕಮಲಳಂಥ ಚೆಲುವೆಗೆ ಮರುಳಯ್ಯನಂಥವನು ಸರಿಯಾದ ವರನಲ್ಲವೆಂದು ಯಾರಾದರೂ ಹೇಳಬಹುದು. ಕಮಲಳಂಥ ಹುಡುಗಿಯರು ಇಂಥ ಗಂಡನ್ನ

ಮನಃಪೂರ್ವಕವಾಗಿ ಮೆಚ್ಚಿ ಮದುವೆಯಾಗುವುದು ಸಾಧ್ಯವೇ ಇಲ್ಲ........

........ಸರಿಯೆ. ಆದುದು ಆಗಿಹೋಯಿತು. ಸಂಸಾರವಾದರೂ ಸಮರ್ಪಕವಾಗಿ ನಡೆದಿದ್ದರೆ ಈಕೆಗೆ ಇದ್ದುದರಲ್ಲಿಯೇ ಸ್ವಲ್ಪವಾದರೂ ಸುಖ ದೊರಕಬಹುದಾಗಿತ್ತು. ಈ ಹತಭಾಗ್ಯಳಿಗೆ ಅಷ್ಟು ಸಮಾಧಾನವೂ ಸಿಕ್ಕಲಿಲ್ಲ........

" ಅವರ ಬ್ರಹ್ಮಚರ್ಯವ್ರತದ ಹುಚ್ಚುಚ್ಚಾರಕ್ಕೆ ನೀನ್ಯಾಕೆ ಒಪ್ಪಿಕೊಂಡೆಯೇ ? "

" ಮತ್ತೇನು ಮಾಡೂದು ಪದ್ಮಕ್ಕಾ ? ಅವರು ಹಗಲೂ ರಾತ್ರಿ ಒಂದೇ ಸಮನೆ ರಾಮಕೃಷ್ಣ, ಶಾರದಾಮಣಿಯವರ ಕತೆ ಹೇಳಿ ಹೇಳಿ ಅವರ ಹಾಗೇ ನಾವೂ ಇರೂಣಂತ ದುಂಬಾಲ ಬಿದ್ದರು. ಆ ಗೋಳು ಸಾಕು ಅಂತ ನಾನೂ ಸುಮ್ಮನಿದ್ದುಬಿಟ್ಟೆ."

" ಹೆಂಡತಿ ಹೀಗೆ ಸಡಿಲು ಬಿಟ್ಟರೆ ಗಂಡ ಕೈಯಲ್ಲಿ ಉಳಿದಾನೇನೇ ? ಓಡಿ ಹೋಗುವವನನ್ನ ಮುಗದಾಣ ಹಾಕಿ ಜಗ್ಗಿ ನಿಲ್ಲಿಸಬೇಕು."

" ನನಗೆ ಯಾತಕ್ಕೂ ಹುರುಪೇ ಇಲ್ಲ ಪದ್ಮಕ್ಕಾ. ಅವರು ಏನಾರೆ ಮಾಡಿಕೊಳ್ಳಲಿ ಅಂತ ಸುಮ್ಮನಿದ್ದೀನಿ."

" ಹೀಗೇ ಇನ್ನು ಸ್ವಲ್ಪ ದಿವಸ ಹೋದರೆ ಇವರು ಖಂಡಿತವಾಗಿ ನಿನ್ನ ಬಿಟ್ಟು ಕರಾಚೂರಿಗೆ ಹೋಗಿ ಬಿಡಬಹುದು. ಇವರ ತಲೆಯನ್ನ ಇನ್ನಿಷ್ಟು ಕೆಡಿಸಲಿಕ್ಕೆ ಆ ಯೋಗಮಂಡಲಿ ಬೇರೆ ಅದ ಅಲ್ಲ ! ಅದೇನು ಗೊತ್ತೇನು ನಿನಗೆ ? "

" ಕರಾಚೂರಿನ ಗುರುಗಳ ಶಿಷ್ಯರೆಲ್ಲಾ ಕೂಡಿ ಅದೇನೋ ಸಂಘ ಅಂತ ಮಾಡಿದಾರಂತವ್ವ. ರವಿವಾರಕ್ಕೊಮ್ಮೆ ಸಭೆ ಮಾಡುತಾರಂತೆ. ನೀನೂ ಬಾ ಅಂತ ನನಗೂ ಗಂಟುಬಿದ್ದಿದ್ದರು ಈಗೊಂದು ವಾರದ ಹಿಂದೆ."

" ನಿನ್ನನ್ನೂ ವಿರಾಗಿಣಿಯನ್ನ ಮಾಡುವ ವಿಚಾರವಿರಬೇಕು ಅವರಿಗೆ. ನಿನಗೇನು ಅಂಥಾದ್ದರ ಕಡೆ ಮನಸ್ಸಿಲ್ಲ, ಹೌದಲ್ಲೋ ? "

" ಇಲ್ಲವ್ವಾ. ಈ ಅಧ್ಯಾತ್ಮ ಗಿಧ್ಯಾತ್ಮ ಸಾಧನಾ, ಸಾಕ್ಷಾತ್ಕಾರ ಎಲ್ಲಾ ಬರೀ ಮೂರ್ಖತನ ಅಂತ ಅನಿಸ್ತದ."

" ಶಹಬ್ಬಾಸ್ ! ಇಪ್ಪತ್ತನೆಯ ಶತಮಾನದ ಹೆಣ್ಣೆಂದರೆ ನೀನೇ !

ಮಹಿಳಾ ಮಂಡಲದ ಸದಸ್ಯಳಾಗಬೇಕು ನೋಡು ನೀನೂ. ಮನೆಯಲ್ಲಿ ಕೂತಾದರೂ ಏನು ಮಾಡುತ್ತೀ? ನಾನೂ ಮೊನ್ನೆ ಮೊನ್ನೆ ಮಂಡಲದ ಸದಸ್ಯಳಾಗಿದೀನಿ. ಕುಸುಮಾವತಿ ಅಂತ ಒಬ್ಬಾಕೆ ಹುರುಪಿನ ಹುಡುಗಿ ಸೆಕ್ರೆಟರಿ ಇದಾಳೆ. ಅವಳ ಸಂಗಡ ನಾಲ್ಕು ಮಾತಾಡಿದಿಯಂದರೆ ನಿನ್ನ ಬೇಸರ ಎಲ್ಲಾ ಹೋಗಿಬಿಡ್ತದ. ಸಭೆ, ಚರ್ಚೆ, ಕಾವ್ಯಗಾಯನ, ಸಂಗೀತ, ಸ್ಪರ್ಧೆ, ನಾಟಕ ಎಲ್ಲಾ ಮಾಡುತಾರೆ ಮಂಡಲದವರು."

"ಎಲ್ಲಾ ಹೆಂಗಸರೇ ಹೌದಲ್ಲೋ?"

"ಹೌದು ಮತ್ತೆ! ಹೇಳಿ ಕೇಳಿ ಮಹಿಳಾಮಂಡಲ. ಗಂಡಸರು ಯಾತರಲ್ಲೂ ಸಂಬಂಧ ಬರೂದಿಲ್ಲ. ಹೂಂ. ಆ ಮಾತಿರಲಿ. ಮೊದಲು ನಿನ್ನ ಯಜಮಾನರ ಹುಚ್ಚು ಬಿಡಿಸೂಣು. ಇವತ್ತು ರಾತ್ರಿ ನಾ ಹೇಳಿದ ಹಾಗೆ ಮಾಡ್ತೀಯೇನು?"

ಹಾಗೆ ಹೇಳಿ ಪದ್ಮಾವತಿ ಕಮಲಳನ್ನು ರಾತ್ರಿಯ ದಾಳಿಗೆ ಅಣಿಗೊಳಿಸಿದಳು.

೬

ಮರುದಿನದ ಮಧ್ಯಾಹ್ನ ಗಂಡಸರು ಮನೆಯಿಂದ ಹೊರಡುತ್ತಲೂ ಪದ್ಮಾವತಿ ಕಮಲಳ ಬಳಿ ಧಾವಿಸಿ ಬಂದು ಕೇಳಿದಳು :

" ಏನಾತೇ? ಹಣ್ಣೋ ಕಾಯೋ ? "

ಉತ್ತರವೀಯದೆ ಸುಮ್ಮನೆ ಕುಳಿತಿದ್ದಳು ಕಮಲ. ಆ ಬಾಡಿದ ಮುಖವನ್ನು ದಿಟ್ಟಿಸಿದಾಗಲೆ ಎಲ್ಲವೂ ಸ್ಪಷ್ಟವಾಯಿತು ಪದ್ಮಾವತಿಗೆ.

" ನಾ ಹೇಳಿದ ಹಾಗೆ ನೀನೇನು ಮಾಡಲಿಲ್ಲ ಅಂತ ಕಾಣ್ತದ. ಆದದ್ದಾದರೂ ಏನು ಕಮಲಾ ? "

ಆಗಲೂ ಬಾಯಿ ಬಿಡಲಿಲ್ಲ ಕಮಲ.

ಕಮಲಳ ತೋಳುಗಳನ್ನು ಹಿಡಿದು ಅಲುಗಾಡಿಸುತ್ತ ಪದ್ಮಾವತಿ ಕೇಳಿದಳು.

" ಏನಾತು ಹೇಳಾಕೇ ? "

" ದಿನಾಲೂ ಆಗುವ ಹಾಗೇ ಆತು."

" ಅಂದರೆ ? ಹೂವಿನಿಂದ ಏನೂ ಪರಿಣಾಮ ಆಗಲಿಲ್ಲ ಅಂತೀಯಾ ? "

" ಅದನ್ನೆಲ್ಲಾ ಯಾರು ನೋಡ್ತಾರೆ ಪದ್ಮಕ್ಕಾ ? ಮುಖ್ಯ ಅವರಿಗೆ ಇತ್ತ ಮನಸೇ ಇಲ್ಲ. ರಾತ್ರಿಯೆಲ್ಲಾ ಬಹಳ ಗೋಳಾಡಿದರು. ಗುರುಗಳ ಫೋಟೋಗಳ ಮುಂದೆ ಕೂತು ಅತ್ತರು. ತಾಸೆರಡು ತಾಸು ಶೀರ್ಷಾಸನ ಹಾಕಿಕೊಂಡು ನಿಂತಿದ್ದರು........"

" ತಾಸೆರಡು ತಾಸು ! ಅಬ್ಬಬ್ಬ ! "

" ಇಷ್ಟೊತ್ತು ಎಂದೂ ನಿಂತಿರಲಿಲ್ಲಪ್ಪಾ ಅವರು. ನನಗೂ ಬಹಳ ಗಾಬರಿಯಾಗಿತ್ತು. ಮುಂಜಾನೆ ಮಾತೂ ಆಡಲಿಲ್ಲ. ಮುಖ ಒಂದು ತರಾ ಆಗಿತ್ತು."

" ಉಂಡರೋ ಇಲ್ಲೋ ನೆಟ್ಟಗೆ ? "

" ಉಂಡರು—ದಿನಾಲೂ ಉಣ್ಣುವ ಹಾಗೇ. ಇನ್ನೇನು ಮಾಡುತಾರೋ

ಏನೋ ಅಂತ ನನಗೆ ಅಂಜಿಕೆ."

" ಏನು ಮಾಡುತಾರೆ ಅಂತೀಯಾ? ಜೀವಕ್ಕೇನಾರೆ ಮಾಡಿಕೊಂಡಾರಂತ ಅಂಜಿಕೆಯೋ ಏನು? ಹುಚ್ಚಿ! ಇಂಥವರಿಂದ ಅದೂ ಆಗೂದಲ್ಲ. ಅದಕ್ಕೂ ಬಹಳ ಗಟ್ಟಿ ಮನಸು ಬೇಕಾಗ್ತದ."

" ಕರಾಚೂರಿಗೆ ಹೋಗಿಬಿಟ್ಟರೆ?"

" ಹೋಗಬಹುದು ಅನ್ನೂಣು. ಆದರೆ, ನಿನ್ನನ್ನ ಎಲ್ಲಿ ಬಿಟ್ಟು ಹೋಗುವರು?"

" ತವರುಮನೆಯಲ್ಲಿರು ಅಂತ ಹೇಳುತಾರೆ. ಈ ಮೊದಲೂ ಒಂದೆರಡು ಸಾರಿ ಹೇಳಿದ್ದರು."

" ಕರಾಚೂರಿನಲ್ಲಾದರೂ ಇವರು ಬಹಳ ದಿನ ಉಳೀಲಿಕ್ಕಿಲ್ಲ. ನಮ್ಮವರು ಅಲ್ಲಿ ಹೋಗಿ ಎಲ್ಲಾ ನೋಡಿಕೊಂಡು ಬಂದಾರೆ. ಬರೀ ಶ್ರೀಮಂತರಿಗೆ ಮಾತ್ರ ಮರ್ಯಾದೆಯಂತೆ ಆಶ್ರಮದೊಳಗೆ. ಕೈಯಲ್ಲಿ ರೊಕ್ಕ ಇಲ್ಲದವರನ್ನ ನಾಯಿಯ ಹಾಗೆ ನೋಡುತಾರಂತೆ...."

" ಅಂಥಲ್ಲಿ ಹೋಗಿ ಇವರು ಏನು ಪಡೀತಾರೋ ದೇವರಿಗೇ ಗೊತ್ತು. ಈ ಹುಚ್ಚಿಗೆ ಬಿದ್ದು ಇರುವ ನೌಕರಿ ಬಿಟ್ಟುಬಿಟ್ಟರೆ ಮುಂದೆ ಬಹಳ ಫಜೀತಿಯಾಗ್ತದ."

" ಅಂಥಾ ಪ್ರಸಂಗ ಬರದ ಹಾಗೆ ಈಗಿನಿಂದ ಪ್ರಯತ್ನ ಮಾಡಬೇಕವ್ವಾ. ಹ್ಯಾಗಾದರೂ ಮಾಡಿ ಅವರನ್ನ ನಿನ್ನ ಅಂಕೆಯಲ್ಲಿಟ್ಟುಕೊ. ನಿನ್ನೆ ನಾ ಹೇಳಿದ ಹಾಗೆ ದಿನಾಲೂ ಮಾಡಿದರೆ ತಿಂಗಳೊಪ್ಪತ್ತಿನಲ್ಲಿ ನಿನ್ನ ಕಾರ್ಯ ಸಾಧಿಸಬಹುದಂತ ಅನಿಸ್ತದ."

" ಗಣಪತಿ ಮಾಡಲಿಕ್ಕೆ ಹೋಗಿ ಮಂಗ್ಯಾನ್ನ ಮಾಡಿದ ಹಾಗಾಗ ಬಾರದಲ್ಲ ಪದ್ಮಕ್ಕಾ...." ಎಂದಳು ಕಮಲ.

ಅದೇ ಸಮಯದಲ್ಲಿ........

—ಮರುಳಯ್ಯ ಪಾಠ ಹೇಳಲು ಅಸಮರ್ಥನಾಗಿ, ಆ ದಿನದ ಮಟ್ಟಿಗೆ ರಜ ಪಡೆದುಕೊಂಡು ವಿರಮಿಸಿಕೊಳ್ಳಲೆಂದು ಶಿಕ್ಷಕರ ಕೊಟಡಿಯಲ್ಲಿ ಅಡಿಯಿಡುತ್ತಿದ್ದ.

ಮನೆಗೆ ಹೋಗುವುದಕ್ಕೂ ಇಷ್ಟವಿರಲಿಲ್ಲ. ಶಿಕ್ಷಕರ ಕೊಟಡಿಯಲ್ಲಿ

ಬಹಳ ಹೊತ್ತು ಬಿದ್ದುಕೊಳ್ಳುವಂತಿರಲಿಲ್ಲ. ಅಧ್ಯಾತ್ಮ ವಿಚಾರದಲ್ಲಿ ತನಗಿದ್ದ ಆಸಕ್ತಿಯೆಂದರೆ ಇತರ ಶಿಕ್ಷಕರಿಗೆ ಹಾಸ್ಯದ ವಿಷಯವಾಗಿತ್ತು. ತಾನು ಬಹಳ ಹೊತ್ತು ಅಲ್ಲಿ ಬಿದ್ದುಕೊಂಡಿದ್ದನ್ನು ಕಂಡರೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಅವರು ತನ್ನನ್ನು ಪೀಡಿಸುವುದು ಖಂಡಿತ. ಹಿಂದೆ ಅನೇಕ ಬಾರಿ, ಅವರ ಕೈಯಲ್ಲಿ ಹಾಗೆ ಫಜೀತಿಪಟ್ಟುಕೊಂಡಿದುದಾಗಿತ್ತು. ಮತ್ತೆ ಆವರ ತೋಫು ಖಾನೆಯ ದಾಳಿಯನ್ನೆದುರಿಸಲು ತಾನು ಸಿದ್ಧನಿರಲಿಲ್ಲ.

ಹಾಗಾದರೆ, ಹೋಗುವುದಾದರೂ ಎಲ್ಲಿಗೆ?

ಹಾಗೆ ಚಿಂತಿಸುತ್ತಾ ಆತ ಕೊಟಡಿಯಲ್ಲಿ ಪ್ರವೇಶಿಸುತ್ತಿದ್ದಂತೆಯೆ, ಮೊಳ ಕಾಲುಗಳನ್ನು ಮೇಲಕ್ಕೆತ್ತಿ ನಿಲ್ಲಿಸಿ ದಿಂಬಿಗೊರಗಿ ಬಿದ್ದುಕೊಂಡಿದ್ದ ಸುಲಲಿತ ದೇವಿ, ಕಾಲುಗಳನ್ನು ನೀಳವಾಗಿ ಚಾಚಿ ಎಡಮಗ್ಗುಲಿಗೆ ಹೊರಳಿ ಮರುಳಯ್ಯನ ಚಿಂತಾಕ್ರಾಂತ ಮುಖವನ್ನು ದಿಟ್ಟಿಸುತ್ತ ಕೇಳಿದಳು.

"ಯಾಕ್ರೀ ಮಾಸ್ತರೆ, ಮೈಯಲ್ಲಿ ನೆಟ್ಟಗಿಲ್ಲೇನು ಇವತ್ತು??

"ಇಲ್ಲಿಲ್ಲ. ನೆಟ್ಟಗೇ ಇದೀನಿ," ಎಂದು ನುಡಿದವನೆ ಹಿಂದಿರುಗಿ ಹೋಗಲು ಯತ್ನಿಸಿದ ಮರುಳಯ್ಯ. ಸುಲಲಿತದೇವಿಯ ನಿಕಟ ಸಾನ್ನಿಧ್ಯ ವೆಂದರೆ ಮೊದಲಿನಿಂದಲೂ ಅವನಿಗೆ ಭೀತಿಯಿತ್ತು. ಸಾಧ್ಯವಾದ ಮಟ್ಟಿಗೂ ಅವಳಿಂದ ದೂರ ದೂರವೆ ಇರಲು ಯತ್ನಿಸುತ್ತ ಬಂದಿದ್ದನಾತ. ಅವಳ ದೃಷ್ಟಿಗೆ ಬೀಳುತ್ತಲೂ ಅವನ ನರಮಂಡಲ ದುರ್ಬಲವಾಗುತ್ತಿತ್ತು. ಅವಳು ಅವನ ಸಹೋದ್ಯೋಗಿಯಾಗಿ ಆ ಶಾಲೆಯಲ್ಲಿ ಕೆಲಸಮಾಡಲಾರಂಭಿಸಿ ವರ್ಷವೊಂದು ಕಳೆದು ಹೋಗಿದ್ದಿತಾದರೂ, 'ಯೋಗಮಂಡಲ'ದ ನಿಮಿತ್ತವಾಗಿ, ಎರಡು ತಿಂಗಳಿಂದೀಚೆಗೆ, ಪ್ರತಿ ವಾರವೂ ಅವಳ ನಿಕಟ ಸಾಮೀಪ್ಯದಲ್ಲಿರಬೇಕಾಗಿ ಬಂದಿದ್ದಿತಾದರೂ ಅವಳ ಬಗೆಗೆ ಅವನಿನ್ನೂ ಮೈಕಳಿಬಿಟ್ಟು ವರ್ತಿಸಲಾರದವ ನಾಗಿದ್ದ. ಸುಲಲಿತದೇವಿಯ ಅಸಾಧರಣ ದಿಟ್ಟತನವೂ ಎಷ್ಟೋ ಬಾರಿ ಆತ ನನ್ನು ದಿಗಿಲುಗೊಳಿಸಿತ್ತು. ತಾನು ಹೆಣ್ಣೆಂಬುದನ್ನು ಸಂಪೂರ್ಣವಾಗಿ ಮರೆತು ಗಂಡಸರೊಡನೆ ಸ್ವಚ್ಛಂದವಾಗಿ ವರ್ತಿಸುವುದು ಅವಳ ಅಭ್ಯಾಸವೇ ಆದ ಹಾಗಿತ್ತು. "ಇದು ಹೆಣ್ಣು ಅಲ್ಲವೇ ಅಲ್ಲ. ಗಂಡು. ಗಂಡುಬೀರಿ," ಎಂದು ಶಿಕ್ಷಕರೆಲ್ಲರೂ ಅವಳನ್ನು ಕುರಿತು ಹೇಳುತ್ತಿದ್ದರು. ಶಿಕ್ಷಕರ ಕೊಟಡಿಯಲ್ಲಿ ಕಾಲು ಚಾಚಿ ಬಿದ್ದುಕೊಳ್ಳುವುದು, ಸಹಶಿಕ್ಷಕರೊಡನೆ ಸ್ವಚ್ಛಂದವಾಗಿ ಹರಟೆ

ಕೊಚ್ಚುತ್ತ ಅವರ ಮೈ ಕೈ ತಿವಿಯುವುದು, ಅವರ ಜೊತೆಗೆ ದೂರದೂರ ತಿರುಗಾಡಲು ಹೋಗುವುದು ಸುಲಲಿತದೇವಿಯ ವೈಶಿಷ್ಟ್ಯಗಳಾಗಿದ್ದುವು. ಶಾಲೆಯಲ್ಲಿನ ಯಾವ ಶಿಕ್ಷಕನನ್ನೂ ಅವಳು ಕೆಡಿಸದೆ ಬಿಟ್ಟಿಲ್ಲವೆಂದು ವಿದ್ಯಾರ್ಥಿಗಳು ಆಡಿಕೊಳ್ಳುತ್ತಿದ್ದರು ; "ಶರಣಪ್ಪನವರು ಮರುಳಯ್ಯನವರು ಇಬ್ಬರನ್ನು ಮಾತ್ರ ಅವಳು ತಿರಸ್ಕರಿಸಿ ಬಿಟ್ಟಿರಬೇಕು. ಅವರಿಗೇನು ಗಂಡಸುತನ ಅದ ಏನು!" ಎಂದು ಮಾತನಾಡಿ ನಕ್ಕುಬಿಡುತ್ತಿದ್ದರು. ಮರುಳಯ್ಯನಿಗೆ ಕೇಳಿಸುವ ಹಾಗೇ ಆ ಮಾತನಾಡಿದವರೂ ಇದ್ದರು. ಅಂದಿನಿಂದಲೂ ಮರುಳಯ್ಯನಿಗೆ ಅವಳನ್ನು ಕಂಡೊಡನೆ ನಡುಕ ಬರುತ್ತಿತ್ತು. ಅವಳಿಗೆ ಮಾತ್ರ ಮರುಳಯ್ಯನೆಂದರೆ ಒಂದು ತಮಾಷೆಯ ವಸ್ತು. ಅವನು ತನ್ನಿಂದ ದೂರ ಓಡಿದಷ್ಟು ಅವಳು ಅವನ ಬೆನ್ನು ಬಿದ್ದು ಮೇಲಿಂದ ಮೇಲೆ ಅವನನ್ನು ಕೆಣಕಿ ಮನರಂಜನೆ ಮಾಡಿಕೊಳ್ಳುತ್ತ ಬಂದಿದ್ದಳು.

"ಯಾಕೆ ಹೊರಟು ಬಿಟ್ಟಿರಿ? ಕೂಡಿರಲ್ಲಾ?" ಎಂದಳು ಸುಲಲಿತದೇವಿ. "ಇಷ್ಟ್ಯಾಕೆ ನರ್ವಸ್ ಆಗ್ತೀರಿ? ನಾನೇನು ತಿಂದು ಬಿಡುತೀನೇನು ನಿಮ್ಮನ್ನ?"

ಸುಲಲಿತದೇವಿ ರೂಪವತಿಯೆಂದು ಯಾರೂ ಹೇಳಲು ಸಾಧ್ಯವಿರಲಿಲ್ಲ. ಸುರೂಪಿಗಳ ಗುಂಪಿಗೆ ಸೇರಿಕೊಳ್ಳದಿದ್ದರೂ ಕುರೂಪಿಯೆನ್ನಿಸಿಕೊಳ್ಳಲಾರದ ಮಧ್ಯಮ ತರಗತಿಯ ಹೆಂಗುಸಾಕೆ. ಸಾದಗಪ್ಪು ಬಣ್ಣ. ಕೊಂಚ ಚಪ್ಪಟೆಯಾಗಿದ್ದ ಮೂಗು. ಚುಂಬನಕ್ಕೆಂದೇ ಕಡೆದು ಮಾಡಿದಂತಿದ್ದ ತುಟಿ. ಹೇರಳವಾದ ತಲೆಗೂದಲು. ಅದನ್ನು ಬಹಳ ಕಷ್ಟಪಟ್ಟು ಬಾಚಿಕೊಂಡು ದೊಡ್ಡ ತೆಂಗಿನಕಾಯಿಯಾಕಾರದ ತುರುಬು ಕಟ್ಟಿ ದಿನವೂ ಒಂದೊಂದು ಬಗೆಯ ಹೂವು ಮುಡಿದು ಶಾಲೆಗೆ ಬರುತ್ತಿದ್ದಳಾಕೆ. ಆ ತುರುಬೇ ಅವಳ ಸೌಂದರ್ಯವೆಂದು ಭಾವಿಸುವವರೂ ಇದ್ದರು. ಅವಳನ್ನು ಕಂಡಾಗಲೆಲ್ಲ ಮರುಳಯ್ಯನಿಗೂ ಪುಳಕವೆದ್ದಂತಾಗುತ್ತಿತ್ತು. ಅವಳಿಗಾಗ ಇಪ್ಪತ್ತೆಂಟು ಮೂವತ್ತು ವರ್ಷವಿರಬಹುದು. ಶಾರೀರಕ ಶ್ರಮದ ಅಭಾವದಿಂದಾಗಿ ಆ ವಯಸ್ಸಿಗಾಗಲೇ ಅವಳ ದೇಹ ಬೆಲೂನಿನಂತೆ ಊದಿಕೊಂಡಿತ್ತು. ದೇಹಕ್ಕೆ ತಕ್ಕ ದಪ್ಪಮೊಗ. ಆ ಮೊಗದಲ್ಲಿ ಸುಂದರವಾಗಿದ್ದುವೆಂದರೆ ಅವಳ ಕಣ್ಣುಗಳು ಮಾತ್ರ. ಕಪ್ಪ

ನೆಯ ಕಾಡಿಗೆಗಣ್ಣುಗಳು. ದ್ರಾಕ್ಷಾಫಲಗಳನ್ನು ನೆನಪಿಗೆ ತಂದುಕೊಡುವಂಥ ದೊಡ್ಡ ದೊಡ್ಡ ಕಣ್ಣುಗೊಂಬೆಗಳು. ಸುತ್ತಲೂ ದಟ್ಟವಾಗಿ ಬೆಳೆದ ಎವೆಗೂದಲು. ಅವಳ ಇನ್ನೊಂದು ಸಿರಿಯೆಂದರೆ ಅವಳ ಇಂಪಾದ ಕಂಠಧ್ವನಿ. ಅವಳು ಹಾಡಲಾರಂಭಿಸಿದಾಗ, ಅವಳ ಇತರ ವಿಕೃತಿಗಳೆಲ್ಲವನ್ನೂ ಮರೆತು ಜನ ಮುಗ್ಧರಾಗಿ ಕೂಡುತ್ತಿದ್ದರು. ಆ ಕಂಠಮಾಧುರ್ಯದ ಬಲದಿಂದಲೇ ಆ ಶಾಲೆಯಲ್ಲಿ ಅವಳಿಗೆ ಕೆಲಸ ಸಿಕ್ಕಿತು. ಅದನ್ನು ಕೊನೆಯ ವರೆಗೂ ಉಳಿಸಿಕೊಳ್ಳುವ ಜಾಣತನ ಧೂರ್ತತನಗಳೂ ಅವಳಿಗೆ ಸಹಜವಾಗಿ ಸಾಧಿಸಿದ್ದುವು. ಹೈಸ್ಕೂಲ್ ಕಮಿಟಿಯ ಚೇರ್ಮನ್ನರು, ನಗರ ಸಭಾಧ್ಯಕ್ಷರು, ಚೀಫ್ ಆಫೀಸರು ಎ. ಓ. ಗಳು, ಎಜ್ಯುಕೇಶನಲ್ ಇನ್ಸ್‌ಪೆಕ್ಟರುಗಳು ಎಲ್ಲರೂ ಅವಳ ಅಭಿಮಾನಿಗಳೇ.

“ಸುಲಲಿತಾದೇವಿ ಅಂದರೆ ಓರೆಕೋರೆನಗರದ ರತ್ನ. ಇಂಥ ಹೆಣ್ಣನ್ನು ನಾವು ನೋಡೇ ಇರಲಿಲ್ಲ ಇದುವರೆವಿಗೆ!” ಎನ್ನುತ್ತಿದ್ದರು ಸ್ಕೂಲ್ ಕಮಿಟಿ ಚೇರ್ಮನ್ನರು.

ಅಂಥ ಹೆಣ್ಣನ್ನು ಮರುಳಯ್ಯನೂ ಆ ಮೊದಲು ನೋಡಿರಲಿಲ್ಲ. ಎಂತಲೇ ಅವಳನ್ನು ಕಂಡರೆ ಆತ ದಿಗಿಲುಗೊಳ್ಳುತ್ತಿದ್ದನು.

ಆದರೆ, ಆ ದಿನ ಮಾತ್ರ ಆತ ಅವಳ ಸಾನ್ನಿಧ್ಯದಿಂದ ಪಲಾಯನ ಮಾಡಲು ಸಾಧ್ಯವಾಗಲಿಲ್ಲ.

“ಏನಾದರೂ ಕೆಲಸ ಇತ್ತೇನು?” ಎಂದು ಆತ ಕೇಳಿದ, ನಿಂತುಕೊಂಡಿದ್ದಂತೆಯೆ.

“ಕೆಲಸ ಇದ್ದರೇನೆ ಕೂಡಬೇಕಂತ ನೇಮ ಅದ ಏನ್ರಿ? ಹೀಗ್ಯಾಕೆ ಮಾಡ್ತೀರಿ ಯದ್ವಾತದ್ವಾ? ಕರಾಚೂರಿನ ಗುರೂಜಿ ಮಾತಾಜಿಯವರ ಶಿಷ್ಯರಾಗಿಯೂ, ನೀವು ಸ್ತ್ರೀಯೆಂದರೆ ಇಷ್ಟು ಸಂಕೋಚಪಟ್ಟುಕೊಳ್ತೀರಲ್ಲಾ! ಕುಬೇರಪ್ಪನವರನ್ನ ನೋಡಿರಲ್ಲ, ಹ್ಯಾಗಿದಾರವರು!”

ಕುಬೇರಪ್ಪನವರೆಲ್ಲಿ, ತಾನೆಲ್ಲಿ! ಅವರಂತೆ ತಾನೂ ವರ್ತಿಸಲು ಸಾಧ್ಯವೆ?

ತಮ್ಮೂರಲ್ಲಿ ಆಶ್ರಮ ಸ್ಥಾಪಿಸಿ ನಿಮ್ಮನ್ನ ಕರಕೊಂಡು ಹೋಗಬೇಕಂತಿದ್ದರಲ್ಲ ಕುಬೇರಪ್ಪನವರು ಹೋಗುವ ನಿಶ್ಚಯ ಮಾಡಿದಿರೋ ಏನು?” ಎಂದು ಕೇಳಿದಳು ಸುಲಲಿತದೇವಿ. “ಕೂಡಿರಲ್ರೀ! ನಿಂತೇ ಇದೀರಲ್ಲಾ?”

ಮರುಳಯ್ಯ ಕೊಂಚ ದೂರದಲ್ಲಿ ಕುಳಿತುಕೊಂಡ. ಒಡನೆಯೇ ಸುಲಲಿತದೇವಿ ಅವನ ಹತ್ತಿರ ಸರಿದು ಹೋಗಿ ಅವನ ಭುಜಕ್ಕೆ ತನ್ನ ಭುಜ ಹತ್ತುವಂತೆ ಒರಗಿ, ಕಾಲುಗಳನ್ನು ಕತ್ತರಿಯಾಕಾರದಲ್ಲಿ ಚಾಚುತ್ತಾ ಮತ್ತೆ ಕೇಳಿದಳು :

" ಮಾಸ್ತರಿಕೆಯ ಕೆಲಸಕ್ಕಿಂತ ನಿಮಗೆ ಅದೇ ಚಲೋದಾಗಬಹುದು. ಇಲ್ಲಿ ನೀವು ಪಾಠ ಹೇಳೋದು ಅಷ್ಟರಲ್ಲೇ ಅದ. ಹೌದೋ ಅಲ್ಲೋ ? "

ಕೊಟಡಿಯೆದುರಿನ ಕಟ್ಟೆಯ ಮೇಲೆ ಹಾದು ಹೋಗುತ್ತಿದ್ದ ವಿದ್ಯಾರ್ಥಿಯೊಬ್ಬ ಇವರಿಬ್ಬರೂ ಮೈಗೆ ಮೈ ಹೊಂದಿಸಿ ಕುಳಿತುದನ್ನು ಕಂಡು ತುಂಟತನದಿಂದ ಕೆಮ್ಮಿದ. ಆಗಲೂ ಸುಲಲಿತದೇವಿ ದೂರ ಸರಿದು ಕೂಡುವ ತೊಂದರೆ ತೆಗೆದುಕೊಳ್ಳಲಿಲ್ಲ. ಮರುಳಯ್ಯನೇ ಎದ್ದು ದೂರ ಸರಿಯಬೇಕಾಯಿತು.

" ಪಾಠಗಳಲ್ಲಿ ನನ್ನ ಮನಸ್ಸಿರೂದಿಲ್ಲ ಅನ್ನೂದು ನಿಜ."

" ಹಾಗಿದ್ದರೆ ಸುಮ್ಮನೆ ಯಾಕೆ ಕೊಳೆಯಬೇಕು ಇಲ್ಲಿ? ಹ್ಯಾಗೂ ಕುಬೇರಪ್ಪನವರು ನಿಮ್ಮನ್ನ ಕರೀತಾ ಇದಾರೆ. ಇಲ್ಲಿ ಸಿಗುವಷ್ಟು ಸಂಬಳ ಕೊಡೂದಕ್ಕೂ ತಯಾರಿದಾರೆ. ಇಂಥಾ ದೊಡ್ಡ ಪಟ್ಟಣದೊಳಗೆ ನಮ್ಮ ಮಂಡಲದ ಕಾರ್ಯಕಲಾಪಗಳೂ ಶಾಂತವಾಗಿ ಸುಖವಾಗಿ ಕಳೆಯಬಹುದು. ಈ ಆಶ್ರಮ ಸ್ಥಾಪನಾ ಆದರೆ ಮಂಡಲದ ಸದಸ್ಯರಿಗೂ ಸಂತೋಷವಾಗ್ತದ. ಈಗ ಒಂದೆರಡು ವಾರಗಳಿಂದ ಕುಬೇರಪ್ಪನವರು ಒಂದೇ ಸಮನೆ ಗಂಟು ಬಿದ್ದಿದ್ದಾರೆ ನನಗೆ, ನಿಮ್ಮನ್ನ ಒಪ್ಪಿಸಿರಿ ಅಂತ....ನಿಮಗೆ ಮನಸ್ಸಿಲ್ಲೋ ಏನು ? "

" ಹಾಗೇನಿಲ್ಲ. ಆದರೆ ಇಂಥಾ ನೌಕರಿ ಬಿಡೂದು ಅಂದರೆ ಸ್ವಲ್ಪ ವಿಚಾರ ಮಾಡಬೇಕಾಗ್ತದಲ್ಲ? ಕುಬೇರಪ್ಪನವರ ವಿಷಯ ನನಗೆ ಹೆಚ್ಚಿಗೆ ಗೊತ್ತಿಲ್ಲ. ಅವರನ್ನ ಪೂರಾ ನಂಬಿ ನೌಕರಿ ಬಿಟ್ಟು ಅವರ ಹಿಂದೆ ಹೊರಡಬಹುದು ಅಂತೀರಾ ? "

" ಅವರಂಥಾ ಉದಾರಿ ಮನುಷ್ಯ ಕರ್ನಾಟಕದಲ್ಲೇ ಇನ್ನೊಬ್ಬರಿರಲಿಕ್ಕಿಲ್ಲ. ಒಮ್ಮೆ ಒಬ್ಬರಿಗೊಂದು ಮಾತು ಕೊಟ್ಟರೆಂದರೆ ಎಂದೆಂದೂ ಅದನ್ನ ಮುರಿಯೂದಿಲ್ಲ ಅವರು. ನಿಮ್ಮ ಸಂಬಳಕ್ಕಂತೂ ನೀವೇನು ಚಿಂತೆ ಮಾಡಬೇಕಾಗಿಲ್ಲ. ಹಣ ಎಲ್ಲಿಂದ ತರಬೇಕೆಂಬ ಚಿಂತೆ ಕುಬೇರಪ್ಪನವರಿಗೆಂದೂ ಬಂದಿಲ್ಲ. ಅದನ್ನ ಹ್ಯಾಗೆ ಖರ್ಚು ಮಾಡಬೇಕೆನ್ನೂದೇ ಅವರ ಚಿಂತೆ. ನೀವು ಇಷ್ಟಪಟರೆ

ನಿಮ್ಮ ಒಂದು ವರ್ಷದ ಸಂಬಳವನ್ನೂ ಅಡ್ವಾನ್ಸ್ ಕೊಡೂದಕ್ಕೂ ತಯಾರಿದಾರೆ ಅವರು."

"ಸಂಬಳದ ಮಾತಲ್ಲ ನಾ ಹೇಳಿದ್ದು. ಅದೇನೋ ಸ್ವಲ್ಪ ಹೆಚ್ಚು ಕಡಿಮೆಯಾದರೂ ನಡೆದೀತು. ಆದರೆ ಈ ಆಶ್ರಮ ಕಾಯಂ ಆಗಿ ನಡೀಬಹುದೇ, ಅಂತ?"

"ನಮ್ಮ ಸಾಹುಕಾರರು ಚಂಚಲ ಸ್ವಭಾವದವರಲ್ಲ ಮರುಳಯ್ಯನವರೆ. ನೀವೇನೂ ಸಂಶಯ ಪಟ್ಟುಕೊಳ್ಳಬಾರದು."

"ಸಂಶಯ ಅಂತೇನೂ ಅಲ್ರೀ. ಆದರೂ....ಕುಬೇರಪ್ಪನವರ ಬಗ್ಗೆ ಬೇರೆ ಬೇರೆ ಜನರು ಬೇರೆ ಬೇರೆ ರೀತಿ ಮಾತಾಡ್ತಾರೆ. ಅದಕ್ಕಂತೀನಿ...."

"ಮಾತಾಡುವ ಮಂದಿಗೇನ್ರೀ? ಅವರು ನಿಮ್ಮ ಬಗ್ಗೂ ಮಾತಾಡ್ತಾರೆ, ನನ್ನ ಬಗ್ಗೂ ಮಾತಾಡ್ತಾರೆ. ಕುಬೇರಪ್ಪನವರು ತಮಗಿಂತ ದೊಡ್ಡ ಸಾಹುಕಾರರು, ಏನೂ ಚಿಂತೆಯಿಲ್ಲದೆ ಸುಖದಿಂದಿದಾರೆ ಅಂತ ಹೊಟ್ಟೆಕಿಚ್ಚು ಈ ಜನರಿಗೆ. ಅದಕ್ಕೇ ಅಪಪ್ರಚಾರ ಮಾಡ್ತಾರೆ ಆಯ್ತು. ಹೀಗೆ ಮಂದಿಯ ಮಾತಿಗೆಲ್ಲಾ ನಾವು ಲಕ್ಷ್ಯ ಕೊಟ್ಟರೆ ಈ ಊರಲ್ಲಿ ಬಾಳ್ವೆ ಮಾಡೂದಕ್ಕಾಗಲಿಕ್ಕಿಲ್ಲ. ಆಂ, ಏನಂತೀರಿ?"

"ನೀವನ್ನೂದೂ ಬರಾಬರಿ."

"ನಮ್ಮ ಹೆಡ್ಮಾಸ್ತರರ ಬಗ್ಗೆ ಏನೇನು ಮಾತಾಡ್ತಾರೆ ಈ ಊರ ಮಂದಿ! ಅವರೇನಾದರೂ ಅದಕ್ಕೆ ಲಕ್ಷ್ಯ ಕೊಟ್ಟಿದ್ದರೆ ಈ ಊರೇ ಬಿಟ್ಟು ಹೋಗಬೇಕಾಗ್ತಿತ್ತು. ಆದರವರ ಚರ್ಮ ಬಹಳ ಗಟ್ಟಿ. ಎಲ್ಲಾ ಸಹಿಸಿಕೊಂಡು ತಮ್ಮ ಕೆಲಸ ತಾವು ಮಾಡಿಕೊಂಡು ಹೋಗ್ತಾ ಇದಾರೆ. ನನ್ನದೂ ಮೊದಲಿನಿಂದ ಇದೇ ಪದ್ಧತಿ. ನಮ್ಮ ಯಜಮಾನರೂ ಹಾಗೆ...." ಎಂದು ಆಕೆ ಹೇಳುತ್ತಿದ್ದಂತೆಯೆ ಇನ್ನೊಬ್ಬ ಶಿಕ್ಷಕರು ಬಂದರಾದುದರಿಂದ ಮಾತು ನಿಂತು ಹೋಯಿತು.

ಮರುಳಯ್ಯ ಥಟ್ಟನೆದ್ದು ಮತ್ತೂ ಸ್ವಲ್ಪ ದೂರ ಸರಿದುಕೊಂಡ. ಸುಲಲಿತದೇವಿ ಮಾತ್ರ ಅತ್ತಿತ್ತ ಅಲುಗಾಡಲಿಲ್ಲ, ಕಾಲುಗಳನ್ನು ಎತ್ತಿಕೊಳ್ಳಲಿಲ್ಲ.

"ಏನ್ರಿ ಯಾವ ಯಜಮಾನರ ಮಾತು ನಡೆದದೆ?" ಎಂದು ಅಸಿಸ್ಟೆಂಟ್ ಮಾಸ್ತರ್ ರಾಮರಾಯ ಆರಂಭಿಸಿದ.

"ಮತ್ತಾವ ಯಜಮಾನರು ಬರ್ತಾರ್ರೀ?" ಎನ್ನುತ್ತಾ ಆಕೆ ಅವನ ಹತ್ತಿರ ಸರಿದುಕೊಂಡಳು.

"ಯಾರಿಗೆ ಗೊತ್ತು!" ಎನ್ನುವಂತೆ ಆತ ತುಂಟತನದ ನಗು ಬೀರಿ ಮರುಳಯ್ಯನನ್ನುದ್ದೇಶಿಸಿ ಕೇಳಿದ.

"ಏನು ಮಾಸ್ತರೆ, ಎಲ್ಲಿಗೆ ಬಂತು ನಿಮ್ಮ ಸಾಧನೆ? ಇನ್ನೇನು ಒಂದೆರಡು ವಾರಗಳಲ್ಲೇ ದೇವರು ಕಾಣಿಸಿಕೋಬಹುದು ಅಂತೀರಾ?"

ಮರುಳಯ್ಯ ಮೌನನಾಗಿಯೆ ಅಲ್ಲಿಂದೆದ್ದು ಹೊರಟ.

"ನಿಮಗೆಲ್ಲಾ ದೇವರೆಂದರೆ ನಗಚಾಟಕೆ...." ಎಂದಳು ಸುಲಲಿತದೇವಿ.

"ನೀವಾದರೂ ಅವನನ್ನ ಎಲ್ಲಿ ಸೀರಿಯಸ್ ಆಗಿ ತಗೊಂಡೀರಿ?" ಎಂದು ಕೆಣಕಿದ ರಾಮರಾಯ.

"ನೀವು ಹೀಗೆಲ್ಲಾ ಅನ್ನಬಾರದು. ನಮ್ಮ ಮಂಡಲಕ್ಕೊಮ್ಮೆ ಬಂದು ನೋಡಿ ಆಮೇಲೆ ಮಾತಾಡಿರಿ."

"ನಿಮ್ಮ ಮಂಡಲದಲ್ಲಿ ಏನು ನಡೀತದನ್ನೂದು ನಮಗೆಲ್ಲಾ ಚೆನ್ನಾಗಿ ಗೊತ್ತದ."

"ಏನು ಗೊತ್ತದ?"

"ಆ ಧ್ಯಾನ....ಆ ಪ್ರಾರ್ಥನೆ....ಆ ಸೋಗು....ಎಲ್ಲಾ ಬರಿಯ ಸೋಗು. ಕುಬೇರಪ್ಪನವರಂಥ ಪ್ರಸಿದ್ಧ ರಸಿಕರು ಯೋಗ ಮಂಡಲಕ್ಕೆ ಬರೂದು ಯಾತಕ್ಕಾಗಿ ಅನ್ನೂದು ನಮಗೇನು ಗೊತ್ತಾಗೂದಿಲ್ಲೇನು?"

"ಸಾಕು ಬಿಡಿರಿ. ನೀವು ಏನೇನೋ ತರ್ಕ ಕುತರ್ಕ ಮಾಡ್ತೀರಿ!" ಎಂದು ಹುಸಿಮುನಿಸಿನಿಂದ ನುಡಿದು ಸುಲಲಿತದೇವಿ ತನ್ನ ಭಾರವಾದ ದೇಹವನ್ನು ತುಂಬಾ ಕಷ್ಟದಿಂದ ಮೇಲಕ್ಕೆತ್ತಿಕೊಂಡು ಮದ್ದಾನೆಯಂತೆ ಹೆಜ್ಜೆ ಹಾಕುತ್ತ ತನ್ನ ವರ್ಗಕ್ಕೆ ಹೊರಟು ಹೋದಳು.

೭

"ಯೋಗಮಂಡಲದ" ಕಲ್ಪನೆ ಹುಟ್ಟಿ ಬೆಳೆದುದು ಸುಚರಿತರಾಯನ ಮೆದುಳಿನಲ್ಲಾದರೂ ಅದಕ್ಕೊಂದು ಮೂರ್ತಸ್ವರೂಪ ಬರುವಂತಾಗಲು ಶರಣಪ್ಪ ನವರೇ ಕಾರಣರೆಂದು ಹೇಳಬೇಕು. ಅಂಥದೊಂದು ಗುಂಪನ್ನು ನಿರ್ಮಿಸಿ ಅಧ್ಯಾತ್ಮ ಸಾಧನೆ ಮಾಡಬೇಕೆಂಬ ವಿಚಾರ ಅನೇಕ ವರ್ಷಗಳಿಂದಲೂ ಶರಣಪ್ಪ ನವರ ತಲೆಯಲ್ಲಿ ಸುತ್ತುತ್ತಿತ್ತು. ತಾವೊಬ್ಬರೇ ಏನನ್ನು ಮಾಡದೆ ಅಷ್ಟು ದಿನ ಅವರು ಸುಮ್ಮನಿದ್ದರು.

ಸುಚರಿತರಾಯ ಆ ಯೋಜನೆಯನ್ನು ತಿಳಿಸುತ್ತಲೂ ಶರಣಪ್ಪನವರು ಆನಂದದಿಂದ ಹೇಳಿದರು :

"ನಾನಂತೂ ಇಂದೇ ಸದಸ್ಯನಾಗಲು ತಯಾರಿದೀನಿ. ಮರುಳಯ್ಯ ನವರೂ ಬಂದಾರು. ಒಂದು ಒಳ್ಳೆಯ ದಿನ ನೋಡಿ ಮಂಡಲ ಸ್ಥಾಪಿಸಿ ಬಿಡೋಣ."

"ಇನ್ನೊಂದು ತಿಂಗಳಿಗೆ ಮಾತಾಜಿಯವರ ಜನ್ಮದಿನ ಬರ್‍ತದೆ. ಅವತ್ತೇ ಸುರುಮಾಡಿದರೆ ಹ್ಯಾಗೆ?"

"ಬಹಳ ಚಲೋದು. ಬಹಳ ಚಲೋದು. ಗುರೂಜಿ, ಮಾತಾಜಿಯವ ರಿಗೂ ಈಗಲೇ ಬರೆದು ಅವರ ಆಶೀರ್ವಾದಗಳನ್ನೂ ತರಿಸಿರಿ."

ಗುರೂಜಿ ಮತ್ತು ಮಾತಾಜಿಯವರ ಹರಕೆಗಳೂ ಸಕಾಲಕ್ಕೆ ಬಂದು ಮುಟ್ಟಿದುವು. ಮಂಡಲದ ಸ್ಥಾಪನೆಯ ವಿಚಾರವಾಗಿ ಪತ್ರಿಕೆಗಳಲ್ಲಿ ಪ್ರಕಟ ನೆಯೂ ಕಾಣಿಸಿಕೊಂಡಿತು. ಎಲ್ಲ ಸಿದ್ಧತೆಯೂ ನಡೆದು, ಗೊತ್ತು ಪಡಿಸಿದ ದಿನ, ನಗರ ಸಭಾ ಭವನದಲ್ಲಿ, ಕರಾಚೂರಿನ ಗುರೂಜಿ ಮಾತಾಜಿಯವರ ಪರಮ ಶಿಷ್ಯರಾದ ಕನ್ನಡ ಕವಿಗಳೊಬ್ಬರ ಅಧ್ಯಕ್ಷತೆಯಲ್ಲಿ ಮಂಡಲದ ಆರಂಭೋತ್ಸವ ಸಡಗರದಿಂದ ನೆರವೇರಿತು. ಅನಂತರ ವಾರವಾರವೂ ತಪ್ಪದೆ ಸುಚರಿತರಾಯರ ಮನೆಯಲ್ಲಿಯೆ ಮಂಡಲದ ಸಭೆ ಸೇರುತ್ತ ಬಂತು.

ಓರೆಕೋರೆನಗರದ ಜನರಿಗೆ ಇಂಥ ಮಂಡಲ, ಸಂಘ, ಸಂಸ್ಥೆಗಳೆಂದರೆ

ಮೊದಲಿನಿಂದಲೂ ತಾತ್ಸಾರವೇ. ಕೆಲವೊಂದು ವ್ಯಕ್ತಿಗಳು ತಮ್ಮ ದೊಡ್ಡಸ್ತಿಕೆ ಬೆಳಸಿಕೊಳ್ಳಲೆಂದೋ, ಸಾರ್ವಜನಿಕರ ಹಣ ಎತ್ತಿ ಹಾಕಲೆಂದೋ, ಸಂಘ ಸಂಸ್ಥೆಗಳನ್ನು ನಿರ್ಮಿಸುವರೆಂದೂ, ಅವು ಹುಟ್ಟಿದ ಕೆಲದಿನಗಳಲ್ಲಿಯೆ ಸತ್ತುಹೋಗುವವೆಂದೂ ಇಲ್ಲಿನ ನಾಗರಿಕರ ತಿಳಿವಳಿಕೆ. ಆ ತಿಳಿವಳಿಕೆಗೆ ಆಧಾರವೂ ಇಲ್ಲದಿರಲಿಲ್ಲ. ಕಳೆದ ಐವತ್ತು ವರ್ಷಗಳ ಅವಧಿಯಲ್ಲಿಯೆ ಈ ನಗರದಲ್ಲಿ ನೂರಾರು ಸಂಸ್ಥೆಗಳು ಜನಿಸಿ ಆರೇಳು ತಿಂಗಳುಗಳ ಕಾಲ ಮೆರೆದು ಮುಂದೆ ಯಾರಿಗೂ ಗೊತ್ತಾಗದಂತೆ ಅದೃಶ್ಯವಾಗಿವೆ. ಎಂತಲೇ ಜನರಿಗೆ ಈ ಸಂಘಗಳೆಂದರೆ ತಾತ್ಸಾರ. ನಗರ ಸಭಾಭವನದಲ್ಲಿ ಆರಂಭೋತ್ಸವಗಳೋ ವಾರ್ಷಿಕೋತ್ಸವಗಳೋ ನಡೆದಾಗ ಪರಸ್ಥಳಗಳ ಪ್ರಖ್ಯಾತ ವ್ಯಕ್ತಿಗಳು ಆಹ್ವಾನಿತರಾಗಿ ಬಂದಿದ್ದರೆ ಮಾತ್ರ ಅವರನ್ನು ನೋಡಲೆಂದು ಜನ ಅಲ್ಲಿ ಸೇರುವುದುಂಟು. ಆಮಂತ್ರಿತರ ಭಾಷಣ ಮುಗಿಯುವುದೇ ತಡ ಸಭಾಭವನವೂ ಬರಿಯದಾಗಲಾರಂಭವಾಗುವುದು. ಸ್ಥಳೀಯ ದೊಡ್ಡ ಮನುಷ್ಯರ ಸಮಾರೋಪ ಭಾಷಣವನ್ನು ಕೇಳಲು ಒಬ್ಬರೂ ಕುಳಿತುಕೊಳ್ಳುವುದಿಲ್ಲ.

"ಇವರು ಏನು ಹೇಳ್ತಾರನ್ನೋದು ನಮಗೇನು ಗೊತ್ತಿಲ್ಲೇನು? ಸುಮ್ಮನೆ ಯಾಕೆ ವೇಳೆ ಹಾಳು ಮಾಡಬೇಕು? ಚಹನಾದ್ರೂ ಕುಡೀಲಿಕ್ಕೆ ಹೋಗೂಣು," ಎಂದು ಹೇಳಿಕೊಳ್ಳುತ್ತಾ ಹೊರಟು ಹೋಗುವ ಜನರೇ ಹೆಚ್ಚು.

ವಾಸ್ತವವಾಗಿ ಈ ಜನರ ಸಂಸ್ಕೃತಿ ಈ ಬಗೆಯದಾಗಿದ್ದರೂ, ಈ ನಗರ ಕರ್ಣಾಟಕದ ಸಂಸ್ಕೃತಿಯ ಕೇಂದ್ರ ಸ್ಥಳವೆಂಬುದಾಗಿ ಕರೆಯಿಸಿಕೊಳ್ಳುವುದುಂಟು. "ಇಲ್ಲಿಯ ಜನರು ಸುಶಿಕ್ಷಿತರು, ವಿನಯಶೀಲರು, ಸಚ್ಚರಿತ್ರರು, ಸಾಹಿತ್ಯ-ಸಂಗೀತ ನಾಟಕ-ನೃತ್ಯ ಇತ್ಯಾದಿ ಕಲೆಗಳನ್ನು ಪ್ರೋತ್ಸಾಹಿಸುವವರು; ಇದು ಪಂಡಿತರ ಕೇಂದ್ರ, ಕವಿಗಳ ತವರೂರು, ದೇಶಭಕ್ತರ ನೆಲೆವೀಡು, ವೇದಾಂತಿಗಳ ಆಧ್ಯಾತ್ಮಿಗಳ ಪುಣ್ಯಧಾಮ," ಎಂಬುದಾಗಿ ಪರಸ್ಥಳಗಳ ಜನರು ಈ ನಗರವನ್ನು ಬಣ್ಣಿಸುವುದುಂಟು. ಈ ಬಣ್ಣನೆಯನ್ನು ಕೇಳಿದಾಗ ಓದಿದಾಗ ಓರೆಕೋರೆಯ ನಾಗರಿಕರು ಬಿದ್ದು ಬಿದ್ದು ನಕ್ಕು, "ಇವರಿಗೆಲ್ಲೋ ತಲೆ ಕೆಟ್ಟಿರಬೇಕು, ಅದಕ್ಕೇ ಇಲ್ಲದ್ದೆಲ್ಲಾ ಮಾಡುತ್ತಾರೆ," ಎಂದು ಟೀಕೆ ಮಾಡುವುದುಂಟು.

ಸುಶಿಕ್ಷಿತರಿಗೇನೂ ಕೊರತೆಯಿಲ್ಲ ಈ ನಗರದಲ್ಲಿ. ನಿಜ. ಇಲ್ಲಿ ಗಿಡ-

ಮರ-ಹಾದಿ-ಬೀದಿ-ಚಹದಂಗಡಿಗಳಿರುವಷ್ಟೆ ಪದವೀಧರ ಸುಶಿಕ್ಷಿತರೂ ಇದ್ದಾರೆ. ಎಂ. ಎ., ಮತ್ತು ಎಂ. ಎಸ್‌ಸಿ., ಗಳಿಗೂ ಕೊರತೆಯಿಲ್ಲ. ಪಿಎಚ್. ಡಿ. ಗಳೂ ಇರಬಹುದು. ಹತ್ತಿಪ್ಪತ್ತು ಮಂದಿ. ಎಸ್. ಸಿ. ಪಿ. ಎಸ್.ಗಳೂ ಎಂ.ಬಿ. ಬಿ. ಎಸ್. ಗಳೂ ಅನೇಕರಿದ್ದಾರೆ. ಶಿಕ್ಷಕರು ಮತ್ತು ಪ್ರೊಫೆಸರುಗಳಿಗಂತೂ ಲೆಕ್ಕವೇ ಇಲ್ಲ. ಬಿ. ಎ. ಎಲೆಲ್. ಬಿ. ಗಳಂತೂ ಹಾದಿಗೆ ಹತ್ತು ಮಂದಿ, ಬೀದಿಗೆ ಇಪ್ಪತ್ತು ಮಂದಿ. ಇವರಲ್ಲಿ ನಾಲ್ಕೈದು ಜನರದು ಒಂದೊಂದು ಗುಂಪು, ಒಂದೊಂದು ಮತ, ಒಂದೊಂದು ಸಂಘ. ಪ್ರತಿಯೊಂದು ಗುಂಪಿಗೂ ಒಬ್ಬೊಬ್ಬ ಪುಢಾರಿ. ಇಂಥ ಐವತ್ತು ಅರುವತ್ತು ಗುಂಪುಗಳು, ಅಷ್ಟೇ ಪುಢಾರಿಗಳು. ಒಬ್ಬ ಪುಢಾರಿಯನ್ನು ಕಂಡರೆ ಇನ್ನೊಬ್ಬ ಪುಢಾರಿಗಾಗದು. ಒಂದು ಗುಂಪಿನ ವಿಷಯ ಕೇಳಿದರೆ ಇನ್ನೊಂದು ಗುಂಪಿಗಾಗದು. "ಅವನಿಗೇನು ತಿಳೀತದೆ? ಅವನೆಂಥಾ ಬುದ್ಧಿವಂತ!" ಎಂದು ಒಬ್ಬ ಇನ್ನೊಬ್ಬನನ್ನು ಹಳಿಯುವುದು ಈ ನಗರದ ಸುಶಿಕ್ಷಿತರಿಗೆಲ್ಲಾ ಅಂಟಿಕೊಂಡಿರುವ ಸರ್ವಸಾಮಾನ್ಯವಾದ ರೋಗ. ತಮ್ಮ ದೊಡ್ಡಸ್ತಿಕೆಯನ್ನು ಬೆಳಸಿಕೊಳ್ಳುವ ಉದ್ದೇಶದಿಂದ ಇವರು ಜಾತಿ, ಮತ, ಪಂಥಗಳ ದುರ್ಲಾಭ ಪಡೆಯಲೂ ಹೇಸುವುದಿಲ್ಲ. ನಗರಸಭೆ, ಸ್ಕೂಲ್ ಬೋರ್ಡು, ಜಿಲ್ಲಾ ಬೋರ್ಡು, ಸಾಹಿತ್ಯ ಸಂಘ, ಮತ್ತಿನ್ನಿತರ ಸಂಘಗಳಲ್ಲೂ ಈ ಪುಢಾರಿಗಳ ಕೋಳಿಕಾಳಗ ನಡೆದೇ ಇರುತ್ತದೆ. ಇದೆಲ್ಲವನ್ನೂ ನೋಡಿದ, ಓರೆಕೋರೆನಗರದ ಸಾಮಾನ್ಯ ಜನರಿಗೆ ಈ ಸುಶಿಕ್ಷಿತರ ಬಗೆಗೆ ಜನರಿಗೆ ತಾತ್ಸಾರವುಂಟಾಗುವುದಕ್ಕೂ ಇದೇ ಮುಖ್ಯ ಕಾರಣ.

"ಯೋಗ ಮಂಡಲಕ್ಕೂ ಇದೇ ಗತಿಯಾಗಬಹುದಲ್ಲ?" ಎಂದು ಸುಲಲಿತದೇವಿ ಹೇಳಿದಾಗ ಶರಣಪ್ಪನವರು ಅವಳನ್ನು ಸಂತೈಸುವ ಧ್ವನಿಯಲ್ಲಿ ನುಡಿದಿದ್ದರು:

"ನಮ್ಮದು Mass party ಯೇನೂ ಅಲ್ವಲ್ಲ? ಬರೀ ಅಧ್ಯಾತ್ಮ ಪ್ರೇಮಿಗಳಿಗೆ ಮಾತ್ರ ಇಲ್ಲಿ ಪ್ರವೇಶವಷ್ಟೆ. ಪ್ರತಿಯೊಬ್ಬ ಸದಸ್ಯನನ್ನೂ ಆರಿಸಿ ಆರಿಸಿ ತಗೊಳಬೇಕು. ಅಂಥಿಂಥವರನ್ನು ಸೇರಿಸಿಕೊಳ್ಳಬಾರದು. ಬಹಳ ಆದರೆ ಹತ್ತು ಹನ್ನೆರಡು ಮಂದಿ ಕೂಡಬಹುದೋ ಏನೋ ಇಂಥವರು. ಅಷ್ಟಾದರೂ ಸಾಕು."

"ಹಾಗಿದ್ದರೇನು ಚಿಂತೆಯಿಲ್ಲ ಬಿಡಿರಿ. ಆದರೆ ಅಂಥಿಂಥವರನ್ನ ಸೇರಿಸಿ

ಕೊಳ್ಳಬಾರದು ಅಂತೀರಲ್ಲಾ? ಎಂಥವರನ್ನು ಸೇರಿಸಿಕೊಳ್ಳಬೇಕಂತೀರಿ ನೀವು?"

"ನಿಜವಾಗಿಯೂ ಅಧ್ಯಾತ್ಮ ಜೀವಿಗಳಾಗಿರುವವರು, ಅಥವಾ ಆಗ ಬಯಸುವವರು. ಅಂತೂ ಒಳ್ಳೆಯವರಿರಬೇಕು, ನೀತಿವಂತರಾಗಿರಬೇಕು."

ಶರಣಪ್ಪನವರ ಅಭಿಪ್ರಾಯ ಹಾಗಿದ್ದಿತಾದರೂ, ಹೆಸರಾಂತ ವ್ಯಭಿಚಾರಿಯೂ ಕುಡುಕನೂ ಆದ ನಾಗೇಂದ್ರಪ್ಪನನ್ನು ಸುಚರಿತರಾಯ ಮಂಡಲಕ್ಕೆ ಕರೆದುಕೊಂಡಾಗ ಶರಣಪ್ಪನವರು ಆಕ್ಷೇಪಿಸುವ ಗೊಡವೆಗೆ ಹೋಗದೆ ಸುಮ್ಮನಿದ್ದು ಬಿಡಬೇಕಾಗಿ ಬಂದಿತು. ನಗರ ಸಭೆಯ ಹೈಸ್ಕೂಲಿನಲ್ಲಿ ನೌಕರಿಯಲ್ಲಿರುವ ತಮ್ಮಂಥವರು ನಗರ ಸಭೆಯ ಸರ್ವಾಧಿಕಾರಿಯ ವಿರುದ್ಧ ಮಾತನಾಡುವುದುಂಟೆ? ನಾಗೇಂದ್ರಪ್ಪ ಮನಸ್ಸು ಮಾಡಿದರೆ ಒಂದೆರಡು ತಿಂಗಳುಗಳಲ್ಲೇ ತಮ್ಮನ್ನು ಮನೆಗೆ ಕಳಿಸಬಲ್ಲ. ಕುಡುಕರ ವೈರ ಕಟ್ಟಿಕೊಳ್ಳುವುದು ಜಾಣತನವಲ್ಲವೆಂದುಕೊಂಡು ಅವರು ಬಾಯಿ ಹೊಲಿದುಕೊಂಡರು. "ನಮ್ಮ ಸಹವಾಸದಲ್ಲಿ ಅವನೂ ಸುಧಾರಿಸಿದರೆ ಸುಧಾರಿಸಲಿ. ಪಾಪಿಗಳನ್ನು ಕನಿಕರದಿಂದ ಕಾಣಬೇಕು ಅಂತ ಮಾತಾಜಿ ಅಪ್ಪಣೆಕೊಡಿಸಿಲ್ಲವೆ?" ಎಂದು ತಮ್ಮನ್ನು ತಾವೇ ಸಂತೈಸಿಕೊಂಡರು.

ಉಳಾಗಡ್ಡಿ ಉಳಿವೆಪ್ಪ, ಬೇರಪ್ಪ, ಎಂ ಎಲ್.ಎ., ವಿರುಪಣ್ಣ, ದೇಶಭಕ್ತ ಧುರಂಧರರಾಯ ಮತ್ತು ಅವನ ಪತ್ನಿ ರತ್ನಾದೇವಿ ಮಂಡಲದಲ್ಲಿ ಸೇರಿಕೊಂಡಾಗಲೂ ಶರಣಪ್ಪನವರ ಸಾತ್ವಿಕ ಮನಸ್ಸಿಗೆ ಮುಳ್ಳು ಚುಚ್ಚಿದಂತಾಯಿತು. ಇವರೆಲ್ಲರ ಚರಿತ್ರೆಗಳನ್ನೂ ಅವರು ಚೆನ್ನಾಗಿ ಬಲ್ಲವರು. ಇವರಲ್ಲಿ ಯಾರೊಬ್ಬರೂ ನೀತಿಯಿಂದ ನಡೆಯತಕ್ಕವರಲ್ಲ, ಎಲ್ಲರೂ ದುರಾಚಾರಿಗಳು ಎಂಬುದೂ ಅವರಿಗೆ ಗೊತ್ತು. ಆದರೂ, ಅವರು ಸದಸ್ಯರಾಗುವುದು ಬೇಡವೆಂದು ತಮ್ಮಂಥ ಬಡಮಾಸ್ತರರು ಹೇಳುವುದು ಹೇಗೆ? ಕುಬೇರಪ್ಪನವರಂಥ ಸಾಹುಕಾರರು ಕೋಪಿಸಿಕೊಂಡರೆ ಏನನ್ನು ಮಾಡಲಾರರು? ಎಂ. ಎಲ್.ಎ. ವಿರುಪಣ್ಣನನ್ನು ರೇಗಿಸುವುದೆಂದರೆ ಕಪಿಯನ್ನು ರೇಗಿಸಿದಂತೆಯೆ. ಧುರಂಧರರಾಯರಿಗಂತೂ ಮೊದಲಿನಿಂದಲೂ ತನ್ನನ್ನು ಕಂಡರಾಗದು. ನಗರ ಸಭೆಯ ಹೈಸ್ಕೂಲಿಗೆ ತಾನು ಹೆಡ್‌ಮಾಸ್ತರಾದಂದಿನಿಂದಲೂ ತನ್ನ ಬಗೆಗೆ ಅಸೂಯೆಪಟ್ಟುಕೊಳ್ಳುತ್ತಿರುವವರು ಅವರು. ತಮ್ಮ ಹೈಸ್ಕೂಲಿಗೆದುರಾಗಿ ಇಡೀ ನಗರದಲ್ಲಿಯೇ ಇನ್ನೊಂದು ಹೈಸ್ಕೂಲನ್ನು ಸ್ಥಾಪಿಸಿ ಈರ್ಷೆಯಿಂದ ಕೆಲಸಮಾಡುತ್ತಿ

ರುವವರು. ಮಂಡಲದಲ್ಲಿ ಅವರು ಬೇಡವೆಂದು ತಾನು ಹೇಳಿದಲ್ಲಿ, ಅವರ ಮೇಲಿನ ಹೊಟ್ಟೆಕಿಚ್ಚಿಗಾಗಿಯೆ ತಾನು ಹಾಗೆ ಹೇಳುತ್ತಿರುವುದಾಗಿ ಅವರು ಅಪಪ್ರಚಾರ ಮಾಡಲು ಒಳ್ಳೆ ಆಯುಧವೆ ಸಿಕ್ಕಿದಂತಾದೀತು.

ಹಾಗೆ ಯೋಚಿಸಿದ ಶರಣಪ್ಪನವರು ಧುರಂಧರರಾಯರ ಸದಸ್ಯತ್ವವನ್ನೂ ವಿರೋಧಿಸುವ ಗೊಡವೆಗೆ ಹೋಗಿರಲಿಲ್ಲ.

ಈ ಪುಢಾರಿಗಳೆಲ್ಲ ಸೇರಿಕೊಂಡು "ಯೋಗ ಮಂಡಲ" ವನ್ನು "ಭೋಗ ಮಂಡಲ" ವನ್ನಾಗಿ ಪರಿವರ್ತಿಸತೊಡಗಿದಾಗ ಶರಣಪ್ಪನವರಿಗೆ ತಳಮಳವಾಗದಿರಲಿಲ್ಲ. "ಎಂಥಾ ಉಚ್ಚ ಉದ್ದೇಶವಿಟ್ಟುಕೊಂಡು ಆರಂಭವಾದ ಈ ಪವಿತ್ರ ಸಂಸ್ಥೆ ಹೇಗಾಯಿತಲ್ಲಾ!" ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡು ಅವರು ಕೊರಗಿದ್ದರು. ಹಾಗೆಂದು, ಮಂಡಲದ ಸಾಪ್ತಾಹಿಕ ಸಭೆಗೆ ಬರುವುದನ್ನು ಮಾತ್ರ ನಿಲ್ಲಿಸಲಿಲ್ಲ. ಪಾರ್ಥನೆ ಮುಗಿಯುವ ವರೆಗೂ ಕುಳಿತಿದ್ದು ಅನಂತರ ಮರುಳಯ್ಯನ ಜೊತೆಯಲ್ಲಿಯೆ ಅವರೂ ಹೊರಟು ಬಿಡುತ್ತಿದ್ದರು.

"ಯಾಕೆ ಅವಸರ ಮಾಡ್ತೀರೀ ಮಾಸ್ತರೆ? ಸ್ವಲ್ಪ ತಿಂಡಿ ತಿಂದು ಹೋಗಬಾರದೇ?" ಎನ್ನುವರು ಕುಬೇರಪ್ಪ.

"ಸ್ನಾನ-ಪೂಜೆ ಇಲ್ಲದೆ ಮಾಸ್ತರು ಏನೂ ತಿನ್ನುವುದಿಲ್ಲ," ಎಂದು ಸ್ಪಷ್ಟೀಕರಿಸುವವಳು ಸುಲಲಿತದೇವಿ.

"ಧ್ಯಾನ ಅಂದರೇ ಸ್ನಾನ, ಪ್ರಾರ್ಥನೆ ಅಂದರೇ ಪೂಜೆ. ಅಲ್ಲೇನ್ರೀ ಸುಚರಿತರಾಯರೆ?"

"ಕರಾಚೂರಿನ ಗುರೂಜಿ ಹಾಗೆ ಸ್ಪಷ್ಟ ಹೇಳಿದ್ದಾರಲ್ಲ!"

"ಶರಣಪ್ಪನವರು ಮಾತ್ರ ಬಹಳ Orthodox ಹೋಗಲಿ ಬಿಡ್ರೀ ರಾಯರೆ, ಅವರನ್ಯಾಕೆ ಕಾಡಿಸ್ತೀರಿ?" ಎನ್ನುವನು ನಾಗೇಂದ್ರಪ್ಪ.

"ಮರುಳಯ್ಯನೂ ಅವರ ಹಾಗೇ. ಶರಣಪ್ಪನವರ ಪಟ್ಟಶಿಷ್ಯನಾಗ್ತಾನೆ ನೋಡ್ರಿ ಆತ," ಎನ್ನುವಳು ಸುಲಲಿತದೇವಿ ಮರುಳಯ್ಯ, ಶರಣಪ್ಪ ಇಬ್ಬರೂ ಹೋದ ತರುವಾಯ.

"ಪಟ್ಟಶಿಷ್ಯ? ಯಾವುದರಲ್ಲಿ?"

"ಎಲ್ಲಾದರಲ್ಲೂ. ಶರಣಪ್ಪನವರು ಇಪ್ಪತ್ತು ವರ್ಷಗಳಿಂದಲೂ ಬ್ರಹ್ಮಚರ್ಯ ಪಾಲಿಸ್ತಾ ಇದಾರಲ್ಲ? ಅವರ ಹಾಗೆ ಮರುಳಯ್ಯನವರೂ...." ಎನ್ನು

ವನು ಸುಚರಿತರಾಯ.

ಎಲ್ಲರೂ ಗಹಗಹಿಸಿ ನಗುವರು.

ಶರಣಪ್ಪನವರನ್ನು ಕಂಡು ನಗುವವರಿಗೇನೂ ಕೊರತೆಯಿಲ್ಲ ಓರೆಕೋರೆ ನಗರದಲ್ಲಿ. ಅವರ ಕೈ ಕೆಳಗಿನ ಶಿಕ್ಷಕರು, ಅವರ ವಿದ್ಯಾರ್ಥಿಗಳು, ಅವರ ಓಣಿಯ ಜನರು, ಅವರ ಕಥೆಯನ್ನು ಕೇಳಿ ಬಲ್ಲ ಇತರರು ಎಲ್ಲರೂ ಅವರನ್ನು ಕಂಡು ನಗುವುದುಂಟು. ಅವರು ಸಾಲೆಗೆ ಹೋಗುವಾಗ, ಸಾಲೆಯಿಂದ ಬರುವಾಗ ಅವರನ್ನು ನೋಡಬೇಕು. ಎಂಥಾ ಸಾಧು ಪ್ರಾಣಿ! ಎಂದು ಯಾರಿಗಾದರೂ ಅನ್ನಿಸಬಹುದು. ಇವರು ಬಿ.ಎ.,ಬಿ.ಟಿ.,ಎಂ.ಇ.ಡಿ. ಪದವಿಗಳಿಸಿದವರೆಂದು ನಂಬುವುದೂ ಕಷ್ಟವೆ. ಇವರು ಕನ್ನಡ ಸಾಲೆಯ ಮಾಸ್ತರಿರಬಹುದೇನೋ ಎಂದೆನ್ನಿಸುತ್ತದೆ. ಶರಣಪ್ಪನವರು ಯಾವಾಗಲೂ ಧರಿಸುವುದು ಒಂದು ಸಾಧಾರಣ ಕೋಟು, ನಾಲ್ಕು ಮೊಳದ, ಮೊಳಕಾಲುಗಳ ವರೆಗೆ ಬರುವಂಥ ಚಿಕ್ಕ ಧೋತರ, ತಲೆಗೊಂದು ರುಮಾಲು, ಕಾಲಿಗೆ ಹರಕು ಚಪ್ಪಲಿ ಹಣೆಯ ಮೇಲೆ ಒಂದು ಮೈಲಿನಿಂದಲೂ ಕಾಣಿಸುವಂಥ ವಿಭೂತಿಪಟ್ಟೆ. ಮಾಸ್ತರರು ಬಹಳವಾದರೆ ಐದು ಅಡಿ ಎರಡು ಇಂಚು ಎತ್ತರವಿರಬಹುದು. ಅದಕ್ಕೆ ತಕ್ಕಂಥ ತೆಳ್ಳನೆಯ ಮೈ. ಅಂಗಿ ಕಳೆದು ನಿಂತುಕೊಂಡಾಗ ಅವರನ್ನು ನೋಡಿದರೆ ಅಸ್ಥಿಪಂಜರವನ್ನೇ ನೋಡಿದಂತಾಗುತ್ತದೆ. ಅವರ ದೇಹ ಪ್ರಕೃತಿ ಇಷ್ಟು ದುರ್ಬಲಗೊಳ್ಳಲು ಕಾರಣವೇನೆಂಬುದು ಯಾರಿಗೂ ತಿಳಿಯದು. "ಮೊದಲಿನಿಂದಲೂ ನಾನು ಹೀಗೆ," ಎಂದು ಮಾಸ್ತರರೇನೋ ಹೇಳುತ್ತಾರೆ.

ಚಿಕ್ಕ ವಯಸ್ಸಿನಲ್ಲೇ ಶರಣಪ್ಪನವರಲ್ಲಿ ವೈರಾಗ್ಯದ ಚಿಹ್ನೆಗಳು ಕಾಣಿಸಿಕೊಂಡಿದ್ದುವೆಂದು ಅವರನ್ನು ಅಂದಿನಿಂದಲೂ ಬಲ್ಲವರು ಹೇಳುತ್ತಾರೆ. ಉಚಿತ ಪ್ರಸಾದ ನಿಲಯದಲ್ಲಿ ಊಟ ಮಾಡಿಕೊಂಡು ಬಹಳ ಕಷ್ಟಪಟ್ಟು ಓದಿ ಅವರು ಮೆಟ್ರಿಕ್ ಪಾಸು ಮಾಡಿದರು. ಓದುವುದರ ಬಗೆಗೇನೂ ವೈರಾಗ್ಯವಿರಲಿಲ್ಲ. ಬಿ. ಎ. ಮುಗಿಸಬೇಕು, ಎಂ. ಎ. ಮುಗಿಸಬೇಕು ಎಂಬ ಮಹಾಕಾಂಕ್ಷೆಯಿತ್ತು. ಆದರೆ ಮನೆತನದಿಂದ ಬಹಳ ಬಡವರಾದುದರಿಂದ ಕಾಲೇಜಿನ ಶಿಕ್ಷಣಕ್ಕೆ ಹಣವೊದಗುವುದು ಸಾಧ್ಯವಿರಲಿಲ್ಲ.

ಶರಣಪ್ಪನವರಿಗಾಗ ಹದಿನೆಂಟು ವರ್ಷ ವಯಸ್ಸು. ಅಂಥ ಪ್ರಾಯದಲ್ಲಿಯೂ ಅವರ ಪ್ರಕೃತಿ ಸೂಕ್ಷ್ಮವಾಗಿಯೇ ಇತ್ತು. ಆದರೂ, ಅಂಥವರಿಗೂ

ಹೆಣ್ಣು ಕೊಡಲು ಅನೇಕರು ಓಡಾಡಿದರು. ಮ್ಯಾಟ್ರಿಕ್ ಪಾಸು ಮಾಡಿದವನೇ ಮಹಾ ಸುಶಿಕ್ಷಿತ ಆ ಕಾಲದಲ್ಲಿ. ಮದುವೆಯ ಯೋಚನೆಯೇ ತನಗಿಲ್ಲವೆಂದು ಶರಣಪ್ಪನವರು ಎಷ್ಟು ಸ್ಪಷ್ಟವಾಗಿ ಹೇಳಿದರೂ ಯಾರೂ ಕೇಳಲಿಲ್ಲ. ಅವಿವಾಹಿತ ಯುವಕ ಯುವತಿಯರೆಲ್ಲ ಹಾಗೆ ಹೇಳುವುದು ಸರ್ವಸಾಧಾರಣ ವಿಚಾರವೆಂದು ಹೇಳಿ, ಅವರ ಮಾತಿಗೆ ಕೊಂಚವೂ ಮಹತ್ವವೀಯದೆ, ಅವರನ್ನು ವಿವಾಹ ಬಂಧನದಲ್ಲಿ ಸಿಲುಕಿಸುವ ಯತ್ನಗಳನ್ನು ಮುಂದುವರಿಸಿ ಯಶಸ್ವಿಯಾದರು. ದಳ್ಳಾಳಿಗಳು.

ಆಗ ನಗರದ ಸಭಾಧ್ಯಕ್ಷರಾಗಿದ್ದ ಪವಾಡೆಪ್ಪನವರು ಇಲ್ಲಿಯ ಪ್ರತಿಷ್ಠಿತ ಮನೆತನವೊಂದರ ವಿಧವೆಯೊಬ್ಬಳೊಡನೆ ಅನೈತಿಕಸಂಬಂಧವಿಟ್ಟುಕೊಂಡಿದ್ದರು. ಆ ವಿಧವೆಗೊಬ್ಬಳು ಮಗಳಿದ್ದಳು. ಅವಳಿಗಾಗ ಹದಿನಾರು ಹದಿನೇಳರ ಪ್ರಾಯ. ತಾಯಿಯ ಅನೈತಿಕ ಆಚರಣೆಯಿಂದಾಗಿ ಆ ಹುಡುಗಿಗೆ ಗಂಡು ದೊರೆಯುವುದು ಕಷ್ಟವಾಗಿತ್ತು. ಐದಾರು ಸಾವಿರ ರೂಪಾಯಿ ವರದಕ್ಷಿಣೆ ಕೊಡುವುದಾಗಿ ಹೇಳಿದರೂ ಕೂಡಾ ಅವಳ ಕೈ ಹಿಡಿಯಲು ಯಾರೂ ಮುಂದೆ ಬರಲಿಲ್ಲ.

ತಮ್ಮ ಪ್ರೇಯಸಿಯ ಮಗಳಿಗೆ ವರನನ್ನು ಹುಡುಕುತ್ತಿದ್ದ ಪವಾಡೆಪ್ಪನವರ ದೃಷ್ಟಿ ಶರಣಪ್ಪನವರ ಮೇಲೆ ಬಿದ್ದುದೇ ಆಯಿತು, ಅವರ ಹಿಡಿತದಿಂದ ತಪ್ಪಿಸಿಕೊಳ್ಳಲು ಶರಣಪ್ಪನವರಿಂದಾಗಲಿಲ್ಲ.

"ನಿಮಗೆ ಎಲ್ಲಾ ತರದಿಂದ ಸಹಾಯ ಮಾಡ್ತೀನಿ, ಮಾಡಿಸ್ತೀನಿ. ಗೌರವ್ವನೂ ತಂದೆತಾಯಿಗಳಿಗೆ ಒಬ್ಬಳೇ ಒಬ್ಬ ಮಗಳು. ಬ್ಯಾಂಕಿನಲ್ಲಿ ಹತ್ತು ಸಾವಿರದಷ್ಟು ಹಣ ಅದ. ಹತ್ತು ಸಾವಿರ ಬೆಲೆ ಬಾಳುವ ಮನೆ ಅದ. ಅದಲ್ಲದೆ ನಾಲ್ಕೈದು ಸಾವಿರ ರೂಪಾಯಿಗಳ ವಸ್ತು ಒಡವೆಗಳು. ಗೌರವ್ವನ ತಾಯಿಯ ಪಶ್ಚಾತ್ ಎಲ್ಲಾ ನಿಮ್ಮದೇ. ನಿಮಗೆ ಯಾತಕ್ಕೂ ಕೊರತೆಯಾಗುವುದಿಲ್ಲ. ನೀವು ಪಿ.ಎಚ್‌ಡಿ.ಯವರೆಗೂ ಕಲಿಯಬಹುದು. ಬೇಕಾದರೆ ಇಂಗ್ಲೇಂಡಿಗೆ ಹೋಗಿ ಬ್ಯಾರಿಸ್ಟರಾಗಿ ಬರಬಹುದು. ನೀವು ಬುದ್ಧಿವಂತರಿದ್ದೀರಿ. ನೀವು ಮುಂದೆ ಹೋಗಲಿಕ್ಕೆ ಹಣ ಬೇಕು. ಗೌರವ್ವನ್ನ ಮಾಡಿಕೊಂಡು ಬಿಟ್ಟರೆ ಲಕ್ಷ್ಮಿಯನ್ನೇ ಮಾಡಿಕೊಂಡಂತಾದೀತು," ಎಂದೆಲ್ಲ ವಾದಿಸಿದ್ದರು ಪವಾಡೆಪ್ಪನವರು.

ಬಲು ಸಂಕಟಕ್ಕಿಟ್ಟುಕೊಂಡಿತ್ತು ಶರಣಪ್ಪನವರಿಗೆ. ಎಂ. ಎ. ವರೆಗೂ ಓದಿ ಯಾವುದೊಂದು ಕಾಲೇಜಿನಲ್ಲಿ ಪ್ರೊಫೆಸರಾಗಿ ಕೀರ್ತಿ ಗಳಿಸಬೇಕೆಂದೂ ಸಮಾಜ ಸೇವೆಯಲ್ಲಿ ಆಯುಷ್ಯ ವಿನಿಯೋಗಿಸಬೇಕೆಂದೂ ಅವರು ಯೋಚಿಸಿ ಕೊಂಡಿದ್ದರು. ವಿವೇಕಾನಂದರಂತೆ ಆಜನ್ಮ ಪರ್ಯಂತರ ಅವಿವಾಹಿತ ವಾಗಿಯೆ ಉಳಿಯುವುದೆಂದೂ ಅವರು ಸಂಕಲ್ಪಿಸಿಕೊಂಡಿದ್ದರು. ವಿವಾಹ? ಅದೂ ಹದಿನೆಂಟನೆಯ ವಯಸ್ಸಿನಲ್ಲಿ?

"ಛೆ. ಛೆ. ನನ್ನಿಂದ ಶಕ್ಯವೇ ಇಲ್ಲ ಸಾಹುಕಾರರೆ. ಮದುವೆಯನ್ನೇ ಆಗಬಾರದಂತಾ ಮಾಡೀನಿ ನಾ."

"ಯಾಕೆ?"

"ಯಾಕೆಂದರೇನು ಹೇಳಲಿ? ಅಂತೂ ನನಗತ್ತ ಮನಸ್ಸಿಲ್ಲ. ಸ್ವಾಮಿ ವಿವೇಕಾನಂದರ ಹಾಗೆ...."

ಶರಣಪ್ಪನವರನ್ನು ನಡುವೆಯೆ ತಡೆದು ಗಟ್ಟಿಯಾಗಿ ನಗುತ್ತಾ ಪವಾಡೆಪ್ಪ ಹೇಳಿದ್ದರು :

"ಅವರ ಹಾಗೆ ಆಗೂದಾದರೆ ಮದುವೆಯಾಗೂದೇ ಚಲೋದಪ್ಪ. ಅವ ರೆಲ್ಲಾ ಎಂಥಾ ಬ್ರಹ್ಮಚಾರಿಗಳು! ಕಳ್ಳರು....ಪಕ್ಕಾ ಕಳ್ಳರು....ಸಿಸ್ಟರ್ ನಿವೇದಿತಾ ಅಂತ ಇದ್ದರಲ್ಲ–ಅವರು ನಿಮ್ಮ ವಿವೇಕಾನಂದ ಸ್ವಾಮಿಗಳ ಆತ್ಮ ಸಖಿಯಾಗಿದ್ದರಂತೆ. ನಿಮಗೆ ಗೊತ್ತೇ ಇಲ್ಲೇನು?"

ಗೊತ್ತಿರಲಿಲ್ಲ ಶರಣಪ್ಪನವರಿಗೆ. ಪವಾಡೆಪ್ಪನವರ ಮಾತಿನ ಮೇಲೆ ಅವರಿಗೆ ನಂಬಿಕೆಯೂ ಹುಟ್ಟಲಿಲ್ಲ. ವಿವೇಕಾನಂದರಲ್ಲಿ ಶರಣಪ್ಪನವರಿಗೆ ಗಾಢವಾದ ಭಕ್ತಿ, ಶ್ರದ್ಧೆ, ಆದರ, ಅಂಥ ಮಹಾ ವ್ಯಕ್ತಿಯನ್ನು ಯಃ ಕಶ್ಚಿತ್ ವ್ಯಾಪಾರಿ ಯೊಬ್ಬ ಹೇಯವಾದ ರೀತಿಯಲ್ಲಿ ಟೀಕಿಸುವುದನ್ನು ಕೇಳಿದಾಗ ಶರಣಪ್ಪನವರಿಗೆ ಕೊಂಚ ಕೋಪವೂ ಬರದಿರಲಿಲ್ಲ. ಆದರೆ–ಬಡತನ ಸಿಟ್ಟು ದವಡೆಗೆ ಮೂಲ ವಲ್ಲವೆ? ಕೋಪವನ್ನು ಅದುಮಿಕೊಂಡು ಸುಮ್ಮನಿದ್ದರು ಶರಣಪ್ಪನವರು.

"ಈ ಸ್ವಾಮಿಗಳು ಸನ್ಯಾಸಿಗಳು ವಿರಕ್ತರ ಬ್ರಹ್ಮಚಾರಿಗಳು ಅಂದರೆ ನನಗೆ ಸ್ವಲ್ಪ ಕೂಡಾ ನಂಬಿಕೆಯಿಲ್ಲ ಶರಣಪ್ಪ. ಒಂದು ವಯಸ್ಸಿನಲ್ಲಿ ಪ್ರತಿ ಯೊಬ್ಬ ಗಂಡಸಿಗೂ ಸ್ತ್ರೀ ಸಹವಾಸ ಅವಶ್ಯವಾಗಿ ಬೇಕೇ ಬೇಕು. ಬಸವಣ್ಣ ನವರಂಥಾ ಮಹಾತ್ಮರಿಗೂ ಕೂಡ ಇಬ್ಬರು ಹೆಂಡರಿದ್ದರು....ಸಂಸಾರದಲ್ಲಿದ್ದು

ಕೊಂಡೇ ಸದ್ಗತಿ ಸಾಧಿಸಲಿಲ್ಲೇನು ಅವರು ?"

ಶರಣಪ್ಪನವರು ಆ ಮಾತನ್ನಲ್ಲಗಳೆಯುವಂತಿರಲಿಲ್ಲ.

ವಿವೇಕಾನಂದರನ್ನು ಆತ್ಮ ಗುರುವೆಂದು ಭಾವಿಸಿದ್ದ ಶರಣಪ್ಪನವರು ಬಸವಣ್ಣನವರಲ್ಲಿಯೂ ವಿಶೇಷವಾದ ಭಕ್ತಿಯಿರಿಸಿಕೊಂಡಿದ್ದರು. ಪವಾಡೆಪ್ಪನವರ ಮಾತು ಅವರನ್ನು ವಿಚಾರಕ್ಕೆ ತೊಡಗಿಸಿತ್ತು. "ಸಂಸಾರದಲ್ಲಿದ್ದೂ ಇಲ್ಲದಂತಿದ್ದರಾಯಿತಲ್ಲ? ಕೂಡಲ ಸಂಗಮನ ಮಹಾಭಕ್ತರಾಗಿದ್ದ ಬಸವಣ್ಣನವರೇ ಎರಡು ಮದುವೆಮಾಡಿಕೊಳ್ಳಲಿಲ್ಲವೇನು? ನನ್ನಂಥವನು ಒಂದು ಮದುವೆಯಾಗುವುದೇನು ದೊಡ್ಡದು? ಸಂಸಾರದಲ್ಲಿ ಹೆಚ್ಚು ಲಕ್ಷ್ಯ ಹಾಕದಿದ್ದರಾಯಿತಲ್ಲ!"

"ನಿಮಗೆ ಮನಸ್ಸಿದ್ದರೆ ಹೇಳ್ರಿ. ಮುನಿಸಿಪಾಲ್ಟಿ ಹೈಸ್ಕೂಲಿನೊಳಗೆ ಈಗಿಂದೀಗ ನಿಮಗೆ ಮಾಸ್ತರಕೆ ಕೊಡಿಸ್ತೇನಿ. ಅಲ್ಲಿ ನೌಕರಿ ಮಾಡಿಕೊಂಡೇ ನೀವು ಕಾಲೇಜಿಗೂ ಹೋಗಬಹುದು." ಎಂದು ಪವಾಡೆಪ್ಪ ಹೇಳಿದಾಗ ಶರಣಪ್ಪನವರು "ಹೂಂ" ಎನ್ನಲು ವಿಲಂಬವಾಗಿರಲಿಲ್ಲ.

ಆ ವರ್ಷವೇ ಅವರ ವಿವಾಹ ಬಲು ವಿಜೃಂಭಣೆಯಿಂದ ನಡೆದುಹೋಗಿತ್ತು. ಹಸೆಮಣೆಯ ಮೇಲೆ ಕುಳಿತಿದ್ದ ಶರಣಪ್ಪನವರನ್ನು ಕಂಡು ಆಗಲೂ ಅನೇಕರು ಹಾಸ್ಯ ಮಾಡಿದ್ದರು.

"ಎಲುವಿನ ಹಂದರದಂಥ ಈ ಹುಡುಗ, ತಿಂದು ತಿಂದು ಸೊಕ್ಕಿದ ಇಂಥಾ ಹುಡುಗಿಯನ್ನೇನು ಆಳ್ತಾನೆ? ತಾಯಿಯಂತೆ ಮಗಳು." ಎಂದೂ ಜನರು ಆಡಿಕೊಂಡಿದ್ದರು.

ಮದುವೆಯಾದ ಹೊಸದರಲ್ಲಿ ಅಂಥ ಮಾತು ಕಿವಿಗೆ ಬಿದ್ದಾಗಲೆಲ್ಲಾ ಶರಣಪ್ಪನವರಿಗೆ ಪರಮ ಸಂಕಟವಾಗುತ್ತಿತ್ತು. ಆದರೆ, ವರ್ಷಗಳುರುಳುತ್ತ ಬಂದ ಹಾಗೆ ಅಂಥ ಮಾತುಗಳನ್ನು ನಿರ್ಲಕ್ಷಿಸುವುದನ್ನು ಅವರು ಕಲಿತುಕೊಂಡರು. ವಿವಾಹವಾದುದಂತೂ ಆಗಿದ್ದಿತಲ್ಲ. ಇನ್ನು ಅದಕ್ಕಾಗಿ ಪಶ್ಚಾತ್ತಾಪ ಪಟ್ಟುಕೊಂಡು ಪ್ರಯೋಜನವೇನು? ಹಾಗೂ ಹೀಗೂ, ಅಂತೂ ಸಮಾಧಾನದಿಂದ ಜೀವನ ಸಾಗಿಸಬೇಕೆಂದು ಅವರು ಗೊತ್ತು ಮಾಡಿಕೊಂಡಿದ್ದರು.

ಶಿಕ್ಷಕ ವೃತ್ತಿಯಲ್ಲಿದ್ದುಕೊಂಡೇ ಅವರು ಬಿ. ಎ. ಮುಗಿಸಿದ್ದರು, ಬಿ. ಟಿ. ಮುಗಿಸಿದ್ದರು; ಎಂ. ಇಡಿ. ಪರೀಕ್ಷೆಯನ್ನೂ ಮುಗಿಸಿ, ಪವಾಡೆಪ್ಪನವರ

ಪ್ರಭಾವದಿಂದಾಗಿ ಹತ್ತು ವರ್ಷಗಳ ಅವಧಿಯಲ್ಲಿಯೆ ಮುಖ್ಯಾಧ್ಯಾಪಕನ ಸ್ಥಾನವನ್ನೂ ದೊರಕಿಸಿದ್ದರು. ಯಾವೊಂದು ಕಾಲೇಜಿನಲ್ಲಿ ಇನ್ನೊಬ್ಬ ವ್ಯಕ್ತಿಯ ಕಯ್ಯಲ್ಲಿ ಪ್ರೊಫೆಸರಾಗಿ ಕೊಳೆಯುವುದಕ್ಕಿಂತ ಹೈಸ್ಕೂಲಿನಲ್ಲಿ ಹೆಡ್ಮಾಸ್ತರಾಗಿ ಮೂವತ್ತು ಮಂದಿ ಶಿಕ್ಷಕರ ಮೇಲೆ ಅಧಿಕಾರ ನಡಸುವುದೇ ಮೇಲೆಂದು ಮನಗಂಡು, ಪ್ರೊಫೆಸರಾಗುವ ವಿಚಾರವನ್ನು ಅವರು ತ್ಯಜಿಸಿಬಿಟ್ಟಿದ್ದರು. ಅವರ ನೌಕರಿಯಲ್ಲಿ ಅವರಿಗೆ ತೃಪ್ತಿಯಿತ್ತು, ಸಮಾಧಾನವಿತ್ತು. ಮನೆಯಲ್ಲಿ ಲಭಿಸಲಾರದ ಮಾನಸಿಕ ನೆಮ್ಮದಿ ಅವರಿಗೆ ಶಾಲೆಯಲ್ಲಿ ಲಭಿಸಿತ್ತು.

ಬಸವಣ್ಣನವರಂತೆ ಸಂಸಾರ ಸಾಗಿಸಿದರಾಯಿತೆಂದು ಮದುವೆಯಾಗುವಾಗ ಅಂದುಕೊಂಡಿದ್ದ ಶರಣಪ್ಪನವರಿಗೆ ಸಂಸಾರ ಸಾಗಿಸುವುದೇ ಸಾಧಿಸಿರಲಿಲ್ಲ. ಬಿ. ಎ. ಮುಗಿಯುವ ವರೆಗೂ ಸಂಸಾರ ಚಿಂತೆ ಬೇಡವೆಂದು ನೆಪ ಮುಂದೆ ಮಾಡಿ ನಾಲ್ಕು ವರ್ಷಗಳ ಕಾಲ ಪ್ರಸ್ತವನ್ನು ಮುಂದೂಡಿದುದಾಗಿತ್ತು. "ಬಿ. ಟಿ. ಯೊಂದು ಮುಗೀಲಿ. ಆಮೇಲೆ ನೋಡೋಣ," ಎಂದು ಶರಣಪ್ಪನವರು ಹೇಳಿದ್ದರಾದರೂ ಪವಾಡೆಪ್ಪನವರು ಕೇಳದೆ ಆ ವರ್ಷ ಪ್ರಸ್ತ ನೆರವೇರಿಸಿಬಿಟ್ಟಿದ್ದರು. ಆಗ ಗೌರವ್ವನಿಗೆ ತುಂಬು ಪ್ರಾಯ. ನೈಸರ್ಗಿಕವಾದ ಆಸೆ ಬಯಕೆಗಳು ಅವಳನ್ನು ಕಾಡುತ್ತಿದ್ದುವು. ತಾಯಿಯಂತೆಯೆ ಮಗಳಿರುವುದೂ ಖಚಿತವೆಂದು ಬಗೆದಿದ್ದ ಓಣಿಯ ಪುಂಡುಪೋಕರಿಗಳು ಅವಳನ್ನು ಪೀಡಿಸುವುದೂ ಆರಂಭವಾಗಿತ್ತು. ಗಂಡನ ಔದಾಸೀನ್ಯದಿಂದಾಗಿ ಬೇಸರಗೊಂಡಿದ್ದ ಗೌರವ್ವನಿಗೂ ಮನಸ್ಸು ಚಂಚಲವಾಗತೊಡಗಿತ್ತು. ಅದನ್ನೆಲ್ಲ ಅರಿತುಕೊಂಡಿದ್ದ ಪವಾಡೆಪ್ಪನವರು ಆ ವರ್ಷ ಶರಣಪ್ಪನವರನ್ನು ಒಪ್ಪಿಸಿ ಸಂಸಾರಕ್ಕೆ ತೊಡಗಿಸಿದ್ದರು.

ನೀರಿಗಿಳಿಯಲು ಧೈರ್ಯ ಸಾಲದ ಅಂಜುಬುರುಕನೊಬ್ಬ, ಗೆಳೆಯರ ಬಲವಂತಕ್ಕೊಳಗಾಗಿ ನದಿಗಿಳಿಯುವಂತೆ ಸಂಸಾರ ಸಾಗರದಲ್ಲಿ ಈಸಹೊರಟಿದ್ದರು ಶರಣಪ್ಪನವರು ; ಒಂದೆರಡು ವಾರ ಕಳೆಯುವಷ್ಟರಲ್ಲಿಯೆ, ಸ್ತ್ರೀ ಸಂಗವೆಂದರೇನೇ ಹೇಸಿಕೆಯೆನಿಸುವಂತಾಗಿತ್ತು ಅವರಿಗೆ. "ಇದರಲ್ಲಿ ಹುರುಳಿಲ್ಲ, ಹುರುಳಿಲ್ಲ, ಶಿವಧೋ ! ಶಿವಧೋ ! ಕಾಯಯ್ಯ ಈ ಕಂದನನ್ನು !" ಎಂದು ದೇವರನ್ನು ಪ್ರಾರ್ಥಿಸುವುದಕ್ಕಾರಂಭಿಸಿದ್ದರು.

ಅದೇ ಸಮಯಲ್ಲಿ, ಓಣಿಯ ಕಿಲಾಡಿಗಳು, ಶರಣಪ್ಪನವರ ತಲೆ ಕೆಡಿಸುವ

ಉದ್ದೇಶದಿಂದ, ಗೌರವ್ವನ ಶೀಲದ ವಿಚಾರದಲ್ಲಿ ಸಂಶಯವುತ್ಪನ್ನವಾಗುವಂಥ, ಸಹಿಯಿಲ್ಲದ ಕಾಗದವೊಂದನ್ನು ಅವರಿಗೆ ಬರೆದಿದ್ದರು.

“ ಶ್ರೀ ಶರಣಪ್ಪನವರಿಗೆ :

ನಿಮ್ಮ ಶರಣಸದೃಶ ರೀತಿ ನೀತಿ ನಡವಳಿಕೆಗಳನ್ನು ಕಂಡು ನಿಮ್ಮ ಬಗ್ಗೆ ಆದರವಿಟ್ಟುಕೊಂಡಿರುವ ನಾವು ಬಹಳ ವಿಷಾದದಿಂದಲೆ ಈ ಪತ್ರ ಬರೆದಿದ್ದೇವೆ. ಇದನ್ನು ಬರೆಯುವ ಮೊದಲು, ಬರೆಯಬೇಕೋ ಬಾರದೋ ಎಂದು ನೂರು ಸಲ ವಿಚಾರಮಾಡಿ, ಕಡೆಗೆ ಬರೆಯುವುದೇ ಸರಿಯೆಂದು ನಿಶ್ಚಯಿಸಿದೆವು. ನೀವು ಸತ್ಯದ ಆರಾಧಕರೆಂದು ನಾವು ನಂಬಿರುವೆವಾದ್ದರಿಂದ ಈ ಕಟುಸತ್ಯವನ್ನು–ಅಪ್ರಿಯವಾದರೂ–ಸ್ವಾಗತಿಸುವರೆಂಬ ವಿಶ್ವಾಸ ನಮಗಿದೆ.

ನಿಮ್ಮನ್ನು ಕಂಡಾಗಲೆಲ್ಲ ನಮಗೆ ಶ್ರೀ ರಾಮಕೃಷ್ಣ ಪರಮಹಂಸರ ನೆನಪು ಬರುತ್ತದೆ. ಅವರ ಹಾಗೆ ನೀವೂ ವಿರಕ್ತದ, ಅಧ್ಯಾತ್ಮ ರಾಜ್ಯದ ಅನಭಿಷಿಕ್ತ ಅರಸರು, ಮುಂದೆಯೂ ವೈರಾಗ್ಯಶಾಲಿಯಾಗಿದ್ದುಕೊಂಡು ಕರ್ನಾಟಕ್ಕೆ ಕೀರ್ತಿ ತರತಕ್ಕವರು. ನೀವು ಮದುವೆಯ ವಿಚಾರವನ್ನೇ ಬಿಟ್ಟು, ಕೊನೆಯ ವರೆಗೂ ಅವಿವಾಹಿತರಾಗಿದ್ದುಕೊಂಡಿದ್ದರೇನೇ ಒಳಿತಾಗುತ್ತಿತ್ತು. ಯಾವುದೋ ಒಂದು ವಿಷಗಳಿಗೆಯಲ್ಲಿ ನೀವು ವಿವಾಹಿತರಾದಿರಿ. ವಿವಾಹವಾಗುವುದೇ ಆದಲ್ಲಿ ಸರಿಯಾದ ಮನೆತನ, ಸರಿಯಾದ ವಧು ನೋಡಿ ಆಗಿದ್ದರೆ ಅಂಥ ಪ್ರಮಾದವಾಗುತ್ತಿರಲಿಲ್ಲ. ಆದರೆ, ನೀವು ಎಲ್ಲವನ್ನೂ ತಿಳಿದೂ ಗೌರವ್ವನವರ ಕೈ ಹಿಡಿದಿರಿ. ಅವರ ತಾಯಿಯ ಚರಿತ್ರೆಯಂತೂ ಓರೆಕೋರೆಗೆಲ್ಲಾ ತಿಳಿದಿದೆ. ತಾಯಿಯಂತೆ ಮಗಳು ಗುರುವಿನಂತೆ ಶಿಷ್ಯ ಎಂಬ ಗಾದೆಯ ಮಾತು ನಿಮಗೆ ಗೊತ್ತಿರಲಿಲ್ಲವೇ ? ಕೇವಲ ಪವಾಡೆಪ್ಪನವರ ಮಾತನ್ನೆ ನಂಬದೆ, ಓಣಿಯಲ್ಲಿಯ ಜನರನ್ನೂ ಕೇಳಿ ನೋಡಬೇಕಾಗಿತ್ತು ನೀವು. ಗೌರವ್ವನವರ ನಡತೆಯೆಂಥದೆಂಬುದು ನಿಮಗಾಗ ತಿಳಿಯುತ್ತಿತ್ತು.

ಬಹಳ ದುಃಖದಿಂದ ಈ ವಿಷಯವನ್ನು ನಾವು ನಿಮಗೆ ತಿಳಿಸುತ್ತಿದ್ದೇವೆ. ತಿಳಿಸುವುದು ನಮ್ಮ ಕರ್ತವ್ಯವೆಂದೇ ಭಾವಿಸಿದ್ದೇವೆ. ನೀವು ಸರಳಹೃದಯದ ಸಭ್ಯರು. ನಿಮ್ಮ ಮನೆಯಲ್ಲಿಯೇ ಎಂಥ ಅನಾಚಾರ ನಡೆದಿದೆಯೆಂಬುದು ನಿಮಗೆ ತಿಳಿದ ಹಾಗಿಲ್ಲ. ನಿಮ್ಮ ಹೆಂಡತಿಯ ತಾಯಿ ಪವಾಡೆಪ್ಪನವರನ್ನು ಇಟ್ಟುಕೊಂಡಿರುವಂತೆಯೆ ನಿಮ್ಮ ಹೆಂಡತಿ ಅಡಿಗೆಯ ರುದ್ರನನ್ನು ಇಟ್ಟುಕೊಂಡಿ

ದ್ದಾರೆ. ಈ ಸಂಗತಿಯನ್ನು ಓಣಿಯವರೆಲ್ಲರೂ ಬಲ್ಲರು. ನಿಮಗೆ ಮಾತ್ರ ಇದುವರೆವಿಗೂ ಅದರ ಕಲ್ಪನೆಯಿರಲಿಲ್ಲವೆಂದು ತೋರುತ್ತದೆ.

ಇರುವ ವಿಷಯವನ್ನು ಸ್ಪಷ್ಟವಾಗಿ ತಿಳಿಸಿದ್ದೇವೆ. ನಿಮ್ಮಂಥ ಯೋಗ್ಯ ಮನುಷ್ಯರೊಬ್ಬರ ಬಾಳು ಹೀಗಾಯಿತಲ್ಲಾ ಎಂದು ನಮಗೆ ಬಹಳ ಸಂಕಟವಾಗುತ್ತದೆ. ಆದದ್ದು ಆಗಿಹೋಯಿತು. ಇನ್ನಾದರೂ, ನೀವು ಆಗಿರುವ ತಪ್ಪನ್ನು ತಿದ್ದಿಕೊಂಡು, ಸಂಸಾರವನ್ನು ಸರಿಪಡಿಸಿಕೊಂಡು ನಾಲ್ಕು ಜನರಿಗೆ ಆದರ್ಶವಾಗುವಂತೆ ಜೀವನವಾಗುವಂತೆ ಜೀವನ ಸಾಗಿಸಬೇಕೆಂದು ಬಯಸುತ್ತೇವೆ.

ಇಂತು ನಿಮ್ಮ ಅಭಿಮಾನಿಗಳು"

ಆ ಕಾಗದವನ್ನೋದಿ ಶರಣಪ್ಪನವರಿಗೆ ಮರಣವೇ ಲೇಸೆಂದು ತೋರಿತ್ತು. ಅಷ್ಟು ದಿನಗಳ ವರೆಗೆ ಹೇಗೋ ಮನವಿಲ್ಲದ ಮನದಿಂದ ಹೆಂಡತಿಯೊಡನೆ ಸಂಸಾರ ಸಾಗಿಸುತ್ತ ಬಂದಿದ್ದ ಅವರಿಗೆ ಅಂದಿನಿಂದ ಅವಳನ್ನು ಕಂಡೊಡನೆ ಹೇಸಿಕೆಯೆನ್ನಿಸತೊಡಗಿತ್ತು. ಆ ಮನೆಯಲ್ಲಿ ಊಟವೂ ರುಚಿಸದಂತಾಗಿತ್ತು.

ಅಡುಗೆಯ ರುದ್ರನನ್ನು ಅದುವರೆಗೂ ಅವರು ಗಮನಿಸಿಯೇ ಇರಲಿಲ್ಲ. ಆ ಕಾಗದ ಕೈ ಸೇರಿದ ತರುವಾಯ ಅವರು ಅವನನ್ನು ಕಣ್ತುಂಬಾ ನೋಡಿದುದು. ಹದಿನೆಂಟು ಹತ್ತೊಂಭತ್ತರ, ಹೃಷ್ಟ ಪುಷ್ಟ ಮೈ ಕಟ್ಟಿನ ಯುವಕ ರುದ್ರ. ಅವಿದ್ಯಾವಂತನಾದರೂ ಆತ ಹಳ್ಳಿಯ ಹುಂಬನೂ ಆಗಿರಲಿಲ್ಲ. ಯಾವಾಗಲೂ ಪ್ರಸನ್ನವಾಗಿರುವ ಮುಖಮುದ್ರೆ, ನಗುವ ಕಣ್ಣು, ಕಪಟವನ್ನರಿಯದ ಸರಳ ನಡವಳಿಕೆ. ಗೌರವ್ವ ಮತ್ತು ಅವಳ ತಾಯಿ ಶಿವಮ್ಮ ಇಬ್ಬರೊಡನೆಯೂ ಆತ ಸಲುಗೆಯಿಂದಲೇ ವರ್ತಿಸುತ್ತಿದ್ದ. ಆತನಿನ್ನೂ ಐದು ವರ್ಷಗಳ ಮಗುವಾಗಿದ್ದಾಗ ಅವನ ತಂದೆತಾಯಿಗಳು ತೀರಿಕೊಂಡಿದ್ದರು. ಪರದೇಶಿಯಾಗಿದ್ದ ಆ ಹಸುಳೆಯ ಬಗೆಗೆ ಕನಿಕರಿಸಿ ಶಿವಮ್ಮ ಅವನನ್ನು ಕರೆದುಕೊಂಡು ಬಂದು ಮನೆಯಲ್ಲಿಟ್ಟುಕೊಂಡು ಸಾಕಿ ಬೆಳಸಿದ್ದಳು. ಗೌರವ್ವನ ಜೊತೆಗೇ ಆಟವಾಡಿಕೊಂಡು ಆತ ಬೆಳೆದು ದೊಡ್ಡವನಾಗಿದ್ದ. ಆತ ಸ್ವಲ್ಪವಾದರೂ ವಿದ್ಯಾಭ್ಯಾಸ ಮಾಡಲೆಂದು ಶಿವಮ್ಮ ಆತನನ್ನು ಸಾಲೆಗೆ ಕಳುಹಿಸಿದ್ದಳಾದರೂ ಅವನ ತಲೆಗೆ ಒಂದು ಅಕ್ಷರವೂ ಸೇರಲಿಲ್ಲ. ವಿದ್ಯೆಯೆಂಬುದು ಅವನ ಹಣೆಯಲ್ಲಿಯೆ ಬರೆದಿರಲಿಕ್ಕಿಲ್ಲವೆಂದುಕೊಂಡು ಶಿವಮ್ಮ ಅವನನ್ನು ಮನೆಕೆಲಸಗಳಿಗೆ ತೊಡಗಿಸಿದ್ದಳು. ಪುಸ್ತಕಗಳೆಂದರೆ ಮುಖ ಗಂಟು ಹಾಕುತ್ತಿದ್ದ ರುದ್ರ ಮನೆಗೆಲಸಗಳನ್ನು ಮಾತ್ರ

ಉತ್ಸಾಹದಿಂದ ಕಲಿತುಕೊಂಡಿದ್ದ. ಹದಿನಾಲ್ಕು ತುಂಬುವುದರೊಳಗಾಗಿ ಅಡುಗೆಯಲ್ಲಿ ಪಳಗಿ ಪವಾಡೆಪ್ಪನವರಿಂದಲೂ ಶಹಬಾಸಿಕೆ ದೊರಕಿಸಿಕೊಂಡಿದ್ದ.

"ಇವನೊಂದು ಖಾನಾವಳಿ ಇಟ್ಟರೆ ಊರೊಳಗಿನ ಎಲ್ಲಾ ಖಾನಾವಳಿ ದಿವಾಳಿ ಹೊಡೆದಾವು," ಎನ್ನುತ್ತಿದ್ದರು ಪವಾಡೆಪ್ಪ.

ಖಾನಾವಳಿ ಇಡಲೆಂದು ರುದ್ರ ಶಿವಮ್ಮನ ಮನೆ ತ್ಯಜಿಸಲಿಲ್ಲ. ಪರದೇಶಿಯಾದ ತನ್ನನ್ನು ಪ್ರೀತಿಯಿಂದ ಸಾಕಿ ಬದುಕಿಸಿದ ಆ ತಾಯಿಯನ್ನು ಬಿಟ್ಟು ಹೋಗುವ ವಿಚಾರವೂ ಅವನ ಮನಸ್ಸಿನಲ್ಲಿ ಸುಳಿಯಲಿಲ್ಲ.

ಅಡುಗೆ ಮನೆಯ ಸರ್ವಾಧಿಕಾರವನ್ನು ಅವನಿಗೇ ಒಪ್ಪಿಸಿ, ಶಿವಮ್ಮ ವಿರಾಮವಾಗಿ ಕಾಲಕಳೆಯುತ್ತಿದ್ದಳು. ರುದ್ರನೂ ಆತ್ಮೀಯತೆಯಿಂದ ದುಡಿದು, ಮನಸ್ಸು ಬಯಸಿದುದನ್ನು ಉಂಡು ತಿಂದು ಸುಖದಲ್ಲಿ ಬೆಳೆದಿದ್ದ.

ಗೌರವ್ವನ ಬಗೆಗೆ ಅವನಲ್ಲಿ ಎಂಥ ಭಾವನೆಯಿತ್ತು? ಬಾಲ್ಯವನ್ನು ಹಿಂದೆ ಹಾಕಿ ತಾರುಣ್ಯದಲ್ಲಿ ಅಡಿಯಿರಿಸಿದಾಗ ನೈಸರ್ಗಿಕವಾಗಿ ತಲೆದೋರುವ ಆಸೆ-ಬಯಕೆಗಳು ಅವನಲ್ಲೂ ಮೂಡಿರಲು ಸಾಕು. ಗೌರವ್ವನಿಗೂ ಅವನ ಬಗೆಗೆ ಆಕರ್ಷಣೆಯೆನ್ನಿಸಿರಬಹುದು. ಆ ಶಾರೀರಕ ಆಕರ್ಷಣೆಯನ್ನು ಪ್ರೇಮವೆಂಬ ಹೆಸರಿನಿಂದ ಕರೆಯುವಂತಿಲ್ಲ. ಅವಳು ವಿದ್ಯಾವತಿ. ಹೈಸ್ಕೂಲಿನಲ್ಲಿ ಓದುತ್ತಿದ್ದವಳು. ವಿವಾಹದ ಪ್ರಶ್ನೆ ಬಂದಾಗ ಅರ್ಹತೆ ಯೋಗ್ಯತೆಗಳನ್ನು ಅಪೇಕ್ಷಿಸುವ ಸಂಸ್ಕಾರವುಳ್ಳವಳು. ಅದೂ ಅಲ್ಲದೆ, ರುದ್ರ ಅವಳಿಗಿಂತ ಎರಡು ವರ್ಷ ಚಿಕ್ಕವನು. ಒಂದು ಸಮಯ ಆತ ಅವಳ ಓರಗೆಯವನೇ ಆಗಿದ್ದರೂ ಅವಳು ಅವನನ್ನು ಮದುವೆಯಾಗಲು ಮನಸ್ಸು ಮಾಡುತ್ತಿರಲಿಲ್ಲವೆಂದು ತೋರುತ್ತದೆ. ಪದವೀಧರನೂ, ಸುಸಂಸ್ಕೃತನೂ, ಸ್ಫುರದ್ರೂಪಿಯೂ ಆದ ಗಂಡನನ್ನು ಅವಳ ಮನಸ್ಸು ಆಶಿಸುತ್ತಿತ್ತು.

ಅವಳಿಗೆ ಹದಿನೈದು ತುಂಬುವುದರೊಳಗಾಗಿಯೆ ಪವಾಡೆಪ್ಪನವರು ಅವಳಿಗಾಗಿ ವರ ಹುಡುಕಲಾರಂಭಿಸಿದ್ದರು. ಪರಸ್ಥಳಗಳ ಯುವಕರನೇಕರು ಬಂದು ಅವಳನ್ನು 'ನೋಡಿ' ಹೋಗಿದ್ದರಾದರೂ, ಹೋದವರು ಮತ್ತೆ ಬಂದಿರಲಿಲ್ಲ. ಅದಕ್ಕೆ ಕಾರಣವೇನೆಂಬುದನ್ನು ಅವಳು ಕಂಡುಕೊಳ್ಳಲು ಹೆಚ್ಚು ಕಾಲ ಹಿಡಿದಿರಲಿಲ್ಲ.

ಮೂರು ವರ್ಷಗಳ ತರುವಾಯ, ಅವಳು ಮ್ಯಾಟ್ರಿಕ್ ತರಗತಿಯಲ್ಲಿ

ದ್ದಾಗ ಶರಣಪ್ಪನವರೊಡನೆ ಮದುವೆಯಾಗಿಹೋಗಿತ್ತು. ಶಿವಮ್ಮನಾಗಲಿ, ಪವಾಡೆಪ್ಪನವರಾಗಲಿ ಗೌರವ್ವನ ಅಭಿಪ್ರಾಯವನ್ನರಿತುಕೊಳ್ಳುವ ಗೊಡವೆಗೇ ಹೋಗಿರಲಿಲ್ಲ. ವರನ ಸ್ಥಿತಿಗತಿ, ದೇಹಾರೋಗ್ಯ, ರೂಪು ಗುಣಗಳನ್ನು ಪರೀಕ್ಷಿಸಲು ಅವಕಾಶವಿರಲಿಲ್ಲ. ದಿನದಿಂದ ದಿನಕ್ಕೆ ಮೈತುಂಬಿಕೊಂಡು ಬೆಳೆಯುತ್ತಿದ್ದ ಹುಡುಗಿಗೆ ಎಂಥದಾದರೂ ಒಂದು ಗಂಡು ಸಿಕ್ಕಿದರಾಯಿತೆಂಬ ವಿಚಾರದಿಂದ ಅವರು ಶರಣಪ್ಪನವರಿಗೆ ಶರಣು ಹೋಗಿದ್ದರು. ಅನೇಕ ಗಂಡುಗಳಿಂದ 'ನೋಡಿಸಿಕೊಂಡು' ನಿರಾಕೃತಳಾಗಿ, ಅವಮಾನಿತಳಾಗಿದ್ದ ಗೌರವ್ವನೂ, ಕೊನೆಗೊಮ್ಮೆ ಮದುವೆಯಾದರೆ ಸಾಕೆಂದು ಸುಮ್ಮನಿದ್ದು ಬಿಟ್ಟಿದ್ದಳು.

ಮದುವೆಯ ದಿನವೇ ಅವಳು ಶರಣಪ್ಪನವರನ್ನು ಸರಿಯಾಗಿ ನೋಡಿದ್ದುದು. ತನಗಿಂತಲೂ ಕುಳ್ಳನೆಯ ದೇಹದ ಕಡ್ಡಿಯಂಥ ಆ ಗಂಡನ್ನು ಸಮೀಪದಿಂದ ಕಂಡಾಗ ಅವಳ ಎದೆಗೆ ಬಲವಾದ ಆಘಾತವಾದಂತಾಗಿತ್ತು. ಶರಣಪ್ಪನವರು ಅವಳ ಕೊರಳಲ್ಲಿ ಮಂಗಳಸೂತ್ರ ಕಟ್ಟುತ್ತಿದ್ದ ಹಾಗೇ ಅವಳು ದುಃಖದಿಂದ ಕಣ್ಣೀರು ಸುರಿಸಿದ್ದಳು. ಮುಂದೆ ತನ್ನ ಸಂಸಾರ ಹೇಗಾಗುವುದೊ? ಇಂಥ ಗಂಡನ ಸಂಗದಲ್ಲಿ ತನಗೆ ಸುಖ ದೊರೆಯುವುದಾದರೂ ಹೇಗೆ?

ಮದುವೆ ಮುಗಿದಿತ್ತು. ಪ್ರಸ್ತದ ಸಂದರ್ಭ ಮಾತ್ರ ಮುಂದೆ ಮುಂದೆ ಹೋಗುತ್ತಿತ್ತು. ಮ್ಯಾಟ್ರಿಕ್ ಮುಗಿಸಿ ಮನೆಯಲ್ಲಿಯೇ ಕುಳಿತುಕೊಂಡಿದ್ದ ಗೌರವ್ವನಿಗೆ ವೇಳೆಯನ್ನು ಕಳೆಯುವುದೇ ಕಷ್ಟವಾಗಿತ್ತು. ಗಂಡನೆಂಬ ಆ ಪ್ರಾಣಿಯಂತೂ ಮನೆಯ ಕಡೆ ಕಾಲು ಹಾಕುತ್ತಿರಲಿಲ್ಲ. ಸಂಸಾರಕ್ಕಾರಂಭಿಸುವ ಮನಸ್ಸೂ ಅವನಿಗಿರಲಿಲ್ಲ. ತುಂಬು ಜವ್ವನೆಯಾಗಿದ್ದ ಗೌರವ್ವ ಗಂಡಿನ ಜೊತೆಯನ್ನಾಶಿಸುವುದು ಸಹಜವೇ ಆಗಿತ್ತು. ಮನೆಯಲ್ಲಿಯೆ ಇದ್ದ ರುದ್ರನ ಕಡೆಗೂ ಅವಳ ದೃಷ್ಟಿ ಹರಿದಿರಲು ಸಾಕು. ಆ ದೃಷ್ಟಿಯನ್ನು ಅರ್ಥಮಾಡಿಕೊಂಡ ರುದ್ರನೂ ಅವಳಿಗೆ ಉತ್ತೇಜನವಿತ್ತಿರಲು ಸಾಕು. ಅದು ಪಾಪ, ಅದು ತಪ್ಪು ಎಂಬ ತಿಳಿವಳಿಕೆ ಗೌರವ್ವನಿಗಿದ್ದಿತಾದರೂ ಮನಸ್ಸನ್ನು ತಡೆಹಿಡಿಯಬಲ್ಲ ಸಾಮರ್ಥ್ಯ ಅವಳಲ್ಲಿದ್ದಿತೋ ಇಲ್ಲವೊ. ತಾಯಿಯ ಉದಾಹರಣೆ ಬೇರೆ ಕಣ್ಣೆದುರಿಗೇ ಇತ್ತು. ಆಗಲೂ ಅವರ ಮನೆಗೆ ಬಂದು ಹೋಗುವುದನ್ನು ನಿಲ್ಲಿಸಿರಲಿಲ್ಲ ಪವಾಡೆಪ್ಪ. ಕೆಳಗಿನ ಕೊಟಡಿಯಲ್ಲಿ ಅವರೊಡನೆ ತಾಯಿ ಮಲಗಿದ್ದ ಹಾಗೆ, ಮಹಡಿಯ ಮೇಲಿನ ತನ್ನ ಕೊಟಡಿಯಲ್ಲಿ ಮಲಗಿದ ಮಗಳು

ನಿದ್ದೆಯಿಲ್ಲದೆ ತಳಮಳಿಸುವಳು. ತನ್ನ ಗಂಡನಿಗಂತೂ ತನ್ನೊಡನೆ ಸಂಸಾರ ಮಾಡುವ ಇಷ್ಟವಿಲ್ಲ. ಬ್ರಹ್ಮಚರ್ಯದಿಂದಿದ್ದು ಬೈರಾಗಿಯಾಗುವ ಅಪೇಕ್ಷೆ ಯಿದ್ದಿತಂತೆ ಅವರಿಗೆ. ಪವಾಡೆಪ್ಪನವರ ಬಲವಂತಕ್ಕೆ ಕಟ್ಟುಬಿದ್ದು ಮದುವೆ ಯಾದರಂತೆ. ಮದುವೆಯಾದ ಬಳಿಕ, ಕೈ ಹಿಡಿದಾಕೆಯ ಜೊತೆಗೆ ಸಂಸಾರ ಸಾಗಿಸಲೇ ಬೇಕಾದುದು ತಮ್ಮ ಕರ್ತವ್ಯವೆಂಬುದನ್ನು ಅವರು ಅರಿಯರು. ಇಂಥ ಗಂಡನಿಗೆ ತಾನಾದರೂ ಏಕೆ ನಿಷ್ಠೆಯಿಂದಿರಬೇಕು? ತಾಯಿಯೇ ನೀತಿ ಯಿಂದ ನಡೆಯದಿರುವಾಗ ತಾನಾದರೂ ಏಕೆ ನಡೆಯಬೇಕು?

ಆ ರೀತಿ ಅವಳು ಯೋಚಿಸಿದಳಾದರೂ ಅನೀತಿಯ ಹಾದಿ ಹಿಡಿಯಲಿಲ್ಲ. ತಾನಾಗಿ ಮುಂದುವರಿಯಲು ಧೈರ್ಯ ಸಾಲದೆ ರುದ್ರನೂ ಸುಮ್ಮನಿದ್ದ. ತಾನಾಗಿ ಅವನನ್ನು ಕರೆಯುವಂಥ ಕೀಳು ಮಟ್ಟಕ್ಕಿಳಿಯಲು ಅವಳಿಗೂ ಮನಸ್ಸು ಬರಲಿಲ್ಲ.

ಕೊನೆಗೊಂದು ದಿನ ಪ್ರಸ್ತದ ಸಮಾರಂಭ ಜರುಗಿ ಅವಳು ಅಷ್ಟು ದಿನ ನಿರೀಕ್ಷಿಸಿದ್ದ ಸಂಸಾರಕ್ಕಾರಂಭವಾದುದೂ ಆಗಿತ್ತು. ಕಣ್ಣು, ಮನಸ್ಸು, ಹೃದಯ ಎಲ್ಲವನ್ನೂ ಮುಚ್ಚಿಕೊಂಡೇ ಅವಳು ಸಂಸಾರರಂಗದಲ್ಲಿ ಅಡಿಯಿರಿಸಿ ದ್ದಳು. ಶರಣಪ್ಪನವರಿಗಂತೂ ಅದರಲ್ಲಿ ಕೊಂಚವೂ ಉತ್ಸಾಹವಿರಲಿಲ್ಲ. ವ್ಯಾಯಾಮ ಶಿಕ್ಷಕರ ಒತ್ತಾಯದಿಂದ ಕವಾಯತಿನಲ್ಲಿ ಭಾಗವಹಿಸುವ ದುರ್ಬಲ ವಿದ್ಯಾರ್ಥಿಯಂತೆ ಅವರು ಸಂಸಾರದಲ್ಲಿ ಪ್ರವೇಶಿಸಿದ್ದರು. ಗೌರವ್ವ ಯೋಚಿಸಿ ದ್ದಂತೆಯೆ ಆಯಿತು. ಶರಣಪ್ಪನವರಿಂದ ಅವಳಿಗೆ ಸುಖವೂ ಸಿಕ್ಕಲಿಲ್ಲ, ತೃಪ್ತಿಯೂ ಲಭಿಸಲಿಲ್ಲ.

ಆಗಲೂ ಆಗಾಗ ಅವಳ ಮನಸ್ಸು ರುದ್ರನತ್ತ ಹೊರಳುತ್ತಲೇ ಇತ್ತು. ಅವಳದೊಂದು ಕರೆಗಾಗಿ ಅವನೂ ಕಾದುಕೊಂಡಿದ್ದ. ಆದರೂ, ಅವಳು ಆ ಕೃತ್ಯಕ್ಕೆ ತೊಡಗಲಿಲ್ಲ. ತಾಯಿಯೊಬ್ಬಳು ಕೆಟ್ಟು ಹೋದುದಾಯಿತು, ತಾನೂ ಏಕೆ ಕೆಡಬೇಕು? ಎಂದು ಅವಳು ಯೋಚಿಸಿಕೊಂಡಿದ್ದರೂ ಇರಬಹುದು.

ಅವಳ ಆ ಯೋಚನೆ ಶರಣಪ್ಪನವರಿಗೆ ತಿಳಿಯುವುದಾದರೂ ಹೇಗೆ? ಹೆಂಡತಿಯ ಜೊತೆಗೆ ಅವರು ಮಾತನಾಡುತ್ತಿದ್ದುದೂ ಅಪರೂಪವಾಗಿ. ರಾತ್ರಿ ಯಂತೂ ಗಾಢ ಮೌನದಲ್ಲಿ ಕಳೆದು ಹೋಗುತ್ತಿತ್ತು. ಹಗಲು ಹೊತ್ತು ಅವರು ವಿಶೇಷವಾಗಿ ಮನೆಯಲ್ಲಿರುತ್ತಲೇ ಇರಲಿಲ್ಲ. ಹತ್ತು ಗಂಟೆಗೆ ಮನೆ ಬಿಟ್ಟು

ಹೋದವರು ಸಾಲೆಯಿಂದ ಹಿಂದಿರುಗಿ ಬಂದಾಗ ಕತ್ತಲಾಗಿರುತ್ತಿತ್ತು. ಹೆಂಡತಿಯ ಬಗೆಗೆ ಯೋಚಿಸುವುದಕ್ಕೂ ಅವರಿಗೆ ಬಿಡುವು ಸಿಕ್ಕುತ್ತಿರಲಿಲ್ಲ.

ಆದರೆ, ಆ ಪತ್ರ ಕೈಸೇರಿದ ಬಳಿಕ ಒಂದೆರಡು ವಾರಗಳ ವರೆಗೆ ಅವಳ ಬಗೆಗೆ ಯೋಚಿಸುವುದೇ ಅವರ ಕೆಲಸವಾಯಿತು. ರುದ್ರನನ್ನು ಅದುವರೆಗೂ ಕಣ್ಣೆತ್ತಿ ನೋಡದಿದ್ದವರು ಅಂದಿನಿಂದ ಅವನ ಪ್ರತಿಯೊಂದು ಚಲನವಲನವನ್ನೂ ಎಚ್ಚರಿಕೆಯಿಂದ ವೀಕ್ಷಿಸತೊಡಗಿದರು. ಅವನು ತಮಗಿಂತ ಬಲಶಾಲಿ, ಸ್ಫುರದ್ರೂಪಿ. ಹೊಸ ಹರೆಯದ ಯುವಕ. ಹೆಣ್ಣು ಮರುಳಾಗುವುದೂ ಇಂಥ ಗಂಡಿಗೇ ಅಲ್ಲವೆ? ಸ್ತ್ರೀಯರು ಎಷ್ಟು ಓದಿದರೇನು, ಎಷ್ಟು ಸುಸಂಸ್ಕೃತರಾದರೇನು, ತಮ್ಮ ಜಾತಿಯ ಹುಟ್ಟುಗುಣವನ್ನು ಬಿಡುವುದಿಲ್ಲ. ಪತ್ರದಲ್ಲಿ ಬರೆದಿರುವುದು ನಿಜವಿದ್ದರೂ ಇರಬಹುದು. ಮೊದಲೇ ಈ ಮನೆಯಲ್ಲಿ ಅನೀತಿಯ ವಾತಾವರಣ. ಮನೆಯ ಹಿರಿಯಳೇ ಅಡ್ಡ ಹಾದಿಗೆ ಬಿದ್ದಿರುವಾಗ ಕಿರಿಯರನ್ನು ಕೇಳುವವರಾರು!

ಎರಡು ವಾರಗಳ ವರೆಗೆ ಯೋಚಿಸಿ ಶರಣಪ್ಪನವರು ಒಂದು ನಿರ್ಧಾರಕ್ಕೆ ಬಂದು, ಅತ್ತೆಯ ಮನೆಯಿಂದ ಎರಡು ಮೈಲು ದೂರದಲ್ಲಿದ್ದ ಓಣಿಯೊಂದರಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದು, ಹೆಂಡತಿಯನ್ನು ಕರೆದೊಯ್ಯುವ ಸಿದ್ಧತೆಗಾರಂಭಿಸಿದರು.

"ಆದರೆ, ಆ ವಿಚಾರವನ್ನು ಅತ್ತೆಯ ಹತ್ತಿರ ತೆಗೆಯುವುದಾದರೂ ಹೇಗೆ? ಮಗಳನ್ನೊಬ್ಬಳನ್ನೆ ಕಳುಹಿಸುವುದಿಲ್ಲವೆಂದು ಆಕೆ ಹೇಳಿಬಿಟ್ಟರೆ ಮುಂದೇನನ್ನು ಮಾಡುವುದು?

ಶರಣಪ್ಪನವರು ಪವಾಡೆಪ್ಪನವರ ಹತ್ತಿರವೇ ಮಾತು ತೆಗೆದರು.

"ಯಾಕ್ರೀ? ಬೇರೆ ಮನೆ ಮಾಡುವದ್ಯಾಕೆ ಅಂತೀನಿ. ನಿಮಗೇನು ಕಡಿಮೆಯಾಯ್ತು ಶಿವಮ್ಮನವರ ಮನೆಯೊಳಗೆ?" ಎಂದು ಕೇಳಿದರು ಪವಾಡೆಪ್ಪ.

"ಕಡಿಮೆ ಗಿಡಿಮೆಯ ಪ್ರಶ್ನೆಯಿಲ್ಲ. ಆದರೆ, ಎಷ್ಟು ದಿನ ಅಂತ ನಾನು ಹೀಗೇ ಅತ್ತೆಯ ಮನೆಯಲ್ಲಿರಬೇಕು? ಸಂಸಾರಿಕನಾದದ್ದಂತೂ ಆಯ್ತು. ಇನ್ನು ಮೇಲೆ ಎಲ್ಲರಂತೆ ನಾನೂ ಸಂಸಾರದ ಜವಾಬ್ದಾರಿ ಹೊತ್ತುಕೊಳ್ಳಬೇಕಲ್ಲ?"

"ಇರಲಿರಲಿ. ಇನ್ನೂ ಸ್ವಲ್ಪ ದಿನ ಹೋಗಲಿ. ಆ ಹುಡುಗಿಗೆ ಒಬ್ಬಳೇ ಇದ್ದು ಗೊತ್ತಿಲ್ಲ. ಅವಳ ತಾಯಿಗಾದರೂ ಬೇರೆ ಯಾರಿದಾರೆ? ನೀವು ಇಲ್ಲೇ ಇದ್ದರೆ ಅವರಿಗೂ ಸಂತೋಷ."

ಪವಾಡೆಪ್ಪನವರ ಮಾತು ಮೀರಲಾರದೆ ಶರಣಪ್ಪನವರು ಮತ್ತೊಂದು ತಿಂಗಳು ಸುಮ್ಮನಿರಬೇಕಾಯಿತು. ಅಷ್ಟರಲ್ಲಿ ಓಣಿಯ ಕಿಲಾಡಿಗಳಿಂದ ಇನ್ನೂ ಎರಡು ಕಾಗದ ಬಂದುವು.

"ನಿಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಬೇಕೆಂತ ಮನಸಿದ್ದರೆ ಆದಷ್ಟು ಬೇಗ ಹೆಂಡತಿಯನ್ನು ಕರೆದೊಯ್ದು ಬೇರೆ ಮನೆ ಹೂಡಿರಿ. ಇನ್ನೂ ನೀವು ನಿರ್ಲಕ್ಷ್ಯ ಮಾಡಿದರೆ ರುದ್ರ ಅವಳನ್ನು ಕಟ್ಟಿಕೊಂಡು ಓಡಿ ಹೋಗಿ ಬಿಡಬಹುದು."

ಹೋದರೆ ಹೋಗಲಿ, ಅದರಿಂದಲೂ ಒಳ್ಳೆಯದೇ ಆಗುವುದು, ಎಂದೂ ಒಮ್ಮೆ ಶರಣಪ್ಪನವರಿಗನ್ನಿಸಿತು. ತಮ್ಮ ಸಂಕಟವೆಲ್ಲವೂ ಒಮ್ಮೆ ಬಗೆಹರಿದ ಹಾಗಾದೀತು.

ಆದರೆ, ಮರುಕ್ಷಣವೆ ಮಾನ ಮರ್ಯಾದೆಯ ಜ್ಞಾಪಕ ಬಂದು ಅವರ ಮೈಯನ್ನು ನಡುಗಿಸಿತು. ಓಡಿ ಹೋದ ಹೆಂಗಸಿನ ಗಂಡ ಎಂದು ತಮಗೆ ಅಪಕೀರ್ತಿ ಬರುವುದು. ತಾನೊಬ್ಬ ಷಂಢನೆಂದೂ ಜನ ಮಾತನಾಡಬಹುದು. ಹೆಂಡತಿಯನ್ನಾಳುವ ಸಾಮರ್ಥ್ಯ ತನ್ನಲ್ಲಿಲ್ಲವೆಂತಲೇ ಅವಳು ಅಡುಗೆಯಾಳನ್ನು ಕಟ್ಟಿಕೊಂಡು ಓಡಿಹೋದಳೆಂದು ಜನರೆನ್ನಬಹುದು........

ಪವಾಡೆಪ್ಪನವರು, ಶಿವಮ್ಮ ಬೇಡ ಬೇಡವೆಂದರೂ ಕೇಳದೆ ಶರಣಪ್ಪನವರು ಬೇರೆ ಸಂಸಾರ ಹೂಡಿದರು.

"ರುದ್ರನನ್ನಾದರೂ ಕರೆದುಕೊಂಡು ಹೋಗಿರಿ ಸ್ವಲ್ಪ ದಿನ. ಗೌರೂಗೆ ಸಹಾಯವಾದೀತು," ಎಂದು ಶಿವಮ್ಮ ಸಹಜವಾಗಿ ಹೇಳಿದಾಗ ಆಕೆಯನ್ನು ನುಂಗಿ ಬಿಡುವಂತೆ ನೋಡುತ್ತ ಶರಣಪ್ಪನವರು ಮನಸ್ಸಿನಲ್ಲಿಯೇ ಹೇಳಿಕೊಂಡರು:

"ಇಷ್ಟು ದಿನ ನಿಮ್ಮಿಂದ ಮೋಸ ಹೋದದ್ದಾಯ್ತು. ಇನ್ನು ಮೇಲೂ ಮೋಸ ಹೋಗಲಿಕ್ಕೆ ನಾನೇನು ಬುದ್ಧಿಯಿಲ್ಲದ ಬೆಪ್ಪ ಅಂತ ತಿಳಿದಿರೇನು? ಈ ರುದ್ರ್ಯಾನ್ನ ಕರಕೊಂಡು ಹೋಗಬೇಕಂತೆ. ಅವನ್ನ ಕರಕೊಂಡು ಹೋಗೂದಾದರೆ

ಬೇರೆ ಮನೆ ಮಾಡೂದಾದರೂ ಯಾಕೆ ?"

ಬೇರೆ ಮನೆ ಮಾಡಿದರೂ ಅವರ ಮನಸ್ಸಿಗೆ ನೆಮ್ಮದಿ ಲಭಿಸಲಿಲ್ಲ. ದಿನ ಕಳೆದ ಹಾಗೆಲ್ಲ ಹೆಂಡತಿಯ ಬಗೆಗೆ ಬೇಸರ ಹೆಚ್ಚುತ್ತ ಬಂತು. ರುದ್ರನನ್ನು ಅವಳು ಇಟ್ಟುಕೊಂಡಿದ್ದುದು ಸತ್ಯವೆಂದೇ ಅವರು ನಂಬಿದ್ದರು. ಅವನನ್ನೊಬ್ಬ ನನ್ನೇ ಇಟ್ಟುಕೊಂಡಿದ್ದಳೋ, ಇಲ್ಲವೆ, ಇನ್ನೂ ಅನೇಕರನ್ನು ನೋಡಿಕೊಂಡಿದ್ದಳೋ ? ಯಾರಿಗೆ ಗೊತ್ತು ? ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಎಷ್ಟು ಜನರ ಸಹವಾಸ ಮಾಡಿದ್ದಳೋ ? ಹೆಂಡತಿಯ ಬಗೆಗೆ ಬೇಸರ ಹುಟ್ಟಿದ ಹಾಗೆಲ್ಲ ಶರಣಪ್ಪನವರಿಗೆ ಅಧ್ಯಾತ್ಮದಲ್ಲಿ ಒಲವೂ ಹೆಚ್ಚುತ್ತ ಬಂತು. ಕರಾಚೂರಿನ ಗುರೂಜಿಯವರ ಪುಸ್ತಕಗಳನ್ನೋದಿದರೆ ಮನಶ್ಶಾಂತಿ ಲಭಿಸುವುದೆಂದು ಯಾರೋ ಒಬ್ಬರು ಹೇಳಿದ ಮೇರೆಗೆ ಶರಣಪ್ಪನವರು ಆ ಪುಸ್ತಕಗಳನ್ನೋದ ತೊಡಗಿದರು. ಓದುತ್ತ ಹೋದ ಹಾಗೆಲ್ಲ ಏನೋ ಒಂದು ಬಗೆಯ ಸಮಾಧಾನ ಲಭಿಸಿದಂತೆ ತೋರತೊಡಗಿತು.

"ಗುರೂಜಿ ಮತ್ತು ಮಾತಾಜಿಯವರ ಆಶೀರ್ವಾದವಾದರೆ ನಿಮ್ಮ ತೊಂದರೆಗಳೆಲ್ಲಾ ಪರಿಹಾರವಾದಾವು. ಅವರನ್ನು ಪೂರ್ತಿಯಾಗಿ ನಂಬಿ ವ್ಯಕ್ತಿತ್ವವನ್ನೆಲ್ಲ ಅವರಿಗರ್ಪಿಸಬೇಕು," ಎಂದು ಸುಚರಿತರಾಯ ಸೂಚಿಸಿದ.

ಗುಡ್ಡದಿಂದುರುಳಿ ಬೀಳುತ್ತಿದ್ದವನು ಕಂಟಿಯನ್ನು ಹಿಡಿದುಕೊಳ್ಳುವಂತೆ ಶರಣಪ್ಪನವರು ಗುರೂಜಿ, ಮಾತಾಜಿಯವರನ್ನು ಹಿಡಿದುಕೊಂಡರು. ಯೋಗಾಭ್ಯಾಸಕ್ಕೂ ಆರಂಭವಾಯಿತು. ಹೆಂಡತಿಯ ಸಂಗವಂತೂ ಎಂದೋ ನಿಂತು ಹೋಗಿತ್ತು.

ಆದರೆ ಅವಳೇನೂ ಸುಲಭವಾಗಿ ಸೋತುಹೋಗಲಿಲ್ಲ. ವೈವಾಹಿಕ ಜೀವನದ ಹಕ್ಕುಬಾಧ್ಯತೆಗಳನ್ನು ದೊರಕಿಸಲು ಒಂದು ಯುದ್ಧವನ್ನೇ ಹೂಡಿದಳು.

ಅವಳನ್ನು ದೂರವಿರಿಸಲೆಂದು ಶರಣಪ್ಪನವರು ಒಂದು ಉಪಾಯವನ್ನೇ ಯೋಚಿಸಬೇಕಾಯಿತು.

ತಮ್ಮ ಹಾಸಿಗೆಯನ್ನು ಓದುವ ಕೊಟಡಿಗೇ ಸಾಗಿಸಿ, ಅವರು ಅಲ್ಲಿಯೇ ಮಲಗಿಕೊಳ್ಳುವ ಪರಿಪಾಠಕ್ಕಾರಂಭಿಸಿದರು.

ಗೌರಮ್ಮ ಎರಡು ರಾತ್ರಿ ಯೋಚಿಸುತ್ತಿದ್ದು, ಮೂರನೆಯ ರಾತ್ರಿ ಅವರು

ಮಲಗಿದ ಕೊಟಡಿಗೇ ನುಗ್ಗಿದಳು.

"ನೀವು ಹೀಗೆಲ್ಲ ಯಾಕೆ ಮಾಡ್ತೀರಿ? ನನ್ನ ಸಂಸಾರ ಯಾಕೆ ಹಾಳು ಮಾಡ್ತೀರಿ?"

"ಹಾಳು ಮಾಡಿದವರ್‍ಯಾರು? ನೀನೋ? ನಾನೋ?"

"ನಾನೇನು ಮಾಡಿದೆ?"

"ಏನು ಮಾಡಿದಿ? ಏನು ಮಾಡಿದಿ? ಮಾಡುವದೆಲ್ಲಾ ಮಾಡಿ ಮತ್ತೆ ನನಗೇ ಕೇಳ್ತೀಯಲ್ಲ? ನಾಚಿಕೆಯನ್ನೇ ಬಿಟ್ಟ ಹೆಣ್ಣು ಏನು ಮಾಡಲಿಕ್ಕಿಲ್ಲ?"

"ಅಂಥಾದ್ದು ನಾ ಮಾಡಿದ್ದಾದರೂ ಏನು?" ಎಂದು ಆಕ್ರೋಶ ಮಾಡಿದಳು ಗೌರವ್ವ.

"ನಿಮ್ಮ ಓಣಿಯೊಳಗೆಲ್ಲಾ ಡಂಗುರ ಹೊಡೆದ ನಿನ್ನ ಕೀರ್ತಿ. ನಿನ್ನ ಮದುವೆಯಾಗಿ ನನ್ನ ಹೆಸರೂ ಹಾಳಾಗಿ ಹೋಯ್ತು. ನನ್ನ ಬಾಳೂ ಹಾಳಾಗಿ ಹೋಯ್ತು," ಎಂದರು ಶರಣಪ್ಪನವರು.

"ಓಣಿಯವರಿಗೇನು, ಬೇಕಾದ್ದು ಹೇಳುತಾರ. ಅದನ್ನೆಲ್ಲಾ ನಂಬುತಾ ಹೋದರೆ ಬಾವೀ ಬೀಳಬೇಕಾದೀತು."

"ಅಷ್ಟು ಮಾಡಿದರೆ ನನ್ನ ಮೇಲೆ ದೊಡ್ಡ ಉಪಕಾರವಾದಂತಾಗ್ತದ," ಎಂದು ಕ್ರೂರವಾಗಿ ಹೇಳಿದರು ಶರಣಪ್ಪ.

ಗೌರವ್ವ ನೆಲಕ್ಕೆ ಕುಸಿದು ಬಿದ್ದು ಗಳಗಳನೆ ಅಳುತ್ತಾ,

"ನಾ ಬಾವೀ ಬಿದ್ದು ಸತ್ತು ಹೋದರೆ ನಿಮಗೆ ಸಂತೋಷ ಅನ್ನಿರಿ. ಅಯ್ಯೋ, ಎಂಥಾವರನ್ನ ಕಟ್ಟಿಕೊಂಡು ಏನೇನು ಅನುಭವಿಸಬೇಕಾಯ್ತಲ್ಲ!" ಎಂದು ರೋದಿಸತೊಡಗಿದಳು.

ಆಗಲಾದರೂ ಶರಣಪ್ಪನವರು ಜಾಣತನದಿಂದ ನಾಲಗೆ ಬಿಗಿಹಿಡಿದು ಕೊಂಡಿದ್ದಲ್ಲಿ ಒಳ್ಳೆಯದಾಗುತ್ತಿತ್ತು. ಆದರವರು ಸುಮ್ಮನಿರಲಿಲ್ಲ. ಅವರ ಮನಸ್ಸಿನಲ್ಲಿ ಅಷ್ಟು ದಿನ ಹುದುಗಿಕೊಂಡಿದ್ದ ಸಂತಾಪವೆಲ್ಲವೂ ಚಿಲುಮೆಯ ನೀರಿನಂತೆ ಹೊರಹೊಮ್ಮತೊಡಗಿತ್ತು.

"ನನ್ನ ಕಟ್ಟಿಕೊಳ್ಳುವ ಬದಲು ಅಡಿಗೆಯ ರುದ್ರನ್ನ ಕಟ್ಟಿಕೊಂಡಿದ್ದರೆ ಒಳ್ಳೆ ಸುಖ ಅನುಭವಿಸುತ್ತಿದ್ದಿಯಲ್ಲ!"

ಬಿಕ್ಕಿ ಬಿಕ್ಕಿ ಅಳುತ್ತಿದ್ದ ಗೌರವ್ವನ ಕುತ್ತಿಗೆಯನ್ನು ಹಠಾತ್ತಾಗಿ

ಯಾರೋ ಬಿಗಿದು ಹಿಡಿದಂತಾಯಿತು. ಅಳು ನಿಂತು ಹೋಯಿತು. ಗಂಡನ ತಾತ್ಸಾರಕ್ಕೆ ಕಾರಣವಂತೂ ತಿಳಿದಂತಾಗಿತ್ತು. ಅವಳ ಮನಸ್ಸಿನಲ್ಲಿ ವಿಧ ವಿಧದ ಭಾವನೆಗಳು ಮೂಡಿ ಗದ್ದಲವೆಬ್ಬಿಸಿದುವು. ರುದ್ರ ಅಷ್ಟು ಸಮೀಪ ದಲ್ಲಿದ್ದಾಗಲೂ ತಾನು ಅವನ ಸಂಗಕ್ಕೆಳಸದೆ ಶೀಲವನ್ನು ಕಾಪಾಡಿಕೊಂಡಿದ್ದ ವಿಚಾರ ಇವರಿಗೆ ಹೇಗೆ ಗೊತ್ತಾಗಬೇಕು? ತಾನು ತಪ್ಪು ದಾರಿ ತುಳಿಯ ದಿದ್ದರೂ ಗಂಡನಿಂದ ಅಪವಾದ ಬರುವುದೇನೂ ತಪ್ಪಲಿಲ್ಲ. ಯಾರೋ, ಕಿಡಿ ಗೇಡಿಗಳು ಇವರ ತಲೆಯನ್ನು ಪೂರ್ತಿಯಾಗಿ ಕೆಡಿಸಿಬಿಟ್ಟಿರಬೇಕು. ತಾನೆಷ್ಟು ಪರಿಯಿಂದ ಹೇಳಿದರೂ ಇನ್ನು ಮೇಲೆ ಇವರ ಮನಸ್ಸು ತಿಳಿಯಾಗಲಾರದು. ತನ್ನ ಬಗೆಗೆ ಇವರಲ್ಲಿ ಹುಟ್ಟಿದ ಸಂದೇಹ ಮಾಯವಾಗಲಾರದು........

ಗೌರವ್ವ ಎದ್ದು ಹೋಗಿ ತನ್ನ ಕೊಟಡಿಯಲ್ಲಿ ಬಿದ್ದುಕೊಂಡಳು. ದೊಡ್ಡ ವಿಜಯವೊಂದನ್ನು ಪಡೆದವರಂತೆ ವಿಜೃಂಭಿಸುತ್ತ ಶರಣಪ್ಪನವರು ಕೊಟಡಿಯ ಬಾಗಿಲಿಗೆ ಒಳಗಿನಿಂದ ಚಿಲಕ ಹಾಕಿಕೊಂಡು ಮಲಗಿಕೊಂಡರು.

ಹತ್ತು ಹದಿನೈದು ದಿನ ಹಾಗೆ ಕಳೆದುವು. ಜೀವವಿದ್ದ ಯಂತ್ರಗಳಂತೆ ಇಬ್ಬರೂ ವ್ಯವಹರಿಸುತ್ತಿದ್ದರು. ಮಾತುಕತೆ ಸಂಪೂರ್ಣವಾಗಿ ನಿಂತು ಹೋಗಿತ್ತು.

ಒಂದು ಮಧ್ಯಾಹ್ನ ಮಗಳನ್ನು ನೋಡಲೆಂದು ಬಂದ ಶಿವಮ್ಮ ಅವಳ ಸೊರಗಿದ ಶರೀರವನ್ನೂ, ಬಾಡಿದ ಮೊಗವನ್ನೂ ಕಂಡು ಚಕಿತಳಾಗಿ, ವಿಷಯ ವನ್ನೆಲ್ಲ ಕೇಳಿ ತಿಳಿದುಕೊಂಡಳು. ಗೌರವ್ವ ಯಾವುದನ್ನೂ ಬಿಡದೆ ಎಲ್ಲ ಸಂಗತಿ ಗಳನ್ನೂ ವಿವರವಾಗಿ ಹೇಳಿದಳು.

"ಏನೋ ಹುಷಾರ ಹುಡುಗ, ಮುಂದೆ ಬರುವವರು ಅಂತ ಮಗಳನ್ನ ಕೊಟ್ಟೆವಿ. ಇವರು ಹೀಗೆಲ್ಲಾ ಇರಬಹುದಂತ ಯಾರಿಗೆ ಗೊತ್ತಿತ್ತು? ನಿನ್ನ ಬಾಳು ಹೀಗಾಯ್ತಲ್ಲೇ ಗೌರೂ!" ಎಂದು ಶಿವಮ್ಮನೂ ಕಂಬನಿ ಸುರಿಸಿದಳು. ಗೌರವ್ವ ತಾಯಿಯನ್ನು ತಬ್ಬಿಕೊಂಡು ಅತ್ತು ಎದೆಯಲ್ಲಿನ ಸಂಕಟವನ್ನೆಲ್ಲ ತೋಡಿಕೊಂಡಳು.

ತಾಯಿಮಕ್ಕಳಲ್ಲಿ ಮತ್ತೆ ಏನೇನು ಮಾತುಕತೆ ನಡೆಯಿತೋ ತಿಳಿಯದು. ಆ ರಾತ್ರೆ ಊಟ ಮುಗಿಯುತ್ತಲೂ ಗೌರವ್ವ ಗಂಡನ ಕೊಟಡಿಗೆ ಹೋಗಿ ಬಾಗಿಲು ತಟ್ಟತೊಡಗಿದಳು.

" ಯಾಕೆ ? " ಎಂದು ಒಳಗಿನಿಂದಲೇ ಕೇಳಿದರು ಶರಣಪ್ಪನವರು.

" ಬಾಗಿಲಾ ತಗೀರಿ. ಹೇಳ್ತೇನಿ."

ಶರಣಪ್ಪನವರು ಬಾಗಿಲು ತೆಗೆಯಲಿಲ್ಲ. " ಏನು ಹೇಳು," ಅಂದರು.

" ಮೊದಲು ಬಾಗಿಲು ತಗೀರಿ. ಮಾತಾಡೂದದ."

ಏನು ಮಾತೋ ನೋಡೋಣ ಎಂದು ಶರಣಪ್ಪನವರು ಬಾಗಿಲು ತೆಗೆಯುತ್ತಲೂ ಗೌರವ್ವ ಒಳನುಗ್ಗಿ ಗಂಡನ ಹಾಸಿಗೆಯ ಮೇಲೆ ಮಲಗಿಕೊಂಡು ಬಿಟ್ಟಳು.

ಒಂದು ನಿಮಿಷ ಮೂಕವಾಗಿ ನಿಂತಿದ್ದು ಶರಣಪ್ಪನವರೆಂದರು.

" ಇದೇನು ಆಟಾ ನಡಸಿದೀಯೆ ? ಇಲ್ಲಿಂದ ಹೋಗ್ತೀಯೋ ಇಲ್ಲೋ ? "

" ಇಲ್ಲ, ಇಲ್ಲ, ಇಲ್ಲ," ಎಂದಳು ಗೌರವ್ವ, ನಿಶ್ಚಯದ ಧ್ವನಿಯಲ್ಲಿ.

" ಒಳ್ಳೇ ಮಾತಿನಿಂದ ಹೇಳ್ತೇನಿ. ಹೋಗು ಇಲ್ಲಿಂದ."

" ಇಲ್ಲ, ಇಲ್ಲ, ಇಲ್ಲ," ಎಂದಳು ಗೌರವ್ವ. " ನೀವು ನನ್ನ ಕೊಂದರೂ ಅಡ್ಡಿಯಿಲ್ಲ. ಇಲ್ಲೇ ಸಾಯ್ತೇನಿ."

" ನೀನ್ಯಾಕೆ ಸಾಯುತೀ? ನಾನೇ ಸತ್ತು ಹೋಗ್ತೇನಿ," ಎಂದವರೆ ಶರಣಪ್ಪ ಆ ಕೊಟಡಿಯನ್ನು ತ್ಯಜಿಸಿ, ಹೆಂಡತಿಯ ಕೊಟಡಿಗೆ ಹೋಗಿ ಬಾಗಿಲು ಹಾಕಿಕೊಂಡರು.

ಅವರು ಹಾಗೆ ಮಾಡಬಹುದೆಂಬುದು ಆಕೆಗೆ ಮೊದಲೇ ತಿಳಿದಹಾಗಿತ್ತು. ಅವಳು ಮತ್ತೆ ಓಡಿ ಹೋಗಿ ತನ್ನ ಕೊಟಡಿಯ ಬಾಗಿಲನ್ನು ಬಡಿದು ಸದ್ದು ಮಾಡತೊಡಗಿದಳು.

ಆಗ ಮಾತ್ರ ಶರಣಪ್ಪನವರಿಗೆ ನಿಜವಾಗಿಯೂ ಗಾಬರಿಗಿಟ್ಟುಕೊಂಡಿತು. ಸದ್ದು ಕೇಳಿ ನೆರೆಹೊರೆಯವರು ಎದ್ದು ಬಂದರೇನು ಗತಿ !

" ಗಲಾಟೆ ಮಾಡಬೇಡ. ಸುಮ್ಮನೆ ಮಲಗಿಕೋ ಹೋಗು," ಎಂದರವರು ಶಾಂತವಾದ ಸ್ವರದಲ್ಲಿ.

" ನಾನೊಬ್ಬಳೇ ಮಲಗಿದರೆ ನಿದ್ದೆ ಬರುವದಿಲ್ಲ," ಎಂದು ಸ್ಪಷ್ಟವಾಗಿ ಹೇಳಿದಳು ಆ ಗೃಹಿಣಿ, ಎತ್ತರಿಸಿದ ಧ್ವನಿಯಲ್ಲಿ. ಅಕ್ಕಪಕ್ಕದ ಮನೆಗಳವರಿಗೆ ಕೇಳಿಸಲೆಂದೇ ಅವಳು ಗಟ್ಟಿಯಾಗಿ ಮಾತನಾಡುತ್ತಿದ್ದಳು.

“ಮೆಲ್ಲಗೆ, ಮೆಲ್ಲಗೆ ಮಾತಾಡು ಮಹಾರಾಯ್ತಿ!” ಎಂದು ದೀನವಾಣಿಯಲ್ಲಿ ಬೇಡಿಕೊಂಡರು ಶರಣಪ್ಪ.

“ನೀವೇನು ಹೇಳಿದರೂ ನಾ ಕೇಳುವದಿಲ್ಲ. ನನಗೇನು ಹೆದರಿಕೆ? ನೀವೇ ಮಾನ ಮರ್ಯಾದೆ, ನೀತಿ ನಡಾವಳಿ ಎಲ್ಲಾ ಬಿಟ್ಟುಬಿಟ್ಟಿರುವಾಗ ನಾನಾದರೂ ಯಾಕೆ ಬಿಡಬಾರದು?”

“ಈಗ ನನಗೇನು ಮಾಡಂತೀಯೋ?”

“ದೇವರ ಸಾಕ್ಷಿಯಾಗಿ ನನ್ನ ಕೈಹಿಡಿದ ತಪ್ಪಿಗೆ ನನ್ನ ಸಂಗಡ ಬಾಳ್ವೆ ಮಾಡಿರಿ.”

“ನನಗದು ಬೇಡ, ಬೇಡ, ಬೇಡ.”

“ಬೇಡ ಅಂದರೆ ನಾನೇನು ಮಾಡಲಿ? ನಾನು ಹರೆಯದಾಕೆ. ನನಗೆ ಸುಖ ಬೇಕು.”

ಶರಣಪ್ಪನವರು ಸಂತ್ರಸ್ತರಾಗಿ ಹೇಳಿದರು :

“ಸುಖ ಬೇಕಿದ್ದರೆ ಎಲ್ಲಾದರೂ ಹುಡುಕಿಕೋ ಹೋಗು. ನನ್ನ ಕಾಡಿಸ ಬೇಡ.”

ಆ ಮಾತು ಕೇಳುತ್ತಲೂ ಗೌರವ್ವ ದೊಪ್ಪನೆ ನೆಲಕ್ಕೆ ಕುಸಿದು ಹೊಸ್ತಿಲಿಗೆ ಕೈಗಳನ್ನು ಬಡಿಯುತ್ತ,

“ಅಯ್ಯೋ! ಗಂಡನಾದವನೇ ಹೆಂಡತಿಗೆ ಅಡ್ಡ ಹಾದಿ ತೋರಿಸಿದರೆ ಗತಿಯೇನು? ಅಯ್ಯೋ! ಏನಾಯ್ತು ನನ್ನ ಸಂಸಾರ! ಅಯ್ಯೋ....” ಎಂದು ರೋದಿಸತೊಡಗಿದಳು.

ಶರಣಪ್ಪನವರು ಬಾಗಿಲು ತೆಗೆದು ಹೊರಗೆ ಬಂದು,

“ನಿನ್ನ ಕಾಲಿಗೆ ಬೀಳ್ತೀನಿ ಮಹಾರಾಯ್ತಿ! ಕೂಗಿಕೋ ಬೇಡ. ನನ್ನ ಮರ್ಯಾದೆ ತೆಗೆಯಬೇಡ,” ಎಂದು ಅಂಗಲಾಚಿ ಬೇಡಿದರು.

“ಮರ್ಯಾದೆ ಉಳಿದಿದ್ದರೆ ಹೌದಲ್ಲೋ ನಾ ತೆಗೆಯೂದು!” ಎಂದು ಅವಳು ಅಣಕವಾಡಿದಳು.

“ನೀನು ಈ ಗದ್ದಲ ನಿಲ್ಲಿಸದಿದ್ದರೆ ನಾನೇ ಮನೆ ಬಿಟ್ಟು ಹೋಗ್ತೀನಿ,” ಎಂದು ಕೊನೆಯ ಅಸ್ತ್ರ ಪ್ರಯೋಗಿಸಿದರು ಶರಣಪ್ಪನವರು.

“ನೀವೆಲ್ಲಿಗೆ ಹೋದರೂ ನಿಮ್ಮ ಹಿಂದೆ ಬರ್ತೀನಿ. ನಿಮ್ಮ ಕೀರ್ತಿಯನ್ನ

ದೇಶದಲ್ಲೆಲ್ಲ ಡಂಗುರ ಸಾರುತೀನಿ," ಎಂದಳಾಕೆ.

ಶರಣಪ್ಪನವರು ಸೋತು ಹೆಂಡತಿಯ ಪಾದ ಹಿಡಿದುಕೊಂಡರು.

"ನಿನ್ನ ಮನಸಿಗೆ ಬಂದ ಹಾಗೆ ಮಾಡು ಮಹಾರಾಯ್ತಿ. ನಾನು ಪಿಟ್ ಅಂತ ಅಂದರೆ ಕೇಳು. ನನ್ನ ಮಾತ್ರ ಕಾಡಿಸಬೇಡ. ನನ್ನ ಪಾಡಿಗೆ ನನ್ನ ಬಿಟ್ಟುಬಿಡು."

ಮಾರನೆಯ ದಿನವೇ ಗೌರವ್ವ ತಾಯಿಯ ಮನೆಗೆ ಹೋಗಿ, ರಾತ್ರಿ ನಡೆದುದೆಲ್ಲವನ್ನೂ ತಿಳಿಸಿ ಮುಂದಿನ ಕ್ರಮದ ಬಗೆಗೆ ಅವಳ ಸಲಹೆ ಕೋರಿದಳು.

"ಅದೊಂದು ಹೆಣ್ಣ್ಯಾ ಅಂತ ಕಾಣುತದ. ಅದರ ಪಾಡಿಗದು ನಾಯಿಯ ಹಾಗೆ ಬಿದ್ದಿರಲಿ. ರುದ್ರನ್ನ ಕಳಿಸಿಕೊಡ್ತೀನಿ ನಿನ್ನ ಹತ್ತರ. ಕರಕೊಂಡು ಹೋಗು," ಎಂದಳು ಶಿವಮ್ಮ.

ಆಗ ಅವನನ್ನು ಕರೆದುಕೊಂಡು ಬರಲು ನಾಚಿಕೆಯೆನಿಸಲಿಲ್ಲ ಗೌರವ್ವ ನಿಗೆ.

ರುದ್ರನೂ ತುಂಬಾ ಸಂತೋಷದಿಂದ ಅವಳ ಮನೆಗೆ ಬಂದ.

ಸಾಯಂಕಾಲ ಅವನನ್ನು ಕಂಡ ಶರಣಪ್ಪನವರು ಏನನ್ನೋ ಮಾತನಾಡ ಲೆಂದು ಬಾಯಿ ತೆರೆದರು, ಮತ್ತೇನನ್ನೋ ಯೋಚಿಸಿ ನಾಲಗೆ ಬಿಗಿಹಿಡಿದು ಸುಮ್ಮನಾದರು.

ನೆರೆಹೊರೆಯ ಜನರು ಪಿಸುಮಾತನಾಡಿಕೊಂಡು ನಕ್ಕರು. ಮಾಸ್ತರರು ಬೀದಿಯಲ್ಲಿ ಹೊರಟರೆ ಹುಡುಗರು ಕೀಟಲೆ ಮಾಡತೊಡಗಿದರು. ಆ ಓಣಿ ಯನ್ನೇ ಬಿಡುವುದೊಳ್ಳೆಯದೆಂದು ನಿರ್ಧರಿಸಿ ಶರಣಪ್ಪನವರು ಬೇರೊಂದು ಕಡೆ ಬಿಡಾರ ಹೂಡಿದರು.

ಆದರೆ, ಅಲ್ಲಿಯೂ ಜನರು ಮಾತನಾಡುವುದು ತಪ್ಪಲಿಲ್ಲ.

ಹೆಂಡತಿಯನ್ನು ತ್ಯಜಿಸಿ ಆ ಊರನ್ನೂ ಬಿಟ್ಟು ಕರಾಚೂರಿಗೇ ಹೋಗಿ ನೆಲಸುವುದೆಂದು ಶರಣಪ್ಪ ಯೋಚಿಸಿದರು. ಸುಚರಿತರಾಯ ಮಾತ್ರ ಆ ಯೋಜನೆಯನ್ನು ಬಲವಾಗಿ ವಿರೋಧಿಸಿದ.

"ಇಷ್ಟಕ್ಕೆಲ್ಲಾ ಊರು ಬಿಟ್ಟು ಹೋಗ್ತಾರೇನ್ರೀ ಮಾಸ್ತರರೆ? ಹೀಗೆ ಹೋಗುವುದೆಂದರೆ ಸೋತು ಓಡಿಹೋದ ಹಾಗಾದೀತು. ಗುರೂಜಿ, ಮಾತಾಜಿ ಯವರು ಇಂಥ ನಡತೆಯನ್ನೆಂದೂ ಮೆಚ್ಚಲಿಕ್ಕಿಲ್ಲ."

" ಹಾಗಾದರೆ ಮತ್ತೇನು ಮಾಡಲಿ ? "

" ಏನೂ ಮಾಡಬೇಡಿರಿ. ಇದುವರೆಗೆ ನಡೆದಂತೇ ನಡೀಲಿ. ನಿಮ್ಮಷ್ಟಕ್ಕೆ ನೀವಿದ್ದುಬಿಟ್ಟರಾಯ್ತುಲ್ಲ ? "

" ಆದರೆ...."

" ಎಷ್ಟು ಜನ ಹೀಗೇ ಇಲ್ಲ ಮಾಸ್ತರರೇ ? ನೀವು ಇನ್ನು ಮೇಲಾದರೂ ಸ್ವಲ್ಪ ಪ್ರ್ಯಾಕ್ಟಿಕಲ್ ಆಗಿ ನಡೆಯಬೇಕು. ಹೀಗೆ ಸಣ್ಣ ಸಣ್ಣ ವಿಷಯಗಳಿಗೆಲ್ಲಾ ತಲೆ ಕೆಡಿಸಿಕೊಳ್ಳುತಾ ಹೋದರೆ ಹ್ಯಾಗೆ ? "

ಅಂದಿನಿಂದ ಶರಣಪ್ಪನವರೂ ಸುಚರಿತರಾಯನ ಹಾಗೆಯೇ " ಪ್ರ್ಯಾಕ್ಟಿಕಲ್ " ಆದರು ! ಗೌರವ್ವ ತಮ್ಮ ಹೆಂಡತಿಯೇ ಅಲ್ಲವೆಂದು ಭಾವಿಸಿಕೊಂಡು ನಿಶ್ಚಿಂತರಾದರು.

ಗೌರವ್ವನೂ ಆಮೇಲೆ ಅವರನ್ನು ಪೀಡಿಸಲಿಲ್ಲ.

ಶರಣಪ್ಪನವರು ದಿನದಿಂದ ದಿನಕ್ಕೆ ಅಧ್ಯಾತ್ಮ ಶಕ್ತಿಯನ್ನು ಬೆಳಸಿಕೊಳ್ಳತೊಡಗಿದರು. ಗುರೂಜಿ, ಮಾತಾಜಿಯವರೇ ಅವರ ಇಷ್ಟದೇವತೆಗಳಾದರು. ಅವರ ಮಾತುಗಳೇ ವೇದವಾಕ್ಯಗಳಾದುವು. ಅವರ ಧ್ಯಾನ, ಅವರ ಪ್ರಾರ್ಥನೆ, ಅವರ ಪೂಜೆಗಳಲ್ಲಿ ಅವರು ತಮ್ಮ ವ್ಯಕ್ತಿತ್ವವನ್ನು ಮುಳುಗಿಸಿದರು.

ಸಾಲೆಯಲ್ಲಿನ ತಮ್ಮ ಕರ್ತವ್ಯಗಳನ್ನು ಮಾತ್ರ ಅವರು ಪೂರ್ತಿಯಾಗಿ ಕಡೆಗಣಿಸಲಿಲ್ಲ. ಸಂಬಳದಲ್ಲಿ ಅರ್ಧದಷ್ಟು ಹಣವನ್ನು ' ಮಂಡಲ 'ಕ್ಕೊಪ್ಪಿಸಿ ಇನ್ನುಳಿದುದನ್ನು ಹೆಂಡತಿಯ ಕೈಗೆ ಕೊಡುತ್ತಿದ್ದರು. ಅರ್ಧ ಹಣವೇನಾಯಿತೆಂದು ಅವಳೂ ಕೇಳುತ್ತಿರಲಿಲ್ಲ. ಗೌರವ್ವನಿಗೆ ಹಣಕ್ಕೇನು ಕೊರತೆ ?

೮

ಓರೆಕೋರೆನಗರದಲ್ಲಿ ಸುಚರಿತರಾಯನ ಹೆಸರನ್ನರಿಯದ ಜನರೇ ಇರಲಿಲ್ಲವೆಂದರೂ ಸಲ್ಲುವುದು. ಸಾಹಿತ್ಯಕ, ರಾಜಕೀಯ, ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲೆಲ್ಲ ಆತನಿರಲೇ ಬೇಕು. ಹಲವಾರು ಸಂಘ, ಸಮಿತಿ, ಮಂಡಲ, ಕೂಟಗಳಿಗೆ ಆತನೇ ಕಾರ್ಯದರ್ಶಿ. "ಸುಚರಿತರಾಯನಿರದಿದ್ದರೆ ಯಾವ ಕೆಲಸವೂ ಆಗುವುದಿಲ್ಲಪ್ಪ!" ಎಂದು ಜನರು ಆಡುವುದು ವಾಡಿಕೆಯಾಗಿತ್ತು. ತಾಲ್ಲೂಕು ಕಾಂಗ್ರೆಸ್ ಸಮಿತಿಯಲ್ಲಿ ಅವನದೇ ಓಡಾಟ. ನಗರಸಭೆ, ಜಿಲ್ಲಾಬೋರ್ಡು, ಸ್ಕೂಲ್ ಬೋರ್ಡ್ ಚುನಾವಣೆಗಳಲ್ಲಿ ಅವನದೇ ಕೈವಾಡ. ಕರ್ನಾಟಕ ಏಕೀಕರಣದ ಚಳುವಳಿಯಲ್ಲೂ ಅವನದೇ ಅಗ್ರಭಾಗ. ಅವನಿಗೊಂದು ಖಾಸಗಿ ಜೀವನವೆ ಇಲ್ಲವೇನೊ ಎನ್ನುವಂತೆ ಆತ ಸಾರ್ವಜನಿಕ ಜೀವನದಲ್ಲಿ ಸಮರಸನಾಗಿದ್ದ.

ಸುಚರಿತರಾಯನದು ಪ್ರಚಂಡವಾದ ವ್ಯವಹಾರ ಜ್ಞಾನ. ಓರೆಕೋರೆನಗರದ ವಿವಿಧ ಕ್ಷೇತ್ರಗಳಲ್ಲಿನ ಮುಂದಾಳುಗಳ ಓರೆಕೋರೆಗಳನ್ನೆಲ್ಲ ಚೆನ್ನಾಗಿ ಅರಿತುಕೊಂಡಿದ್ದ ಸುಚರಿತರಾಯ, ಯಾವುದೊಂದು ಗುಂಪಿನಲ್ಲೂ ವಿಶೇಷವಾಗಿ ಸೇರಿಕೊಳ್ಳದೆ ಎಲ್ಲ ಗುಂಪುಗಳಲ್ಲೂ ಓಡಿಯಾಡುತ್ತಿದ್ದು ಎಲ್ಲರಿಗೂ ಸ್ನೇಹಿತನೆನಿಸಿಕೊಂಡಿದ್ದ. "ಲಿಂಗಾಯತರು, ಮುಸಲ್ಮಾನರು, ವೈಷ್ಣವರು, ಸ್ಮಾರ್ತರು, ಮರಾಠರು, ಕ್ರೈಸ್ತರು ಎಲ್ಲರೂ ನನ್ನ ಗೆಳೆಯರು. ನನ್ನಂಥಾ ಪಾಪ್ಯುಲರ್ ಮನುಷ್ಯ ಇನ್ನೊಬ್ಬನಿರಲಿಕ್ಕಿಲ್ಲ ಈ ಊರಿನಲ್ಲಿ!" ಎಂದು ಆತ ಆಗಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದುದಿತ್ತು. ತನ್ನ ಜನಪ್ರಿಯತೆಯ ನೈಜಸ್ವರೂಪವೆಂಥದೆಂಬುದನ್ನು ಸರಿಯಾಗಿ ತೂಗಿ ನೋಡುವ ತಾಳ್ಮೆ ಮಾತ್ರ ಅವನಿಗಿರಲಿಲ್ಲ.

ನಗರದ ವಿವಿಧ ಜಾತಿಗಳ, ಗುಂಪುಗಳ ಜನರೆಲ್ಲರೂ ಅವನು ತಮ್ಮ ಮನೆಗಳಿಗೆ ಬಂದಾಗ ಕರೆದು, ಕೂಡ್ರಿಸಿ, ಚಹ ಕೊಟ್ಟು, ಮಾತನಾಡುತ್ತಿದ್ದರಾದರೂ ಅವನನ್ನು ಯಾರೂ ಪೂರ್ತಿಯಾಗಿ ನಂಬುತ್ತಿರಲಿಲ್ಲ, ಅವನೆದುರಿಗೆ

ಅಂತರಂಗವನ್ನೂ ತೆರೆದು ತೋರಿಸುತ್ತಿರಲಿಲ್ಲ. ನಗರದ ಇತರ ಗುಂಪು ಮತ್ತು ವ್ಯಕ್ತಿಗಳ ಗುಟ್ಟುಗಳನ್ನು ಮಾತ್ರ ಅವನಿಂದ ಸಂಗ್ರಹಿಸಲು ಯತ್ನಿಸುತ್ತಿದ್ದರು. ತನಗೆ ಯಾವ ಗುಟ್ಟೂ ತಿಳಿದಿರದಿದ್ದರೂ ಸುಚರಿತರಾಯ, ತನ್ನ ಪ್ರಖರವಾದ ಕಲ್ಪನಾಶಕ್ತಿಯ ಬಲದಿಂದ ಸುಳ್ಳು ಸಂಗತಿಗಳನ್ನು ಹುಟ್ಟಿಸಿ ಅತ್ಯಂತ ಉತ್ಸಾಹ ದಿಂದ ಅವುಗಳನ್ನು ಪ್ರಸಾರಮಾಡುತ್ತಿದ್ದ. ವೀರಶೈವರ ಹತ್ತಿರ ಹೋಗಿದ್ದಾಗ ಬ್ರಾಹ್ಮಣರನ್ನು ಬಯ್ಯುವುದು, ಬ್ರಾಹ್ಮಣರ ಹತ್ತಿರ ಹೋಗಿದ್ದಾಗ ವೀರಶೈವ ರನ್ನು ಬಯ್ಯುವುದು ; ಮರಾಠರ ಜೊತೆಗೆ ಮಾತನಾಡುತ್ತಿದ್ದಾಗ ವೀರಶೈವ, ಬ್ರಾಹ್ಮಣರಿಬ್ಬರನ್ನೂ ಬಯ್ಯುವುದು ; ಮಹಮ್ಮದೀಯರ ಮನೆಗಳಿಗೆ ಹೋಗಿ ದ್ದಾಗ ಹಿಂದೂಗಳನ್ನೆಲ್ಲ ಟೀಕಿಸುವುದು ; ವೈಷ್ಣವರ ಮುಂದೆ ಸ್ಮಾರ್ತರನ್ನೂ, ಸ್ಮಾರ್ತರ ಮುಂದೆ ವೈಷ್ಣವರನ್ನೂ ಹೀಯಾಳಿಸುವುದು ; ಒಂದು ಜಾತಿಯನ್ನು ಇನ್ನೊಂದು ಜಾತಿಗೆ ಎತ್ತಿಕಟ್ಟಲು ಯತ್ನಿಸುವುದು, ಇಂಥ ರಾಜಕಾರಣದಲ್ಲಿ ಸುಚರಿತರಾಯನ ಕೈಹಿಡಿಯುವವರಿನ್ನಾರೂ ಇರಲಿಲ್ಲ ಆ ನಗರದಲ್ಲಿ.

" ಸುಚರಿತರಾಯ ಬ್ರಾಹ್ಮಣರನ್ನು ಭಯಂಕರವಾಗಿ ಬಯ್ಯುತಾನಲ್ಲ? ಅವನ ಜಾತಿ ಯಾವದು ? ಅವನು ಬ್ರಾಹ್ಮಣನಲ್ಲೇನು ? " ಎಂದು ಡಾಕ್ಟರ್ ನಾಗೇಂದ್ರಪ್ಪ, ಸ್ಟ್ಯಾಂಡಿಂಗ್ ಕಮಿಟಿ ಚೇರ್ಮನ್ ಗೌಸ್‌ಮಹಮ್ಮದ ಸಾಹೇಬ ರನ್ನೊಮ್ಮೆ ಕೇಳಿದಾಗ ಅವರು ಗಡ್ಡ ನೀವಿಕೊಳ್ಳುತ್ತ ಹೇಳಿದ್ದರು :

" ಸುಚರಿತರಾಯನ ಜಾತಿ ನಿಮಗೆ ಗೊತ್ತಿಲ್ಲಾ ? ಅರೆ! ವುಸ್ಕೊ ಎಲ್ಲೀ ಜಾತಿ ? "

" ಅಂದರೆ ? "

" ಅರೆ ! ಇತನಾ ನಹಿ ಜಾನತೆ? ಇವರ ತಾಯಿ ಸೂಳೆಯಾಗಿದ್ದಳಪಾ, ಸೂಳೆಯಾಗಿದ್ದಳು. ದೇಶಭಕ್ತ ಗುಂಡೂರಾವ್ ಇದ್ದರಲ್ಲ, ಮೊನ್ನೆ ಮೊನ್ನೆ ತೀರಿಕೊಂಡರು, ಅವರು ಇಟ್ಟುಕೊಂಡಿದ್ದರು ಅವಳನ್ನ."

" ಐ ಸೀ! ಈಗ ಗೊತ್ತಾಯ್ತು. ಬ್ರಾಹ್ಮಣರ ಮೇಲೆ ಇವನಿಗ್ಯಾಕೆ ಇಷ್ಟು ಕೋಪ ಅನ್ನೂದು! "

" ಅರೆ! ತುಮ್ ಕ್ಯಾ ಸಮಝುತೆ ಹೈ ? ಬ್ರಾಹ್ಮಣರ ಮೇಲೆ ಅವನಿಗೆ ಸಿಟ್ಟು ಅಂತ ಯಾರು ಹೇಳಿದರು ? ವೋ ಬಹುತ್ ಜಾಬಾದ್ ಅಸಾಮಿ ಹೈ. ಅವನಿಗೆ ಯಾರ ಮೇಲೂ ಸಿಟ್ಟೂ ಇಲ್ಲ, ಪ್ರೀತಿಯೂ ಇಲ್ಲ. ಪೈಸಾ ಒಂದು

ಬಿಟ್ಟರೆ ಅವನಿಗೆ ಯಾತರ ಮೇಲೂ ನಂಬಿಕೆ ಇಲ್ಲ. ಸಮಝಿ ?"

ಗೌಸ್ ಮುಹಮ್ಮದ ಸಾಹೇಬರು ಸತ್ಯವನ್ನೇ ನುಡಿದಿದ್ದರು. ಸುಚರಿತ ರಾಯನಿಗೆ ಹಣವೇ ದೇವರು, ಹಣವೇ ಧರ್ಮ. ಹಣವನ್ನು ಗಳಿಸಲೆಂದು ಆತ ಎಂಥ ಸೋಗು ಹಾಕುವುದಕ್ಕೂ ಹಿಂಜರಿಯುತ್ತಿರಲಿಲ್ಲ. ಎಲ್ಲ ಜಾತಿಗಳ ವರ ಹತ್ತಿರವೂ ಓಡಿಯಾಡುತ್ತಿದ್ದು ಎಲ್ಲರಿಂದಲೂ ಸಿಕ್ಕಿದಷ್ಟು ಹಣ ಎಬ್ಬಿಸು ವುದೇ ಅವನ ಮುಖ್ಯ ಕಾಯಕವಾಗಿತ್ತು. ಅವನು ಸಾರ್ವಜನಿಕ ಚಟುವಟಿಕೆ ಗಳಲ್ಲಿ ಭಾಗವಹಿಸಿ ದುಡಿಯುವುದಕ್ಕೂ ಹಣದಾಸೆಯೆ ಮುಖ್ಯ ಕಾರಣ ವಾಗಿತ್ತು.

ಸುಚರಿತರಾಯ ಶಾಲೆಯಲ್ಲಿ ಓದಿದ್ದುದೆಷ್ಟು ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ಹೈಸ್ಕೂಲಿಗೆ ಆತ ಅಡಿಯಿರಿಸಿದ್ದನೊ ಇಲ್ಲವೊ. ಆದರೂ ವ್ಯವಹಾರಕ್ಕೆ ಉಪಯೋಗವಾಗುವಷ್ಟು ಇಂಗ್ಲೀಷ್ ಮಾತನಾಡಲು ಕಲಿತು ಕೊಂಡಿದ್ದ. ಕನ್ನಡವಂತೂ ಸರಿಯೆ, ಮರಾಠಿ, ಹಿಂದೀ ಭಾಷೆಗಳಲ್ಲೂ ಹರಕು ಮುರುಕಾಗಿ ಮಾತನಾಡುತ್ತಿದ್ದ. ಈ ನಾಲ್ಕು ಭಾಷೆಗಳಲ್ಲಿನ ಸಾಹಿತ್ಯದ ವಿಷಯವನ್ನೂ ಅಲ್ಪ ಸ್ವಲ್ಪ ತಿಳಿದುಕೊಂಡಿದ್ದು ಪ್ರಸಂಗ ಬಂದಾಗ ಆ ಬಗೆಗೆ ಭಾಷಣಗಳನ್ನೂ ಜಡಿಯುತ್ತಿದ್ದ. ಚಿತ್ರಕಲೆ, ಸಂಗೀತ, ನಾಟ್ಯ, ನೃತ್ಯಗಳ ವಿಚಾರವೂ ಅವನಿಗೆ ಸ್ವಲ್ಪ ಮಟ್ಟಿಗೆ ತಿಳಿದಿತ್ತು. ಪ್ರಸಿದ್ಧರಾದ ಕಲಾವಿದರ ಹೆಸರುಗಳನ್ನು ಕಂಠಪಾಠ ಮಾಡಿಟ್ಟುಕೊಂಡು ಪ್ರಸಂಗ ಬಂದಾಗ ಅವುಗಳನ್ನು ಉರು ಹೊಡೆದು, ಅರಿಯದ ಜನರನ್ನು ವಿಸ್ಮಯಗೊಳಿಸುವ ಕಲೆಯಲ್ಲೂ ಆತ ನಿಷ್ಣಾತನಾಗಿದ್ದ. ವೇದಾಂತ, ಅಧ್ಯಾತ್ಮ, ಯೋಗ ಮೊದಲಾದ ಗಹನ ವಿಷಯಗಳ ಬಗೆಗೂ ಮಾತನಾಡಲು ಆತ ಹಿಂಜರಿಯುತ್ತಿರಲಿಲ್ಲ. "ಕರಾ ಚೂರಿನ ಗುರೂಜಿ, ಮಾತಾಜಿಯವರ ಪೂರ್ಣಯೋಗದಲ್ಲಂತೂ ನಾನೇ ಅಥಾರಿಟಿ ಈ ನಗರದಲ್ಲಿ!" ಎಂದು ಆತ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದುದೂ ಇತ್ತು.

ಅವನಿಗೆ ಉಚ್ಚಶಿಕ್ಷಣ ಕೊಡಿಸಿ, ಪದವೀಧರನನ್ನಾಗಿ ಮಾಡಿ ಒಂದು ಒಳ್ಳೆಯ ನೌಕರಿ ಕೊಡಿಸಬೇಕೆಂದು ಗುಂಡೂರಾಯರು ಆಶಿಸುತ್ತಿದ್ದರಾದರೂ ಸುಚರಿತರಾಯ ಕಾಂಗ್ರೆಸ್ ಚಳುವಳಿಯ ನೆಪ ಮುಂದೆ ಮಾಡಿ ಶಿಕ್ಷಣಕ್ಕೆ ಶರಣುಹೊಡೆದು ಗುಂಡೂರಾಯರಂತೆ ತಾನೂ ಖಾದಿ ಧರಿಸಿ ದೇಶಭಕ್ತನಾಗಿ

ದೊಡ್ಡಮುಖಂಡನಾಗಬೇಕೆಂದು ಯೋಚಿಸಿ, ಸೆರೆಮನೆಯಾತ್ರೆಯನ್ನು ಮುಗಿಸಿ ಬಂದ. ಗುಂಡೂರಾಯರು ದೊಡ್ಡ ಜಮೀನ್ದಾರರು, ದೊಡ್ಡ ಧನಿಕರು. ಎಂತಲೇ ದೊಡ್ಡ ಮುಖಂಡರು. ಅವರ ಸೂಳೆಯ ಮಗನಾದ ಈ ಸುಚರಿತ ರಾಯನನ್ನು ಯಾರು ಕೇಳಬೇಕು? ನಾಲ್ಕಾರು ತಿಂಗಳುಗಳ ಕಾಲ ಇವನೂ ಮುಖಂಡನಂತೆ ನಟಿಸುತ್ತಾ ನಗರದಲ್ಲೆಲ್ಲ ಮೆರೆದ. ತಮಾಷೆಯೊಂದನ್ನು ಕಂಡು ನಗುವಂತೆ ಜನ ಇವನನ್ನು ಕಂಡು ನಕ್ಕರು. ಸುಚರಿತರಾಯ ಆಗ ಇನ್ನೂ ಹುಡುಗ. ಪ್ರಪಂಚದ ಅನುಭವವಿರಲಿಲ್ಲ. ಜನ ತನ್ನನ್ನು ಕಡೆಗಣಿಸಿ ದುದರಿಂದ ಬಹುವಾಗಿ ನೊಂದುಕೊಂಡು ತಾಯಿಯ ಬಳಿ ಹೋಗಿ ಅತ್ತು ಕೊಂಡ. ಅವನ ಕಂಬನಿಯನ್ನೊರಸಿ ಆಕೆ ಹೇಳಿದಳು :

"ನಿನಗಾದರೂ ಪುಢಾರಿಯಾಗುವ ಹುಚ್ಚು ಯಾಕಪ್ಪಾ ತಮ್ಮ? ನಮ್ಮಂಥವರಿಗೆಲ್ಲಾ ಯಾತಕ್ಕೆ ಬೇಕು ಅಂಥಾದ್ದು? ಅವರು ಹೇಳುವ ಹಾಗೆ ಬಿ. ಎ. ಮಾಡಿ ಎಲ್ಲಾದರೂ ನೌಕರಿ ಹಿಡಿದು ಸುಖವಾಗಿರಬಾರದೇ?"

"ನೌಕರಿ? ಇನ್ನು ಮೇಲೆ ನೌಕರಿಯ ಮಾತೇ ಇಲ್ಲ ಅವ್ವಾ. ನನ್ನಂಥಾವ ನೌಕರಿ ಮಾಡೂದಂದರೇನು? ನಾನು ಇಂದಲ್ಲ ನಾಳೆ ಮುಖಂಡ ನಾಗ್ತೀನಿ. ಇವತ್ತು ನನ್ನ ನೋಡಿ ನಗುವವರೇ ನಾಳೆ ನನಗೆ ಸಲಾಂ ಹೊಡೆ ಯುವ ಹಾಗೆ ಮಾಡುತೀನಿ."

"ಹುಚ್ಚ ನನ್ನ ಮಗನೆ! ಇವತ್ತಿನ ಮಂದಿ ಎಂಥಾದ್ದು ಅನ್ನೂದು ನಿನಗಿನ್ನೂ ಗೊತ್ತಿಲ್ಲ. ಇವರು ಮರ್ಯಾದೆ ಕೊಡೂದು ದುಡ್ಡಿದ್ದವರಿಗೆ ಮಾತ್ರ. ನಿನ್ನ ಹತ್ತಿರ ಏನದ? ನಾನಾದರೂ ಏನು ಗಳಿಸಿದ್ದೀನಿ?"

"ಇರಲಿರಲಿ. ನಾನೂ ದುಡ್ಡು ಗಳಿಸ್ತೀನಿ. ನೀನೇನೂ ಚಿಂತೆ ಮಾಡ ಬೇಡ," ಎಂದು ತಾಯಿಯನ್ನು ಸಂತೈಸಿದ ಸುಚರಿತರಾಯ.

ಅಂದಿನಿಂದ ಆತ ದುಡ್ಡು ಗಳಿಸುವ ಉಪಾಯಗಳನ್ನು ಹುಡುಕಿ ಒಂದೊಂ ದನ್ನೇ ಪ್ರಯೋಗಿಸುತ್ತ ಬಂದ. ಆ ಮಾತಿಗೆ ಇಪ್ಪತ್ತು ವರ್ಷ ಕಳೆದು ಹೋಗಿ ದ್ದುವು. ಈ ಅವಧಿಯಲ್ಲಿ ಸುಚರಿತರಾಯ ಹತ್ತಿಪ್ಪತ್ತು ಸಾವಿರದಷ್ಟು ಹಣ ಗಳಿಸಿ ದ್ದುದಲ್ಲದೆ ಬಾಡಿಗೆಗಿದ್ದ ಮನೆಯನ್ನು ಕೊಂಡುಕೊಂಡಿದ್ದ. ಅಷ್ಟರಿಂದ ಅವನಿಗೆ ತೃಪ್ತಿಯಿರಲಿಲ್ಲ. ಹತ್ತಿಪ್ಪತ್ತು ಕೂರಿಗೆ ಜಮೀನು ಖರೀದಿ ಮಾಡಿ, ನಗರದಲ್ಲಿ ನಾಲ್ಕಾರು ಮನೆಗಳನ್ನು ಕಟ್ಟಿಸಿ ಅವುಗಳನ್ನು ಬಾಡಿಗೆಗೆ ಕೊಟ್ಟು "ಲ್ಯಾಂಡ್

ಲಾರ್ಡ್ " ಆಗಬೇಕು, ಆಗ ಎಲ್ಲರೂ ತನ್ನನ್ನು ಗೌರವಿಸುವರು, ತಾನೂ ಚುನಾವಣೆಗೆ ನಿಂತುಕೊಳ್ಳಬಹುದು; ನಗರಸಭೆ ಬೋರ್ಡು, ಕೊನೆಗೆ ಶಾಸನ ಸಭೆಯವರೆಗೂ ಹಾರಬಹುದು, ಎಂದೆಲ್ಲ ಆತ ಎಣಿಕೆ ಹಾಕಿಕೊಂಡಿದ್ದ. ಅದುವರೆಗೂ ಗಳಿಸುವುದು, ಹೇಗಾದರೂ ಮಾಡಿ ಹಣ ಗಳಿಸುವುದು........ಆ ಒಂದು ಉದ್ದೇಶವನ್ನು ಸಾಧಿಸುವುದಕ್ಕಾಗಿಯೇ ಎಲ್ಲ ಸಂಘಗಳು........ಎಲ್ಲ ಕೂಟಗಳು........ಎಲ್ಲ ಮಂಡಲಗಳು........ಯೋಗಮಂಡಲ........

ಯೋಗಮಂಡಲ!

ಅದರಿಂದಲೂ ಸಾಕಷ್ಟು ಸಂಪಾದನೆಯಿತ್ತು, ಸುಚರಿತರಾಯ ಸುಲಲಿತ ದೇವಿ ಇಬ್ಬರಿಗೂ.

ಓರೆಕೋರೆನಗರದ ಸುಚರಿತರಾಯ, ಕಾರವಾರದಲ್ಲಿ ಹುಟ್ಟಿ ಪುಣೆಯಲ್ಲಿ ಬೆಳೆದ ಸುಲಲಿತದೇವಿಯನ್ನು ಮದುವೆಯಾದುದೂ ಒಂದು ಸೋಜಿಗದ ವಿಷಯವೆ. ಅವನು ಮೂವತ್ತು ವರ್ಷದವನಾದಾಗ ತನಗೂ ಒಂದು ಹೆಣ್ಣಿನ ಜೊತೆ ಅಗತ್ಯವೆನಿಸಿತು. ತಾಯಿ ಎಂದೋ ತೀರಿಕೊಂಡಿದ್ದಳು. ಹೋಟೆಲಿನ ಅನ್ನ ತಿಂದು ತಿಂದು ಅವನ ತಲೆ ಕೆಟ್ಟುಹೋಗಿತ್ತು. ತನಗೊಂದು ಹೆಣ್ಣು ಕೊಡಿಸಿ ಉಪಕಾರ ಮಾಡಬೇಕೆಂದು ಪರಿಚಿತರನ್ನೆಲ್ಲ ಬೇಡಿಕೊಂಡ. ಆದರೆ ಇವನಿಗೆ ಹೆಣ್ಣು ಕೊಡುವವರಾದರೂ ಯಾರು? ವೇಶ್ಯೆಯರ ಮಕ್ಕಳಾದರೂ ಸರಿಯೆ ಎಂದು ಅವರನ್ನು ಕೇಳಿದರಾಯಿತು. ವ್ಯವಸಾಯವನ್ನು ಬಿಟ್ಟು ಇವನನ್ನು ಕಟ್ಟಿಕೊಂಡು ಸಂಸಾರಿಗಳಾಗಿ ಕಷ್ಟಪಡಲು ಯಾರೂ ಸಿದ್ಧರಾಗಲಿಲ್ಲ.

ಇವನ ಗೋಳನ್ನು ನೋಡಲಾರದೆ ಧುರಂಧರರಾಯರು ತಮ್ಮ ಪರಿಚಯದ ಅನೇಕ ನಾರೀಮಣಿಯರಲ್ಲೊಬ್ಬಳಾಗಿದ್ದ ಸುಲಲಿತದೇವಿಯನ್ನು ಇವನಿಗೆ ಗಂಟು ಹಾಕಿದರು. ಅವಳ ಸ್ಥೂಲದೇಹವನ್ನು ಕಂಡು ಸುಚರಿತರಾಯನಿಗೆ ಅಸಹ್ಯವೆನಿಸಿತಾದರೂ, ಆಕೆಗಿಂತ ಸುಂದರಿಯರಾದವರನ್ನು ಪಡೆಯುವ ಭಾಗ್ಯ ತನ್ನದಲ್ಲವೆಂದು ಬಗೆದು ಅವಳನ್ನೇ ಕಟ್ಟಿಕೊಳ್ಳಬೇಕಾಯಿತು.

" ಸುಲಲಿತದೇವಿ ಬಹಳ ಜಾಣೆ. ಮ್ಯಾಟ್ರಿಕ್‌ವರೆಗೆ ಕಲಿತಾಳೆ. ಕನ್ನಡ ಇಂಗ್ಲೀಷು, ಹಿಂದೀ, ಮರಾಠಿ ಮಾತಾಡ್ತಾಳೆ. ಓದ್ತಾಳೆ, ಭಾಷಣ ಮಾಡ್ತಾಳೆ. ಅವಳಿಗೆ ಸಂಗೀತ ಬರ್‍ತದ, ಟೈಪಿಂಗ್ ಶಾರ್ಟ್‌ಹ್ಯಾಂಡ್ ಬರ್‍ತದ, ಪುಣೆಯಲ್ಲಿ ಒಂದು ನೌಕರಿಯನ್ನೂ ಮಾಡ್ತಿದಾಳೆ. ನೂರೈವತ್ತು ರೂಪಾಯಿ ಸಂಬಳ

ಬರ್ತದ. ಬೇಕಾದರೆ ನೀವೂ ಹೋಗಿ ಅಲ್ಲೇ ಇರಬಹುದು. ಅವಳು ಸಂಪಾದಿಸಿ ತರ್ತ್ತಾಳೆ. ನೀವು ಸುಖವಾಗಿ ಕಾಲಕಳೆಯುಬಹುದು," ಎಂದೆಲ್ಲ ಹೇಳಿದ್ದರು ಧುರಂಧರರಾಯರು.

" ಛೆ. ಛೆ. ಹೆಂಡತಿಯ ಗಳಿಕೆಯ ಮೇಲೆ ಜೀವಿಸುವಂಥಾವ ನಾನಲ್ಲ ಅನ್ನೂದು ನಿಮಗೆ ಗೊತ್ತಿಲ್ಲವೇನು ರಾಯರೇ? ಪುಣೆಗೆ ಹೋಗುವ ಕರಾರು ಹಾಕಿದರೆ ನನಗೇನು ಈ ಮದುವೆ ಬೇಡ. ಬೇಕಾದರೆ ಇಲ್ಲೇ ಎಲ್ಲಾದರೂ ಒಂದು ನೌಕರಿ ಕೊಡಿಸೋಣ. ಅದಕ್ಕೆ ನನ್ನದೇನೂ ಅಡ್ಡಿಯಿಲ್ಲ."

" ಹಾಗೆ ಮಾಡಿದರಾಯ್ತು ಬಿಡಿರಿ. ಸಂಗೀತ ಪರೀಕ್ಷೆ ಪಾಸಾಗಿ ಡಿಪ್ಲೊಮಾ ತೆಗೆದುಕೊಂಡಿದಾಳೆ ಸುಲಲಿತದೇವಿ. ಯಾವುದೊಂದು ಹೈಸ್ಕೂಲಿನಲ್ಲಿ ಸಂಗೀತ ಶಿಕ್ಷಕಿಯ ಕೆಲಸ ಕೊಡಿಸಬಹುದು."

" ಸ್ಕೂಲ್‌ಬೋರ್ಡ್ ಚೇರ್ಮನರಿಗೆ ಹೇಳಿದರೆ ನಾಳೇ ಸಿಕ್ಕೀತು ಬಿಡಿರಿ ಕೆಲಸ. ಅದಿರಲಿ ರಾಯರೆ, ಅವಳ ವಿಷಯ ಹೆಚ್ಚು ಹೇಳಲೇ ಇಲ್ಲವಲ್ಲ ನೀವು? ಅವಳದು ಯಾವ ಜಾತಿ? ತಂದೆತಾಯಿ ಅಣ್ಣತಮ್ಮಂದಿರಿದಾರೋ ಹ್ಯಾಗೆ?"

" ಜಾತಿ? ಜಾತಿಯನ್ನ ತಗೊಂಡೇನು ಮಾಡ್ತೀರಿ ನೀವು? ಅಂತೂ ಅವಳು ಹೆಣ್ಣು ಜಾತಿಗೆ ಸೇರಿದಾಕೆ ಎಂದು ಮಾತ್ರ ಭರವಸೆ ಕೊಡಬಹುದು. ಅವಳ ತಂದೆ ಸೆಂಟ್ರಲ್ ಎಕ್ಸೈಜ್‌ನಲ್ಲಿ ಆಫೀಸರಾಗಿದ್ದವರು ನಾಲ್ಕೈದು ವರ್ಷಗಳ ಹಿಂದೆ ತೀರಿಕೊಂಡರು. ನಾನೂ ಅವರೂ ಹಳೆಯ ಗೆಳೆಯರು. ಪುಣೆಗೆ ಹೋದಾಗಲೆಲ್ಲಾ ನಾನು ಅವರಲ್ಲೇ ಇಳಿದುಕೊಳ್ಳುತ್ತಿದ್ದೆ. ಈಗಲೂ...."

" ಸರಿ. ಸರಿ. ಗೊತ್ತಾಯ್ತು. ತಾಯಿಯಿದಾಳೋ ಇಲ್ಲೋ?"

" ಅವರೂ ತೀರಿಕೊಂಡರು ಪಾಪ, ಹತ್ತು ವರ್ಷಗಳ ಮೊದಲೇ. ಒಬ್ಬ ಅಣ್ಣನಿದಾನೆ-ಕಲ್ಕತ್ತಾದಲ್ಲಿ, ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲೇ."

" ಅಂದರೆ....ಸುಲಲಿತದೇವಿ ಒಬ್ಬಳೇ ಇರ್ತ್ತಾಳೆ ಅನ್ನಿರಿ ಪುಣೆಯಲ್ಲಿ...."

" ಹೌದು. ಅವಳಿಗೇನು ಭಯ? ಹೇಳಿ ಕೇಳಿ ಮಾಡರ್ನ್ ಗರ್ಲ್. ತನ್ನ ಅನ್ನ ತಾನು ದುಡೀತಾಳೆ, ತನ್ನಷ್ಟಕ್ಕೆ ತಾನಿರುತಾಳೆ. ಇದು ಸ್ತ್ರೀ ಸ್ವಾತಂತ್ರ್ಯದ ಕಾಲ ಅಲ್ವೇನ್ರೀ ಸುಚರಿತರಾಯರೆ?"

ಸುಚರಿತರಾಯ ಮುಂದೆ ಮಾತನಾಡಲಿಲ್ಲ. ಈ ವಧುವಿನ ನೀತಿ ನಡವಳಿಕೆ ಹೇಗಿರಬಹುದೋ ಏನೋ. ಧುರಂಧರರಾಯರಿಗೂ ಅವಳಿಗೂ ಏನು

ಸಂಬಂಧವೊ. ರಾಯರು ಸಡಿಲುಗಚ್ಚೆಯವರೆಂಬುದಂತೂ ಎಲ್ಲರಿಗೂ ತಿಳಿದ ವಿಷಯವೇ. ಈಗಲೂ ಅವರು ಪುಣೆಗೆ ಹೋದಾಗಲೆಲ್ಲ ಅವಳಲ್ಲಿಯೆ ಬಿಡಾರ ಹೂಡುವರಂತೆ. ಒಬ್ಬೊಂಟಿಯಾಗಿರುವ ಯುವತಿಯೊಡನೆ ರಾಯರಂಥವರು ಉಳಿದುಕೊಳ್ಳುವುದು ಇನ್ನೇತಕ್ಕಾಗಿ? ಛೆ. ಛೆ. ಇವಳ ಚಾರಿತ್ರ್ಯ ಸರಿಯಾದುದಲ್ಲವೆಂದೇ ತೋರುತ್ತದೆ. ಇಂಥವಳನ್ನು ತಾನು ವಿವಾಹವಾಗುವುದು ಉಚಿತವೇ ಅಲ್ಲವೇ? ನಾನು ಬಯಸಿದ ಸಂಸಾರ ಸುಖ ಇವಳ ಜೊತೆಯಲ್ಲಿ ಸಿಕ್ಕಬಹುದೇ?

" ನೋಡಿರಿ. ನಾನೇನು ಒತ್ತಾಯ ಮಾಡುವುದಿಲ್ಲ. ಬೇಡವಾದರೆ ಬಿಟ್ಟು ಬಿಡಿರಿ. ಏನೋ, ನೀವು ನಮ್ಮವರೆಂಬ ವಿಶ್ವಾಸದಿಂದ, ನಿಮ್ಮ ಗೋಳು ನೋಡಲಾರದೆ ಈ ಸಂಬಂಧ ಕುದುರಿಸಿದ್ದೀನಿ. ನೀವು ಬೇಡ ಅಂದರೆ ಬೇರೆ ಯಾರನ್ನಾದರೂ ಹುಡುಕಲು ಬಂದೀತು," ಎಂದು ಧುರಂಧರರಾಯರು ಉದ್ದೇಶಪೂರ್ವಕವಾಗಿ ಮಾತನಾಡಿದಾಗ ಸುಚರಿತರಾಯ ದಿಗಿಲುಗೊಂಡು, ಕೈಗೆ ಬಂದ ಒಡವೆ ತನ್ನ ಅವಿವೇಕದಿಂದಾಗಿ ಕಳೆದುಹೋದೀತೆಂದು ಬಗೆದು ವಿವಾಹಕ್ಕೆ ಒಪ್ಪಿಗೆಯನ್ನಿತ್ತ. ರಿಜಿಸ್ಟರ್ ಪದ್ಧತಿಯ ಪ್ರಕಾರ ಮದುವೆಯೂ ನಡೆದು ಹೋಯಿತು. ಸುಚರಿತರಾಯ ಅವರಿವರನ್ನು ಕಾಡಿ ಬೇಡಿ ನಗರ ಸಭೆಯ ಹೈಸ್ಕೂಲಿನಲ್ಲಿ ಅವಳಿಗೆ ನೌಕರಿಯನ್ನು ಕೊಡಿಸಿದ. ಸುಲಲಿತದೇವಿ ಪುಣೆಗೆ ಕಡೆಯ ನಮಸ್ಕಾರ ಹಾಕಿ ತನ್ನ ಸಾಮಾನುಗಳನ್ನು ಕಟ್ಟಿಕೊಂಡು ಬಂದು ಸುಚರಿತರಾಯನ ಮನೆಯನ್ನಲಂಕರಿಸಿದಳು.

ಒಂದು ವಾರ ಕಳೆಯುವುದರಲ್ಲಿಯೆ ಸುಚರಿತರಾಯನಿಗೆ ಅವಳ ಸಹವಾಸ ಸಾಕುಸಾಕೆನ್ನಿಸಿತು. ಅವಳ ಮೆದುಳಿನ ಯಾವುದೋ ಮೂಲೆಯಲ್ಲಿ ಏನೋ ಕೆಟ್ಟಿರಬೇಕೆಂದು ಸಂಶಯ ಬಂದಿತು. ಸುಲಲಿತದೇವಿ ಎಲ್ಲ ಸ್ತ್ರೀಯರಂತಿರಲಿಲ್ಲ. ಅವಳ ರೀತಿ ನೀತಿ, ನಡವಳಿಕೆ, ಮಾತು ಎಲ್ಲವೂ ವಿಲಕ್ಷಣವಾಗಿದ್ದುವು. ಸುಚರಿತರಾಯ ಊಟಕ್ಕೆ ಕುಳಿತಿದ್ದಾಗ ಬಡಿಸುವುದನ್ನು ಬಿಟ್ಟು ಅವಳು ಅವನನ್ನು ತಬ್ಬಿಕೊಂಡು ಚುಂಬಿಸುವುದಕ್ಕಾರಂಭಿಸುತ್ತಿದ್ದಳು. " ಛೆ. ಛೆ. ಹೀಗ್ಯಾಕೆ ಮಾಡ್ತೀ? ಬಿಡು ಬಿಡು," ಎಂದು ಆತ ಅವಳನ್ನು ದೂರಗೊಳಿಸಲು ಯತ್ನಿಸಿದರೆ ಸವುಟನ್ನೆತ್ತಿಕೊಂಡು ಅವನ ತಲೆಗೆ ಬಿಗಿಯುತ್ತಿದ್ದಳು. ರಾತ್ರೆ ಮಲಗಿ ನಿದ್ರಿಸುವಾಗ ಹಠಾತ್ತನೆ ಎದ್ದು ಕುಳಿತು, " ಹಾಲು, ಹಾಲು, ಹಾಲು," ಎಂದು ಕೂಗುತ್ತಿದ್ದಳು. ಹಾಲು ತಂದು ಕೊಡುವವರೆಗೂ ಅವಳ

ಗದ್ದಲ ನಿಲ್ಲುತ್ತಿರಲಿಲ್ಲ. ಅವನು ಅವಳನ್ನು ತಬ್ಬಿಕೊಂಡು ಮುದ್ದಿಡ ಬಯಸಿದಾಗ ಅವನ ಮುಖವನ್ನು ಪರಚಿ ದೂರ ತಳ್ಳಿ ಮಲಗುವ ಕೊಟಡಿಯಿಂದ ಓಡಿ ಪಡಸಾಲೆಗೆ ಹೋಗಿ ವಿರಾಮ ಕುರ್ಚಿಯ ಮೇಲೊರಗಿ ನಿದ್ರಿಸುತ್ತಿದ್ದಳು. ಈ ವಿಚಿತ್ರ ಚೇಷ್ಟೆಗಳನ್ನು ಕಂಡು ಗಾಬರಿಗೊಂಡ ಸುಚರಿತರಾಯ ಧುರಂಧರರಾಯರಲ್ಲಿಗೆ ಧಾವಿಸಿ ಹೋಗಿ ಎಲ್ಲವನ್ನೂ ಹೇಳಿ ಹಣೆ ಹಣೆ ಬಡಿದುಕೊಂಡ. ಅವರು ಅವನನ್ನು ಸಂತೈಸಿ ಹೇಳಿದರು :

"ಹೊಸ ಊರು, ಹೊಸ ಪರಿಚಯ ಅಂತ ಹೀಗಾಗ್ತಿರಬೇಕು ಆಕೆಗೆ. ಒಂದೆರಡು ತಿಂಗಳು ಕಳೆದರೆ ಎಲ್ಲಾ ನೆಟ್ಟಗಾಗ್ತದೆ. ನೀವೇನೂ ಗಾಬರಿಯಾಗ ಬೇಡಿರಿ."

ಸುಚರಿತರಾಯನಿಗೆ ಸಮಾಧಾನವಾಗಲಿಲ್ಲ. "ಹೊಸ ಪರಿಚಯವಾದರೇನಾಯ್ತು? ಹೆಂಗಸರು ಮದುವೆಯಾಗಿ ಗಂಡನ ಮನೆಗೆ ಬಂದಾಗ ಎಲ್ಲಾ ಹೊಸದೆ ಇರೂದಿಲ್ಲೇನು? ಯಾವ ವಧುವೂ ಮಾಡದಂಥಾ ವಿಚಿತ್ರ ಎಲ್ಲಾ ಮಾಡ್ತಾಳಲ್ಲಾ ಇವಳು? ಮೊದಲಿನಿಂದಲೂ ಹೀಗೇ ಅಂತ ಕಾಣ್ತದ. ಅದಕ್ಕೇ ಇಷ್ಟು ವಯಸ್ಸಾದರೂ ಇನ್ನೂ ಮದುವೆಯಾಗದೆ ಇದ್ದಿರಬೇಕು. ಇವಳಿಗೆ ಸ್ವಲ್ಪ ಹುಚ್ಚು ಅನ್ನೂದನ್ನ ನನಗ್ಯಾಕೆ ಹೇಳಲಿಲ್ಲ ಆಗಲೆ?"

"ನನಗೆ ಗೊತ್ತಿದ್ದರೆ ಹೌದಲ್ಲೋ ಹೇಳೂದು?"

"ಊಹೂಂ. ನಾನು ನಿಮ್ಮ ಮಾತು ನಂಬೂದಿಲ್ಲ. ನಿಮಗೆಲ್ಲಾ ಗೊತ್ತಿತ್ತು, ನಿಜವಾಗಿಯೂ ಗೊತ್ತಿತ್ತು. ನನ್ನ ಫಜೀತಿ ಮಾಡಬೇಕೆಂತಲೇ ನನಗೇನೂ ಹೇಳದೆ ಇವಳನ್ನು ಕಟ್ಟಿಬಿಟ್ಟಿರಿ...."

"ನೋಡಿದಿರಾ? ಬಾಯಿಗೆ ಬಂದದ್ದು ಆಡಿಬಿಟ್ಟರಾಯಿತೇ? ನಿಮ್ಮ ಬಗ್ಗೆ ನನಗೇನು ದ್ವೇಷ? ನಾನ್ಯಾಕೆ ನಿಮ್ಮನ್ನ ಫಜೀತಿ ಮಾಡುವ ಮನಸು ಮಾಡಲಿ? ಇಲ್ಲಿಗೆ ಬಂದ ಮೇಲೇ ಅವಳಿಗೆ ಏನೋ ಆದ ಹಾಗೆ ಕಾಣ್ತದ. ಹೆಂಗಸರದು ಬಹಳ ಸೂಕ್ಷ್ಮ ಪ್ರಕೃತಿ. ಅವಳ ಒಲವಿಗೆ ಸರಿಯಾಗಿ ನಡಕೊಳ್ಳುತಾ ಬರ್ರಿ. ಎಲ್ಲಾ ಸರಿ ಹೋದೀತು."

"ಹೊಡೀಲಿಕ್ಕೆ ಬರ್ತಾಳಲ್ಲರೀ? ನಾನೇನು ಬಡಿಸಿಕೊಳ್ಳಲಾ?"

"ಅವಳಿಗೆ ಸಿಟ್ಟು ಬರುವಂಥಾದ್ದು ಏನೂ ಮಾಡದಿದ್ದರಾಯ್ತಲ್ಲ? ಅವಳಾದರೂ ಯಾಕೆ ಬಡಿದಾಳು?"

ಆ ರಾತ್ರೆ ಸುಚರಿತರಾಯ ಅಂಜುತ್ತಲೇ ಅವಳ ಹತ್ತಿರ ಮಾತು ತೆಗೆದ :

" ನೀನು ಹೀಗ್ಯಾಕೆ ಅಸಂಬದ್ಧ ಮಾಡ್ತೀ ಸುಲಲಿತಾ ? "

ಅವಳು ಹುಲಿಯಂತೆ ಹಾರಿಬೀಳಬಹುದೆಂಬ ಭೀತಿ ಅವನಿಗಿತ್ತು. ಆದ ರಾಕೆ ಹಾಗೇನನ್ನೂ ಮಾಡದೆ, ವಿಚಿತ್ರವಾಗಿ ನಗುತ್ತ ನುಡಿದಳು :

" ಏನು ಮಾಡ್ತೀನಿ ? "

" ಹುಚ್ಚು ಹಿಡಿದವರ ಹಾಗೆ ಮಾಡ್ತೀಯೆಲ್ಲಾ ಒಮ್ಮೊಮ್ಮೆ ? "

ಅವಳ ಕಣ್ಣುಗಳಲ್ಲಿ ವಿಲಕ್ಷಣವಾದ ಹೊಳಪು ಕಾಣಿಸಿಕೊಂಡಿತು. " ನನಗೇನೂ ತಿಳೀದು. ಒಮ್ಮೊಮ್ಮೆ ಮೈಮೇಲೆ ಅರಿವಿರೂದಿಲ್ಲ ಅನ್ನೂದೇನೊ ನಿಜ."

" ಎಷ್ಟು ದಿನ ಆಯ್ತು ಸುಲಲಿತಾ, ಹೀಗಾಗ ಹತ್ತಿ? "

" ಗೊತ್ತಿಲ್ಲ. ಎಂಟು ಹತ್ತು ವರ್ಷದಿಂದಿತ್ತಲಾಗಿ ನನ್ನ ಮನಸ್ಸು ಸ್ವಸ್ಥವಿರಲಿಲ್ಲ. ತಾಯಿತಂದೆ ಇಬ್ಬರೂ ಹೋಗಿಬಿಟ್ಟರು. ಒಬ್ಬಳೇ ಆಗಿ...."

" ಪಾಪ ! ಪಾಪ ! ಒಬ್ಬಳೇ ಇದ್ದು ಇದ್ದು ತಲೆ ಕೆಟ್ಟಿತೊ ಏನೋ ! " ಎಂದು ಅನುಕಂಪ ತೋರಿಸಿದ ಸುಚರಿತರಾಯ.

ಅವನ ಕೊರಳಿನ ಸುತ್ತಲೂ ಕೈಗಳನ್ನು ಸೇರಿಸಿ ಅವನನ್ನು ಅಪ್ಪಿ ಕೊಳ್ಳುತ್ತ ಅವಳು ಹೇಳಿದಳು :

" ಇಲ್ಲಿಗೆ ಬಂದ ಮೇಲೆ ಎಷ್ಟೋ ಸುಧಾರಿಸಿದೀನಿ—ನಿಮ್ಮ ಸಹವಾಸ ದಲ್ಲಿ."

" ಡಾಕ್ಟರಿಗೆ ತೋರಿಸಲಾ ಸುಲಲಿತಾ ? "

" ಡಾಕ್ಟರು ? ನೂರಾರು ಮಂದಿ ನೋಡಿಹೋದರು," ಎಂದು ಹೇಳಿ ಅವಳು ನಕ್ಕಳು.

" ಗೊಬ್ಬೂರಿನಲ್ಲೊಬ್ಬರು ಸೈಕಾಲಜಿಸ್ಟ್ ಇದಾರೆ. ಅವರಿಗೆ ತೋರಿ ಸೋಣ."

" ಯಾವ ಇಸ್ಟು ಬೇಡ, ಅಸಿಷ್ಟೂ ಬೇಡ. ನನ್ನ ಮನಸ್ಸಿಗೆ ಬೇಸರ ವಾಗದಿದ್ದರೆ ಎಲ್ಲಾ ತಂತಾನೇ ನೆಟ್ಟಗಾಗ್ತದ. ನಾನೇನು ಮಾಡಿದರೂ ನೀವು ಬೇಡಾ ಅನ್ನಬಾರದು. ಸುಮ್ಮನಿರಬೇಕು."

" ಮಾಡಬಾರದ್ದೆಲ್ಲಾ ನೀನು ಮಾಡಿದರೂ ? "

“ ಆಗಲೂ ಸುಮ್ಮನಿರಬೇಕು. ನನ್ನ ತಲೆ ನೆಟ್ಟಗಾಗೂದಕ್ಕೆ ಅದೇ ಉಪಾಯ. ನಾನೂ ಸೈಕಾಲಜಿ ಓದಿದ್ದೇನಿ ಸಾಕಷ್ಟು. ಈ ಡಾಕ್ಟರ್ ಮುಂಡೇವಕ್ಕೆ ಗೊತ್ತಿರೂದಕ್ಕಿಂತ ಹೆಚ್ಚು ನನಗೆ ಗೊತ್ತದ.”

ಅಂದಿನಿಂದ ಸುಲಲಿತದೇವಿ ತನ್ನ ಮನಸ್ಸಿಗೆ ಬಂದ ಹಾಗೆ ಆಚರಿಸ ತೊಡಗಿದಳು. ಅವಳಿಗೊಮ್ಮೆ ಗುಣವಾದರೆ ಸಾಕೆಂದು ಬಗೆದು ಸುಚರಿತ ರಾಯನೂ ಸುಮ್ಮನಾದ. ವಾರದಲ್ಲಿ ಮೂರು ರಾತ್ರಿಗಳನ್ನು ಅವಳು ಧುರಂಧರ ರಾಯರಲ್ಲಿಯೆ ಕಳೆಯತೊಡಗಿದಳು. ಆಗಲೂ ಸುಚರಿತರಾಯ ತೆಪ್ಪಗಿದ್ದ. ನಗರದಲ್ಲಿ ಅವಳ ಪರಿಚಯ ಬೆಳೆದ ಹಾಗೆ ಅವಳ ಗೆಳೆಯರೂ ಮನೆಗೆ ಬರ ತೊಡಗಿದರು ; ಸುಚರಿತರಾಯ ಅವರೆಲ್ಲರನ್ನೂ ಆದರದಿಂದ ಬರಮಾಡಿಕೊಂಡು ಹೆಂಡತಿಯ ಅಪೇಕ್ಷೆಯಂತೆ ಅವರನ್ನು ಸತ್ಕರಿಸಬೇಕಾಯಿತು. ಸ್ಕೂಲ್ ಬೋರ್ಡ್ ಚೆರ್ಮನರ ಕಾರಿನಲ್ಲಿ ಅವಳು ವಾಯುವಿಹಾರಕ್ಕೆ ಹೋಗತೊಡಗಿದಳು; ಸುಚರಿತರಾಯ ಬಾಯಿ ಹೊಲಿದುಕೊಂಡು ಸುಮ್ಮನಿರಬೇಕಾಯಿತು. ಶನಿ ವಾರ ಭಾನುವಾರಗಳ ರಜೆಯನ್ನು ಅವಳು ಕುಬೇರಪ್ಪನವರೊಡನೆ ಗೊಬ್ಬೂರಿ ನಲ್ಲಿ ಕಳೆಯತೊಡಗಿದಳು ; ಸುಚರಿತರಾಯ ಕೈ ಹಿಸುಕಿಕೊಳ್ಳುತ್ತ ಬಿದ್ದು ಕೊಂಡಿರಬೇಕಾಯಿತು.

“ ನಾನು ಹೀಗೆಲ್ಲಾ ಮಾಡ್ತೀನಿ ಅಂತ ನಿಮಗೆ ಸಿಟ್ಟು ಬಂದಿಲ್ಲ ಹೌದಲ್ಲೋ ? ” ಎಂದಾಕೆ ಕೇಳುತ್ತಿದ್ದಳು, ಒಂದೊಂದು ಬಾರಿ.

“ ಸಿಟ್ಟು ಬಂದರೆ ಹಿಟ್ಟು ಮುಕ್ಕಿ ಸುಮ್ಮನಿರಬೇಕಲ್ಲ ? ನಿನಗೆ ಮಾತು ಕೊಟ್ಟದಂತೂ ಆಗಿದೆ.”

“ ನನಗಿಲ್ಲಿ ಸೊಗಸೇ ಅನ್ನಿಸೂದಿಲ್ಲ. ನಾನಾದರೂ ಏನು ಮಾಡಲಿ ? ಹುಚ್ಚಿಯಾಗಬಾರದಂತಿದ್ದರೆ ಮನಸ್ಸು ಎಳೆದತ್ತ ಹೋಗಲೇಬೇಕು. ಮನ ಸ್ಸನ್ನ ಬಿಗಿಹಿಡೀಲಿಕ್ಕೆ ಹೋದರೆ ಬುದ್ಧಿ ಕೆಟ್ಟು ಯದ್ವಾ ತದ್ವಾ ಆಗ್ತದ....”

“ ನಿನ್ನ ಸಹವಾಸದಲ್ಲಿ ನನ್ನ ಬುದ್ಧಿಯೂ ಕೆಟ್ಟು ಹೋಗುವ ಕಾಲ ಬಂತು ! ” ಎಂದು ತನ್ನಲ್ಲಿಯೆ ಹೇಳಿಕೊಂಡು ಹಲ್ಲು ಕಚ್ಚಿ ಸುಮ್ಮನಿರುತ್ತಿದ್ದ ಸುಚರಿತರಾಯ.

“ ನೋಡಿರಿ. ನಿಮಗೂ ಒಬ್ಬರಿಗೇ ಇರಲಿಕ್ಕೆ ಬೇಸರ ಆಗ್ತಿದ್ದರೆ ನೀವೂ ಬೇರೆ ಯಾರನ್ನಾದರೂ ಕರಕೊಂಡು ಮಜಾ ಮಾಡಬಹುದು. ನಾನೇನು

ಬೇಡ ಅನ್ನೂದಿಲ್ಲ." ಎಂದು ಒಂದು ದಿನ ಹೇಳಿದಳು.

"ಆಯ್ತು! ಒಳ್ಳೇ ಮಾತೇ ಹೇಳಿದಿ. ಹೀಗೆಲ್ಲಾ ಮಾಡೂದಾಗಿದ್ದರೆ ನಾನು ಮದುವೆಯಾದರೂ ಯಾಕಾಗ್ತಿದ್ದೆ?"

"ಮದುವೆಯಾದವರೇ ಮಜಾ ಮಾಡಬೇಕು ಅಂತ ಯಾವ ವೇದದಲ್ಲಿ ಹೇಳಿದಾರೆ? ಕೃಷ್ಣಾರ್ಜುನ ಭೀಮ ಎಲ್ಲಾ ಮಾಡಲಿಲ್ಲೇನು? ಚಿತ್ರಾಂಗದಾ ಉಲೂಪಿ ರಾಧೆ ಹಿಡಿಂಬೆ...."

"ಸರಿ. ಇದೂ ಒಂದು ಹಿಡಿಂಬೆಯೇ ಗಂಟು ಬಿತ್ತು ನನಗೂ!" ಎಂದು ತನ್ನಲ್ಲಿಯೆ ಹೇಳಿಕೊಂಡು ತನ್ನ ಮೂರ್ಖತನವನ್ನು ತಾನೇ ಹಳಿದುಕೊಂಡು ಸುಚರಿತರಾಯ ಹೇಳಿದ:

"ನನಗೆ ಅಂಥಾದ್ದೆಲ್ಲಾ ಸರಿಬರುವುದಿಲ್ಲ. ಹಾಗೆ ಮಜಾ ಮಾಡುವ ಸ್ವಭಾವವೇ ನನ್ನದಲ್ಲ...."

"ಎಲಾ! ನೀವೂ ನನ್ನ ಹಾಗೇ ಇದೀರಿ ಅಂತ ಹೇಳಿದ್ದರಲ್ಲ ಧುರಂಧರ ರಾಯರು!" ಎಂದಳಾಕೆ.

"ಹಾಗೆ ಹೇಳಿದ್ದರೇ? ಎಲ್ಲರೂ ತಮ್ಮಂತೆಯೇ ಇರ್ತಾರೆ ಅಂತ ತಿಳುಕೊಂಡಿರಬೇಕು ಅವರು. ಹೋಗಲಿ ಬಿಡು. ಅವರನ್ನಾದರೂ ಯಾಕೆ ಅನ್ನಬೇಕು? ನನ್ನ ಅದೃಷ್ಟವೇ ಹೀಗಿದ್ದರೆ ಯಾರೇನು ಮಾಡಬೇಕು?"

"ಹಾಗಂದುಕೊಂಡು ಸುಮ್ಮನಿದ್ದರಾಯ್ತಲ್ಲ! ನಿಮಗಾದರೂ ಏನು ತೊಂದರೆಯಾಗಿದೆ ನನ್ನಿಂದ? ನಾನು ನೌಕರಿ ಮಾಡ್ತಾ ಇದೀನಿ. ಸಂಬಳ ತರ್ತಾ ಇದೀನಿ. ಮನೆಯ ಖರ್ಚಿಗೆ ನೀವೇನು ಚಿಂತೆ ಮಾಡಬೇಕಾಗಿಲ್ಲ. ಆರಾಮಾಗಿ ಉಂಡು ತಿಂದು ತಿರುಗಾಡಬಹುದಲ್ಲ?"

ಆ ಮಾತಿಗೆ ಪ್ರತಿ ಹೇಳಲಿಲ್ಲ ಸುಚರಿತರಾಯ. ಅಂದಿನಿಂದ ಅವಳ ನಡತೆಯ ವಿಚಾರ ಚರ್ಚಿಸುವುದನ್ನೂ ಆತ ನಿಲ್ಲಿಸಿಬಿಟ್ಟ. ಕೆಲವು ದಿನಗಳ ಕಾಲ ಅವನಿಗೂ ಕೊಂಚ ಹುಚ್ಚು ಹಿಡಿದಂತೆಯೆ ಆಯಿತು. ಅದೇ ಸಮಯದಲ್ಲಿ ಕರಾಚೂರಿನ ಗುರೂಜಿ ಮಾತಾಜಿಯವರ ವಾಙ್ಮಯವನ್ನೂ ಆತ ಓದಿಕೊಂಡ. ಅದೇ ಮನಃಸ್ಥಿತಿಯಲ್ಲಿಯೆ ಶರಣಪ್ಪನವರಿಗೂ ಅವರಿಗೂ ಗಾಢ ಮೈತ್ರಿ ಬೆಳೆಯಿತು.

"ನೀವೂ ಕರಾಚೂರಿನ ಗುರೂಜಿಯವರ ಭಕ್ತರಾದದ್ದು ಬಹಳ

ಸಂತೋಷದ ಸಂಗತಿ. ನಾವೆಲ್ಲಾ ಸೇರಿ ಒಂದು ಸಂಘವನ್ನ್ಯಾಕೆ ಸ್ಥಾಪಿಸ ಬಾರದು ?" ಎಂದರು ಶರಣಪ್ಪನವರು.

"ಅವಶ್ಯ ಸ್ಥಾಪಿಸೋಣ. ಆದರೆ ಸಂಘ ಅಂದ ಮೇಲೆ ಹತ್ತಿಪ್ಪತ್ತು ಮಂದಿ ಸದಸ್ಯರಾದರೂ ಬೇಕಲ್ಲ ಮಾಸ್ತರರೆ ?"

"ಸದ್ಯಕ್ಕೆ ನಾನು, ನೀವು, ಮರುಳಯ್ಯನವರು ಮೂರು ಮಂದಿಯಂತೂ ಇದೀವಲ್ಲ. ಸಂಘದ ವಿಷಯ ಜನರಿಗೆ ತಿಳಿದ ಹಾಗೆ ಮತ್ತೂ ಕೆಲವರು ಬಂದಾರು. ಇದೇನು ರಾಜಕೀಯ ಪಕ್ಷವಲ್ಲವಲ್ಲ ? ಅಧ್ಯಾತ್ಮದಲ್ಲಿ ನಿಜವಾಗಿಯೂ ಆಸಕ್ತಿ ಇರುವ ನಾಲ್ಕು ಜನ ಪ್ರಾಮಾಣಿಕ ಸಾಧಕರಾದರೂ ಸಾಕು...."

"ಆದರೂ, ಸಂಘ ಅಂದ ಮೇಲೆ ಜನ ಬೇಕೇಬೇಕು ಮಾಸ್ತರರೆ. ಮಾಡುವ ಕೆಲಸವನ್ನು ಯಾವಾಗಲೂ ಉತ್ತಮವಾಗಿ ಮಾಡಬೇಕು. ನಾಲ್ಕು ಮಂದಿ ಹೌದೆನ್ನುವಂತೆ ಮಾಡಬೇಕು. ಗುರೂಜಿಯವರ ದಿವ್ಯಗ್ರಂಥಗಳ ನ್ನೋದಿದಂದಿನಿಂದ ಅವುಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಬೇಕೆಂಬ ಹಂಬಲ ನನ್ನ ತಲೆ ತಿನ್ನುತ್ತಿದೆ. ಗುರೂಜಿಯವರ ಸಂದೇಶ ಸಾಮಾನ್ಯರಿಗೂ ತಿಳಿದಂತಾಗಬೇಡವೇನು ?"

"ಹೌದೌದು. ಅದೂ ಆಗಬೇಕು."

"ನಮ್ಮ ಸಂಘ ಬರೀ ಚರ್ಚಾಕೂಟವಾಗಬಾರದು. ಗುರೂಜಿ ಮಾತಾಜಿ ಸಾಹಿತ್ಯವನ್ನು ಪ್ರಕಟಿಸುವ ಮಹಾಕಾರ್ಯವನ್ನೂ ನಾವು ಮಾಡ ಬೇಕು. ಸದ್ಯಕ್ಕಂತೂ ಕರ್ನಾಟಕದಲ್ಲಿ ಈ ಕೆಲಸವನ್ನ ಯಾರೂ ಮಾಡುತ್ತಿಲ್ಲ. ನಾವೇ ಸುರುಮಾಡಿಬಿಟ್ಟರೆ ಅದೂ ಒಂದು ಹೆಸರು ಬಂದೀತು. ಕರಾಚೂರಿನ ಆಶ್ರಮದಿಂದಲೂ ನಮಗೆ ಸಹಾಯ ಸಿಕ್ಕಬಹುದು."

"ಹಾಗಿದ್ದರೆ ಚಿಂತೆಯಿಲ್ಲ. ಅದನ್ನೂ ಮಾಡಲು ಬಂದೀತು."

ಸಂಘವನ್ನು ಸ್ಥಾಪಿಸುವ ಕುರಿತು ನಿರ್ಧರವಾಗುತ್ತಲೂ ಅದನ್ನು ಯಾವ ಹೆಸರಿನಿಂದ ಕರೆಯಬೇಕೆಂಬುದರ ಬಗೆಗೆ ಚರ್ಚೆ ನಡೆಯಿತು.

"ಕರಾಚೂರ್ ಕೂಟ ಅಂತಿಟ್ಟರೆ ಚಲೋ ಆದೀತು," ಎಂದು ಮರು ಳಯ್ಯ ಅಭಿಪ್ರಾಯ ಸೂಚಿಸಿದ.

"ಗುರೂಜಿ ಮಾತಾಜಿ ಮಂಡಲ ಅಂತ ಕರೆದರೆ ?" ಎಂದರು ಶರಣಪ್ಪ ನವರು.

"ಊಹೂಂ. ಇದ್ಯಾವದೂ ಚಂದ ಕಾಣುವುದಿಲ್ಲ. ಅಧ್ಯಾತ್ಮ ಸಂಘ ಅಂದಮೇಲೆ ಅದರ ಹೆಸರೂ ಸ್ವಲ್ಪ ಮಿಸ್ಟಿಕ್ ಆಗೇ ಇರಬೇಕು. ಯೋಗ ಮಂಡಲ ಅನ್ನುವ ಹೆಸರು ರಹಸ್ಯಪೂರ್ಣವಾಗಿಯೂ ಇರ್‍ತದ, ಚಂದಾಗಿಯೂ ಕಾಣ್ತದ," ಎಂದ ಸುಚರಿತರಾಯ.

"ಯೋಗಮಂಡಲ" ಕ್ಕಾರಂಭವಾಗುವ ವಾರ್ತೆ ತಿಳಿಯುತ್ತಲೂ ಸುಲಲಿತದೇವಿ ಗಂಡನನ್ನು ಕುರಿತು ಹೇಳಿದಳು :

"ಬಹಳ ಚಲೋ ಆಯಿತು. ನನಗೂ ಅಧ್ಯಾತ್ಮ ಅಂದರೆ ಮೊದಲಿನಿಂದಲೂ ಪ್ರೀತಿ."

"ಅಧ್ಯಾತ್ಮ....ನಿನಗೂ ಪ್ರೀತಿ?" ಎಂದು ಚಕಿತನಾಗಿ ಕೇಳಿದ ಸುಚರಿತರಾಯ.

"ಚಿಕ್ಕ ವಯಸ್ಸಿನಲ್ಲಿ ನೀವು ನನ್ನನ್ನು ನೋಡಿದ್ದರೇನನ್ನುತ್ತಿದ್ದರೋ. ನಮ್ಮ ತಂದೆಯವರು ಶ್ರೀರಾಮಕೃಷ್ಣ ಪರಮಹಂಸರಲ್ಲಿ ಬಹಳ ಭಕ್ತಿಯಿಟ್ಟಿದ್ದರು. ನಮ್ಮ ಮನೆಯಲ್ಲಿ ದೇವರ ಪಟಗಳ ಜೊತೆಗೆ ಶ್ರೀರಾಮಕೃಷ್ಣರ ಪಟಕ್ಕೂ ಪೂಜೆಯಾಗ್ತಿತ್ತು. ತಂದೆಯವರ ಪ್ರಭಾವದಿಂದ ನನಗೂ ಶ್ರೀರಾಮಕೃಷ್ಣರಲ್ಲಿ ಶ್ರದ್ಧೆ ಹುಟ್ಟಿತು. ಅವರ ಪೂಜೆ ಮಾಡ್ತಾ ಮಾಡ್ತಾ ಎರಡು ಮೂರು ಗಂಟೆಗಳವರೆಗೆ ಹಾಗೇ ಮೈಮರೆತು ಕೂತು ಬಿಡ್ತಿದ್ದೆ. ಇತ್ತಿತ್ತಲಾಗಿ ನನಗೆ ಒಂದೊಂದು ತರಾ ಆಗ್ತದಲ್ಲ, ಅದಕ್ಕೆ ಮೂಲ ಕಾರಣ ಇದೇ ಇರಬಹುದೋ ಏನೋ ಅಂತಲೂ ಒಮ್ಮೊಮ್ಮೆ ಅನ್ನಿಸ್ತದ."

ಸುಚರಿತರಾಯನಿಗೆ ಅವಳ ಮಾತಿನಲ್ಲಿ ಚೊಂಚವೂ ನಂಬುಗೆ ಹುಟ್ಟಲಿಲ್ಲ. "ಏನೇನೋ ಬಡ ಬಡಿಸ್ತಿದಾಳೆ ಅಷ್ಟೆ," ಎಂದುಕೊಂಡು ಆತ ಸುಮ್ಮನಿದ್ದು ಬಿಟ್ಟ.

ಮತ್ತೆ ಅವಳೇ ಹೇಳಿದಳು :

"ನಾನು ಹೈಸ್ಕೂಲಿನಲ್ಲಿ ಕಲೀತಿದ್ದಾಗ ವಿವೇಕಾನಂದರ ಬಗ್ಗೆ ಬಹಳ ಭಕ್ತಿ ಹುಟ್ಟಿತ್ತು. ಅವರು ನನ್ನ ಆರಾಧ್ಯದೇವತೆಯಾಗಿದ್ದರೆಂದರೂ ಅನ್ನಬಹುದು. ಅವರ ಫೋಟೋದ ಮುಂದೆ ಕೂತು ತಾಸು ತಾಸು ಕಣ್ಣೀರು ಸುರಿಸ್ತಿದ್ದೆ. ಅವರ ಹಾಗೆ ನಾನೂ ರಾಮಕೃಷ್ಣಸಂಘಕ್ಕೆ ಸೇರಿಕೊಂಡು ಬ್ರಹ್ಮಚಾರಿಣಿಯಾಗಿ ದೇಶಸೇವೆ ಮಾಡೋಣ ಅಂತಲೂ ಅನ್ನಿಸಿತ್ತು...."

" ಮಾಡಬಹುದಾಗಿತ್ತಲ್ಲ ? "

" ಮಾಡಬಹುದಿತ್ತು. ಆದರೆ....ಆದರೆ....ಅದೇ ವೇಳೆಯಲ್ಲಿ ನನ್ನ ತಾಯಿ ತೀರಿಕೊಂಡರು. ನನ್ನ ಮನಸ್ಸಿನ ಮೇಲೆ ಬಹಳ ಆಘಾತವಾಯ್ತು. ನನ್ನ ಧ್ಯೇಯ ಆದರ್ಶಗಳೆಲ್ಲಾ ಮರೆತುಹೋದುವು. ವಿವೇಕಾನಂದ ರಾಮಕೃಷ್ಣರ ವಚನ ಗಳಿಂದಲೂ ಸಮಾಧಾನ ಸಿಗದಂತಾಯ್ತು. ನಾನು ಸಿನಿಕ್ ಆದಂತಾದೆ. ಈ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ, ಎಲ್ಲಾ ಮಾಯೆ, ಎಲ್ಲಾ ಮಿಥ್ಯೆ, ಎಲ್ಲಾ ವ್ಯರ್ಥ ಅನ್ನಿಸತೊಡಗಿತು. ಅಂದಿನಿಂದ ನಾನೂ ಎಲ್ಲರ ಹಾಗೆ ಆಗಿ ಬಿಟ್ಟೆ ...ಆದರೂ ಅಂದಿನ ಆ ಅಧ್ಯಾತ್ಮಪ್ರೇಮ ಪೂರಾ ಹೋಗಲಿಲ್ಲ." ಅಷ್ಟೇ ಹೇಳಿ ಸ್ವಲ್ಪ ತಡೆದು ಮತ್ತೆ ಅವಳೆಂದಳು : " ಧುರಂಧರರಾಯರಿಗೂ ಅಧ್ಯಾತ ದಲ್ಲಿ ಬಹಳ ಮನಸ್ಸಿದೆ. ನಿಮಗೆ ಗೊತ್ತಿಲ್ಲೇನ್ರೀ ? "

" ಅವರ ಅಧ್ಯಾತ್ಮ ಪ್ರೇಮವೆ ? " ಎಂದು ಉದ್ಗಾರ ತೆಗೆದು ಸುಚರಿತ ರಾಯ ಗಹಗಹಿಸಿ ನಕ್ಕ.

" ಯಾಕ್ರೀ ನಗ್ತೀರಲ್ಲಾ ? ಅವರೂ ಕರಾಚೂರಿನ ಗುರೂಜಿಯವರ ದೊಡ್ಡ ದೊಡ್ಡ ಪುಸ್ತಕಗಳನ್ನೆಲ್ಲಾ ಕೊಂಡು ಇಟ್ಟಿದಾರೆ. ರಾಮಕೃಷ್ಣ, ವಿವೇಕಾನಂದ, ರಮಣ ಮಹರ್ಷಿ, ಸ್ವಾಮಿ ಶಿವಾನಂದ ಮೊದಲಾದವರ ಪುಸ್ತಕಗಳೂ ಇದಾವೆ ಅವರಲ್ಲಿ...."

" ಇದಾವೆ. ಇಲ್ಲ ಅಂದವರ್‍ಯಾರು ? ಕೊಳ್ಳಲಿಕ್ಕೆ ದುಡ್ಡಿದೆ. ಕೊಂಡು ಇಟ್ಟಿದ್ದಾರೆ...."

" ಅಂದರೆ ? ಅವರು ಅವನ್ನ ಓದಿಯೇ ಇಲ್ಲ ಅಂತೀರಾ ? "

" ಪಾಪ ! ಅಂಥ ಪುಸ್ತಕಗಳನ್ನೋದಲಿಕ್ಕೆ ಅವರಿಗೆ ವೇಳೆಯಾದರೂ ಎಲ್ಲಿರ್‍ತದ ? ದೇಶಸೇವೆ, ಸಮಾಜಸೇವೆ, ಹರಿಜನಸೇವೆ, ಮಹಿಳಾಸೇವೆ.... ಒಂದೇ ಎರಡೇ ಕೆಲಸ ಅವರಿಗೆ ! "

" ಅವರನ್ನ ಕಂಡರೆ ನಿಮಗಾಗುವುದಿಲ್ಲ. ನನಗೂ ಅವರಿಗೂ ಬಹಳ ವಿಶ್ವಾಸ ಅಂತ ನಿಮಗೆ ಹೊಟ್ಟೆಕಿಚ್ಚು...."

" ನನ್ನ ಹೃದಯದಲ್ಲಿ ಭಾವನೆಗಳು ಉಳಿದಿದ್ದರೆ ಹೌದಲ್ಲೋ, ಹೊಟ್ಟೆ ಕಿಚ್ಚು ಬರುವುದು ? ಅಂಥದೆಲ್ಲಾ ಎಂದೋ ಹೊರಟುಹೋಯ್ತು. ಈಗ ನನಗೆ ಹೃದ-ಯವೂ ಇಲ್ಲ. ನೀನೇನು ಮಾಡಿದರೂ ನನಗೇನೂ ಅನ್ನಿಸುವುದಿಲ್ಲ."

"ಹಾಗಿದ್ದರೆ ಚಿಂತೆಯಿಲ್ಲ. ಸುಮ್ಮನೆ ಭಾವನಾವಶರಾಗುವದರಿಂದಾದರೂ ಉಪಯೋಗವೇನು? ಸಾಹುಕಾರ್ ಕುಬೇರಪ್ಪನವರೂ ಕೂಡಾ ನಿಮ್ಮ ಹಾಗೇ ಇದಾರೆ. ಅವರೂ ಎಂದೂ ಸೆಂಟಿಮೆಂಟಲ್ ಆಗುವದಿಲ್ಲ. ಅವರಿಗೂ ಅಧ್ಯಾತ್ಮ ಅಂದರೆ ಪ್ರೀತಿಯಿದೆ. ಕರಾಚೂರಿನ ಗುರೂಜಿ ಮಾತಾಜಿಯವರ ಫೋಟೋಗಳನ್ನ ಅವರೂ ಇಟ್ಟದಾರೆ ಮನೆಯಲ್ಲಿ....ಅವರನ್ನೂ ಯಾಕೆ ಕರಕೊಳ್ಳಬಾರದು ನೀವು ನಿಮ್ಮ ಸಂಘದಲ್ಲಿ?"

"ಬೇಡ ಅನ್ನುವವರ್‍ಯಾರು? ಇದೇನು ನಮ್ಮಪ್ಪನ ಮನೆಯ ಸಂಘವೇ? ಕುಬೇರಪ್ಪನವರೂ ಬರಲಿ, ಧುರಂಧರರಾಯರೂ ಬರಲಿ. ಯಾವ ಅಪ್ಪ ಯಾವ ರಾಯ ಬಂದರೂ ಅಷ್ಟೆ. ಗುರೂಜಿಯವರ ಪುಸ್ತಕಗಳನ್ನು ಕನ್ನಡದಲ್ಲಿ ಪ್ರಕಟಿಸಲಿಕ್ಕೆ ಅವರಿಂದ ಹಣ ಸಹಾಯವೂ ಸಿಕ್ಕೀತು...."

"ಕುಬೇರಪ್ಪನವರಿಗೆ ಹಣಕ್ಕೇನು ಕೊರತೆ? ಹಣವನ್ನು ಖರ್ಚು ಮಾಡುವದು ಹ್ಯಾಗೆ ಅನ್ನುವದೇ ಅವರ ಚಿಂತೆ. ಇಂಥಾ ಒಳ್ಳೆಯ ಕೆಲಸಗಳಿಗೆ ಹಣ ಕೊಡದಿರ್‍ತಾರೇನು? ಎಷ್ಟು ಮಂದಿ ಬೇಕು ನಿಮಗೆ ಹಣ ಕೊಡುವವರು? ನನ್ನ ಪರಿಚಯದವರಿಗೆಲ್ಲಾ ಹೇಳಲೇನು?"

"ಇಂಥವರೆಲ್ಲಾ ಮಂಡಲದಲ್ಲಿ ಸೇರಿದರೆ ಜನ ಏನಂದಾರು ಲಲಿತಾ?"

"ಇಂಥವರೆಲ್ಲಾ ಅಂದರೆ?" ಎಂದು ಕಣ್ಣು ಕೆರಳಿಸಿ ಕೇಳಿದಳಾಕೆ.

ಆತ ಹೆದರಿ, ಆ ವಿಚಾರವನ್ನು ಅಲ್ಲಿಗೇ ಬಿಟ್ಟು,

"ಜನರಿಗಾದರೂ ಯಾಕೆ ಹೆದರಬೇಕು ನಾವು? ಜನರಾದರೂ ಎಷ್ಟು ಸತ್ಯವಂತರಿದ್ದಾರೆ? ನಾವು ಮಾಡುವ ಕೆಲಸ ನಾವು ಮಾಡಿದರಾಯ್ತು. ನೀನೇ ಸೆಕ್ರೆಟರಿಯಾಗುತ್ತೀಯಾ ಮಂಡಲಕ್ಕೆ?" ಎಂದು ಕೇಳಿದ.

"ಆಫೀಸ್ ಎಲ್ಲಿ ಮಾಡೂದು?"

"ಮತ್ತೆಲ್ಲಿ ಮಾಡೂದು? ನಮ್ಮ ಮನೆಯಲ್ಲೇ ಮಾಡಿದರಾಯ್ತಲ್ಲ? ಹ್ಯಾಗೂ ಅಟ್ಟದ ಮೇಲೆ ಸಾಕಷ್ಟು ಜಾಗ ಅದ. ಮಿಾಟಿಂಗ್ ಗೀಟಿಂಗ್ ಮಾಡಬಹುದು, ಧ್ಯಾನ ಪ್ರಾರ್ಥನೆ ಪೂಜೆ ಎಲ್ಲಾ ನಡಸಬಹುದು."

"ಗುಡ್ ಐಡಿಯಾ! ಆದರೆ ಈಗಲೇ ಒಂದು ಮಾತು ನಿಶ್ಚಯವಾಗಬೇಕು. ನಮ್ಮ ನಿಮ್ಮಲ್ಲಿ. ಮಂಡಲದ ಹಣ ಎಲ್ಲಾ ನನ್ನ ಕೈಯಲ್ಲೇ ಇರಬೇಕು."

" ಯಾರು ಬೇಡಂತಾರೆ? ಖರ್ಚಾಗಿ ಉಳಿದಿದ್ದರಲ್ಲಿ ನನಗೂ ಅರ್ಧ ಪಾಲು ಕೊಟ್ಟರಾಯಿತು. ಕ್ಯಾಶರ್ ಯಾರಾಗಿದ್ದರೇನಂತೆ! " ಎಂದ ಸುಚರಿತರಾಯ.

ಆ ಕರಾರನ್ನು ಸುಲಲಿತದೇವಿ ಸಂತೋಷದಿಂದಲೇ ಒಪ್ಪಿಕೊಂಡಳು.

' ಯೋಗಮಂಡಲ ' ಸ್ಥಾಪಿತವಾಗಿ ಚಟುವಟಿಕೆಗಳಿಗಾರಂಭಿಸಿದುದೂ ಆಯಿತು. ಪ್ರತಿ ಭಾನುವಾರವೂ ಸಂಜೆ ಅವರ ಮನೆಯ ಅಟ್ಟದ ಮೇಲೆ ಪ್ರಾರ್ಥನಾ ಸಭೆ ನಡೆಯತೊಡಗಿತು.

ಪ್ರಾರ್ಥನೆ ನಡೆದಿದ್ದಂತೆಯೆ ಸುಲಲಿತದೇವಿ ಮೈಮರೆತವಳಂತೆ ನಟಿಸುತ್ತ ಕಣ್ಣು ಮುಚ್ಚಿ, ಪದ್ಮಾಸನ ಹಾಕಿ, ಕರಾಚೂರಿನ ಮಾತಾಜಿಯ ಹಾಗೇ ಕುಳಿತುಕೊಳ್ಳುವಳು. ಪ್ರಾರ್ಥನೆ ಮುಗಿದ ಬಳಿಕ, ಮೈತಿಳಿದವಳಂತೆ ಅಭಿನಯಿಸುತ್ತ ಎರಡು ಕೈಗಳನ್ನೆತ್ತಿ ಸದಸ್ಯರನ್ನಾಶೀರ್ವದಿಸುವಳು.

ಒಂದೊಂದು ಬಾರಿ ಈ ' ಮಾತಾಜಿ ' ಸಂದೇಶವೀಯುತ್ತಿದ್ದುದೂ ಇತ್ತು.

" ಈ ಮಂಡಲ ಸ್ಥಾಪಿಸಿ ನೀವು ನನ್ನ ಕೃಪೆಗೆ ಪಾತ್ರರಾಗಿದೀರಿ. ಈ ಬುವಿಯ ಮೇಲೆ ದಿವ್ಯಜೀವನ ರೂಪಿಸುವುದಕ್ಕಾಗಿ ಹೆಣಗುತ್ತಿರುವ ನಾನು ನಿಮ್ಮ ಪ್ರಯತ್ನದಿಂದ ಸಂತುಷ್ಟಳಾಗಿದೇನೆ. ಗುರೂಜಿಯವರಿಗೂ ಪರಮ ಸಂತೋಷವಾಗಿದೆ. ನಿಮ್ಮೆಲ್ಲರಿಗೂ ನಮ್ಮಿಬ್ಬರ ಹೃತ್ಪೂರ್ವಕ ಆಶೀರ್ವಾದ."

ಆ ಸಂದೇಶ, ನಿಜವಾಗಿಯೂ ಕರಾಚೂರಿನ ಮಾತಾಜಿಯಿಂದಲೇ ಬಂದುದೆಂದು ಭಾವಿಸಿ ಶರಣಪ್ಪನವರು ಭಕ್ತಿಯಿಂದ ಸುಲಲಿತದೇವಿಯ ಪಾದಗಳನ್ನು ಮುಟ್ಟಿ ನಮಸ್ಕರಿಸುತ್ತಿದ್ದರು. ಇನ್ನುಳಿದವರೆಲ್ಲರೂ ಕುಳಿತಲ್ಲಿಯೆ ತಲೆಬಾಗಿ ವಂದಿಸುತ್ತಿದ್ದರು. ಅದೇ ರೀತಿಯಾಗಿ ಹಲವು ವಾರಗಳ ಕಾಲ ನಡೆದ ಬಳಿಕ ತನ್ನಲ್ಲೂ ಅದೊಂದು ಬಗೆಯ ' ದಿವ್ಯ ಚೇತನ ' ವಿರಬಹುದೆಂದೇ ಸುಲಲಿತದೇವಿ ಭಾವಿಸಿದಳು. ಕರಾಚೂರಿನ ಮಾತಾಜಿ ಗುರೂಜಿಯವರು ತನ್ನ ಮೇಲೆ ಕೃಪೆ ಮಾಡಿ, ತನ್ನ ಮೂಲಕ ಶಿಷ್ಯಗಣಕ್ಕೆ ಸಂದೇಶ ಕಳಿಸುತ್ತಿರುವರೆಂದೇ ಅವಳು ನಂಬಿದಳು.

ಸುಲಲಿತದೇವಿ, ಓರೆಕೋರೆನಗರದ ' ಮಾತಾಜಿ ' ಯಾಗುತ್ತಿದ್ದ ವಾರ್ತೆ ನಗರದಲ್ಲಿ ಹರಡುತ್ತಲೂ ಕುತೂಹಲದಿಂದ ಪ್ರೇರಿತರಾದ ಅನೇಕ ಜನರು ಮಂಡ

ಲದ ಸದಸ್ಯರಾಗಲು ಮುಂದೆ ಬಂದರು.

"ಇವರನ್ನೆಲ್ಲಾ ಕರೆದುಕೊಂಡರೆ ಹ್ಯಾಗೆ ಸಾಹುಕಾರರೇ?" ಎಂದು ಕೇಳಿದಳು ಸುಲಲಿತದೇವಿ.

"ಛೆ. ಛೆ. ಇವರನ್ನೆಲ್ಲಾ ಸೇರಿಸಲು ಇದೇನು ಇಸ್ಪೀಟುಕ್ಲಬ್ಬೋ? ವಿಶ್ವಾಸದ ಜನರನ್ನಷ್ಟೆ ಕರಕೊಳ್ಳಬೇಕು," ಎಂದರು ಕುಬೇರಪ್ಪ. "ಈಗಾಗಲೇ ಸಾಕಷ್ಟು ಮಂದಿ ಸದಸ್ಯರಾಗಿದಾರೆ, ಸದ್ಯಕ್ಕೆ ಇಷ್ಟೇ ಸಾಕು."

"ಅಧ್ಯಾತ್ಮ ಅಂದರೆ ಗಹನ ವಿಷಯ. ಹಾದಿಹೋಕರ ಬುದ್ಧಿಗೆಟಕುವಂಥ ವಿಷಯವಲ್ಲ. ಸಂತೆಯ ಗದ್ದಲ ಬೇಡ," ಎಂದರು ಶರಣಪ್ಪನವರು.

ಯೋಗಮಂಡಲದ ನಿಜ ಸ್ವರೂಪವನ್ನರಿತುಕೊಳ್ಳಬಯಸುತ್ತಿದ್ದ ನಾಗರಿಕರು ನಿರಾಶರಾದರು.

"ಹೋಗಲಿ ಬಿಡಿರ್ರೋ. ಕರೆದುಕೊಳ್ಳದಿದ್ದರೆಷ್ಟೋ ಹೋಯ್ತು. ಈ ಮಾತಾಜಿ ಎಂಥವಳೆಂಬುದು ನಮಗೇನು ಗೊತ್ತಿಲ್ಲೇನು? ಸಾಲೆಯೊಳಗಿನ ಒಬ್ಬ ಮಾಸ್ತರನ್ನೂ ಬಿಟ್ಟಿಲ್ಲವಂತೆ. ಇಂಥಾಕೆ ಈಗ ಮಾತಾಜಿಯ ಸೋಗು ಹಾಕುತ್ತಾಳೆ. ಲಫಂಗರೆಲ್ಲಾ ಕೂಡಿಕೊಂಡು ಅಲ್ಲಿ ಏನೇನು ಮಾಡುತಾರೋ ಯಾರಿಗ್ಗೊತ್ತು. ನಮಗೆ ಅದೆಲ್ಲಾ ಗೊತ್ತಾಗಬಾರದೆಂದೇ ನಮ್ಮನ್ನ ದೂರ ಇಡಲು ಯತ್ನಿಸುತ್ತಿದಾರೆ," ಎಂದು ಹೇಳಿಕೊಂಡು ಜನರು ಆ ವಿಚಾರ ತ್ಯಜಿಸಿಬಿಟ್ಟರು.

'ಯೋಗಮಂಡಲ'ದ ಸಭೆಗಳಿಗೆ ವಾರವಾರವೂ ಹೊಸ ಬಣ್ಣ ತೋರುತ್ತ ಬಂತು.

ದೂರದೂರದ ಊರುಗಳಿಂದ ಕರಾಚೂರ್ ಶಿಷ್ಯರನ್ನು ಬರಮಾಡಿಕೊಂಡು ಅವರ ಉಪನ್ಯಾಸಗಳನ್ನೇರ್ಪಡಿಸಲಾಯಿತು. ಕರಾಚೂರ್ ಗುರೂಜಿ ಮಾತಾಜಿಯರ 'ಮಹಾಯೋಗ'ದ ವಿಷಯ ಮಾತನಾಡುವುದೂ ಒಂದು 'ಫ್ಯಾಶನ್' ಆಯಿತು. ಯೋಗದ ತಳಬುಡವನ್ನರಿಯದವರೂ ಗುರೂಜಿ ಮಾತಾಜಿಯವರ ಶಿಷ್ಯರೆಂದು ಹೇಳಿಕೊಳ್ಳುತ್ತ ತಮ್ಮ 'ಉಚ್ಚ ಸಂಸ್ಕೃತಿ' ಯನ್ನು ಮೆರೆಸತೊಡಗಿದರು.

೯

ಆ ಭಾನುವಾರ ಸ್ವಲ್ಪ ಮುಂಚಿತವಾಗಿಯೇ ತಮ್ಮ ಮನೆಗೆ ಬಂದ ಮರುಳಯ್ಯನನ್ನು ಕಂಡು ಸುಚರಿತರಾಯ ಕೇಳಿದ :

" ಏನ್ರೀ ಮಾಸ್ತರೆ, ಎಂದೂ ಇಲ್ಲದವರು ಇವತ್ತು ಮೊದಲೇ ಬಂದಿರಿ ?"

" ಬೇಗ ಬರಬೇಕು ಅಂತ ಸುಲಲಿತದೇವಿಯವರೇ ಹೇಳಿದ್ದರು. ಯಾರೋ ಒಬ್ಬರು ಮಹಾ ಸಾಧಕರು ಬಂದಿದ್ದಾರಂತಲ್ಲ ! "

" ಮಹಾ ಸಾಧಕರು........? " ತುಟಿಗಳ ಮೇಲೆ ವ್ಯಂಗ್ಯ ನಗೆ ಮೂಡಿಸುತ್ತ ಸುಚರಿತರಾಯನೆಂದ : " ಓ ! ಮಾತಾಕುಮಾರರ ಬಗ್ಗೆ ಹೇಳಿರಬೇಕು ಅವರು."

" ಮಾತಾಕುಮಾರರೇ ಬಂದಾರೆಯೇ ! " ಆನಂದ–ವಿಸ್ಮಯ ತುಂಬಿದ ಧ್ವನಿಯಲ್ಲಿ ಪ್ರಶ್ನಿಸಿದ ಮರುಳಯ್ಯ. ಅವನಿಗೂ ಚಿರಪರಿಚಿತವಾದ ಹೆಸರು ಅದು. ಇಪ್ಪತ್ತು ವರ್ಷಗಳಿಂದಲೂ ಕರಾಚೂರ್ ಗುರೂಜಿ, ಮಾತಾಜಿಯವರ ಶಿಷ್ಯನಾಗಿ, ಅವರ ಯೋಗವಿದ್ಯೆಯ ಬಗೆಗೆ ಲೇಖನಗಳನ್ನೂ, ಪುಸ್ತಕಗಳನ್ನೂ ಬರೆದುದಲ್ಲದೆ, ಯೋಗಸಾಧನೆಯನ್ನೂ ನಡಸಿಕೊಂಡು ಬಂದು ಮಹಾಸಾಧಕನೆಂದು ಹೆಸರುವಾಸಿಯಾಗಿದ್ದವನು ಮಾತಾಕುಮಾರ. ಅವನ ಮೂಲ ಹೆಸರನ್ನೂ ಮರೆತು ಜನರು ' ಮಾತಾಕುಮಾರ ' ಎಂದೇ ಅವನನ್ನು ಕರೆಯುತ್ತಿದ್ದರು.

" ಅವರೆಲ್ಲಿ ಇಳಿದಿದ್ದಾರೆ ರಾಯರೇ ? " ಎಂದು ಪ್ರಶ್ನಿಸಿದ ಮರುಳಯ್ಯ.

" ಇಲ್ಲಿ ಅವರ ಪರಮಸ್ನೇಹಿತರೊಬ್ಬರಿದಾರೆ. ಮಾತಾಕುಮಾರರು ಬಂದಾಗಲೆಲ್ಲಾ ಅವರಲ್ಲೇ ಬಿಡಾರ ಹೂಡುತ್ತಾರೆ."

" ಅವರು ಇತ್ತ ಬರುವುದೂ ಅಪರೂಪವೇ ಅಲ್ಲವೇನು ? "

" ಹೌದು. ಹತ್ತು ಹನ್ನೊಂದು ವರ್ಷದಿಂದೀಚೆಗೆ ಬಂದ ಹಾಗಿಲ್ಲ. ಊರೂರು ತಿರುಗುವ ಚಟವೂ ಅವರಿಗಿಲ್ಲ. ಯಾವಾಗಲೂ ಯೋಗಸಾಧನೆಯಲ್ಲೇ ಮುಳುಗಿರುತ್ತಾರೆ."

"ಅವರಿಗೆ ಸಾಕ್ಷಾತ್ಕಾರವಾಗಿದೆಯಂತಲ್ಲ. ನಿಜವೇನ್ರಿ?"

"ಆಗಿದೆ ಅಂತ ಅನ್ನುತ್ತಾರಪ್ಪ. ನಾನು ಹ್ಯಾಗೆ ಹೇಳಬೇಕು?"

"ಅವರನ್ನೇ ಕೇಳಿದರೆ ಹ್ಯಾಗೆ?"

"ಓಹ್ಹೊ. ಕೇಳಬಹುದಲ್ಲ? ಇನ್ನೇನು, ಅವರೂ ಬಂದುಬಿಡುವ ವೇಳೆಯಾಯಿತು."

"ಶ್ರೀಮತಿಯವರೆಲ್ಲಿ ಕಾಣುವುದಿಲ್ಲವಲ್ಲ?"

"ಎಲ್ಲೋ ಅರ್ಜಂಟ್ ಕೆಲಸವಿದೆಯಂತ ಹೋಗಿದ್ದಾರೆ. ಸಭೆಯ ವೇಳೆಗೆಲ್ಲಾ ಬಂದುಬಿಡಬಹುದು," ಎಂದು ಸುಚರಿತರಾಯ ಹೇಳುತ್ತಿದ್ದ ಹಾಗೇ ಬಾಗಿಲಲ್ಲಿ, ಮೂಳೆಗಳ ಹಂದರದಂತಿದ್ದ ಬಡಕಲು ಶರೀರವೊಂದು ಕಾಣಿಸಿಕೊಂಡಿತು.

"ಬರ್ರಿ ಮಾತಾಕುಮಾರರೇ, ಬರ್ರಿ," ಎಂದ ಸುಚರಿತರಾಯ.

ಒಳಸೇರಿದ ಕೆನ್ನೆಗಳ, ಗೂನುಬೆನ್ನಿನ ಆ ಶರೀರ ನಿಧಾನವಾಗಿ ನಡೆಯುತ್ತಾ ಬಂದು ಕೊಟಡಿಯಲ್ಲಿದ್ದವರನ್ನು ಕಂಡು ಕೈಮುಗಿದು,

"ನಮಸ್ಕಾರ, ನಮಸ್ಕಾರ, ನಮಸ್ಕಾರ, ನಮಸ್ಕಾರ," ಎಂದು ಹೇಳಿತು.

"ಇವರೇ ಮಾತಾಕುಮಾರರು. ಇವರು ಮಾಸ್ತರ್ ಮರುಳಯ್ಯನವರು," ಎಂದ ಸುಚರಿತರಾಯ.

ಮರುಳಯ್ಯ ಕುರ್ಚಿಯಿಂದೆದ್ದು ವಿನಯದಿಂದ ವಂದಿಸಿದ.

ಮಾತಾಕುಮಾರ ತನ್ನ ಗೂನುಬೆನ್ನನ್ನು ಇನ್ನೂ ಬಾಗಿಸಿ, "ನಮಸ್ಕಾರ, ನಮಸ್ಕಾರ," ಎಂದ.

"ನಮಸ್ಕಾರ," ಎಂದ ಮರುಳಯ್ಯ.

"ನಮಸ್ಕಾರ, ನಮಸ್ಕಾರ," ಎಂದು ಮತ್ತೆ ಹೇಳಿದ ಮಾತಾಕುಮಾರ.

ಮರುಳಯ್ಯ ತಬ್ಬಿಬ್ಬಾಗಿ ಪ್ರತಿ ನಮಸ್ಕಾರ ಹೇಳಿದ.

ಆಗಲೂ ಸುಮ್ಮನಾಗಲಿಲ್ಲ ಮಾತಾಕುಮಾರ. ಮತ್ತೆ "ನಮಸ್ಕಾರ, ನಮಸ್ಕಾರ," ಎಂದ.

ಮುಂದೇನು ಮಾಡುವುದೆಂದು ಮರುಳಯ್ಯ ವಿಚಾರ ಮಾಡುತ್ತಿದ್ದಾಗಲೆ ಅಡಿಗೆಯವಳು ಹಾಲಿನ ಕಪ್ಪು ಹಿಡಿದು ಬಂದಳು.

ಒಡನೆಯೇ ಅವಳ ಕಡೆ ಮುಖ ಹೊರಳಿಸಿ, "ನಮಸ್ಕಾರ, ನಮ

ಸಾರ," ಎಂದ ಮಾತಾಕುಮಾರ.

ಕೈಯಲ್ಲಿನ ಕಪ್ಪನ್ನು ಟೀಪಾಯ್ ಮೇಲಿಟ್ಟು ಅವಳು ನರ್ತಕಿಯರಂತೆ ಬಳುಕಿ ಕೈ ಮುಗಿದು ವೈಯಾರದಿಂದ ನಕ್ಕಳು.

" ನಮಸ್ಕಾರ, ನಮಸ್ಕಾರ," ಎಂದ ಮಾತಾಕುಮಾರ.

ಅಡುಗೆಯವಳೂ ಮತ್ತೆ ಮೈಯನ್ನು ಮಣಿಸಿ, ಪ್ರತಿ ನಮಸ್ಕಾರ ಹೇಳಿದಳು.

" ಓಂ ಶ್ರೀ ಓಂ," ಎಂದು ಪುಟುಪುಟಿಸುತ್ತ ಮಾತಾಕುಮಾರ ಸೋಫಾ ದಲ್ಲಿ ದೇಹ ಚೆಲ್ಲಿದ, ಕಾಲುಗಳನ್ನು ಮೇಲೆತ್ತಿಕೊಂಡು ಪದ್ಮಾಸನ ಹಾಕಿದಂತೆ ಮಾಡಿದ, ಕಣ್ಣುಗಳನ್ನು ಮುಚ್ಚಿದ, ಕೈ ಜೋಡಿಸಿದ, ಮತ್ತೆ " ಓಂ ಶ್ರೀ ಓಂ," ಎಂದು ಹೇಳಿ ಕಣ್ದೆರೆದು, ಎದುರಿನ ಗೋಡೆಯ ಮೇಲಿದ್ದ ಗುರೂಜಿ, ಮಾತಾಜಿ ಯವರ ಚಿತ್ರಪಟಗಳತ್ತ ತಿರುಗಿ ನಮಸ್ಕಾರ ಮಾಡಿದ.

ಅವನು ಮಾಡುವುದೆಲ್ಲವನ್ನೂ ಚಕಿತನಾಗಿ ನೋಡುತ್ತ ಕುಳಿತಿದ್ದ ಮರುಳಯ್ಯನ ಬಾಯಿಯಿಂದ ಮಾತೇ ಹೊರಡದಂತಾಗಿತ್ತು. ಮಾತಾ ಕುಮಾರನಂಥ ವ್ಯಕ್ತಿಯನ್ನು ಆತ ಅದು ವರೆಗೂ ನೋಡಿರಲಿಲ್ಲ. ತಾನು ಮತ್ತು ಶರಣಪ್ಪ ಇಬ್ಬರೂ ಮಾತಾಕುಮಾರನೆದುರಲ್ಲಿ ತೀರಾ ಸಣ್ಣವರೆಂದೇ ಅವನಿಗನ್ನಿಸಿತು. ಪೂರ್ಣಯೋಗದ ಮಾರ್ಗದಲ್ಲಿ ಬಹಳ ಪ್ರಗತಿ ಹೊಂದಿರ ಬೇಕು ಮಾತಾಕುಮಾರ. ಎಂತಲೇ, ಸೃಷ್ಟಿಯ ಸಕಲ ಜೀವಗಳಲ್ಲೂ ಪರಮಾತ್ಮ ನನ್ನೇ ಕಾಣುವ ದಿವ್ಯದೃಷ್ಟಿ ಇವನಿಗೆ ಲಭಿಸಿದಂತಿದೆ. ಆತ ಮತ್ತೆ ಮತ್ತೆ ನಮಸ್ಕಾರ ಮಾಡುವುದಕ್ಕೂ ಅದೇ ಕಾರಣವಾಗಿರಲು ಸಾಕು.

" ಮತ್ತೇನು ವಿಶೇಷ ಕುಮಾರರೇ? ಈ ಸಲ ಕರಾಚೂರಿನಲ್ಲಿ ಏನೇನು ನಡೆಯಿತು?" ಎಂದು ಸುಚರಿತರಾಯ ಕೇಳುತ್ತಲೂ, ಮಾತಾಕುಮಾರ ಮತ್ತೆ ಕಣ್ಣು ಮುಚ್ಚಿ, ಕೈ ಜೋಡಿಸಿ, " ಓಂ ಶ್ರೀ ಓಂ," ರಾಗಕ್ಕಾರಂಭಿಸಿದ.

" ಈ ಸಲ ಎಷ್ಟು ದಿನ ಇದ್ದಿರಿ ಆಶ್ರಮದಲ್ಲಿ?" ಎಂದು ಕೇಳಿದ ಸುಚರಿತರಾಯ.

" ಓಂ ಶ್ರೀ ಓಂ! ಎರಡು ತಿಂಗಳ ವರೆಗೂ ಇದ್ದೆನಲ್ಲಾ ಆ ಪುಣ್ಯಧಾಮ ದಲ್ಲಿ........ಭಗವತೀ ಮಾತಾಜಿಯವರ ಸಾಮೂಹಿಕ ಧ್ಯಾನದಲ್ಲೂ ಭಾಗ ವಹಿಸುತ್ತಿದ್ದೆ. ಶ್ರೀ ಮಹಾತಾಯಿಯವರ ದಿವ್ಯ ಶ್ರೀಚರಣಗಳಿಗೆ ನಮಸ್ಕಾರ

ಮಾಡುವ ಅಪ್ಪಣೆಯೂ ಸಿಕ್ಕಿತ್ತು. ಧನ್ಯ....ಧನ್ಯ....ನಾನೇ ಧನ್ಯ!" ಎಂದು ಹೇಳುತ್ತಿದ್ದ ಹಾಗೇ ಮಾತಾಕುಮಾರನ ಕಣ್ಣು ಕಂಬನಿದುಂಬಿ ಕಂಠ ಗದ್ಗದಿತ ವಾಯಿತು.

"ಓಂ ಶ್ರೀ ಓಂ," ಎಂದು ಮತ್ತೆ ಹೇಳಿ ಗುರೂಜಿ, ಮಾತಾಜಿಯವರಿಗೆ ಮತ್ತೆ ಮಣಿದು ಆತ ಮುಂದುವರಿಸಿದ :

"ಆ ಸಾಮೂಹಿಕ ಧ್ಯಾನದ ವಾತಾವರಣವಾದರೂ ಎಷ್ಟು ಭವ್ಯ ಅಂತೀರಿ! ಎಷ್ಟು ದಿವ್ಯ....ಎಷ್ಟು ಪವಿತ್ರ!"

"ಸಾಮೂಹಿಕ ಧ್ಯಾನ ಎಲ್ಲಿ ನಡೀತದ?" ಎಂದು ಕುತೂಹಲದಿಂದ ಕೇಳಿದ ಮರುಳಯ್ಯ.

"ಅದಕ್ಕಾಗಿಯೇ ಒಂದು ಸ್ಪೆಷಲ್ ಧ್ಯಾನಮಂದಿರವನ್ನೇ ಕಟ್ಟಿದಾರೆ. ಅದೂ ಕೂಡಾ ಬಹಳ ಭವ್ಯವಾಗಿದೆ. ಸುಮಾರು ನಲವತ್ತು ಸಾವಿರದ ವರೆಗೂ ಖರ್ಚಾಯಿತಂತೆ ಕಟ್ಟಡಕ್ಕೆ. ಅಲ್ಲಿ ಕಾಲಿಟ್ಟ ಕೂಡಲೇ ಮನಸ್ಸಿಗೆ ಅಪೂರ್ವ ಶಾಂತಿ ಅನಿಸುತದ. ಸಾಧಕರೆಲ್ಲಾ ಬಂದು ಶಿಸ್ತಿನಿಂದ ಕೂತುಕೊಂಡು ಧ್ಯಾನ ಮಾಡುತಿರುತಾರೆ. ಎದುರಿಗೆ ಸ್ವಲ್ಪ ಎತ್ತರಿಸಿದ ವೇದಿಕೆಯ ಮೇಲೆ ಶ್ರೀ ಮಹಾತಾಯಿಯವರು ಬಂದು ಕೂತುಕೊಳ್ಳುತಾರೆ. ಅವರು ಕೂಡುವ ಸ್ಥಳಕ್ಕೆ ತೀರಾ ಎದುರಾಗುವಂತೆ ನಾನೂ ನನ್ನ ಗೆಳೆಯರೂ ಕೂತುಕೊಳ್ಳುತ್ತಿದ್ದೆವು. ನಮ್ಮ ಧ್ಯಾನಕ್ಕಾರಂಭವಾದ ಸ್ವಲ್ಪ ಹೊತ್ತಿನಲ್ಲೇ ಶ್ರೀ ಮಹಾತಾಯಿಯವರು ಮಹಡಿಯಿಂದ ಕೆಳಗಿಳಿದು ಬರುತ್ತಿದ್ದರು. ಮೊಟ್ಟ ಮೊದಲನೇ ಸಾರಿ ಅವರು ಮೆಟ್ಟಲಿಳಿದು ಬರುತ್ತಿದ್ದಾಗ ಸಾಕ್ಷಾತ್ ಶ್ರೀ ಮಹಾಲಕ್ಷ್ಮಿಯಂತೇ ಕಾಣಿಸಿದರು ನನಗೆ. ಎಂಥಾ ಮಹಾ ದೃಶ್ಯ ಅಂತೀರಿ ಅದು! ಶ್ರೀ ಕ್ರಿಸ್ತದೇವರ ತಾಯಿ ಜಗಜ್ಜನನಿ ಮೇರಿದೇವಿಯೇ ಭಕ್ತೋದ್ಧಾರಕ್ಕಾಗಿ ಕರಾಚೂರಿನಲ್ಲಿ ಪ್ರತ್ಯಕ್ಷರಾಗಿರುವರೆಂತಲೇ ನನಗನಿಸಿತು. ಆಹಾ! ಧನ್ಯ....ಧನ್ಯ.... ಓಂ ಶ್ರೀ ಓಂ...."

ಆತ ಮತ್ತೆ ತಡೆದು ನಿಂತ, ಮತ್ತೊಮ್ಮೆ ಕೈಯೆತ್ತಿ ಮಹಾಗುರು, ಮಹಾಮಾತೆಯರಿಗೆ ವಂದಿಸಿ ಮೆಲುದನಿಯಲ್ಲಿ ಮುಂದುವರಿಸಿದ :

"ನಾವೆಲ್ಲರೂ ಕೂತಲ್ಲಿಂದಲೇ ಭಕ್ತಿಭಾವದಿಂದ ಅವರಿಗೆ ನಮಸ್ಕಾರ ಮಾಡಿದೆವು. ಮಂದಿರದಲ್ಲಿದ್ದ ದೀಪಗಳನ್ನೆಲ್ಲ ನಂದಿಸಿ ಒಂದೇ ದೀಪವನ್ನುಳಿಸ

ಲಾಯಿತು. ಶ್ರೀ ಮಹಾತಾಯಿಯವರು ವೇದಿಕೆಯ ಮೇಲೆ ಮಂಡಿಸಿ ನಮ್ಮೆಲ್ಲರ ಮೇಲೆ ಕೃಪಾದೃಷ್ಟಿ ಬೀರಿದರು. ಆಗ ನನಗೆ ಒಮ್ಮೆಲೇ ಮೈ ಮರೆತು ಹೋಯಿತು. ನನ್ನ ಬುದ್ಧಿಯೊಳಗಿನ ವಿಚಾರಗಳೆಲ್ಲಾ ತಮ್ಮಿಂದ ತಾವೇ ಅಡಗಿಹೋದುವು. ಹೃದಯದೊಳಗಿನ ಭಾವನೆಗಳೆಲ್ಲಾ ತಮ್ಮಿಂದ ತಾವೇ ಮಾಯವಾದುವು. ಪ್ರಕೃತಿಯೇ ಸ್ತಬ್ಧವಾದಂತಾಯಿತು. ' ಇದಿರಿನ ಒಂಬತ್ತು ಬಾಗಿಲ ಮುಚ್ಚಿ ಹಿಂದಿನ ಒಂದು ಬಾಗಿಲ ತೆರೆದು ನೋಡಲು ಎಲ್ಲಾ ಬಯಲಿಗೆ ಬಯಲಾಗಿ ಹೋಯಿತ್ತು. ಆ ಬಟ್ಟ ಬಯಲಿನೊಳಗೆ ಮಹಾ ಘನವ ಕಂಡೆ ' ಅಂತ ಮಹಾಶರಣೆ ಲಿಂಗಮ್ಮನವರು ಹೇಳಿಲ್ಲವೆ? ಅಂಥ ಮಹಾಬಯಲಿನ ಅನುಭವ ಆಗ ನನಗಾಯಿತು. ಅಷ್ಟರಲ್ಲಿ ಶ್ರೀ ಮಹಾಮಾತೆಯವರು ತಮ್ಮ ದಿವ್ಯ ಸಮಾಧಿಯಿಂದ ಹೊರ ಬಂದು ತಮ್ಮ ದಿವ್ಯ ನೇತ್ರಗಳನ್ನು ಅರಳಿಸಿದರು. ದೀಪಗಳೆಲ್ಲಾ ಮತ್ತೆ ಉರಿಯತೊಡಗಿದುವು. ನಾವೆಲ್ಲರೂ ಮತ್ತೊಮ್ಮೆ ಶ್ರೀ ಮಹಾಮಾತೆಯವರಿಗೆ ನಮಸ್ಕರಿಸಿದೆವು. ಶ್ರೀ ಮಾತೆಯವರು ಮೌನವಾಗಿ ನಮ್ಮನ್ನು ಆಶೀರ್ವದಿಸಿ ಮಹಡಿಗೆ ದಯಮಾಡಿಸಿದರು. ನನ್ನ ಜೀವಮಾನದಲ್ಲೇ ಮರೆಯಲಾಗದಂಥಾ ದಿವ್ಯ ಅನುಭವ ಅದು .. ಓಂ ಶ್ರೀ ಓಂ........" ಎಂದು ಹೇಳುತ್ತಾ ಕೈ ಮುಗಿದ ಮಾತಾಕುಮಾರ. ಈ ಬಾರಿ ಸುಚರಿತರಾಯನೂ ಕೈಯೆತ್ತಿ ವಂದಿಸಿದ. ಮರುಳಯ್ಯನೂ ಅವನನ್ನನುಸರಿಸಿದ.

"ಹಾಲು ಕುಡೀರಿ ಮಾಸ್ತರೇ. ಆರಿಹೋಯ್ತೇನೊ," ಎಂದು ಸುಚರಿತರಾಯ ಹೇಳಿದಾಗಲೇ ಮರುಳಯ್ಯನಿಗೆ ಹಾಲಿನತ್ತ ಲಕ್ಷ್ಯ ಹೋಯಿತು.

"ಮಾತಾಕುಮಾರರು?"

"ಬ್ರಹ್ಮಸಾಕ್ಷಾತ್ಕಾರದ ಕ್ಷೀರಪಾನ ಮಾಡಿರುವ ಸಾಧಕರಿಗೆ ಇಂಥ ಹಾಲಿನ ಅಗತ್ಯವೇ ಇಲ್ಲ. ನೀವು ಕುಡೀರಿ," ಎಂದು ನಗುತ್ತಾ ಹೇಳಿದ ಸುಚರಿತರಾಯ.

"ಇವರ ಪರಿಚಯ ಸರಿಯಾಗಿ ಮಾಡಿಕೊಡಲಿಲ್ಲ ಅಲ್ಲವೆ? ಇವರು ಹೈಸ್ಕೂಲಿನ ಮಾಸ್ತರು. ನಮ್ಮ ಶ್ರೀಮತಿಯವರ ಸಹೋದ್ಯೋಗಿಗಳು. ನಿಮ್ಮ ಹಾಗೇ ಸಾಧಕರು. ಮಹಾಗುರು, ಮಹಾಮಾತೆಯರಲ್ಲಿ ಬಹಳ ಭಕ್ತಿ," ಎಂದು ಸುಚರಿತರಾಯ ಹೇಳುತ್ತಿದ್ದ ಹಾಗೇ ಮಾತಾಕುಮಾರ ಧಿಗ್ಗನೆದ್ದು ಮರುಳಯ್ಯನ ಹತ್ತಿರ ಹೋಗಿ ಅವನನ್ನು ಆಲಿಂಗಿಸಿಕೊಂಡು,

" ಇನ್ನೊಬ್ಬರು ಗುರುಭಾಯಿ ಸಿಕ್ಕಂತಾಯಿತು. ಧನ್ಯ! ಧನ್ಯ! ಕರ್ನಾಟಕದಲ್ಲಿ ಮಹಾಗುರು, ಮಹಾಮಾತೆಯರ ಶಿಷ್ಯರ ಸಂಖ್ಯೆ ಹೆಚ್ಚಿದಷ್ಟೂ ನನಗೆ ಸಂತೋಷ. ನೀವೂ ಕರಾಚೂರಿಗೆ ಹೋಗಿ ಮಹಾಗುರು, ಮಹಾಮಾತೆಯರ ದರ್ಶನ ಪಡೆದು ಬಂದಿರಬಹುದಲ್ಲಾ ? " ಎಂದು ಕೇಳಿದ.

" ಇನ್ನೂ ಆ ಸುಯೋಗ ಬರಲಿಲ್ಲ ಕವಿಗಳೇ ! "

" ಕವಿಗಳು........ಕವಿ ? ಶ್ರೀ ಮಹಾಗುರುವಿನಂಥಾ ಮಹಾಕವಿಯ ಮುಂದೆ ನಾನೆಂಥಾ ಕವಿ ? ಅವರ ಮಹಾಕಾವ್ಯಗಳ ಮುಂದೆ ವ್ಯಾಸ, ವಾಲ್ಮೀಕಿ, ಕಾಳಿದಾಸಾದಿಗಳ ಕೃತಿಗಳೂ ಸಪ್ಪೆ. ಇನ್ನು ನಾನೆಲ್ಲಿ ? ನನ್ನನ್ನ ಮಾತಾಕುಮಾರ ಎಂದೇ ಕರೆಯಿರಿ. ನಾನು ಕವಿತೆ ಬರೆಯುವದನ್ನೂ ಬಿಟ್ಟು ಬಹಳ ವರ್ಷವಾಯಿತು."

" ಬರೆಯದಿದ್ದರೇನಾಯಿತು ? ಈಗಲೂ ನಿಮ್ಮದು ಕವಿ ಹೃದಯವೇ ಅಲ್ಲವೇನು ? " ಎಂದ ಸುಚರಿತರಾಯ.

" ಅಲ್ಲ, ಅಲ್ಲ, ನಾನು ಕವಿಯಲ್ಲ. ಶ್ರೀ ಮಹಾಗುರುಗಳ ಕರುಣೆಯ ಕಂದ ನಾನು. ಶ್ರೀ ಮಹಾಮಾತೆಯರ ಕೃಪೆಯ ಕೂಸು ನಾನು. ಓಂ ಶ್ರೀ ಓಂ ! "

ಆ ವೇಳೆಗೆ ಹೊರಗಡೆ ಮೆಟ್ಟಲುಗಳ ಮೇಲೆ ಸದ್ದಾಗುವುದು ಕೇಳ ಬಂದಿತು.

" ಶ್ರೀಮತಿಯವರು ಬಂದರು, " ಎಂದ ಸುಚರಿತರಾಯ. ಮಾತಾಕುಮಾರ ಒಡನೆಯೇ ಎದ್ದು ಕೈಕಟ್ಟಿ ನಿಂತುಕೊಂಡ. ಅವನು ಎದ್ದು ನಿಂತುಕೊಂಡಿರುವಾಗ ತಾನು ಕುಳಿತುಕೊಂಡಿರುವುದು ಸರಿಯಲ್ಲವೆಂದು ಬಗೆದು ಮರುಳಯ್ಯನೂ ಎದ್ದು ನಿಂತ.

ದರಬಾರಿನಲ್ಲಿ ನೆರೆದ ಜನರ ಮುಜುರೆಗಳನ್ನು ಸ್ವೀಕರಿಸುತ್ತ ಗಾಂಭೀರ್ಯದಿಂದ ನಡೆದು ಬರುವ ಮಹಾರಾಣಿಯಂತೆ ಒಳಗೆ ಅಡಿಯಿರಿಸಿದಳು ಸುಲಲಿತ ದೇವಿ.

ಮಾತಾಕುಮಾರ, ತನ್ನ ಪದ್ಧತಿಯಂತೆ ಅವಳಿಗೂ ನಾಲ್ಕು ಬಾರಿ ನಮಸ್ಕರಿಸಿದ. ಅವಳು ನಗುನಗುತ್ತಲೇ ನಮಸ್ಕಾರ ಹೇಳಿ ಇಬ್ಬರಿಗೂ ಕುಳಿತಿರಲು ತಿಳಿಸಿ,

" ಬಂದು ಬಹಳ ಹೊತ್ತಾಯಿತೇನೊ," ಎಂದಳು.

" ಇದೇ ಈಗ ಬಂದೆ," ಎಂದ ಮರುಳಯ್ಯ.

" ಆರೋಗ್ಯವಾಗಿದೀರಾ ಮಾತಾಕುಮಾರರೆ ? "

" ಓಂ ಶ್ರೀ ಓಂ ! ಭಗವತೀ ಮಾತಾಜಿಯವರ ದಯದಿಂದ ಹೀಗಿದ್ದೇನೆ ನೋಡಿರಿ."

" ಬರ್‍ರಿ ಮರುಳಯ್ಯನವರೆ. ನಿಮ್ಮ ಹತ್ತಿರ ಮಾತಾಡುವುದಿದೆ. ನನ್ನ ರೂಮಿಗೆ ಹೋಗೋಣ," ಎಂದು ಹೇಳಿ ಸುಲಲಿತದೇವಿ, ಮಾತಾಕುಮಾರ ನನ್ನು ಕುರಿತು, " ದಯವಿಟ್ಟು ಕ್ಷಮಿಸುತ್ತೀರಾ ? ಈಗ ಬಂದು ಬಿಡುತ್ತೇನೆ," ಎಂದಳು.

" ಹೋಗಿ ಬನ್ನಿ. ಹೋಗಿ ಬನ್ನಿ," ಎಂದ ಮಾತಾಕುಮಾರ.

ಸಾಕಷ್ಟು ದೊಡ್ಡದಾಗಿದ್ದ ಸುಲಲಿತದೇವಿಯ ಕೊಟಡಿಯಲ್ಲೂ ಒಂದು ಸಣ್ಣ ಸೋಫಾ ಇತ್ತು. ಅದರೆದುರಿಗೇ ಅವಳ ಮಂಚ. ಕಿಟಕಿಯ ಬಳಿಯ ಲ್ಲೊಂದು ಮೇಜು. ಗೋಡೆಯ ಮೇಲೆ ಮಾತಾಜಿಯ ತ್ರಿವರ್ಣಚಿತ್ರ.

" ಕೂಡ್ರಿ ಮರುಳಯ್ಯನವರೆ. ಸಾಹುಕಾರರು ಹೇಳಿ ಕಳಿಸಿದ್ದರು. ಹೋಗಿದ್ದೆ. ನಿಮ್ಮ ವಿಚಾರವೇ ಹೊರಟಿತ್ತು. ಅವರ ಊರಿಗೆ ಹೋಗಿ ಆಶ್ರಮ ಸ್ಥಾಪಿಸುವ ಬಗ್ಗೆ ಏನು ನಿರ್ಧಾರ ಮಾಡಿದಿರಿ ? "

" ಇನ್ನೂ ಏನೂ ಆಗಲಿಲ್ಲ."

" ಯಾಕೆ ? ನಿಮ್ಮ ಶ್ರೀಮತಿಯವರನ್ನು ಕೇಳಿದಿರಾ ? "

ಹೇಳಲೋ ಬೇಡವೋ ಎಂದು ಒಂದು ಒಂದು ಗಳಿಗೆ ಯೋಚಿಸುತ್ತಿದ್ದು ಅನಂತರ ಆತನೆಂದ :

" ಅವರಿಗೆ ಕೇಳಿದರೂ ಏನೂ ಪ್ರಯೋಜನವಿಲ್ಲ."

ಮೇಜಿನ ಮೇಲಿದ್ದ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತ, ತಲೆ ಗೂದಲಿನ ಮೇಲೆ ಬಾಚಣಿಗೆಯನ್ನಾಡಿಸುತ್ತ ಅವಳು ಕೇಳಿದಳು.

" ನಿಮ್ಮ ಸಮಸ್ಯೆಯೇನು ಹೇಳಿರಲ್ಲ ? ",

ಕೂಡಲೇ ಉತ್ತರವೀಯಲಿಲ್ಲ ಮರುಳಯ್ಯ. ಸ್ವಲ್ಪ ಹೊತ್ತು ಯೋಚಿಸು ತ್ತಿದ್ದು ಅನಂತರ ಮನಸ್ಸಿನಲ್ಲಿಯೇ ಯಾವುದೋ ನಿರ್ಧಾರಕ್ಕೆ ಬಂದು, ತಾನು ಬ್ರಹ್ಮಚರ್ಯವ್ರತ ಕೈಗೊಂಡ ವಿಚಾರವನ್ನೂ, ಈಚೆಗೆ ತನ್ನ ಹೆಂಡತಿಯಿಂದ

ಅದಕ್ಕೆ ವಿಘ್ನವೊದಗುತ್ತಿದ್ದುದನ್ನೂ ವಿವರಿಸಿ ಹೇಳಿದ.

ಅವನು ಹೇಳಿ ಮುಗಿಸುವ ವರೆಗೂ ಗಂಭೀರವಾಗಿ ಕುಳಿತು ಕೇಳುತ್ತಿದ್ದ ಸುಲಲಿತದೇವಿ ಆತ ಮುಗಿಸಿದೊಡನೆ ಮಂದಹಾಸ ಬೀರುತ್ತ ಹೇಳಿದಳು:

"ಕಠಿಣವಾದ ಸಮಸ್ಯೆಯೇ. ನಿಮ್ಮ ಹೆಂಡತಿಗೆ ಯಾರಾದರೂ ಕಲಿಸಿ ಕೊಡುತ್ತಿದಾರೋ ಏನು?"

ಮುಕ್ಕಣ್ಣ, ಪದ್ಮಾವತಿಯರ ವಿಚಾರವಾಗಿ ಮರುಳಯ್ಯ ವಿವರಿಸಿ,.

"ಅವರೇ ಅವಳ ತಲೆ ಕೆಡಿಸುತ್ತಿರಬೇಕು ಅಂತ ನನಗನಿಸುತದ. ನಿಮಗೇನನಿಸುತದ?" ಎಂದು ಕೇಳಿದ.

"ಇದ್ದರೂ ಇರಬಹುದು. ಅಥವಾ ಇರಲಿಕ್ಕಿಲ್ಲ. ಮತ್ತೆ ಯಾರಾದರೂ ಇರಬಾರದೇಕೆ?"

"ಅವಳಿಗೆ ಮತ್ತ್ಯಾರ ಗುರುತೂ ಇಲ್ಲರೀ. ನಮ್ಮ ಮನೆಗೂ ಯಾರೂ ಬರುವದಿಲ್ಲ."

"ಯಾರೂ?"

"ಯಾರೂ ಬರುವದಿಲ್ಲ. ಅವಳೂ ಎಲ್ಲಿಗೂ ಹೋಗುವುದಿಲ್ಲ."

"ಹೀಗೇನು?" ಒಂದು ಕ್ಷಣ ಮೌನವಾಗಿದ್ದು ಅವಳು ಮತ್ತೆ ಕೇಳಿದಳು. "ನಿಮ್ಮ ಪತ್ನಿಯವರ ಸ್ವಭಾವ ಹ್ಯಾಗದ?"

"ಅಂದರೆ?"

"ಅಂದರೆ—ಅವರೂ ನಿಮ್ಮ ಹಾಗೇ ಇದಾರೋ, ಅಥವಾ...."

"ನನ್ನ ಹಾಗಂದರೆ?"

"ದೇವರ ಮೇಲೆ ಅವರಿಗೂ ಪೂರ್ಣ ನಂಬಿಕೆ ಅದೆಯೋ?"

"ಇರಲೇ ಬೇಕಲ್ಲರೀ?"

"ಪೂಜೆ ಗೀಜೆ ಮಾಡ್ತಾರೇನು ಅವರು?"

"ಮಾಡ್ತಾರೆ—ಎಂದಾದರೊಮ್ಮೆ."

"ಮನಃಪೂರ್ವಕವಾಗಿ ಮಾಡ್ತಾರೋ? ಅಥವಾ ನಿಮ್ಮ ಮನಸು ನೋಯಿಸಬಾರದಂತ ಮೇಲೆ ಮೇಲೆ ನಾಟಕ ಮಾಡ್ತಾರೋ?"

"ಇಲ್ಲ. ನಾಟಕ ಗೀಟಕ ಅವಳಿಗೆ ತಿಳೀದು."

"ನೋಡ್ರಿ. ಸರಿಯಾಗಿ ವಿಚಾರ ಮಾಡಿ ಹೇಳ್ರಿ. ಹೆಂಗಸರ ಸ್ವಭಾವ

ಬಹಳ ಸೂಕ್ಷ್ಮ. ಗಂಡಸರಾದ ನಿಮಗೆ ಅದು ಸರಿಯಾಗಿ ಅರ್ಥವಾಗುವದು ಕಷ್ಟ. ಮನೆಯಲ್ಲಿ ಅವರೊಬ್ಬರೇ ಇರ್ತಾರೆ, ಯಾರೂ ಅಲ್ಲಿಗೆ ಬರುವದಿಲ್ಲ, ಅವರೂ ಎಲ್ಲಿಗೂ ಹೋಗುವುದಿಲ್ಲ ಅಂತ ಅಂದಿರಿ. ವೇಳೆ ಹ್ಯಾಗೆ ಕಳೀತಾರೆ ?"

"ಪುಸ್ತಕ ಗಿಸ್ತಕ ಓದುತಾರಲ್ಲ........"

"ಪುಸ್ತಕ ? ಎಂಥಾ ಪುಸ್ತಕ ?"

"ಎಲ್ಲಾ ತರದ ಪುಸ್ತಕ ಕಥೆ, ಕಾದಂಬರಿ ಕೂಡಾ."

"ಕಾದಂಬರಿಗಳೇ ? ಆಯ್ತು, ಗೊತ್ತಾಯಿತು ನನಗೆ. ಅಂದರೆ— ಅವರು ಪೂರಾ ನಿಮ್ಮ ಹಾಗೆ ಅಲ್ಲ ಅನ್ನಿರಿ."

"ಅಂದರೆ ?"

"ಅವರ ಸ್ವಭಾವ ಒಂದು ತರಾ ಇರಬೇಕು. ಯಾವದೂ ಅವರನ್ನ ಭೆಟ್ಟಿಯಾದಾಗ ಗೊತ್ತಾಗಬೇಕು. ಅವರನ್ನೂ ಕರಕೊಂಡು ಬನ್ನಿರಲ್ಲ ಇಲ್ಲಿಗೆ. ಒಬ್ಬರೇ ಇದ್ದೇ ಹೆಂಗಸರು ಕೆಡೂದು. ನಾಲ್ಕು ಮಂದಿಯ ಸಹವಾಸದಲ್ಲಿದ್ದರೆ ಬೇಸರವಾಗುವದಿಲ್ಲ. ಒಳ್ಳೆಯ ವಿಚಾರಗಳೂ ಮೂಡುತಾವೆ."

"ಮಧ್ಯಾಹ್ನ ನೀವೂ ಇರುವುದಿಲ್ಲಲ್ಲ ಮನೆಯೊಳಗೆ ? ಆಕೆ ಇಲ್ಲಿಗೆ ಯಾವಾಗ ಬರಬೇಕು ?"

"ಸಾಯಂಕಾಲ ಬರಲಿ. ಮುಂಜಾನೆ ಬರಲಿ."

"ಆಗ ಬಂದರೆ ಅಡಿಗೆ ?"

"ಓಹ್ಹೊ. ಮರೆತೇ ಬಿಟ್ಟಿದ್ದೆ. ಅಡಿಗೆ ಮುಖ್ಯ ಅಲ್ಲವೇನು ? ನಿಜ. ನಿಜ. ದಿನಾಲೂ ಬರಬೇಕಂತ ನಾನು ಹೇಳಲಿಲ್ಲ. ನನಗೆ ರಜ ಇದ್ದಾಗ ಬಂದರಾಯಿತಲ್ಲ? ನಾನು ನೋಡಿ ಮಾತಾಡಿ ಅವರ ಸ್ವಭಾವ ತಿಳಕೊಳ್ಳು ತೀನಿ. ಮುಂದೆ ಅವರನ್ನು ಸುಧಾರಿಸುವ ಪ್ರಯತ್ನ ಮಾಡೂಣು."

"ಅದೆಲ್ಲಾ ಮುಂದಿನ ಮಾತಾಯ್ತು. ಈಗ ನಾನೇನು ಮಾಡಬೇಕು ಅಂತ ಚಿಂತೆ ಮಾಡ್ತಾ ಇದೀನಿ....."

"ಅದಕ್ಕ್ಯಾಕೆ ಅಷ್ಟೊಂದು ಚಿಂತೆ? ನಮ್ಮ ಹೆಡ್ಮಾಸ್ತರು ಮಾಡುವ ಹಾಗೇ ಮಾಡಿದರಾಯ್ತಲ್ಲ ? ಹೆಂಡತಿಯನ್ನು ದೂರವಿಡಲಿಕ್ಕೆ ಅವರೇನು ಉಪಾಯ ಮಾಡಿದ್ದಾರನ್ನೂದು ನಿಮಗೆ ಗೊತ್ತಿಲ್ಲೇನು ?"

"ಇಲ್ಲ. ಏನು ?"

ಕೊಂಚವೂ ಸಂಕೋಚಪಟ್ಟುಕೊಳ್ಳದೆ ಶರಣಪ್ಪನವರ ಉಪಾಯವನ್ನು ತಿಳಿಸಿ ಹೇಳಿದಳು, ಸುಲಲಿತದೇವಿ.

"ಹ್ಯಾಗದ ಯುಕ್ತಿ? ರೂಮಿನೊಳಗೆ ಕರೆದುಕೊಳ್ಳದೇ ಇದ್ದರೆ ಚಲೋ ದಲ್ಲವೇನು?"

"ಹೌದೌದು. ಒಳ್ಳೇ ಯುಕ್ತಿ," ಎಂದು ಮರುಳಯ್ಯ ಹೇಳಿದನಾದರೂ ಅವನ ಮನಸ್ಸಿನಲ್ಲಿ ಮತ್ತೊಂದು ಸಂದೇಹ ಮೂಡಿ ಅವನನ್ನು ಚಿಂತಾಗ್ರಸ್ತ ನನ್ನಾಗಿಸಿತು. ಕಮಲಮುಖಿಯನ್ನು ಕೊಟಡಿಗೆ ಸೇರಿಸದೆ ತಾನೊಬ್ಬನೇ ಕದವಿಕ್ಕಿ ಚಿಲಕ ಹಾಕಿಕೊಂಡು ಮಲಗಿಕೊಳ್ಳಬಹುದು. ಅದೇನೋ ಸರಿಯೆ. ಆದರೆ ಅದರ ಪರಿಣಾಮವೇನಾದೀತು? ತಾನು ಕನಸು ಮನಸಿನಲ್ಲೂ ಊಹಿಸ ದಿದ್ದ ವಿಪರೀತ ಪರಿಣಾಮವಾದರೇನು ಗತಿ?

"ಇನ್ನೊಂದು ಮಾತು ಮರುಳಯ್ಯನವರೆ. ನಿಮ್ಮ ಸಾಧಕ ಜೀವನದ ಬಗ್ಗೆ ನಿಮ್ಮವರಲ್ಲಿ ಸಹಾನುಭೂತಿ ಅದೆಯೋ ಇಲ್ಲೋ?"

"ಅದೇ ನನಗೆ ತಿಳೀದಾಗಿದೆ."

"ಸರಿ. ಆದಷ್ಟು ಬೇಗ ಅವರನ್ನಿಲ್ಲಿಗೆ ಕರಕೊಂಡು ಬರ್ರಿ. ಯೋಗಾ ಭ್ಯಾಸದ ರುಚಿ ಅವರಿಗೂ ಹತ್ತಿತೆಂದರೆ ನಿಮ್ಮ ಸಮಸ್ಯೆ ತನ್ನಷ್ಟಕ್ಕೆ ತಾನೇ ಪರಿಹಾರವಾಗ್ತದ...."

ಅವಳಿನ್ನೂ ಮಾತನಾಡುತ್ತಿದ್ದ ಹಾಗೇ ಕೊಟಡಿಯ ಬಾಗಿಲನ್ನು ತಳ್ಳಿ ಡೊಳ್ಳುಹೊಟ್ಟೆಯ ವ್ಯಕ್ತಿಯೊಂದು ಒಳಗಡೆ ಪ್ರವೇಶಿಸಿತು.

"ಬರ್ರಿ, ಬರ್ರಿ ಸಾವುಕಾರರೆ, ನಿಮ್ಮ ಹಾದಿಯನ್ನೇ ನೋಡುತ್ತಿದ್ದೆವು," ಎಂದು ಸ್ವಾಗತಿಸಿದಳು ಸುಲಲಿತದೇವಿ.

ಅವಳನ್ನು ಓರೆನೋಟದಿಂದ ದೃಷ್ಟಿಸುತ್ತ ಸೋಫಾದಲ್ಲಿ ಕುಳಿತುಕೊಂಡ ಕುಬೇರಪ್ಪ. ಅವನು ಭಾರೀ ಸಾಹುಕಾರನೆಂದು ಸಾರಿ ಹೇಳಲು ಅವನ ಮೊಗದ ಸೋಮಾರಿ ಭಾವವೇ ಸಮರ್ಥವಾಗಿತ್ತು. ಕಾಂಗ್ರೆಸ್ ಮುಂದಾಳು ಗಳ ಚಿಹ್ನವಾದ ಖಾದೀ ವೇಷ. ಎಡಗೈಯಲ್ಲಿ ಚಿನ್ನದ ಸರಪಳಿಯ ಗಡಿಯಾರ. ಬಲಗೈ ಬೆರಳಿಗೊಂದು ಹರಳಿನುಂಗುರ. ತುಟಿಗಳಲ್ಲಿ ರಸಿಕತನದ ಕುರುಹಾದ ವಿಲಾಸೀನಗು. ಕಣ್ಣಿನಲ್ಲಿ ಸದಾ ಸಂಚರಿಸುವ ಕಾಮಭಾವ.

"ಏನ್ಸುದ್ದಿ? ಏನು ಚರ್ಚೆ ..ಡೆದಿತ್ತು? ನಾನು ಬಂದದ್ದರಿಂದ

ತೊಂದರೆಯಾಗಲಿಲ್ಲ ಹೌದಲ್ಲೋ?" ಎಂದು ಕೃತ್ರಿಮ ವಿನಯ ನಟಿಸಿದ ಕುಬೇರಪ್ಪ.

"ಛೆ. ಛೆ. ಎಂಥಾ ತೊಂದರೆ? ಅದೂ ನಿಮ್ಮಿಂದ!" ಎಂದ ಮರುಳಯ್ಯ.

"ಆಶ್ರಮದ ವಿಚಾರವಾಗೇ ಮಾತಾಡುತ್ತಿದ್ದೆವು. ತಮ್ಮ ಕೆಲವು ಸಾಂಸಾರಿಕ ತೊಂದರೆಗಳ ಬಗ್ಗೆ ಇವರು ಹೇಳುತ್ತಿದ್ದರು," ಎಂದಳು ಸುಲಲಿತ ದೇವಿ.

ಇತರರ ಸಾಂಸಾರಿಕ ತೊಂದರೆಗಳ ವಿಚಾರವಾಗಿ ಕುಬೇರಪ್ಪನಿಗೆ ಯಾವಾಗಲೂ ವಿಶೇಷ ಆಸಕ್ತಿ. ಅಂಥ ಸಂದರ್ಭಗಳಲ್ಲೆಲ್ಲಾ ಆ ದುರ್ದೈವಿಗಳ ಮನೆಯ ವರೆಗೂ ಹೋಗಿ ಅನುಕಂಪ ಸೂಚಿಸುವುದು ಅವನು ಎಂದಿನಿಂದಲೂ ಅನುಸರಿಸಿಕೊಂಡು ಬಂದಿದ್ದ ಪದ್ಧತಿ.

"ಪಾಪ. ಪಾಪ. ಏನು ತೊಂದರೆಯೊ. ಸಂಸಾರವೆಂದರೇನೇ ಹೀಗೆ. ಏನಾದರೊಂದು ಇದ್ದೇ ಇರ್‍ತದಲ್ಲ. ತಾಳ್ಮೆಗೆಡದೆ ತುಂಬ ಸಮಾಧಾನ ದಿಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು."

"ನಾನೂ ಅದನ್ನೇ ಹೇಳುತಾ ಇದ್ದೆ ಮರುಳಯ್ಯನವರಿಗೆ."

"ಆದದ್ದಾದರೂ ಏನು?" ಎಂದ ಕುಬೇರಪ್ಪ.

"ಹೇಳಬಹುದೇ ಮರುಳಯ್ಯನವರೆ?"

ತನ್ನ ಖಾಸಗೀ ವಿಷಯಗಳನ್ನು ಸುಲಲಿತದೇವಿಯ ಹತ್ತಿರ ಪ್ರಸ್ತಾಪಿಸಿ ದುದೇ ಅನುಚಿತವಾಯಿತೆಂದು ಮರುಳಯ್ಯನಿಗನ್ನಿಸಿತು. ಎಂಥ ಮೂರ್ಖ ತಾನು! ಇವಳಿಗೆ ಗೊತ್ತಾದ ವಿಷಯ ಊರಿಗೆಲ್ಲ ಗೊತ್ತಾಗಲು ವಿಲಂಬವೇನೂ ಆಗುವುದಿಲ್ಲ. ಸರಿ. ದುಡುಕಿ ಹೇಳಿಯಾಯಿತು. ಕುಬೇರಪ್ಪನವರೆದುರೂ ಅದನ್ನು ಪ್ರಸ್ತಾಪಿಸುವ ಉಪದ್ವ್ಯಾಪ ಬೇಡವೆಂದೇ ಆತ ನಿರ್ಧರಿಸಿದ.

ಆತ ಅನುಮಾನಿಸುವುದನ್ನು ಗುರುತಿಸಿಕೊಂಡ ಸುಲಲಿತದೇವಿ,

"ಈಗ ಬೇಡ ಬಿಡಿರಿ. ಇನ್ನೊಮ್ಮೆ ಹೇಳ್ತೀನಿ ಎಂದಾದರೂ," ಎಂದು ನುಡಿದು ಮರುಳಯ್ಯನಿಗೆ ಗೊತ್ತಾಗದಂತೆ ಕುಬೇರಪ್ಪನ ಕಡೆ ದೃಷ್ಟಿ ಹೊರಳಿಸಿ ಕಣ್ಣು ಮಿಟುಕಿಸಿದಳು.

ಕುಬೇರಪ್ಪ ಬಲು ಚಾಣಾಕ್ಷ. ಆತ ಆ ವಿಷಯವನ್ನೆ ಬಿಟ್ಟು ಆಶ್ರಮದ

ವಿಚಾರ ಪ್ರಸ್ತಾಪಿಸಿದ:

"ಸುಲಲಿತದೇವಿ ಈಗಾಗಲೇ ಹೇಳಿರಬಹುದಲ್ಲಾ ನಿಮ್ಮ ಮುಂದೆ? ಕರ್ನಾಟಕದಲ್ಲಿರುವ ಕರಾಚೂರಿನ ಶಿಷ್ಯಮಂಡಲಿಗೆಲ್ಲಾ ಉಪಯೋಗವಾಗುವಂಥಾದ್ದೊಂದು ಆಶ್ರಮ ಸ್ಥಾಪಿಸಬೇಕೆಂಬ ವಿಚಾರ ಬಹಳ ದಿನಗಳಿಂದ ನನ್ನ ತಲೆಯಲ್ಲಿದೆ. ಅದರ ವ್ಯವಸ್ಥೆ ನೋಡಿಕೊಳ್ಳುವರೊಬ್ಬರು ಸಿಕ್ಕರೆ ನಾಳೆಯೇ ಆಶ್ರಮ ಸುರುಮಾಡಬಹುದು."

"ಎಲ್ಲಿ ಸುರು ಮಾಡೂದು ಆಶ್ರಮ?"

"ಸಾಹುಕಾರರು ದೊಡ್ಡ ಜಮೀನ್ದಾರರಿದಾರ ಅನ್ನೂದು ನಿಮಗೆ ಗೊತ್ತಿಲ್ಲೇನ್ರೀ ಮರುಳಯ್ಯನವರೆ? ಇಲ್ಲಿಂದ ಹತ್ತು ಮೈಲು ದೂರದಲ್ಲಿ ಲೋಳಸರ ಅಂತ ಹಳ್ಳಿ ಅದ ಅಲ್ಲ, ಅಲ್ಲಿಯ ಜಮೀನುಗಳೆಲ್ಲಾ ಇವರದೇ. ಊರು ಗುಡ್ಡದ ಹತ್ತಿರ ಇದ್ದು, ಹತ್ತಿರವೇ ಒಂದು ಹೊಳೆಯೂ ಹರೀತದ. ಗಿಡ ಗಂಟೆ, ತೋಟಪಟ್ಟಿ ಎಲ್ಲಾ ಬಹಳ ಚಂದ ಅದ. ತೋಟದೊಳಗೆ ಸಾಹುಕಾರರು ಒಂದು ಬಂಗಲೆಯನ್ನೂ ಕಟ್ಟಿಸಿದ್ದಾರೆ. ಅಲ್ಲೇ ಆಶ್ರಮ ಮಾಡಿದರೆ ಬಹಳ ಚಂದಾಗಬಹುದು. ಯಾಕ್ರೀ ಸಾಹುಕಾರರೆ?" ಎಂದಳು ಸುಲಲಿತ ದೇವಿ.

"ನಾನೂ ಅದೇ ವಿಚಾರ ಮಾಡಿಯೇ ಆ ಬಂಗಲೆ ಕಟ್ಟಿಸಿದ್ದು. ಅಲ್ಲೇ ಬಂದಿದ್ದು ಆಶ್ರಮದ ವ್ಯವಸ್ಥೆ ನೋಡಿಕೊಳ್ಳಬೇಕಂತ ಮಾತಾಕುಮಾರರಿಗೂ ಕೇಳಿಕೊಂಡಿದ್ದೆವಲ್ಲ—ಅವರು ಒಪ್ಪಲಿಲ್ಲ. ಹಾಗಾಗಿ ಆ ವಿಚಾರ ಅಲ್ಲೇ ಉಳಿಯಿತು. ಆಶ್ರಮ ಅಂದ ಮೇಲೆ ಯಾರಾದರೊಬ್ಬರು ನೋಡಿಕೊಳ್ಳುವವರು ಬೇಕೇಬೇಕಲ್ಲ?"

"ನೀವಂತೂ ಅಲ್ಲೇ ಇರುತ್ತೀರಲ್ಲ ಸಾಹುಕಾರರೆ?" ಎಂದ ಮರುಳಯ್ಯ.

"ನಾನೇ?" ಗುಂಡೋದರದ ಮೇಲೆ ಮೆಲ್ಲನೆ ಕೈಯಾಡಿಸುತ್ತ ಕುಬೇರಪ್ಪ ಹೇಳಿದ: "ಇನ್ನೂ ಆ ಯೋಗ ಬರಲಿಲ್ಲ ಮರುಳಯ್ಯ. ನೂರಾ ಎಂಟು ವ್ಯಾಪ ಗಂಟುಬಿದ್ದಾವೆ. ಕಾಂಗ್ರೆಸ್ ಕೆಲಸ ಬೇರೆ. ಯಾವಾಗಲೂ ಪ್ರವಾಸ ಮಾಡಬೇಕಾಗ್ತದ. ಇದೆಲ್ಲಾ ತಪ್ಪಿದಾಗ ನಾನು ಊರಲ್ಲಿರೂದು. ಮಹಾತಾಯಿ ಎಂದು ಕೃಪೆ ಮಾಡುತಾರೋ...."

" ಮರುಳಯ್ಯನವರೇ ಅಲ್ಲಿ ಬಂದು ಇರಲು ತಯಾರಾದರೆ ಹ್ಯಾಗೆ ಸಾಹುಕಾರರೇ ? "

" ಓಹ್ಹೊ! ಹಾಗಾದರೆ ಬಹಳ ಚಲೋನೇ ಆಗುವದಲ್ಲ! ಇಂಥಾ ಸಾಧಕರು ಆಶ್ರಮದ ಹೊಣೆ ಹೊತ್ತುಕೊಳ್ಳಲಿಕ್ಕೆ ಮುಂದೆ ಬರುವದಾದರೆ ನಾಳೆಯೇ ಸುರುಮಾಡಿ ಬಿಡೋಣು ಆಶ್ರಮವನ್ನ........"

" ಯಾಕ್ರೀ ಮಾಸ್ತರರೆ, ಏನಂತೀರಿ ? ತಯಾರಿದೀರೇನು ? "

ಮರುಳಯ್ಯ ಕೂಡಲೇ ಉತ್ತರವೀಯಲಸಮರ್ಥನಾಗಿ ಮೀನಮೇಷ ಮಾಡುವುದನ್ನು ಕಂಡುಕೊಂಡ ಸುಲಲಿತದೇವಿ ಜಾಣತನದಿಂದ ಅವನ ಸಹಾಯಕ್ಕೆ ಬಂದಳು.

" ವಿಚಾರ ಮಾಡಿ ಹೇಳಿರಿ. ನಿಮ್ಮ ಶ್ರೀಮತಿಯವರನ್ನೂ ಕೇಳಿ ನೋಡಿರಿ. ಅವರೂ ಒಪ್ಪಿದರೆ ಒಳ್ಳೆಯದು. ಯಾಕ್ರೀ ಸಾಹುಕಾರರೇ ? "

" ಹೌದು. ಹೌದು. ಮರುಳಯ್ಯನವರೊಬ್ಬರೇ ಬರುವದಿಲ್ಲವಲ್ಲ ಆಶ್ರಮಕ್ಕೆ ? ಅವರ ಸಂಗಡ ಅವರ ಶ್ರೀಮತಿಯವರೂ ಬರಬೇಕಷ್ಟೆ? ಮನೆಯಲ್ಲಿ ಮತ್ತೆ ಯಾರಿದ್ದಾರೆ ? "

" ಯಾರೂ ಇಲ್ಲ. ಗಂಡ ಹೆಂಡತಿ ಇಬ್ಬರೇ."

" ನಾನು ಆಶ್ರಮಕ್ಕೆ ಬರುವದಾದರೆ ನೌಕರಿ ಬಿಟ್ಟೇ ಬರಬೇಕಾಗ್ತದ, ಅಲ್ರೀ ? "

" ಹೌದು ಮತ್ತೆ! ನೌಕರಿಯಲ್ಲಿದ್ದುಕೊಂಡು ಆಶ್ರಮ ಹ್ಯಾಗೆ ನಡಸ್ತೀರಿ ? "

ಮರುಳಯ್ಯ ಕೈಗಳನ್ನುಜ್ಜಿಕೊಳ್ಳುತ್ತಾ ಮತ್ತೆ ವಿಚಾರ ಮಗ್ನನಾದ. ಅವನ ಮನಸ್ಸಿನಲ್ಲುದ್ಭವಿಸಿದ ಆಲೋಚನೆಯನ್ನೂಹಿಸಿಕೊಂಡು ಸುಲಲಿತದೇವಿ ಹೇಳಿದಳು :

" ನೌಕರಿ ಬಿಟ್ಟರೆ ಹೇಗೋ ಅಂತ ಚಿಂತೆ ಮಾಡಬೇಕಾಗಿಲ್ಲ ಮಾಸ್ತರರೇ. ಇಲ್ಲಿ ಸಿಗುವ ಸಂಬಳದಷ್ಟು ಗೌರವ ವೇತನ ಆಶ್ರಮದಲ್ಲೂ ಸಿಗ್ತದ. ನಿಮಗೆ ಆಗಲೇ ಹೇಳಿದ್ದೆನಲ್ಲ...."

" ಹೌದು, ಹೌದು. ಜೀವನ ವೇತನ ಇದ್ದೇ ಇರ್ತದಲ್ಲಾ ? ನೀವು ಯಾವದಕ್ಕೂ ಅನುಮಾನಿಸಬೇಕಾಗಿಲ್ಲ ಮರುಳಯ್ಯನವರೆ. ನನ್ನ ತೋಟ

ವೊಂದರ ಉತ್ಪನ್ನವನ್ನೇ ಆಶ್ರಮಕ್ಕೆಂದು ತೆಗೆದಿಡುತ್ತೀನಿ."

"ಸಾಹುಕಾರರಿಗೆ ಯಾತರದೂ ಕೊರತೆಯಿಲ್ಲರೀ, ಮಾಸ್ತರರೇ. ಎಷ್ಟೋ ಸಂಘ ಸಂಸ್ಥೆಗಳಿಗೆ ಅವರು ದಾನ ಮಾಡಿದಾರೆ. ಕರಾಚೂರಿನ ಆಶ್ರಮಕ್ಕೂ ಕೂಡಾ ಐವತ್ತು ಸಾವಿರ ರೂಪಾಯಿ ಕೊಟ್ಟಿದ್ದಾರೆ."

"ಕೆಲವು ದಿವಸಗಳಾದರೂ ನಾನು ಕರಾಚೂರಿನಲ್ಲೇ ಇರಬೇಕು ಅಂತ ಆಸೆ ನನಗೆ," ಎಂದು ಮರುಳಯ್ಯ.

"ಹಾಗೂ ಮಾಡಬಹುದಲ್ಲ? ಮೊದಲು ನಮ್ಮ ಆಶ್ರಮ ಸ್ಥಾಪಿಸೋಣ. ಅದೊಂದು ಸ್ಥಿತಿಗೆ ಬಂದ ಬಳಿಕ ನೀವು ಕೆಲದಿನಗಳ ಮಟ್ಟಿಗೆ ಕರಾಚೂರಿಗೂ ಹೋಗಿ ಬರಬಹುದು."

ಅಷ್ಟರಲ್ಲಿ ಅಡುಗೆಯಾಳು ವಾಸಂತಿ ಬಂದು, ಉಪಾಹಾರ ಸಿದ್ಧವಾಗಿದೆ," ಎಂದು ಹೇಳಿದಳು. ಮೂವರೂ ಕೊಟಡಿಯನ್ನು ಬಿಟ್ಟು ನಡುಮನೆಗೆ ಬಂದರು.

"ಕಡೆಗೊಮ್ಮೆ ನಮ್ಮ ಆಶ್ರಮ ಸುರೂ ಆಗುವ ಸುಯೋಗ ಬಂತು ನೋಡಿರಿ," ಎಂದು ಕುಬೇರಪ್ಪ ಹೇಳಿದ, ಮಾತಾಕುಮಾರನನ್ನು ಕುರಿತು.

"ಹೌದೇ? ಶ್ರೀ ಮಹಾಮಾತೆಯವರ ಕೃಪೆ. ಶ್ರೀ ಮಹಾಗುರುಗಳ ಕೃಪೆ. ಓಂ ಶ್ರೀ ಓಂ," ಎಂದ ಮಾತಾಕುಮಾರ.

"ಮರುಳಯ್ಯನವರು ಆಶ್ರಮದಲ್ಲಿದ್ದು ಎಲ್ಲಾ ನೋಡಿಕೊಳ್ಳಲು ಒಪ್ಪಿದಾರೆ. ನೀವೂ ಆಗಾಗ ಬಂದು ಸಾಧನೆ ಮಾಡುತ್ತಿರಬೇಕು," ಎಂದಳು ಸುಲಲಿತದೇವಿ.

"ಆಗಲಿ, ಆಗಲಿ. ಅವಶ್ಯ ಬರ್ತೀನಿ. ಓಂ ಶ್ರೀ ಓಂ," ಎಂದ ಮಾತಾಕುಮಾರ. "ನನಗೂ ಮೈಯಲ್ಲಿ ಸೆಟ್ಟಗಿಲ್ಲ. ಎರಡು ಮೂರು ತಿಂಗಳಾದರೂ ವಿಶ್ರಾಂತಿ ತಗೊಳ್ಳಬೇಕು ಅಂತ ವೈದ್ಯರು ಹೇಳಿದಾರೆ. ಶ್ರೀ ಮಹಾಗುರುಗಳ ಹೊಸ ಪುಸ್ತಕ ಓದಿ ಮುಗಿಸುವ ಮಹಾಕೆಲಸವೂ ಅದ. ನೀವು ಕರೆದಾಗ ಬರ್ತೀನಿ."

ಉಂಡೆ, ಉಪ್ಪಿಟ್ಟು, ಕಾಫಿ, ತಂದಿಟ್ಟಳು ವಾಸಂತಿ. ಮಾತಾಕುಮಾರನೂ ಮರುಳಯ್ಯನೂ ಅವುಗಳನ್ನು ಮುಟ್ಟಲಿಲ್ಲ. ವಾಸಂತಿಯ ಪಾಕ ನೈಪುಣ್ಯವನ್ನು ಪ್ರಶಂಸಿಸುತ್ತ ಉಂಡೆಗಳನ್ನು ಬಾಯಿಗಿಳಿಸತೊಡಗಿದ ಕುಬೇರಪ್ಪ.

"ನೀನು ಮಾಡುವ ಉಂಡಿ ಅಂದರೇ ಉಂಡಿ ನೋಡು ವಾಸಂತೀ,

ಇಷ್ಟು ಸವಿಯಾದ ಉಂಡಿ ಮುಂಬಯಿಯಲ್ಲಿ ಕೂಡಾ ಸಿಕ್ಕುವದಿಲ್ಲ."

"ಆಹ್ಹಾ! ಬಿಟ್ಟರಲ್ಲಾ!" ಎಂದು ವೈಯಾರದಿಂದ ಹೇಳಿದಳು ವಾಸಂತಿ. "ಇನ್ನೊಂದೆರಡು ಬೇಕೇನು ಅಂತ ಕೇಳ್ತೀಯಲ್ಲಾ! ಸಾಕು ಅಂತ ಅನ್ನೂದಕ್ಕೆ ಮನಸ್ಸಾದರೂ ಹ್ಯಾಗಾದೀತು?"

ಸಾಹುಕಾರನ ಮಾತಿನ ಧೋರಣೆಯನ್ನು ಅರ್ಥಮಾಡಿಕೊಳ್ಳದೆ ಮರುಳಯ್ಯ ಗೊಂದಲಕ್ಕೊಳಗಾದ. ಮಾತಾಕುಮಾರನಿಗೆ ಮಾತ್ರ ನಡೆಯುತ್ತಿದ್ದ ಮಾತುಗಳ ಕಡೆ ಕೊಂಚವೂ, ಲಕ್ಷ್ಯವಿರಲಿಲ್ಲ. ಆತ ತನ್ನ ಪಾಡಿಗೆ ತಾನು ಕಣ್ಣು ಮುಚ್ಚಿಕೊಂಡು ಧ್ಯಾನಾಸಕ್ತನಾಗಿದ್ದ!

"ಒಂದು ಉಂಡಿ ಆದರೂ ತಿನ್ನಿರಲ್ರೀ ಮಾಸ್ತರರೇ!" ಎಂದಳು. ಸುಲಲಿತದೇವಿ.

"ಅಯ್ಯೋ ಬೇಡ ಬೇಡ."

"ಮನೆಯಲ್ಲೂ ನೀವು ತಿನ್ನುವುದಿಲ್ಲವೇನ್ರೀ?" ಎಂದ ಸುಚರಿತರಾಯ.

"ಇಲ್ರೀ. ನಮ್ಮಲ್ಲಿ ಇದೆಲ್ಲಾ ಅಭ್ಯಾಸ ಇಲ್ಲ."

ಆ ಸರಳವಾದ ಮಾತಿಗೆ ಯಾವುದೋ ವಿಪರೀತಾರ್ಥ ಕಲ್ಪಿಸಿಕೊಂಡು ಮುಖವನ್ನತ್ತ ತಿರುಗಿಸಿ ಪಿಸಿಪಿಸಿ ನಕ್ಕಳು ವಾಸಂತಿ. ಸುಲಲಿತದೇವಿಗೂ ನಗೆಯನ್ನು ತಡೆದುಕೊಳ್ಳಲಾಗಲಿಲ್ಲ. ಕುಬೇರಪ್ಪನ ತುಟಿಗಳ ಮೇಲೂ ಕಿರುನಗೆ ಮೂಡಿ ಮಾಯವಾಯಿತು. ಸುಚರಿತರಾಯ ಮಾತ್ರ ತುಟಿಗಳನ್ನಲುಗಿಸದೆ ಗಂಭೀರವಾಗಿ ಕುಳಿತಿದ್ದ.

ಉಪಾಹಾರ ಮುಗಿಯುತ್ತಲೂ ಪ್ರಾರ್ಥನಾಸಭೆಗಾರಂಭವಾಯಿತು. ಆ ದಿನದ ಸಭೆಗೆ ಬೇರಾರೂ ಬರಲಿಲ್ಲ. ಪ್ರಾರ್ಥನೆ ಮುಗಿಯುತ್ತಲೂ ಮರುಳಯ್ಯ ಹೊರಟು ನಿಂತ.

"ಹೋಗ್ರೀರಾ? ಮತ್ತೆ ಯಾವಾಗ ಭೆಟ್ಟ?" ಎಂದ. ಕುಬೇರಪ್ಪ. ಸಾಯಂಕಾಲ ಬಂದು ಬಿಡಿರಲ್ಲ? ಸಾಹುಕಾರರೂ ಇರ್ತಾರೆ ಇಲ್ಲೇ," ಎಂದ ಸುಚರಿತರಾಯ.

"ಬರ್ರಿ. ತಪ್ಪದೆ ಬರ್ರಿ," ಎಂದು ಕುಬೇರಪ್ಪನೂ ಹೇಳಿದ. ಸುಲಲಿತದೇವಿ ಬಾಗಿಲಿನ ವರೆಗೂ ಬಂದು ಪಿಸುದನಿಯಲ್ಲಿ ಹೇಳಿದಳು.

"ಇವತ್ತು ರಾತ್ರಿ ನಾ ಹೇಳಿದ ಹಾಗೆ ಮಾಡಲಿಕ್ಕೆ ಮರೀಬೇಡಿರಿ."

" ಹಾಗೆ ಮಾಡ್ತೀನಿ."

" ನಾಳೆ ಬರುವಾಗ ನಿಮ್ಮ ಮನೆಯವರನ್ನೂ ಕರಕೊಂಡು ಬಂದುಬಿಡಿರಿ. ಇಬ್ಬರೂ ಇಲ್ಲೇ ಊಟ ಮಾಡಿಕೊಂಡು ಹೋದೀರಂತೆ."

" ಛೆ. ಛೆ. ಅದೆಲ್ಲಾ ಯಾತಕ್ಕೆ ? ಬೇಡ, ಬೇಡ."

" ಊಟಕ್ಕೇನ್ರೀ ಸಂಕೋಚ ? ನೀವೂ ವಿಚಿತ್ರ ಇದ್ದೀರಲ್ಲ? ಕರಕೊಂಡು ಬರ್ರಿ."

" ಆಯ್ತು. ಹಾಗೇ ಮಾಡ್ತೀನಿ. ಬರ್ತೀನ್ರೀ ಸಾಹುಕಾರರೇ. ನಮಸ್ಕಾರ," ಎಂದು ಹೇಳಿ ಮರುಳಯ್ಯ ಮೆಟ್ಟಲುಗಳನ್ನಿಳಿಯುತ್ತಿದ್ದ ಹಾಗೇ ಆಗ ತಾನೆ ಧ್ಯಾನದಿಂದೆಚ್ಚರಗೊಂಡ ಮಾತಾಕುಮಾರ ಎದ್ದು ಓಡುತ್ತ ಬಂದ.

" ಹೊರಟು ಬಿಟ್ಟರಾ ಮಾಸ್ತರರೇ ? "

" ಬರ್ತೀನಿ. ನಮಸ್ಕಾರ."

" ನಮಸ್ಕಾರ, ನಮಸ್ಕಾರ."

" ನಮಸ್ಕಾರ."

" ನಮಸ್ಕಾರ. ನಮಸ್ಕಾರ. ನಮಸ್ಕಾರ," ಎಂದು ಹೇಳುತ್ತಾ ಹೆಬ್ಬಾಗಿಲಿನ ವರೆಗೂ ಬಂದ ಮಾತಾಕುಮಾರ.

" ಇನ್ನೂ ಎಷ್ಟು ದಿನ ಇಲ್ಲೇ ಇರ್ತೀರಿ ?" ಎಂದ ಮರುಳಯ್ಯ.

" ನಾಳೆ ಹೊರಟುಬಿಡಬೇಕೂಂತ ಮಾಡೀನಿ. ಓರೆಕೋರೆನಗರದ ಹವೆ ನನಗೆ ಒಗ್ಗುವದಿಲ್ಲ."

" ನಾಳೇನೇ ಹೋಗ್ತೀರಾ ? ನಿಮ್ಮ ಹತ್ತರ ಇನ್ನೂ ಮಾತನಾಡಬೇಕಾಗಿತ್ತು. ರಾತ್ರಿ ನೀವು ವಸ್ತಿ ಮಾಡುವದೆಲ್ಲಿ ? "

" ನಾನು ಓರೆಕೋರೆಗೆ ಬಂದಾಗಲೆಲ್ಲಾ ನಮ್ಮ ಅಣ್ಣನವರಲ್ಲೇ ಉಳಿದುಕೊಳ್ಳುವೇ ? "

" ಅಣ್ಣನವರು ? ಇಲ್ಲೇ ಇದಾರೆ ? "

" ನಮ್ಮಣ್ಣನವರೆಂದರೆ ಗೊತ್ತಿಲ್ಲೇನು ನಿಮಗೆ? ಡಿಸ್ಟ್ರಿಕ್ಟ ಜಜ್ಜರಾಗಿದ್ದು ಈಗ ರಿಟೈರಾಗಿದಾರೆ. ರೋಷರಾಯರು ಅಂತ...."

" ಓಹ್ಹೊ ಅವರೇ ? ಅಣ್ಣನವರು ಅಂದರೆ–ನಿಮ್ಮ ಪರಮ ಸ್ನೇಹಿತರು.... ಅಲ್ಲೇನು ? "

"ಸ್ನೇಹಿತರೂ ಹೌದು, ಗುರುಭಾಯಿಯೂ ಹೌದು, ಹಿರಿಯಣ್ಣನೂ ಹೌದು. ಅವರ ನನ್ನ ಸಂಬಂಧ ಅಂದರೆ ಹಾಲು ಸಕ್ಕರೆ ಸಂಬಂಧದಂತೆ–ಶ್ರೀ ಮಹಾತಾಯಿಯವರ ಕೃಪೆ. ಓಂ ಶ್ರೀ ಓಂ...."

ಮಾತನಾಡುತ್ತಿದ್ದ ಹಾಗೇ ಅವರಿಬ್ಬರೂ ಆ ಬೀದಿಯನ್ನು ದಾಟಿ ಬಂದಿದ್ದರು.

"ಈಗ ನೀವೆಲ್ಲಿಗೆ ಹೋಗುವವರು? ಸುಚರಿತರಾಯರಿಗೆ ಹೇಳಿ ಬಂದಿರೋ ಏನು?"

"ಇಲ್ಲ. ಹೇಳಲಿಲ್ಲ. ಹೇಳಬೇಕಿತ್ತು. ಮರೆತು ಬಿಟ್ಟೆ. ಈಗ ಮತ್ತೆ ಹೋಗುವುದರಲ್ಲಿ ಅರ್ಥವಿಲ್ಲ. ನಡೀರಿ. ನಾನೂ ಬರ್ತೀನಿ. ನಿಮ್ಮ ಮನೆ ಎಷ್ಟು ದೂರ?"

"ಒಂದು ಮೈಲು ಆದೀತು."

"ಎಲ್ಲಿದೆ ಅದು?"

"ಹೈಸ್ಕೂಲಿನ ಹತ್ತರವೇ."

"ನಮ್ಮಣ್ಣನವರ ಮನೆಯೂ ಅಲ್ಲಿಂದ ಹತ್ತರವೇ. ನಿಮ್ಮನ್ನ ಮನೆಗೆ ಬಿಟ್ಟು ನಾನು ಹೋಗ್ತೀನಿ. ನಡೀರಿ."

ರಾತ್ರಿಯೂಟಕ್ಕೆ ಮಾತಾಕುಮಾರನನ್ನು ತಮ್ಮಲ್ಲಿಗೇ ಕರೆದೊಯ್ಯಲೇ ಎಂದು ತನ್ನಷ್ಟಕ್ಕೆ ತಾನೇ ಯೋಚಿಸಿದ ಮರುಳಯ್ಯ. ಮಾತಾಕುಮಾರನ ಬಗ್ಗೆ ಆತನಲ್ಲಿ ಮೊದಲಿನಿಂದಲೂ ಗೌರವವಿತ್ತು. ಅವನನ್ನು ಮುಖತಃ ನೋಡಬೇಕೆಂಬ ಬಯಕೆಯೂ ಬಹಳ ದಿನಗಳಿಂದ ಬೆಳೆದು ಬಂದಿತ್ತು. ಕರಾಚೂರಿನ ಮಹಾಗುರು ಮಹಾಮಾತೆಯರ ಆಶೀರ್ವಾದದಿಂದ ಯೋಗಸಾಧನೆಯಲ್ಲಿ ಸಾಕಷ್ಟು ಮುಂದುವರಿದಿರುವನೆಂದೂ ಒಂದೆರಡು ಬಾರಿ ಅವನಿಗೆ ಸಾಕ್ಷಾತ್ಕಾರವೂ ಆಗಿರುವುದೆಂದೂ ಕೇಳಿ ತಿಳಿದಂದಿನಿಂದಲಂತೂ ಅವನನ್ನು ಕಂಡು ಅವನ ಅನುಭವಗಳನ್ನು ಕೇಳಿ ಅವನ ಮಾರ್ಗದರ್ಶನದಿಂದ ತಾನೂ ಲಾಭ ಪಡೆಯಬೇಕೆಂದು ಆಶಿಸಿಕೊಂಡಿದ್ದ ಮರುಳಯ್ಯ. ಸುಚರಿತರಾಯರ ಮನೆಯಲ್ಲಿ ಆತನೊಡನೆ ಹೆಚ್ಚಾಗಿ ಮಾತನಾಡುವ ಅವಕಾಶವೇ ಲಭಿಸಿರಲಿಲ್ಲ. ಆತ ನಾಳೆಯೇ ಊರಿಗೆ ಹೊರಟುಬಿಡುವನಂತೆ. ಮತ್ತೆ ಯಾವಾಗ ಅವನ ಭೆಟ್ಟಿಯಾಗುವುದೋ ದೇವರಿಗೇ ಗೊತ್ತು. ಸದ್ಯಕ್ಕಂತೂ ಸುದೈವದಿಂದ ಆತ ತನ್ನ

ಜೊತೆಗೇ ಬರುತ್ತಿದಾನೆ. ರಾತ್ರಿಯೂಟಕ್ಕೆ ತಮ್ಮಲ್ಲಿಗೇ ಕರೆದೊಯ್ದು ಅಲ್ಲಿಯೇ ನಿಲ್ಲಿಸಿಕೊಂಡು ಬಿಟ್ಟರೆ ಈ ದಿನವೇ ಆತನ ಅನುಭವಗಳೆಲ್ಲವನ್ನೂ ತಿಳಿದು ಕೊಳ್ಳಲು ಸಾಧ್ಯವಾದೀತು. ಆದರೆ, ತಾನು ಕರೆದರೆ ಈತ ಬರುವನೋ ಇಲ್ಲವೋ....

"ಇವತ್ತು ನಮ್ಮಲ್ಲಿಗೇ ಊಟಕ್ಕೆ ಬರ್ತೀರಾ?" ಎಂದು ಆತ ಹೆದರುತ್ತ ಹೆದರುತ್ತ ಕೇಳಿದ.

ಯಾವುದೋ ಯೋಚನೆಯಲ್ಲಿ ಮುಳುಗಿದ್ದ ಮಾತಾಕುಮಾರ ಕೂಡಲೇ ಉತ್ತರವೀಯಲಿಲ್ಲ. ನಗರದ ಮುಖ್ಯ ರಸ್ತೆಯಲ್ಲಿ ನಡೆಯುತ್ತಿದ್ದಾಗಲೂ ಆತ ಕರಾಚೂರಿನ ಆಶ್ರಮವನ್ನೇ ಕಾಣುತ್ತಿದ್ದ ಹಾಗೆ ತೋರುತ್ತಿತ್ತು. ಅಂಗಡಿ ಗಳಲ್ಲಿನ ಜನರ ಕೂಗಾಟ, ವಿದ್ಯುದ್ದೀಪಗಳ ಝುಗಝುಗಾಟ, ಸೈಕಲ್ ಮೋಟಾರು ಟಾಂಗಾಗಳ ಓಡಾಟ, ಪಾದಚಾರಿಗಳ ಅಲೆದಾಟ ಇದಾವುದನ್ನು ಗಮನಿಸದೆ ಸ್ವಪ್ನಲೋಕದಲ್ಲಿ ಸಂಚರಿಸುವವರಂತೆ ಆತ ನಡೆದು ಬರುತ್ತಿದ್ದ.

"ನಾ ಹೇಳಿದ್ದು ಗೊತ್ತಾಗಲಿಲ್ಲವೇನ್ರೀ?" ಅವನ ಭುಜ ತಟ್ಟಿ ಕೇಳಿದ ಮರುಳಯ್ಯ.

"ಅಂಹಂ? ಏನು ಏನು?" ಎನ್ನುತ್ತಾ ನೈತಿಳಿದು, ಮರುಳಯ್ಯನತ್ತ ಮೊಗ ತಿರುಗಿಸಿದ ಮಾತಾಕುಮಾರ.

"ಈಗ ನಮ್ಮಲ್ಲಿಗೇ ಊಟಕ್ಕೆ ಹೋಗೋಣ ಅಂದೆ."

"ಊಟ? ನಾನು ರಾತ್ರೆ ಊಟ ಮಾಡುವದೇ ಇಲ್ಲ."

"ಮತ್ತೆ?"

"ಸ್ವಲ್ಪ ಹಣ್ಣು, ಸ್ವಲ್ಪ ಹಾಲು ಅಷ್ಟೇ ತೆಗೆದುಕೊಳ್ತೀನಿ. ಕರಾಚೂ ರಿನ ಆಶ್ರಮಕ್ಕೆ ಹೋದಂದಿನಿಂದ ಹೀಗೇ ನಡೆದು ಬಂದದ."

"ಹಾಗೇ ಆಗಲಿ. ಮಾರ್ಕೆಟ್ಟಿಗೆ ಹೋಗಿ ಹಣ್ಣು ತೆಗೆದುಕೊಂಡು ಹೋಗೋಣ. ಮನೆಯಲ್ಲಿ ಹಾಲು ಇದ್ದೇ ಇರ್ತದ."

"ಅಣ್ಣನವರು ಕಾಯುತಾ ಇರ್ತಾರಲ್ಲ?"

"ಅವರಿಗೆ ಹೇಳಿ ಬಿಟ್ಟೇ ಬರೋಣ ಬೇಕಾದರೆ. ದೇವರ ದರ್ಶನ ಆದಂತೆ ನಿಮ್ಮ ದರ್ಶನ ಆಯ್ತು ಇವತ್ತು. ಮತ್ತೆಂದು ಸಿಗುತೀರೋ ಏನೊ. ನಿಮ್ಮ ಅನುಭವಗಳನ್ನೆಲ್ಲಾ ಕೇಳಿಕೊಳ್ಳಬೇಕು ಅಂತ ಬಹಳ ದಿನದಿಂದ ಆಸೆ

ಯಿತ್ತು. ನೀವು ದೊಡ್ಡ ಮನಸು ಮಾಡಿ ಇವತ್ತು ರಾತ್ರೆ ಎಲ್ಲಾ ಹೇಳಿದರೆ ಬಹಳ ಉಪಕಾರವಾಗ್ತದ."

"ಅಯ್ಯೋ. ಅದಕ್ಕೇನು! ಅದಕ್ಕೇನು! ಅದರಲ್ಲೇನು ಉಪಕಾರ! ಓಂ ಶ್ರೀ ಓಂ!"

ಹಣ್ಣುಗಳನ್ನು ತೆಗೆದುಕೊಂಡು ಅವರು ನೇರವಾಗಿ ರೋಷರಾಯರ ಬಂಗಲೆಗೆ ಹೋದರು. ಬಂಗಲೆಯ ಅಂಗಳದಲ್ಲಿದ್ದ ವಿಶಾಲವಾದ ಉದ್ಯಾನ ದಲ್ಲಿ ತಮ್ಮ ನಾಯಿಯನ್ನು ಆಟವಾಡಿಸುತ್ತಿದ್ದ ರೋಷರಾಯರು ಮಾತಾಕುಮಾ ರನನ್ನು ಕಂಡೊಡನೆ,

"ಯಾಕ್ರೀ, ಇಷ್ಟು ತಡವಾಯ್ತು?" ಎಂದು ಕೇಳಿದರು. ಮರುಳಯ್ಯ ನನ್ನು ನೋಡಿದರೂ ಅವರು ಅವನನ್ನು ಮಾತನಾಡಿಸಲಿಲ್ಲ.

"ಸುಚರಿತರಾಯರಲ್ಲಿಗೆ ಹೋಗಿದ್ದೆ. ಅಲ್ಲಿ ಇವರ ಭೆಟ್ಟಿಯಾಯ್ತು. ಇವರ ಪರಿಚಯ ಇರಬಹುದಲ್ಲ ನಿಮಗೆ ಹೈಸ್ಕೂಲಿನಲ್ಲಿ ಮಾಸ್ತರರಾಗಿದಾರೆ."

ಆಗಲೂ ರೋಷರಾಯರು ಮರುಳಯ್ಯನತ್ತ ದೃಷ್ಟಿ ತಿರುಗಿಸದೆ ತಾತ್ಸಾ ರದ ಧ್ವನಿಯಲ್ಲಿ ನುಡಿದರು:

"ಮಾಸ್ತರರೋ? ಸರಿ. ಸರಿ."

ಅವರ ಮಾತಿನಲ್ಲಿದ್ದ ತಿರಸ್ಕಾರ ಮರುಳಯ್ಯನ ಕೋಮಲ ಹೃದಯ ವನ್ನು ಈಟಿಯಂತೆ ತಿವಿಯಿತು. ಅಧ್ಯಾತ್ಮವಾದಿಗಳಾದ ರೋಷರಾಯರು ಹೀಗೆ ತುಚ್ಛನಾದ ರೀತಿಯಲ್ಲಿ ವರ್ತಿಸುವುದನ್ನು ಕಂಡು ಅವನಿಗೆ ವಿಸ್ಮಯವೂ ಎನಿಸಿತು. ತಾನು ಹೈಸ್ಕೂಲಿನ ಮಾಸ್ತರನಾಗಿರುವುದೇ ಈ ತಾತ್ಸಾರಕ್ಕೆ ಕಾರ ಣವೊ ಏನೊ. ತಾನಾದರೂ ಬಿ. ಎ. ಪದವೀಧರ. ಯಾವ ಪದವಿಯನ್ನೂ ಪಡೆಯದಿರುವ, ಇಂಗ್ಲೀಷನ್ನೂ ಸರಿಯಾಗಿ ಓದದಿರುವ ಮಾತಾಕುಮಾರನನ್ನಾ ದರೂ ಇವರು ಹೇಗೆ ನಡಸಿಕೊಳ್ಳುತ್ತಿರುವರೊ....

"ಇವತ್ತು ರಾತ್ರೆ ಇವರಲ್ಲೇ ವಸ್ತಿ ಮಾಡಬೇಕಂತ ಒತ್ತಾಯ ಮಾಡ್ತಿ ದಾರೆ. ಹೋಗಿ ಬರಲೇ?" ಎಂದ ಮಾತಾಕುಮಾರ.

"ಎಲ್ಲಿ ವಸ್ತಿ ಆದರೇನು, ಎಲ್ಲಾ ಒಂದೇ ಅಲ್ಲವೇ?" ಎಂದರು ರೋಷ ರಾಯರು, ಮೈಮೇಲೆ ಹಾರುತ್ತಿದ್ದ ನಾಯಿಯನ್ನು ಮುದ್ದಿಸುತ್ತ. "ಫಲಾರ ಮಾಡಿಕೊಂಡೇ ಹೋಗಿ ಬಿಡಿರಿ, ಹೋಗುವದಾದರೆ."

"ನಮ್ಮಲ್ಲೂ ಫಲಾಹಾರದ ವ್ಯವಸ್ಥೆ ಆಗ್ತದ," ಎಂದು ಮೆಲ್ಲಗೆ ಹೇಳಿದ ಮರುಳಯ್ಯ.

ಆ ಮಾತು ಕೇಳುತ್ತಲೂ ರೋಷರಾಯರಿಗೆ ಭಯಂಕರ ಸಿಟ್ಟು ಬಂದಿತು. ಅದೇ ಸಮಯಕ್ಕೆ ಅವರ ನಾಯಿಯೂ ಇದ್ದಕ್ಕಿದ್ದ ಹಾಗೇ ರೇಗಿ ಗುರುಗುರಿಸ ತೊಡಗಿತು.

"ನಿಮ್ಮಲ್ಲಿ ವ್ಯವಸ್ಥಾ ಆಗುವದಿಲ್ಲ ಅಂತ ಯಾರು ಹೇಳಿದರು?" ಎನ್ನುತ್ತಾ ರೋಷರಾಯರು ಮರುಳಯ್ಯನನ್ನು ದುರುಗುಟ್ಟಿಕೊಂಡು ನೋಡಿದರು. ಒಡೆಯನ ಮಾತಿನಲ್ಲಿನ ರೋಷವನ್ನು ಗುರುತಿಸಿಕೊಂಡ ನಾಯಿಯೂ ಮರುಳಯ್ಯನ ಕಡೆ ನುಗ್ಗುತ್ತ ಬಗುಳತೊಡಗಿತು.

"ಹಾಗಾದರೆ ಬರ್ತೀನಿ ಅಣ್ಣನವರೇ," ಎಂದು ಹೇಳಿ ಮಾತಾಕುಮಾರ ಹಿಂದೆ ಹೊರಳಿ ಆ ಸೂಕ್ಷ್ಮ ಪ್ರಸಂಗದಿಂದ ಮರುಳಯ್ಯನನ್ನುಳಿಸಿದ.

ಬಂಗಲೆಯಿಂದ ತುಸು ದೂರ ಬಂದ ಬಳಿಕ ಮರುಳಯ್ಯ ಕೇಳಿದ:

"ರಾಯರು ಹೀಗ್ಯಾಕೆ ಮಾಡ್ತಾರ್ರೀ?"

"ಹೊಸ ಪರಿಚಯ ಅಂದರೆ ಯಾವಾಗಲೂ ಹಾಗೇ ಅವರು. ಮನಸ್ಸು ಮಾತ್ರ ಬಂಗಾರದಂಥಾದ್ದು. ಒಮ್ಮೆ ಸಲಿಗೆಯಾಯ್ತು ಅಂದರೆ ಒಡಹುಟ್ಟಿದ ತಮ್ಮನಂತೆ ನಿಮ್ಮನ್ನೂ ಕಾಣುತಾರೆ."

"ಆದರೆ, ಮೊದಲನೇ ಸಲವೇ ಹೀಗ್ಯಾಕೆ ಹರಿದು ತಿನ್ನುವವರ ಹಾಗೆ ಮಾಡ್ತಾರಿವರು?"

"ಅಣ್ಣನವರದು ಬಹಳ ಸಂಕೋಚ ಪ್ರಕೃತಿ. ಅವರು ಏಕಾಂತ ಪ್ರೇಮಿಗಳು–ಆ ನಾಯಿಯಿದೆಯಲ್ಲಾ–ಅದಕ್ಕೂ ಅವರಿಗೂ ಬಹಳ ನಂಟು. ಗುರು ಶಿಷ್ಯರ ಸಂಬಂಧ ಇದ್ದ ಹಾಗೆ. ನಾಯಿಯ ರೂಪದಲ್ಲಿ ಸಾಕ್ಷಾತ್ ದತ್ತಾತ್ರೇಯನೇ ತಮ್ಮ ಮನೆಯಲ್ಲಿ ವಾಸಿಸುತ್ತಿರುವನೆಂತ ಅವರು ನಂಬಿದಾರೆ. ಅದಕ್ಕೇ–ಅದರೊಡನೆ ಚೆನ್ನಾಟವಾಡುತ್ತಿರುವಾಗ ಯಾರು ಹೋದರೂ ಅವರಿಗೆ ಬೇಸರವಾಗಿ ಸಿಟ್ಟು ಬರ್ತದ. ಅವರು ನಾಯಿಯ ಸಂಗಡ ತಿರುಗಾಡುವಾಗ ಅವರ ಶ್ರೀಮತಿಯವರು ಕೂಡಾ ಅವರನ್ನ ಮಾತನಾಡಿಸುವ ಸಾಹಸ ಮಾಡುವದಿಲ್ಲ."

"ಆ ನಾಯಿ ನಿಜವಾಗಿ ದತ್ತಾತ್ರೇಯ ಆಗಿರಬಹುದೆ?"

"ಓಂ ಶ್ರೀ ಓಂ....ಯಾಕಿರಬಾರದು ? ಭಾವದಂತೆ ದೇವ. ಶ್ರೀರಾಮ ಕೃಷ್ಣ ಪರಮಹಂಸರೂ ಕೂಡಾ ಹೀಗೇ ಪಶುಪಕ್ಷಿಗಳಲ್ಲೂ ದೇವರನ್ನು ಕಾಣುತ್ತಿದ್ದರಲ್ಲವೇ ? "

"ನಿಜ. ನಿಜ. ಆದರೆ ಮನುಷ್ಯರನ್ನು ಕಂಡರೆ ಅವರು ಹೀಗೆ ತಿರಸ್ಕಾರ ತೋರಿಸ್ತಿರಲಿಲ್ಲ."

"ಛೆ. ಛೆ. ಅದು ತಿರಸ್ಕಾರ ಅಂತ ತಿಳೀಬೇಡಿರಿ. ಅಣ್ಣನವರು ಮಾತಾಡುವ ರೀತಿಯೇ ಹಾಗೆ. ನನ್ನದೂ ಅವರದೂ ಮೂವತ್ತು ವರ್ಷಗಳ ಗೆಳೆತನ. ಈಗಲೂ ನನ್ನನ್ನವರು ಹೀಗೇ ಮಾತಾಡಿಸ್ತಾರೆ....ನನ್ನನ್ನ ಅಷ್ಟೇ ಅಲ್ಲ, ಮನೆಯಲ್ಲಿ ಎಲ್ಲರನ್ನೂ ಹೀಗೇ. ಹೆಂಡತಿ ಮಕ್ಕಳು ಎಲ್ಲರನ್ನೂ ಹೀಗೇ. ಮುಖ್ಯ ವಿಷಯ ಏನಂದರೆ ಅವರಿಗೆ ಇದೆಲ್ಲಾ ಬೇಸರಾಗಿದೆ. ರಿಟೈರ್ ಆದಕೂಡಲೇ ಕರಾಚೂರಿಗೆ ಹೋಗಿಬಿಟ್ಟು ಅಲ್ಲೇ ಉಳಿದ ದಿನಗಳನ್ನ ಕಳೆಯಬೇಕೆಂತ ಮಾಡಿದ್ದರು. ಇನ್ನೂ ಹೋಗಲು ಆಗಿಲ್ಲ. ಅವರ ದೇಹಮಾತ್ರ ಇಲ್ಲಿದೆ, ಜೀವ ಎಲ್ಲಾ ಕರಾಚೂರಿನಲ್ಲೇ ಓಂ ಶ್ರೀ ಓಂ!"

ಅವರು ಮರುಳಯ್ಯನ ಮನೆಯಲ್ಲಿ ಅಡಿಯಿರಿಸಿದಾಗ, ರೇಶಿಮೆ ಸೀರೆಯುಟ್ಟುಕೊಂಡು ಸಿಂಗಾರಾಗಿದ್ದ ಕಮಲ ನಗುನಗುತ್ತಾ ಅವರನ್ನು ಬರಮಾಡಿಕೊಂಡಳು. ಈ ದಿನವೂ ಅವಳು ತಲೆಗೂದಲನ್ನು ಹೊಸ ಮಾದರಿಯ ಹೆಳಲಿನಲ್ಲಿ ಬಿಗಿದು ಮಲ್ಲಿಗೆ ಹೂವು ಮುಡಿದುಕೊಂಡಿದ್ದಳು. ಅಮಾವಾಸ್ಯೆಯ ಆಗಸದಲ್ಲಿ ನಕ್ಷತ್ರ ಥಳಥಳಿಸುವಂತೆ ಅವಳ ಕಾಡಿಗೆಗಪ್ಪು ಕೂದಲುಗಳ ಮಧ್ಯೆ ಮಲ್ಲಿಗೆ ಹೂವು ಮೆರೆಯುತ್ತಿದ್ದುವು.

"ನಮ್ಮ ಶ್ರೀಮತಿ ಕಮಲಮುಖಿ. ಇವರು ಮಾತಾಕುಮಾರರು." ಎಂದು ಪರಸ್ಪರ ಪರಿಚಯ ಮಾಡಿಕೊಟ್ಟ ಮರುಳಯ್ಯ.

ಕಮಲಮುಖಿ, ಅಪೂರ್ವವಾದ ತುಂಟನಗೆಯನ್ನು ಮೊಗದ ಮೇಲೆ ಕುಣಿಸುತ್ತಾ ಮಾತಾಕುಮಾರನಿಗೆ ಕೈ ಮುಗಿದಳು. ಆತ ವಾಡಿಕೆಯಂತೆ ನಾಲ್ಕು ಬಾರಿ ನಮಸ್ಕರಿಸಿ, ಹೇಳಿದ:

"ಶ್ರೀ ಮಹಾತಾಯಿಯರ ಕೃಪೆ. ಓಂ ಶ್ರೀ ಓಂ!"

ಅನಿರೀಕ್ಷಿತವಾಗಿ ಅಡ್ಡಮಳೆ ಸಳೆಯುವಂತೆ ನೆರೆಮನೆಯಿಂದ ನಗೆ ಕೇಳಬರತೊಡಗಿತು. ಮಾತಾಕುಮಾರನ ಓಂಕಾರವೇ ಆ ನಗೆಗೆ ಕಾರಣವಾಗಿ

ದ್ದುದು ಸ್ಪಷ್ಟವಾಗಿತ್ತು.

ಮರುಳಯ್ಯ ತಬ್ಬಿಬ್ಬಾಗಿ ನಿಂತುಕೊಂಡ. ಅತಿಥಿಯಾಗಿ ಬಂದ ಮಾತಾಕುಮಾರ ಅವಮಾನಿತನಾಗಿ ಹೋಗುವಂತಾಗಬಾರದಲ್ಲ? ಮುಕ್ಕಣ್ಣನ ತುಂಟಾಟವನ್ನು ತಡೆಗಟ್ಟಲು ಒಡನೆಯೇ ಏನಾದರೂ ಉಪಾಯ ಮಾಡುವುದಾವಶ್ಯಕ....

ಮಾತಾಕುಮಾರನಿಗೆ ಮಾತ್ರ ಆ ನಗೆಯ ಕಡೆ ಲಕ್ಷ್ಯವೇ ಇದ್ದ ಹಾಗಿರಲಿಲ್ಲ. ಓಂಕಾರವನ್ನು ಮೊಳಗಿಸುತ್ತಲೇ ಆತ ಕೊಟಡಿಗೆ ಅಡಿಯಿರಿಸಿ, ಗುರುಗಳ ಭಾವಚಿತ್ರಗಳನ್ನು ಕಂಡೊಡನೆ ನಾಲ್ಕು ನಾಲ್ಕು ಬಾರಿ ಕೈಮುಗಿದು, ನೆಲಕ್ಕೆ ಹಾಕಿದ ಚಾಪೆಯ ಮೇಲೆ ಶಾಂತನಾಗಿ ಕುಳಿತುಕೊಂಡ.

"ನಾನು ಸ್ವಲ್ಪ ಆಸನಗಳನ್ನ ಹಾಕಿ ಮುಗಿಸಬೇಕು. ಕೂತುಕೊಂಡಿರ್ತೀರಾ?" ಎಂದ ಮರುಳಯ್ಯ, ಬಟ್ಟೆಗಳನ್ನು ತೆಗೆಯುತ್ತ.

"ಆಸನ? ದಿನಾಲು ಹಾಕುತೀರಾ?"

"ಹೌದು. ಒಮ್ಮೊಮ್ಮೆ ತಡವಾಗ್ತದ, ಇಂದಿನಂತೆ."

"ಏನಡ್ಡಿಯಿಲ್ಲ ಮುಗಿಯಲಿ ನಿಮ್ಮದು. ಅಷ್ಟರಲ್ಲಿ ನಾನೂ ಸ್ವಲ್ಪ ಧ್ಯಾನ ಮಾಡ್ತೀನಿ," ಎಂದು ಮಾತಾಕುಮಾರ ಪದ್ಮಾಸನ ಹಾಕಿ ಕಣ್ಣುಮುಚ್ಚಿಕೊಳ್ಳುತ್ತಿದ್ದ ಹಾಗೇ ನೆರೆಮನೆಯಿಂದ ಹಾಡಿನ ಧ್ವನಿ ಹರಿದು ಬಂದು ಅವನ ಏಕಾಗ್ರತೆಯನ್ನು ಕದಡತೊಡಗಿತು. ಅದೂ ಎಂಥ ಹಾಡು!

"ಮತ್ತೆ ಮತ್ತೆ ಉಕ್ಕುತಿದೆ
ನಿನ್ನ ಮೇಲೆ ಮೋಹ
ಚಿತ್ತ ಮಧುವ ನೆಕ್ಕುತಿದೆ
ದೇಹಕೆಳಸಿ ದೇಹ...."*

* ಕವಿ: ಕುವೆಂಪು

೧೦

" ಒಂದಲ್ಲ, ಎರಡಲ್ಲ, ಒಂದೇ ಸಮನೆ ಮೂವತ್ತು ವರ್ಷಗಳಿಂದ ಸಾಧನೆ ನಡಸಿದೀನಿ. ಇನ್ನೂ ದೇವರು ಪೂರ್ಣವಾಗಿ ಕೃಪೆಮಾಡಲಿಲ್ಲ. ಅವನ ಇಚ್ಛೆ," ಎಂದು ಹೇಳುತ್ತಾ ಎದುರಿಗಿದ್ದ ಶೂನ್ಯವನ್ನು ದಿಟ್ಟಸುತ್ತ ನಿಟ್ಟುಸಿರು ಬಿಟ್ಟ ಮಾತಾಕುಮಾರ.

" ಮೂವತ್ತು ವರ್ಷ! ಅಬ್ಬಬ್ಬಾ! ರೋಷರಾಯರೂ, ನೀವೂ ಕೂಡೇ ಸುರು ಮಾಡಿರಬಹುದಲ್ಲ ಸಾಧನೆಗೆ?" ಎಂದ, ಮರುಳಯ್ಯ.

" ಊಹೂಂ. ಅವರು ನನಗಿಂತ ಮೊದಲೇ ಸುರುಮಾಡಿದ್ದರು. ಅವರ ಗೆಳೆತನ ಮಾಡಿದ ಮೇಲೇ ನನಗೆ ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯುಂಟಾದದ್ದು. ಒಂದು ನಿರ್ದಿಷ್ಟವಾದ ದಾರಿಯನ್ನು ತೋರಿಸಿಕೊಟ್ಟವರೂ ಅವರೇ. ಅದಕ್ಕೆ ಮೊದಲು ಕುರುಡನಂತೆ ಅಲ್ಲಿ ಇಲ್ಲಿ ಅಡ್ಡತಿಡ್ಡವಾಗಿ ಸುತ್ತುತಾ ಇದ್ದೆ. ಅಣ್ಣನವರು ಪ್ರೀತಿಯಿಂದ ಕೈ ಹಿಡಿದು ಈ ಹಾದಿಗೆ ತಂದು ಬಿಟ್ಟರು. ಆ ಮೇಲೂ ಅವರ ಸಹಾಯವಿಲ್ಲದಿದ್ದರೆ ಇಷ್ಟು ದೂರ ನಡೆದು ಬರಲು ಸಾಧ್ಯವಾಗುತ್ತಿರಲಿಲ್ಲ," ಎಂದು ಹೇಳಿ ಮಾತಾಕುಮಾರ ರೋಷರಾಯರ ಬಂಗಲೆಯ ದಿಕ್ಕಿಗೆ ಮುಖ ತಿರುಗಿಸಿ ನಾಲ್ಕು ಬಾರಿ ನಮಸ್ಕರಿಸಿ ತನ್ನ ಕೃತಜ್ಞತೆಯನ್ನು ಪ್ರದರ್ಶಿಸಿದ.

ಕಾಲೇಜಿನ ಹಿಂಭಾಗದಲ್ಲಿದ್ದ ಬಯಲಿನಲ್ಲಿ ಕುಳಿತು ಅವರು ಮಾತನಾಡುತ್ತಿದ್ದರು. ಹತ್ತು ಗಂಟೆಯಾಗಿ ಹೋಗಿತ್ತು. ಮುಗಿಲು ಕವಿದ ಆಕಾಶದಲ್ಲಿ ಇದ್ದೂ ಇಲ್ಲದಂತೆ ಎಲ್ಲೋ ತೇಲುತ್ತಿದ್ದ ಚಂದ್ರ. ಬಲಗಡೆಗಿದ್ದ ಮರದಿಯಿಂದಿಳಿದು ಬಂದ ತಂಗಾಳಿ ಹಿತವಾಗಿ ಮಿತವಾಗಿ ಬೀಸುತ್ತಿತ್ತು. ಸುತ್ತುಮುತ್ತ ಎಲ್ಲೂ ಜನರ ಸುಳಿವಿರಲಿಲ್ಲ. ಮಾತಾಕುಮಾರನ ಅಧ್ಯಾತ್ಮಸಾಧನೆಯ ಅನುಭವಗಳನ್ನು ನಿರಾತಂಕವಾಗಿ ಕೇಳಿಕೊಳ್ಳಲು ಇದೇ ಸರಿಯಾದ ತಾಣವೆಂದು ಯೋಚಿಸಿ ಆತನನ್ನು ಇಲ್ಲಿಗೆ ಕರೆದುತಂದಿದ್ದ ಮರುಳಯ್ಯ. ಮನೆಯಲ್ಲಿಯೂ ಆ ವಿಚಾರ ಎತ್ತುವಂತಿರಲಿಲ್ಲ. ಮುಕ್ಕಣ್ಣನ ಮರ್ಕಟ ಚೇಷ್ಟೆ

ಮತ್ತೆ ಆರಂಭವಾಗುವುದರಲ್ಲಿ ಸಂಶಯವಿರಲಿಲ್ಲ. ಎಂತಲೇ, ತಾವಿಬ್ಬರೂ ತಿರುಗಾಡಿಕೊಂಡು ಬರುವುದಾಗಿ ಕಮಲಳಿಗೆ ತಿಳಿಸಿ ಇತ್ತ ಹೊರಟು ಬಂದಿದ್ದ ಮರುಳಯ್ಯ. ಮಾತಾಕುಮಾರನ ಜೊತೆ ಲಭಿಸಿದುದರಿಂದ ಅಂದಿನಿರುಳು ಮರುಳಯ್ಯ ಎದುರಿಸಬೇಕಾಗಿದ್ದ ಪ್ರಸಂಗವೊಂದು ತಾನಾಗಿಯೇ ತಪ್ಪಿ ಹೋಗಿತ್ತು. ದೇವರೇ ಬಂದಂತೆ ಬಂದಿದ್ದ ಮಾತಾಕುಮಾರ. ತಾನೊಬ್ಬನೇ ಕೊಟಡಿಯ ಚಿಲಕ ಹಾಕಿಕೊಂಡು, ಕಮಲಳನ್ನು ಹೊರಗೇ ಬಿಟ್ಟು ಮಲಗಿ ಕೊಳ್ಳಬೇಕಾದ ಕಠಿಣ ಪ್ರಸಂಗ ಇಂದಿನ ಮಟ್ಟಿಗಾದರೂ ಇಲ್ಲವಾಗಿತ್ತು.

ಮನೆಯಿಂದ ಹೊರಬೀಳುತ್ತಲೂ ಮಾತಾಕುಮಾರ ಕೇಳಿದ್ದ:

“ಆಗ ಆ ಹಾಡು ಹಾಡ್ತಿದ್ದರಲ್ಲ, ಯಾರು ಅವರು ?”

“ಮುಕ್ಕಣ್ಣ ಅಂತ ಇದಾರೆ, ಕಾಲೇಜಿನಲ್ಲಿ ಲೆಕ್ಚರರ್ ಆಗಿದಾರೆ. ಇನ್ನೂ ಹುಡುಗ. ತಿಳಿವಳಿಕೆ ಕಡಿಮೆ. ಅಧ್ಯಾತ್ಮ ಅಂದರೆ ಅವರಿಗಾಗದು. ಅದಕ್ಕೇ ನಾವು ಧ್ಯಾನಕ್ಕೆ ಕೂತಾಗಲೆಲ್ಲಾ ಇಂಥಾ ಹಾಡು ಹಾಡಿ ಕೀಟಲೆ ಮಾಡ್ತಾರೆ.”

“ನನಗೂ ಆಗಲೇ ಅನ್ನಿಸಿತ್ತು. ಇಂಥವರು ಎಲ್ಲಾ ಕಡೆಗೂ ಇರ್ತಾರೆ ಒಬ್ಬಿಬ್ಬರು. ಕರಾಚೂರಿನಲ್ಲೂ ಇದ್ದಾರೆ. ನಮ್ಮೂರಿನಲ್ಲೂ ಇದ್ದಾರೆ. ನಮ್ಮ ಮನೆಯಲ್ಲೇ ಇದ್ದಾರೆ. ನಮ್ಮ ಸ್ವಂತ ತಾಯಿಗೇ ನನ್ನ ಅಧ್ಯಾತ್ಮ ಅಂದರೆ ನಗೆಯ ಮಾತಾಗಿದೆ. ಆದರೂ ನಾನು ಅದನ್ನೆಲ್ಲಾ ಸಹಿಸಿಕೊಂಡು ಬಂದಿ ದ್ದೀನಿ. ನಾವು ಸಾಧಕರು, ಎಲ್ಲವನ್ನೂ ಸಹಿಸಲು ಕಲಿಯ ಬೇಕಾದ್ದು ಮೊದಲನೆಯ ಸಂಗತಿ. ‘ಸಂತೆಯೊಳಗೊಂದು ಮನೆ ಮಾಡಿ ಶಬ್ದಕ್ಕಂಜಿ ದಡೆಂತಯ್ಯಾ’ ಅಂತ ಅಕ್ಕಮಹಾದೇವಿಯವರು ಹೇಳಿದ್ದು ಇಂಥಾ ಸಂದರ್ಭ ದಲ್ಲೇ.”

“ನಿಮ್ಮ ತಾಯಿಯವರಿಗೇ ಸರಿ ಬರುವದಿಲ್ಲವೇ ?” ಎಂದು ವಿಸ್ಮಿತ ನಾಗಿ ಪ್ರಶ್ನಿಸಿದ ಮರುಳಯ್ಯ.

“ಅದರಲ್ಲಿ ಆಕೆಯದೂ ತಪ್ಪಿಲ್ಲ. ಮೊದಲಿಂದಲೂ ಆಕೆಯ ಸ್ವಭಾವವೇ ಹಾಗೆ. ನಾನಿನ್ನೂ ಚಿಕ್ಕವನಿದ್ದಾಗಲೇ ನಮ್ಮ ತಂದೆ ತೀರಿಕೊಂಡರು. ಮನೆ ತನದ ಭಾರವೆಲ್ಲಾ ನಮ್ಮ ತಾಯಿಯ ಮೇಲೇ ಬಿತ್ತು. ಅದರಿಂದಾಗಿ ಆಕೆ ಸ್ವಾಭಾವಿಕವಾಗಿಯೆ ವ್ಯವಹಾರ ಅರಿತು ಆಚರಿಸಬೇಕಾಯಿತು. ನನಗೆ

ಮಾತ್ರ ಚಿಕ್ಕಂದಿನಿಂದಲೂ ಪರಮಾತ್ಮನನ್ನ ಕಾಣುವಾಸೆ. ಬೇರೆ ಯಾವುದರ ಕಡೆಗೂ ಲಕ್ಷ್ಯ ಇರಲಿಲ್ಲ. ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿತ್ತೆಂದು ನಾನು ಸಂಸಾರಿಯಾದೆ, ಅಷ್ಟೆ. ಇಲ್ಲವಾದರೆ ಖಂಡಿತವಾಗಿಯೂ ಅವಿವಾಹಿತ ನಾಗಿರುತ್ತಿದ್ದೆ. ನಿಮ್ಮ ಮದುವೆ ಯಾವಾಗ ಆಯ್ತು ? ”

“ ನಾನಿನ್ನೂ ಓದುತ್ತಿದ್ದಾಗಲೇ ಆಗಿ ಹೋಯ್ತು. ನಿಜವಾಗಿ ನನಗೆ ಮನಸ್ಸಿರಲಿಲ್ಲ. ಒತ್ತಾಯಕ್ಕೇ ಬಲಿಬಿದ್ದು ಆಗಬೇಕಾಯ್ತು. ಈಗ ಅದ ಕ್ಕಾಗಿ ವ್ಯಸನವಾಗ್ತದ.”

“ ಆಗ್ತದಪ್ಪಾ. ಎಲ್ಲರಿಗೂ ಆಗ್ತದ. ನನಗೂ ಆಗಿತ್ತು ಎಷ್ಟೋ ಸಲ. ಆಮೇಲೆ ಬ್ರಹ್ಮಚರ್ಯವ್ರತ ಹಿಡಿದು ಬಿಟ್ಟೆ. ನನ್ನ ಹೆಂಡತಿಯೂ ಅದಕ್ಕೆ ಒಪ್ಪಿದಳು. ಎಲ್ಲಾ ಸರಿಹೋಯ್ತು.

ಅವರು ಕಾಲೇಜಿನ ಹಿಂಭಾಗದ ಬಯಲಿಗೆ ಬಂದು ಹುಲ್ಲುಹಾಸಿಗೆಯ ಮೇಲೆ ಕುಳಿತುಕೊಂಡರು. ಮರುಳಯ್ಯನ ಹೃದಯದಲ್ಲಿ ಬಗೆ ಬಗೆಯ ಭಾವ ಗಳ ನರ್ತನಕ್ಕಾರಂಭವಾಗಿತ್ತು. ಎಂಥ ಸರಳ ಹೃದಯದವನು ಮಾತಾ ಕುಮಾರ! ತನ್ನ ಪರಿಚಯವಾದುದಕ್ಕೆ ಇನ್ನೂ ಒಂದು ದಿನ ಕೂಡಾ ಆಗಿಲ್ಲ. ಈ ಅಲ್ಪಾವಧಿಯಲ್ಲಿಯೆ, ದೀರ್ಘಕಾಲದ ಪರಿಚಿತರೊಡನೆ, ಆಪ್ತಮಿತ್ರರೊಡನೆ, ಒಡಹುಟ್ಟಿದ ಸೋದರರೊಡನೆ, ಹೆತ್ತ ತಾಯಿಯೊಡನೆ ಮಾತನಾಡುವಂಥ ಸಹಜ ಸಲಿಗೆಯಿಂದಲೇ ತನ್ನೊಡನೆ ಮಾತನಾಡುತ್ತಿದ್ದಾನೆ. ಯಾವುದನ್ನೂ ಮರೆಮಾಚುವ ಮನೋವೃತ್ತಿಯಿಲ್ಲ. ಆಧುನಿಕ ಲೋಕದ ಕೃತ್ರಿಮ ಶಿಷ್ಟಾ ಚಾರಗಳ ಸೋಂಕಿಲ್ಲ. ಕಪಟವನ್ನರಿಯದ ಹಸುಳೆಯೊಂದು ಮನಸ್ಸಿನಲ್ಲಿದ್ದು ದೆಲ್ಲವನ್ನೂ ಇದ್ದಕ್ಕಿದ್ದಂತೆಯೇ ಆಡಿಬಿಡುವಂತೆ ಈತನೂ ಆಡುತ್ತಿದಾನೆ. ಈತನೆದುರಿಗೆ ತಾನೂ ತನ್ನ ಎದೆಯಲ್ಲಿದ್ದುದೆಲ್ಲವನ್ನೂ ಹೊರಹಾಕಿಬಿಡಬೇಕೆಂದು ಮರುಳಯ್ಯನಿಗೆನಿಸಿತು. ಎಷ್ಟೋ ಸಂಗತಿಗಳು ಎಷ್ಟೋ ದಿನಗಳಿಂದ ಎದೆ ಯಲ್ಲಿಯೇ ಕೂಡಿಬಿದ್ದುದರಿಂದ ಎದೆ ಬಹಳ ಭಾರವಾಗಿದೆ. ತಾನು ಮನಸ್ಸು ಬಿಚ್ಚಿ ಮಾತನಾಡುವುದಾದರೂ ಯಾರ ಹತ್ತಿರ? ಕಮಲಮುಖಿಗೆ ಅವಳ ಸುಖವನ್ನು ಬಿಟ್ಟರೆ ಬೇರಾವುದರ ಕಡೆಗೂ ಲಕ್ಷ್ಯವಿಲ್ಲ. ಏನೋ ತನ್ನ ಬಲ ವಂತದಿಂದಾಗಿ ಆರು ತಿಂಗಳುಗಳ ಕಾಲ ತನ್ನ ಹಾಸಿಗೆಯಿಂದ ದೂರವಿದ್ದಳಷ್ಟೆ. ತನ್ನ ಜೀವನದ ಮಹಾಧ್ಯೇಯ, ಆದರ್ಶಗಳ ಬಗೆಗೆ ಅವಳಲ್ಲಿ ಕೊಂಚವೂ

ಸಹಾನುಭೂತಿಯಿಲ್ಲವೆಂಬುದಂತೂ ಸ್ಪಷ್ಟವೇ ಇದೆ. ಮಹಾಗುರು, ಮಹಾ ಮಾತೆ ಮತ್ತಿತರ ವಿಭೂತಿಗಳ ಚಿತ್ರಪಟಗಳನ್ನು ಅವಳು ಪೂಜಿಸುವುದೂ ತನ್ನ ಒತ್ತಾಯಕ್ಕಾಗಿ, ಅಷ್ಟೆ. ನಿಜವಾಗಿ ಆ ಕಾರ್ಯದಲ್ಲಿ ಅವಳಿಗೆ ಕೊಂಚವೂ ಆಸಕ್ತಿಯಿಲ್ಲ. ತನ್ನ ಅಧ್ಯಾತ್ಮವೆಂದರೆ ಅವಳಿಗೆ ನಗೆಯ ಮಾತು. ಅವಳ ದೃಷ್ಟಿಯಲ್ಲಿ ಅದೊಂದು ಹುಚ್ಚು. ಅವಳ ದೃಷ್ಟಿಕೋನವನ್ನು ಬದಲಿಸಲು ತಾನು ಮಾಡಿದ ಯತ್ನವೆಲ್ಲಾ ವಿಫಲವಾಯಿತು. ಆ ವಿಚಾರವಾಗಿ ತಾನು ಮಾತನಾಡಲಾರಂಭಿಸಿದರೆ ಸಾಕು, ಅವಳು ವಿಲಕ್ಷಣವಾಗಿ ನಕ್ಕು ಮೂಗು ಮುರಿದ ಹಾಗೆ ಮಾಡುತ್ತಾಳೆ. ಇಂಥವಳ ಹತ್ತಿರ ತನ್ನೆದೆಯ ಗೋಳನ್ನು ತೋಡಿಕೊಳ್ಳುವುದಾದರೂ ಹೇಗೆ? ಮಾತಾಕುಮಾರ ತನಗಿಂತ ಮೂವತ್ತು ವರ್ಷಗಳಿಗೆ ಹಿರಿಯ. ಆತ ತನಗೆ ತಂದೆಯಿದ್ದ ಹಾಗೆ, ಹಿರಿಯಣ್ಣನಿದ್ದ ಹಾಗೆ. ಆತನ ಸ್ವಭಾವವೂ ಬಹಳ ಸರಳವಾದದ್ದು. ತನ್ನ ಸಂಕಟ, ತನ್ನ ನೋವು, ತನ್ನ ಸಮಸ್ಯೆಗಳೆಲ್ಲವನ್ನೂ ಈತನೆದುರಿಗೆ ಧಾರಾಳವಾಗಿ ತೋಡಿ ಕೊಳ್ಳಬಹುದು........

ಹಾಗೆ ಯೋಚಿಸಿ ಮರುಳಯ್ಯ ಒಂದು ನಿರ್ಧಾರಕ್ಕೆ ಬಂದು, ತನ್ನ ಸಾಧಕ ಜೀವನದಲ್ಲಿ ತಲೆಯೆತ್ತಿದ್ದ ತೊಡಕು ತೊಂದರೆಗಳನ್ನು ಕುರಿತು ವಿಶದ ವಾಗಿ ವಿವರಿಸಿದ. ಆತ ಮುಗಿಸುವ ವರೆಗೂ ಸಮಾಧಾನದಿಂದ ಆಲಿಸುತ್ತಿದ್ದ ಮಾತಾಕುಮಾರ, ಮರುಳಯ್ಯ ಹೇಳುವುದು ಮುಗಿಯುತ್ತಲೂ ಕನಿಕರದಿಂದ ಅವನ ಬೆನ್ನು ನೇವರಿಸುತ್ತಾ ಮಾತನಾಡಿದ:

"ತಾಳ್ಮೆಯಿರಲಿ, ತಮ್ಮಾ. ತಾಳ್ಮೆಯಿರಲಿ. ನಾವು ತಾಳಿಕೊಳ್ಳಲು ಕಲಿತಷ್ಟೂ ನಮ್ಮ ಶಕ್ತಿ ಹೆಚ್ಚಾಗುತದ. ನನಗೂ ಇಂಥ ತೊಡಕುಗಳು ಬಂದಿಲ್ಲ ಅಂತೀರಾ? ಬೇಕಾದಷ್ಟು ಬಂದಿದ್ದುವು. ಭಗವತೀ ಶ್ರೀ ಮಾತಾಜಿಯವರ ಆಶೀರ್ವಾದದಿಂದ ಎಲ್ಲವೂ ದೂರಾದುವು. ಮುಖ್ಯ ಏನು ಅಂದರೆ ಶ್ರದ್ಧೆ ಬೇಕು. ಸಣ್ಣ ಕೂಸು ತನ್ನ ತಾಯಿಯನ್ನೇ ನೆಚ್ಚಿಕೊಂಡಿರುವಂತೆ ನಾವೂ ಶ್ರೀ ಮಹಾಗುರು, ಮಹಾಮಾತೆಯರನ್ನು ಪೂರ್ತಿಯಾಗಿ ನಂಬಿ, ಅವರನ್ನೆ ಅವಲಂಬಿಸಿಕೊಂಡಿರಬೇಕು. ಅದರಿಂದಲೂ ಒಂದು ಶಕ್ತಿ ಬರ್ತದ. ಸಾಂಸಾರಿಕ ತಾಪತ್ರಯಗಳಿಂದ ತೊಂದರೆಯಾಗುವುದು ತಪ್ಪುತದ."

"ನೀವೂ ಬಹಳ ಕಷ್ಟಪಟ್ಟೀರಿ ಹಾಗಾದರೆ?"

" ಕಷ್ಟ ಅಂದರೆ ಅಂಥಿಂಥ ಕಷ್ಟವೇ! ಈಗ ಅದೆಲ್ಲಾ ಶ್ರೀ ಮಹಾ ಮಾತೆಯ ಲೀಲೆ ಅಂತಲೇ ಅನಿಸ್ತದ. ಓಂ ಶ್ರೀ ಓಂ ! "

" ನಿಮಗೆ ಸಾಕ್ಷಾತ್ಕಾರವಾಗಿದೆಯಂತ ಸುದ್ದಿ ಅದ ಅಲ್ಲರೀ ? " ಎಂದು ಕುತೂಹಲದಿಂದ ಕೇಳಿದ ಮರುಳಯ್ಯ.

" ಇಲ್ಲ. ಸಂಪೂರ್ಣ ಸಾಕ್ಷಾತ್ಕಾರ ಆಗುವಷ್ಟು ನಾನಿನ್ನೂ ಮುಂದು ವರಿದಿಲ್ಲ. ಆದರೂ ಅದರ ಅಲ್ಪ ಸ್ವಲ್ಪ ಅನುಭವ ಆದದ್ದು ಮಾತ್ರ ನಿಜ. ಆದರೆ, ಆ ಅನುಭವ ಹೀಗೇ ಅಂತ ಹೇಳಲಿಕ್ಕೆ ಸಾಧ್ಯವಾಗುವದಿಲ್ಲ. ಅದನ್ನ ಪ್ರತಿಯೊಬ್ಬರೂ ಅನುಭವಿಸಬೇಕು."

" ನಾನೂ ಬಹಳ ದಿನಗಳಿಂದ ಪ್ರಯತ್ನ ಮಾಡುತಾ ಇದೀನಿ. ಮಾರ್ಗ ದರ್ಶನ ಮಾಡುವವರು ಯಾರೂ ಇಲ್ಲ."

" ಯಾಕೆ ? ಶ್ರೀ ಮಹಾಗುರು, ಶ್ರೀ ಮಹಾಮಾತೆ ಇಬ್ಬರೂ ಇದಾ ರಲ್ಲಾ ? ಅವರನ್ನ ನಂಬಿ ನಡೆದರೆ........"

" ನಂಬಿದ್ದೀನಿ. ಪೂರಾ ನಂಬಿದ್ದೀನಿ. ಆದರೂ ಹಾದಿ ಕಾಣದಾಗಿದೆ."

" ತಾಳ್ಮೆ ಬೇಕು ಅಂತ ನಾನಾಗಲೆ ಹೇಳಿದೆನಲ್ಲ. ಒಮ್ಮೆಲೇ ಸಾಧಿಸುವ ವಿಷಯ ಇದಲ್ಲ. ಮೂವತ್ತು ವರ್ಷಗಳ ಕಾಲ ತಿಣಿಕಿದ ಬಳಿಕ ನನಗೆ ಏನೋ ಸ್ವಲ್ಪ ಸಿಕ್ಕ ಹಾಗಾಯ್ತು, ಅಷ್ಟೆ."

" ಅಷ್ಟಾದರೂ ಸಾಧಿಸಿದ್ದು ಹ್ಯಾಗೆ, ಹೇಳಬಾರದೇ ? ಹೇಳಿದರೆ ಬಹಳ ಉಪಕಾರವಾಗ್ತದ," ಎಂದು ದೈನ್ಯದಿಂದ ಕೇಳಿಕೊಂಡ ಮರುಳಯ್ಯ.

" ಅದೆಲ್ಲಾ ಬಹಳ ದೊಡ್ಡ ಕಥೆ ಮಾಸ್ತರೇ. ಈಗಾಗಲೇ ರಾತ್ರಿ ಬಹಳ ವಾಯ್ತು. ನಾನು ಹೇಳುತ್ತಾ ಕೂತರೆ ಇಲ್ಲೇ ಬೆಳಗಾಗಬಹುದು."

" ನಿಮಗೆ ನಿದ್ದೆ ಬಂದಿಲ್ಲ ಹೌದಲ್ಲೋ ? "

" ಇಲ್ಲ. ನನಗೆಲ್ಲಿಯ ನಿದ್ದೆ ? ಮೂವತ್ತು ವರ್ಷಗಳಲ್ಲಿ ನನಗೆ ನಿದ್ದೆ ಯಿಲ್ಲದಿದ್ದ ವರ್ಷಗಳು ಎಷ್ಟೊ. ಹಗಲೂ ರಾತ್ರಿ ಇದೇ ಧ್ಯಾನದಲ್ಲಿ ಮುಳುಗಿ ರುತ್ತಿದ್ದೆ."

" ಸಾಕ್ಷಾತ್ಕಾರ ಲಭಿಸುವದಕ್ಕೆ ಗುರೂಪದೇಶ ಬೇಕಂತೆ. ನಿಜವೆ ? "

" ಹೌದು. ಅವಶ್ಯವಾಗಿ ಬೇಕು. ಗುರು ಅಂದರೆ ಮಾರ್ಗದರ್ಶಕ. ಕತ್ತಲು ತುಂಬಿದ ಹಾದಿಯಲ್ಲಿ ನಡೆಯುವಾಗ ಕೈಗೊಂದು ಕೋಲು ಬೇಕು,

ದೀಪ ಬೇಕು. ಅಧ್ಯಾತ್ಮದ ಅರಣ್ಯದಲ್ಲೂ ಗುರು ನಮ್ಮ ಕೈಗೋಲು, ಕೈದೀಪ ಇದ್ದ ಹಾಗೆ........ಆದರೆ....ಒಂದು ಮಾತು. ಮೊದಲೇ ವಿಚಾರ ಮಾಡಿ ಯೋಗ್ಯ ಗುರುವನ್ನೇ ಹುಡುಕಿಕೊಳ್ಳಬೇಕು. ಇಲ್ಲದಿದ್ದರೆ ಆಯುಷ್ಯವೆಲ್ಲಾ ವ್ಯರ್ಥವಾಗ್ತದ."

"ಮೂವತ್ತು ವರ್ಷಗಳ ಹಿಂದೆಯೇ ನಿಮಗೆ ಗುರು ಸಿಕ್ಕರೇ ?"

"ಇಲ್ಲ ಮಾರಾಯಾ. ಒಳ್ಳೆಯ ಗುರು ಸಿಗುವದೂ ದೇವರು ಸಿಗುವಷ್ಟೇ ಕಷ್ಟ. ನನ್ನ ಪೂರ್ವಜನ್ಮದ ಪುಣ್ಯದಿಂದ, ಅಣ್ಣನವರ ಸಹಾಯದಿಂದ ಕರಾಚೂರಿನ ಪರಮಗುರು ದೊರೆತರು. ಓಂ ಶ್ರೀ ಓಂ!"

"ಅದಕ್ಕೆ ಮೊದಲು ?"

"ಗುರು ಗುರು ಅಂತ ಎಲ್ಲೆಲ್ಲೋ ಅಲೆದಾಡಿದೆ. ಯಾರ್ಯಾರಿಗೋ ಸೇವೆಮಾಡಿದೆ. ಕಂಡಕಂಡವರ ಕಾಲು ಹಿಡಿದೆ. ಏನೂ ಉಪಯೋಗವಾಗಲಿಲ್ಲ. ತಿರುಗಿದ್ದಷ್ಟೇ ಆಯ್ತು. ಅದೂ ಒಂದು ಅನುಭವವೇ. ನಾನಿನ್ನೂ ಹದಿಮೂರು ವರ್ಷಗಳ ಹುಡುಗನಾಗಿದ್ದಾಗಲೇ ದೇವರನ್ನು ಕಾಣುವ ಬಯಕೆ ಬಲಿತಿತ್ತು. ಆಗಲೇ ಗುರುಗಳನ್ನು ಹುಡುಕಿಕೊಂಡು ಹೊರಟದ್ದಾಯ್ತು. ಒಮ್ಮೆ ಏನಾಯ್ತು ಅಂದಿರಿ. ನಮ್ಮ ಊರಿಗೇ ಗುರುಗಳೊಬ್ಬರು ಬಂದರೆಂದು ಸುದ್ದಿಯೆದ್ದಿತು–ಅವರು ಗುರೂಪದೇಶಕೊಟ್ಟು ಆಗಿಂದಾಗ ದೇವರ ದರ್ಶನ ಮಾಡಿಸುವರಂತ. ಇಂಥವರಿಗಾಗೇ ಕಾದಿದ್ದ ನಾನು ಆತುರದಿಂದ ಅವರಲ್ಲಿಗೆ ಹೋದೆ. ಅವರೇನು ಕಾವಿಬಟ್ಟೆಯ ಸನ್ಯಾಸಿಗಳಲ್ಲ. ಸಾಧಾರಣ ನಾಗರೀಕರೇ. ನಿಮ್ಮ ಹಾಗೆ ಇಂಗ್ಲೀಷನ್ನೂ ಬಲ್ಲವರು. ಮಂತ್ರಕ್ಕಿಂತ ಉಗುಳು ಹೆಚ್ಚು ಅನ್ನುವಂತೆ ಇವರದು ಮಾತೇ ಹೆಚ್ಚು. ಜನ ಹಿಂಡುಗಟ್ಟಿಕೊಂಡು ನೆರೆದಿದ್ದರು ಅವರ ಬಿಡಾರದಲ್ಲಿ. ಬಿಡಾರದ ಹೊರಗಿನ ಭಾಗದಲ್ಲಿ ಒಬ್ಬ ಮಹಾರಾಜರು ಸೇವು ಚೂಡಾದ ಬುಟ್ಟಿ, ಚಹಾದ ತಪ್ಪೇಲಿ ಇಟ್ಟುಕೊಂಡು ಕೂತಿದ್ದರು. ದೇವರನ್ನು ಕಾಣಲು ಬಂದವರಿಗೆಲ್ಲಾ ಚಹಾ–ಚೂಡಾ ಸಿಗುತ್ತಿತ್ತು. ಒಳ ಭಾಗದಲ್ಲಿ ಆ ಗುರುಗಳು ಉಪದೇಶ ಮಾಡುತ್ತಿದ್ದರು. ಜನರ ಗದ್ದಲ ಬಹಳವಾಗಿದ್ದರಿಂದ ಸರತಿಯಂತೆ ಒಬ್ಬೊಬ್ಬರನ್ನೇ ಒಳಗೆ ಬಿಡುತ್ತಿದ್ದರು. ನಾನೂ ಬಹಳ ಹೊತ್ತು ಕಾದ ಬಳಿಕ ನನ್ನ ಸರತಿಯೂ ಬಂತು. ಒಳಗಿನ ಕೋಣೆಯಲ್ಲಿ ಬಹಳ ಕತ್ತಲೆಯಿತ್ತು. ಮಸುಕಾದ ಬೆಳಕಿನಲ್ಲಿ ಗುರುಗಳನ್ನು

ಗುರುತಿಸುವದೂ ಆಗಲಿಲ್ಲ. ಮುಂದೇನು ಮಾಡಬೇಕೆನ್ನುವದು ಗೊತ್ತಾಗದೆ ನಾನು ಬಾಗಿಲ ಹತ್ತಿರ ನಿಂತಿದ್ದೆ. ಅಷ್ಟರಲ್ಲಿ ಆ ಮಹಾರಾಜರು,

"ಬಾಗಿಲು ಮುಚ್ಚಿ ಚಿಲಕ ಹಾಕಿಕೊಳ್ಳಪ್ಪಾ," ಎಂದು ಅಪ್ಪಣೆ ಮಾಡಿದರು. ನಾನು ಹಾಗೇ ಮಾಡಿ ಅವರಿಗೆ ಅಡ್ಡ ಬಿದ್ದು ನಮಸ್ಕರಿಸಿದೆ.

"ದೇವರನ್ನ ನೋಡಬೇಕು ಅಂತ ಆಸೆಯಿದೆಯೇನು ನಿನಗೆ?" ಎಂದರು ಮಹಾರಾಜರು. ನಾನು ಹೌದೆನ್ನುತ್ತಲೂ 'ನಿನ್ನ ಕುಲದೈವ ಯಾವದು?' ಅಂತ ಕೇಳಿದರು.

"ನಾನು 'ಶಿವ' ಅಂದೆ."

"ಆಮೇಲೆ ಅವರು 'ಚಪಗಾಲು ಹಾಕಿಕೊಂಡು ಇದಿರಿಗೆ ಕೂಡು, ದೃಷ್ಟಿಯನ್ನು ಮೂಗಿನ ತುದಿಯ ಮೇಲಿಡು, ಮನಸಿನಲ್ಲಿ ಶಿವಾಯನಮಃ ಶಿವಾಯನಮಃ ಅಂತ ಜಪಿಸು,' ಅಂತ ಹೇಳಿಕೊಟ್ಟರು.

ನಾನು ಹಾಗೇ ಮಾಡಿದೆ. ಒಂದು ನಿಮಿಷ ಬಿಟ್ಟು ಮಹಾರಾಜರು,

"ಏನು ಕಾಣಿಸ್ತದಪ್ಪಾ?" ಅಂತ ಕೇಳಿದರು.

"'ಏನೂ ಇಲ್ಲರಿ,' ಅಂತ ನಾನು ನಿಜವನ್ನೇ ಹೇಳಿದೆ.

"'ಇನ್ನೂ ಸ್ವಲ್ಪ ಹೊತ್ತು ಹಾಗೇ ಜಪಿಸುತ್ತಾ ಇರು,' ಅಂತ ಅವರು ಹೇಳಿದರು. ನಾನು ಮತ್ತೆ ಐದು ನಿಮಿಷ ಜಪಿಸುತ್ತಿದ್ದೆ. ಅವರು ಮತ್ತೆ ಕೇಳಿದರು. ನಾನೂ ಮತ್ತೆ 'ಇಲ್ಲ' ಅಂದೆ. ಹಾಗೆ ಐದಾರು ಬಾರಿ ಆದ ಬಳಿಕ ಅವರು,

"'ಮೂಗಿನ ತುದಿಯ ಹತ್ತಿರ ತುಸು ಮಸಕು ಬೆಳಕು ಕಾಣಿಸುವದಿಲ್ಲವೇನು?' ಅಂದರು.

"ನಾನು 'ಇಲ್ಲ' ಅಂತ ಹೇಳಿದೆ. ಹಾಗೇ ಜಪಿಸು ಅಂತ ಮತ್ತೆ ಹೇಳಿದರು. ಸ್ವಲ್ಪ ತಡೆದು ಮತ್ತೆ ಕೇಳಿದರು. ಮತ್ತೆ ಮತ್ತೆ ಹಾಗೇ ನಡೆಯಿತು. ಕಡೆಗೆ ನನಗೆ ಬೇಸರವಾಗಿ, ಮೂಗಿನ ತುದಿಯ ಹತ್ತರ ಏನೂ ಕಾಣಿಸದಿದ್ದರೂ ಕಾಣಿಸ್ತದಂತ ಸುಳ್ಳೇ ಒಪ್ಪಿಕೊಂಡುಬಿಟ್ಟೆ.

"'ಇದು ಮೊದಲ ಮೆಟ್ಟಲು. ಹೀಗೆ ಜಪಿಸುತ್ತಾ ಹೋದರೆ ಮುಂದಿನ ಮೆಟ್ಟಲು ಬರುತ್ತವೆ,' ಎಂದರವರು. ನಾನು ಮತ್ತೆ ಸ್ವಲ್ಪ ಹೊತ್ತು ಜಪಿಸಿದೆ. ಏನೂ ಕಾಣಲಿಲ್ಲ. 'ಒಂದು ಮೂರ್ತಿ ಕಾಣುವ್ಪುದಿಲ್ಲವೇ?' ಅಂತ ಕೇಳಿ

ದರು. ನನಗೂ ಬೇಸರ ಬಂದು ಸುಳ್ಳೇ ಹೌದೆಂದು ಹೇಳಿಬಿಟ್ಟೆ.

"'ಹೀಗೇ ದಿನಾಲೂ ಜಪಿಸುವ ನೇಮವಿಟ್ಟುಕೋ. ಮಹಾದೇವರು ಹೀಗೆ ದರ್ಶನ ಕೊಡುತ್ತಾರೆ' ಅಂದರು ಮಹಾರಾಜರು. ಆಯ್ತು ಅಂತ ಮತ್ತೊಮ್ಮೆ ಅವರಿಗೆ ನಮಸ್ಕಾರ ಮಾಡಿ ಎದ್ದು ಬಂದೆ. ನಾನು ಕಂಡ ಮೊದಲನೇ ಗುರುವೆಂದರೆ ಇಂಥವರು! ಕರಾಚೂರಿನ ಮಹಾಗುರುವೆಲ್ಲಿ, ಇವರೆಲ್ಲಿ! ಓಂ ಶ್ರೀ ಓಂ!" ಎಂದು ಮಾತನ್ನು ತಡೆದು ನಿಲ್ಲಿಸಿದ ಮಾತಾಕುಮಾರ.

ಒಂದು ನಿಮಿಷ ಕಳೆದ ತರುವಾಯ ಆತ ಮತ್ತೆ ಹೇಳತೊಡಗಿದ:

"ಐದಾರು ವರ್ಷಗಳ ವರೆಗೆ ಹೀಗೇ ಅಲೆದಾಟದಲ್ಲಿ ಹೋಯ್ತು. ಗುರುವನ್ನ ಹುಡುಕುವ ಗಲಾಟೆಯಲ್ಲಿ ಸಾಲೆಗೆ ಹೋಗುವದನ್ನೂ ಬಿಟ್ಟುಬಿಟ್ಟೆ. ಪುಸ್ತಕಗಳನ್ನೋದುವದನ್ನ ಮಾತ್ರ ಬಿಟ್ಟಿರಲಿಲ್ಲ, ಹಳಗನ್ನಡ ಕಾವ್ಯಗಳನ್ನಲ್ಲದೆ ಸಂಸ್ಕೃತ ಕಲಿತು ಗೀತೋಪನಿಷತ್ತುಗಳನ್ನು ಓದಿಕೊಂಡೆ. ನಾನೂ ಕೆಲವು ಕವಿತೆ ಬರೆದೆ. ಅದೇ ಸಮಯದಲ್ಲಿ ಅಣ್ಣನವರು, ರೋಷರಾಯರ ಪರಿಚಯವಾಯಿತು. ಕರಾಚೂರಿನ ಮಹಾಗುರುಗಳ ಹೆಸರು ಆಗತಾನೆ ಎಲ್ಲಾ ಕಡೆಗೂ ಹಬ್ಬುತ್ತಿತ್ತು. ಅಧ್ಯಾತ್ಮವಾದಿಗಳನೇಕರು ಮಹಾ ಗುರುಗಳ ಗ್ರಂಥಗಳಿಂದ ಸಹಾಯ ಪಡೆಯುತ್ತಿದ್ದರು. ಅದೇ ಹಾದಿಯಲ್ಲಿ ಹೊರಟಿದ್ದ ರೋಷರಾಯರು ನನಗೂ ಆ ಪುಸ್ತಕಗಳನ್ನು ಕೊಟ್ಟು, ಆಗ ನನಗಿನ್ನೂ ಇಂಗ್ಲೀಷು ತಿಳಿಯುತ್ತಿರಲಿಲ್ಲವಾದ್ದರಿಂದ ಅವುಗಳಲ್ಲಿನ ವಿಷಯವನ್ನ ನನಗಾಗಿ ಬರೆದು ತೆಗೆದುಕೊಟ್ಟು ಸಹಾಯ ಮಾಡಿದರು. ಅನಂತರ ನಾನೂ ಅಷ್ಟಿಷ್ಟು ಇಂಗ್ಲೀಷು ಕಲಿತುಕೊಂಡು ಡಿಕ್ಶನರಿಯ ಸಹಾಯದಿಂದ ಮಹಾಗುರುಗಳ ಪುಸ್ತಕ ಅರ್ಥಮಾಡಿಕೊಳ್ಳಲು ಶಕ್ತನಾದೆ. ಏಕಲವ್ಯನಿಗೆ ದ್ರೋಣಾಚಾರ್ಯರು ಗುರುವಾಗಲಿಲ್ಲವೇನು, ಹಾಗೆ ಮಹಾಗುರುಗಳು ಕರಾಚೂರಿನಲ್ಲಿದ್ದುಕೊಂಡೇ ನನಗೆ ಗುರುವಾಗಿ ನನ್ನ ಕೈಹಿಡಿದು ನಡಸಿದರು. ಅವರದೊಂದು ಫೋಟೋ ತರಿಸಿಕೊಂಡು ಅದರ ಮುಂದೆ ಕುಳಿತು ಅವರ ಆಶೀರ್ವಾದ ಪಡೆದು ಧ್ಯಾನಕ್ಕಾರಂಭಿಸುತಿದ್ದೆ. ಮಹಾಗುರುಗಳೇ ತಮ್ಮ ಸಾಧಕ ಜೀವನದಲ್ಲಿ ಮೊದಲು ಕೈಗೊಂಡ, ವಿಚಾರ ನಿಸ್ತರಂಗೀಕರಣವನ್ನ ಸಾಧಿಸಲು ಯತ್ನಿಸುತ್ತಿದ್ದೆ. ನೀವೂ ಹೀಗೆ ಮಾಡಿರಬಹುದಲ್ಲ?"

"ನಾನೀಗಲೂ ಮಾಡುವದು ಅದನ್ನೇ. ಅದಕ್ಕಿಂತ ಹೆಚ್ಚು ಮುಂದು

ವರಿಯಲಿಕ್ಕಾಗಿಲ್ಲ."

" ಆದೀತು, ಆದೀತು. ಯಾವದಕ್ಕೂ ಕಾಲ ಬರಬೇಕು. ಶ್ರೀ ಮಹಾಗುರು ಶ್ರೀ ಮಹಾಮಾತೆಯರ ಕೃಪೆಯಾಗಬೇಕು. ಮೊದಮೊದಲು ವಿಚಾರ ನಿಸ್ತರಂಗೀಕರಣ ಕೂಡಾ ಬಹಳ ಕಷ್ಟ ಕೊಡುತ್ತಿತ್ತು ನನಗೆ. ಅದಕ್ಕಾಗಿ ಒಂದು ಪ್ರತ್ಯೇಕ ಕೋಣೆಗೊತ್ತು ಮಾಡಿಕೊಂಡು ಏಕಾಂತಸಾಧನಕ್ಕಾರಂಭಿಸಿದ್ದೆ. ಸಮಂಕಾಯ ಶಿರೋಗ್ರೀವನಾಗಿ ನೆಟ್ಟಗೆ ಕೂತುಕೊಂಡು ದಿನಾಲೂ ಇಂತಿಷ್ಟು ಹೊತ್ತು ಅಂತ ನೇಮದಿಂದ ಓಂಕಾರ ಜಪಿಸುತ್ತಲೂ, ಅದೇ ಕಾಲಕ್ಕೆ ಭಗವಂತ ಧ್ಯಾನ ಮಾಡುತ್ತಲೂ ಬೇರೆ ವಿಚಾರ ಸುಳಿಯದಂತೆ ಯತ್ನಿಸುತ್ತಲೂ ಧ್ಯಾನ ನಡಸಿದೆ. ದಿನಾಲು ಒಂದು ಗಂಟೆ ಈ ರೀತಿ ಧ್ಯಾನ ಮಾಡಿದ ಬಳಿಕ ಇನ್ನುಳಿದ ವೇಳೆಯಲ್ಲಿ ಕೋಣೆಯ ಕಿಟಕಿ ತೆಗೆದು ಬಾಗಿಲನ್ನು ಮುಚ್ಚಿ ಚಿತ್ರಪಟವೊಂದನ್ನು ದಿಟ್ಟಿಸುತ್ತಾ ಬೇರಾವ ವಿಚಾರವೂ ಬರಗೊಡದೆ ಕೂಡುತ್ತಿದ್ದೆ. ಆದರೆ ಅದು ಬಹಳ ಹೊತ್ತು ನಡೆಯುತ್ತಿರಲಿಲ್ಲ. ಲೌಕಿಕವಿಚಾರಗಳು ತುಡುಗುದನಗಳಂತೆ ಬಂದೇ ಬರುತ್ತಿದ್ದುವು. ಮನಸ್ಸು ಬಹಳ ವ್ಯಗ್ರವಾಗುತ್ತಿತ್ತು. ಹೀಗಾಗಲು ಕಾರಣವೇನು ಗೊತ್ತೇ ? "

ಮರುಳಯ್ಯನಿಗೂ ಅಂಥ ಅನುಭವವಿಲ್ಲದಿರಲಿಲ್ಲ. ಅಂತೆಯೇ ಆತ ಕಾರಣವನ್ನು ಥಟ್ಟನೆ ಕಂಡು ಹಿಡಿದು ಹೇಳಿದ :

" ಅಬ್ರಹ್ಮಚರ್ಯ ಅಲ್ಲವೇನು ?

" ಸರಿಯಾಗಿ ಹೇಳಿದಿರಿ. ಅದು ಮೊದಲನೇ ಕಾರಣ. ಎರಡನೆಯದಾಗಿ ನನ್ನದು ದುರ್ಬಲದೇಹ. ಬಹಳ ಹೊತ್ತು ಬೆನ್ನು ಸೆಟೆಸಿ ನೆಟ್ಟಗೆ ಕೂತುಕೊಳ್ಳಲು ಕೂಡಾ ನನ್ನಿಂದಾಗುತ್ತಿರಲಿಲ್ಲ. ಆದರೂ ನಿರಾಶನಾಗದೆ ತಣ್ಣೀರ ಸ್ನಾನಕ್ಕಾರಂಭಿಸಿ, ವಿರಾಮಕುರ್ಚಿಯ ಮೇಲೆ ಕೂತುಕೊಂಡೇ ಧ್ಯಾನವನ್ನು ಮುಂದುವರಿಸಿದೆ. ಆದರೆ, ಧ್ಯಾನಕ್ಕಾರಂಭವಾದ ಐದಾರು ನಿಮಿಷಗಳಲ್ಲಿ ನಿದ್ದೆ ಹತ್ತಿದಂತಾಗುತ್ತಿತ್ತು. ಅದೇ ಸಮಾಧಿ ಸ್ಥಿತಿ ಅಂತ ಭಾವಿಸಿ ನಾನು ಹಿಗ್ಗುತ್ತಿದ್ದೆ, ಹುಚ್ಚ ! ಆದರೆ ನನಗೆ ನಿಜವಾಗಿ ನಿದ್ದೆಯೇ ಬಂದು ಒಂದು ತಾಸು ಇಟ್ಟು ಎಚ್ಚರಾಗುತ್ತಿತ್ತು. ಆಗ ಏನೋ ವಿಶ್ರಾಂತಿ ಸಿಕ್ಕಂತೆ ಅನಿಸುತಿತ್ತೇ ಹೊರತು ಆಧ್ಯಾತ್ಮಿಕ ಪ್ರಗತಿಯ ಲಕ್ಷಣವಾದರೂ ಕಾಣುತ್ತಿರಲಿಲ್ಲ. ಧ್ಯಾನವ ಫಲ ಸಿಕ್ಕಬೇಕಾದರೆ ಇಂಥ ನಿದ್ದೆ ಬರದಂತೆ ಎಚ್ಚರದಿಂದಿರಬೇಕೆಂಬ

ಸಂಗತಿ ನನಗಾಗ ಗೊತ್ತಿರಲಿಲ್ಲ, ಹೀಗೇ ಒಂದೆರಡು ವರ್ಷ ನಡೆಯಿತು. ಮುಂದೆ ಮಹಾಗುರುಗಳ ಯೋಗ ಸಾಧನದ ಪುಸ್ತಕದ ಸಹಾಯದಿಂದ ಸಾಧನೆ ಮುಂದುವರಿಸಿದೆ. ಕರಾಚೂರಿಗೆ ಹೋಗಿ ಕೆಲವು ದಿನ ಇದ್ದ ಬಳಿಕ ಬ್ರಹ್ಮ ಸಂಸ್ಪರ್ಶದ ಅನುಭವವಾಯಿತು. ಮುಂದೆ ಎಷ್ಟೋ ವರ್ಷ ಕಳೆದ ಬಳಿಕ ಮುಚ್ಚಿದ ಕಣ್ಣೆದುರಿಗೆ ಬಣ್ಣಗಳು ಕಾಣಿಸಿದುವು. ಇನ್ನೂ ಪೂರ್ಣಸಿದ್ಧಿಯಾಗಿಲ್ಲ. ಆಗುತ್ತದೆಂಬ ಭರವಸೆಯೇನೊ ಉಂಟು. ಓಂ ಶ್ರೀ ಓಂ," ಎಂದು ಹೇಳಿ ಮಾತು ಮುಗಿಸಿದ ಮಾತಾಕುಮಾರ.

ಈ ಸಂಕ್ಷಿಪ್ತ ನಿರೂಪಣೆಯಿಂದ ಮರುಳಯ್ಯನಿಗೆ ಕೊಂಚವೂ ತೃಪ್ತಿಯಾಗಲಿಲ್ಲ.

" ನೀವು ಯಾವದನ್ನೂ ಸರಿಯಾಗಿ ಹೇಳಲೇ ಇಲ್ಲವಲ್ರೀ ? "

" ಏನು ಹೇಳಲಿ ಏನು ಬಿಡಲಿ ಅನ್ನುವದೇ ನನಗೆ ತಿಳೀದಂತಾಗಿದೆ. ಶಬ್ದಾತೀತ ನಾಗಾತೀತ ಅನುಭವ ಅವು. ಪ್ರತಿಯೊಬ್ಬರೂ ಅವುಗಳನ್ನ ಸ್ವತಃ ಅನುಭವಿಸಿದರೇನೆ ಅವುಗಳ ಕಲ್ಪನೆ ಬರಬಹುದು. ಹೇಳಿದರೆ ತಿಳಿಯಲಾರವು ಅದರಲ್ಲೂ ನನ್ನಂಥವನು ಆ ವಿಷಯ ವರ್ಣಿಸುವದು ಅಸಾಧ್ಯವೇ. ಜಾನ್ ಬನಿಯನ್‌ರ ಪಿಲ್ಗ್ರಿಮ್ಸ್ ಪ್ರೋಗ್ರೆಸ್ ಓದಿದೀರಾ ? "

" ಹೌದು. ಬಹಳ ಹಿಂದೆಯೇ ಓದಿದ್ದೀನಿ."

" ಬನಿಯನ್ ತನ್ನ ಅಧ್ಯಾತ್ಮಿಕ ಪ್ರಗತಿಯ ಕಥೆಯನ್ನೇ ಅದರಲ್ಲಿ ಚಿತ್ರಿಸಿದಾನೆ. ಅಂಥದೊಂದು ಪುಸ್ತಕ ಬರೆಯಬೇಕೆಂತ ನಾನೂ ಯತ್ನಿಸಿದೆ. ಸಾಧ್ಯವಾಗಲಿಲ್ಲ. ಅಂದಿನಿಂದ ಈ ವಿಷಯ ಮಾತಾಡುವದನ್ನೇ ಬಿಟ್ಟು ಬಿಟ್ಟಿದೀನಿ. ಏನೋ ನಿಮ್ಮ ಒತ್ತಾಯಕ್ಕಾಗಿ ಈ ದಿನ ಇಷ್ಟಾದರೂ ಹೇಳಿದಾಯ್ತು. ಆಗಲಿ. ಈಗ ಹೊರಡೋಣವೇ ? "

ಮನೆಗೆ ಹಿಂದಿರುಗಿ ಬರುತ್ತಾ ದಾರಿಯಲ್ಲಿ ಮರುಳಯ್ಯ ಕೊನೆಯದಾಗಿ ಒಂದು ಪ್ರಶ್ನೆ ಕೇಳಿದ :

" ಕಟ್ಟುನಿಟ್ಟಾಗಿ ಬ್ರಹ್ಮಚರ್ಯ ಪಾಲಿಸದಿದ್ದರೆ ಪೂರ್ಣಯೋಗ ಸಾಧಿಸುವದೇ ಇಲ್ಲ. ಅಲ್ಲವೇನ್ರೀ ? "

" ನಿಜ. ನಿಜ. ಕರಾಚೂರಿನ ಶ್ರೀ ಮಹಾಗುರುಗಳು ಆ ರೀತಿ ಸ್ಪಷ್ಟವಾಗೇ ಹೇಳಿದಾರೆ. ಶ್ರೀ ರಾಮಕೃಷ್ಣ ಪರಮಹಂಸರು, ಶ್ರೀ ವಿವೇಕಾನಂದರು,

ಶ್ರೀ ಕ್ರಿಸ್ತದೇವರು ಎಲ್ಲರೂ ಹಾಗೇ ಅಭಿಪ್ರಾಯ ಪಟ್ಟಿದಾರೆ. ಬಸವಣ್ಣನವರೂ ಕೂಡಾ ಬ್ರಹ್ಮಚರ್ಯವ್ರತ ಕೈಗೊಂಡಿದ್ದರೆನ್ನುವದಕ್ಕೆ 'ಇದುವರೆಗೆ ಮುಟ್ಟಿತ್ತಿ ಮುಟ್ಟಿತ್ತು, ಇನ್ನು ಮುಟ್ಟಿದರೆ ನಿಮ್ಮ ರಾಣಿವಾಸದಾಣೆ! ಎಂಬ ವಚನವೇ ಸಾಕ್ಷಿ. ಮಹಾತ್ಮಾ ಗಾಂಧಿಯವರೂ ಕೂಡಾ ಎಷ್ಟೋ ವರ್ಷಗಳಿಂದ ಬ್ರಹ್ಮಚರ್ಯ ಪಾಲಿಸುತ್ತಾ ಬಂದಿದಾರೆ. ಒಂದೆರಡು ಸಲ ಸೋಲಬಹುದು. ಅದರಿಂದ ನಿರಾಶರಾಗದೆ ಮತ್ತೆ ಮತ್ತೆ ಯತ್ನಿಸಬೇಕು. ಗಾಂಧೀಜಿಯವರಂಥ ಮಹಾನುಭಾವರೇ ಎಷ್ಟೋ ಸಲ ಸೋತಿದ್ದರು. ಅವರ ಆತ್ಮ ಚರಿತ್ರೆಯಲ್ಲಿ ನೀವು ಓದಿರಬಹುದಲ್ಲ?"

"ಈ ವಿಷಯದಲ್ಲಿ ಮಹಾಗುರುಗಳ ಅನುಭವ ಏನು ನಿಮಗೆ ಗೊತ್ತೇ?"

"ಅವರೂ ಕಷ್ಟಪಟ್ಟು ಕೊನೆಗೆ ಕಾಮವನ್ನ ಗೆದ್ದವರು. ನೀವು ಅವರ ಯೋಗದಲ್ಲಿ ಯಶಪಡೆಯುವದಿದ್ದರೆ ಮೊದಲು ಈ ವಿಷಯದಲ್ಲಿ ಜಯಪಡಬೇಕು."

"ಹೆಂಡತಿ ಸಹಕರಿಸದಿದ್ದರೆ?"

"ಇಂದಿಲ್ಲಾ ನಾಳೆಯಾದರೂ ಸಹಕರಿಸಬಹುದು. ಸಹಕರಿಸುವ ಹಾಗೆ ನೀವು ಮಾಡಬೇಕು. ಅವರ ಕೈ ಕಾಲು ಕಟ್ಟಿಕೊಂಡು ಪ್ರಾರ್ಥಿಸಬೇಕು ಅವರ ಹೃದಯ ಪರಿವರ್ತನೆಯಾಗುವಂತೆ ಮಾಡಬೇಕು."

"ಏನು ಮಾಡಿದರೂ ಅವರು ಒಪ್ಪದಿದ್ದರೆ?"

"ಅಂಥಾ ಸಂದರ್ಭದಲ್ಲಿ ಏನು ಮಾಡಬೇಕು ಅನ್ನುವದನ್ನ ಅವರವರೇ ಯೋಚಿಸಿ ನಿರ್ಧರಿಸಬೇಕಾಗುವದಲ್ಲವೇನು? ದೇವರು ಬುದ್ಧಿ ಕೊಟ್ಟಿದಾನೆ. ವಿವೇಕಕ್ಕೆ ಒಪ್ಪುವದನ್ನ ಮಾಡಬಹುದಲ್ಲಾ?"

"ಹೃದಯ ಪರಿವರ್ತನೆಯಾಗಬೇಕಾದರೆ ಸತ್ಸಂಗವೂ ಆವಶ್ಯಕವಾಗಿ ಬೇಕು. ನಮ್ಮ ನೆರೆ ಹೊರೆ ಚೆನ್ನಾಗಿಲ್ಲ. ಆದಷ್ಟು ಬೇಗ ಈ ಜಾಗ ಬಿಡಬೇಕಂತ ಮಾಡಿದೀನಿ. ಕುಬೇರಪ್ಪನವರ ಆಶ್ರಮದ ಯೋಜನೆಯಬಗ್ಗೆ ನಿಮ್ಮ ಅಭಿಪ್ರಾಯವೇನು?"

"ನಾನು ಅವರೆದುರಿಗೇ ಹೇಳಿದೆನಲ್ಲ? ಅಂಥದ್ದೊಂದು ಆಶ್ರಮ ಆವಶ್ಯವಾಗಿ ಬೇಕು ಕರ್ನಾಟಕದಲ್ಲಿ."

"ಸಾಲೆಯ ನೌಕರಿ ಬಿಟ್ಟು ನಾನು ಅಲ್ಲಿಗೇ ಹೋಗಿಬಿಡುವದು ಒಳ್ಳೆಯ

ದಾದೀತೋ ಇಲ್ಲವೋ ?"

"ಇದನ್ನ ಮಾತ್ರ ನಾ ಹೇಳಲಾರೆ. ನೌಕರಿ ಬಿಡುವ ವಿಷಯ ನಿರ್ಧರಿಸಬೇಕಾದವರು ನೀವೇ. ಆಶ್ರಮ ಸುರು ಆದರೆ ಮಾತ್ರ ಬಹಳ ಉತ್ತಮ.... ನಾನೂ ಆಗಾಗ ಅಲ್ಲಿ ಬಂದು ಇರಬಹುದು."

"ಕರಾಚೂರಿನ ಮಹಾಗುರು ಮಹಾಮಾತೆಯವರಂಥ ಮಾರ್ಗದರ್ಶಕರಿಲ್ಲದೆ ಈ ಆಶ್ರಮ ಕಟ್ಟಿದರೆ ಉಪಯೋಗವಾದೀತೇ ?"

"ಗುರುಗಳಿದ್ದರೇನೋ ಒಳ್ಳೆಯದೇ. ಆದರೆ ಕೇವಲ ಸಾಧಕರ ಆಶ್ರಮ ಅಂತಲೂ ನಡಸಬಹುದಲ್ಲಾ ? ಆಗಾಗ ಕರಾಚೂರಿಗೂ ಹೋಗಿ ಬರುತ್ತಲೇ ಇರಬೇಕು. ಅಲ್ಲಿ ಕಲಿತು ಬಂದ ಪಾಠಗಳನ್ನು ಇಲ್ಲಿ ಗಟ್ಟಿ ಮಾಡಿಕೊಳ್ಳಬೇಕು."

"ಕುಬೇರಪ್ಪನವರ ವಿಷಯ ನನಗೇನೂ ಗೊತ್ತಿಲ್ಲ. ಮನುಷ್ಯ ಹ್ಯಾಗೆ? ಅವರನ್ನ ನಂಬಬಹುದೇ ?"

"ನನಗೂ ಅವರೊಡನೆ ಸಾಕಷ್ಟು ಬಳಕೆಯಿಲ್ಲ. ನನಗೆ ತಿಳಿದಮಟ್ಟಿಗೆ ಅವರು ಒಳ್ಳೆಯವರೇ ಹೌದು. ಅಲ್ಲದೆ, ನಾನು ಎಲ್ಲರನ್ನೂ ನಂಬುವ ಮನುಷ್ಯ. ಯಾರ ಬಗೆಗೂ ನಾವು ಅಪನಂಬಿಕೆ ಇಟ್ಟುಕೊಳ್ಳಬಾರದು. ಎಲ್ಲರೂ ಸಾಧಕರು ; ಸಿದ್ಧರಲ್ಲ. ಅಲ್ಲವೇನು ?"

"ನಿಜ. ನಿಜ." ಕುಬೇರಪ್ಪನವರ ಬಗೆಗೆ ಅವಿಶ್ವಾಸ ಪ್ರದರ್ಶಿಸಿದುದು ಅನುಚಿತವಾಯಿತೆಂದು ಮರುಳಯ್ಯನಿಗೂ ಎನಿಸಿ ಅಂಥ ಮಾತು ಆಡಿದುದಕ್ಕಾಗಿ ವಿಷಾದವೂ ಉಂಟಾಯಿತು. ಕುಬೇರಪ್ಪನವರು ನಿಜವಾಗಿ ಎಂಥ ವ್ಯಕ್ತಿ? ಅವರನ್ನು ನಂಬಿ, ಕೆಲಸವನ್ನು ತ್ಯಜಿಸಿ ತಾನು ಅವರ ಆಶ್ರಯದಲ್ಲಿ ನಿಲ್ಲುವುದು ಎಷ್ಟರ ಮಟ್ಟಿಗೆ ಸರಿ?

ಯಾವುದನ್ನೂ ನಿರ್ಧರಿಸಲಾರದೆ ಅತ್ತಿತ್ತ ತುಯ್ಯತೊಡಗಿತು ಅವನ ಚಿತ್ತ. ಕುಬೇರಪ್ಪನವರ ವಿಚಾರ ತನಗೆ ಸತ್ಯಸಂಗತಿ ತಿಳಿಸುವವರು ಯಾರು? ತಾನು ಯಾರ ಸಲಹೆ ಕೋರಬೇಕು ? ಸುಚೇತರಾಯ ಮತ್ತು ಸುಲಲಿತದೇವಿಯರು ಕುಬೇರಪ್ಪನವರ ಅಂತರಂಗದ ಮಿತ್ರರಾಗಿರುವುದು ಸ್ಪಷ್ಟವಾಗಿಯೇ ಇದೆ. ನಿಜವಾದ ವಿಷಯ ಅವರಿಂದ ತಿಳಿಯುವುದು ಅಸಾಧ್ಯವೆಂದೇ ತೋರುತ್ತದೆ. ಹಾಗಾದರೆ ತಿಳಿಸುವವರು ಯಾರು ?

ಒಂದು ವ್ಯಕ್ತಿಯ ಬಗೆಗೆ ಏನನ್ನೂ ತಿಳಿದುಕೊಳ್ಳದೆ ಅವಿಶ್ವಾಸ ಪ್ರದರ್ಶಿಸ

ಬಾರದು. ಅದೇನೋ ಸರಿಯೆ. ಹಾಗೇ, ಆ ವ್ಯಕ್ತಿಯ ಕುರಿತು ಸಂಪೂರ್ಣವಾಗಿ ತಿಳಿದುಕೊಳ್ಳದೆ ಅದನ್ನು ನಂಬಲೂಬಾರದು. ಅಲ್ಲವೆ ? ಮಾತಾಕುಮಾರ ಮಗುವಿದ್ದ ಹಾಗೆ. ತಾನಿನ್ನೂ ಆ ಸ್ಥಿತಿಗೆ ಬಂದಿಲ್ಲವೆಂಬುದಂತೂ ವಾಸ್ತವವಾದ ಸಂಗತಿ. ಸಾಧಕನಾದವನು ಆ ಸ್ಥಿತಿಗೆ ಬರುವುದೂ ಅವಶ್ಯಕ ಅಲ್ಲವೆ ?

ನಂಬಬೇಕು ; ಎಲ್ಲರನ್ನೂ ನಂಬಬೇಕು.

ಆದರೆ....

ನಂಬಿಕೆಯೆ ಮೂಡುತ್ತಿಲ್ಲವಲ್ಲ ? ಮುಂದೆ ಹೇಗೆ ?

೧೧

ಮಾರನೆಯ ದಿನ ಊಟ ತೀರಿಸಿಕೊಂಡು ಶಾಲೆಗೆ ಹೊರಟಿದ್ದ ಹಾಗೆ, ಸುಲಲಿತದೇವಿಯ ಆಮಂತ್ರಣದ ನೆನೆಪು ಮಾಡಿಕೊಂಡು ಮರುಳಯ್ಯ ಪತ್ನಿಯನ್ನು ಕುರಿತು ಹೇಳಿದ :

" ಸಾಯಂಕಾಲ ಅಡಿಗೆ ಮಾಡಬೇಕಾಗಿಲ್ಲ ಕಮಲಮುಖಿ. ಇವತ್ತು ಒಬ್ಬ ಸ್ನೇಹಿತರಲ್ಲಿ ಊಟಕ್ಕೆ ಹೇಳಿದಾರೆ–ನಿಮ್ಮನ್ನೂ ಕರಕೊಂಡು ಬರಬೇಕು ಅಂತ."

ಮರುಳಯ್ಯನ ಜೊತೆಗೆ ಸಂಸಾರಕ್ಕಾರಂಭಿಸಿದಂದಿನಿಂದ ಯಾರ ಮನೆಗೂ ಊಟಕ್ಕೆ ಹೋಗಿರಲಿಲ್ಲ ಕಮಲ. ಯಾರೂ ಅವರನ್ನು ಆಮಂತ್ರಿಸಿರಲಿಲ್ಲ ; ಅವರೂ ಯಾರನ್ನೂ ಆಮಂತ್ರಿಸಿರಲಿಲ್ಲ. ಎಂದೂ ಇಲ್ಲದ ಸ್ನೇಹಿತರು ಈಗೆಲ್ಲಿ ಬಂದರು ? ಎಂದುಕೊಂಡಾಗ ಆಕೆಗೆ ತುಂಬಾ ಆಶ್ಚರ್ಯವೆನಿಸದಿರಲಿಲ್ಲ.

" ಸ್ನೇಹಿತರೇ ? ಯಾರು ? "

" ಸುಚರಿತರಾಯರು."

" ನೀವೇ ಹೋಗಿ ಬರ್ರಿ. ನಾನ್ಯಾಕೆ ? "

" ಛೆ. ಛೆ. ನಿಮ್ಮನ್ನೂ ಕರಕೊಂಡೇ ಬರಬೇಕಂತ ಬಹಳ ಒತ್ತಾಯದಿಂದ ಹೇಳಿದಾರೆ, ಅವರ ಪತ್ನಿ ಸುಲಲಿತದೇವಿಯವರು."

" ನನಗೆ ಅವರ ಗುರುತಿಲ್ಲ, ಪರಿಚಯ ಇಲ್ಲ. ನಾನು ಹ್ಯಾಗೆ ಬರಲಿ ? "

" ನನಗೆ ಗುರುತಿದೆಯಲ್ಲ ? ನಿಮಗೂ ಗುರುತಾಗ್ತದ ಅಲ್ಲಿ ಹೋದಾಗ."

ಆದರೂ ಅಲ್ಲಿಗೆ ಹೋಗಲು ಅವಳ ಮನಸ್ಸು ಸಿದ್ಧವಾಗಲಿಲ್ಲ. ಅವರು ಯಾರೋ....ಎಂಥವರೊ. ಅವರ ಸ್ವಭಾವ ಹೇಗಿದೆಯೊ. ಅವರು ಶ್ರೀಮಂತರಾಗಿದ್ದ ಪಕ್ಷದಲ್ಲಿ ತಾನು ಅವರ ಮನೆಗೆ ಹೋಗುವುದು ಒಳ್ಳೆಯದಲ್ಲ. ಉಟ್ಟುಕೊಳ್ಳುವುದಕ್ಕೊಂದು ಸರಿಯಾದ ಸೀರೆಯೂ ತನಗಿಲ್ಲ. ಒಡವೆಗಳ ಮಾತು ದೂರವೇ ಉಳಿಯಿತು. ತನ್ನ ದರಿದ್ರ ಸ್ಥಿತಿಯನ್ನು ನೋಡಿ ಆ ಮನೆಯಾಕೆ ಮೂಗು ಮುರಿಯಬಾರದಲ್ಲ ? ಕೈ ತೋರಿಸಿ ಅವಲಕ್ಷಣ ಮಾಡಿಸಿಕೊಳ್ಳುವು

ದಾದರೂ ಏಕೆ ?

" ಊಹೂಂ. ನಾನೇನು ಬರುವದಿಲ್ಲ. ನೀವೇ ಹೋಗಿ ಬರ್ರಿ," ಎಂದು ಸ್ಪಷ್ಟವಾಗಿ ಹೇಳಿದಳು ಕಮಲ.

" ಹಟ ಮಾಡಬಾರದು ಕಮಲಮುಖಿ. ನಿಮ್ಮನ್ನೂ ಕರಕೊಂಡೇ ಬರ್ತೀನಂತ ಒಪ್ಪಿಕೊಂಡು ಬಂದಿದೀನಿ. ಈಗ ನೀವು ಬರದಿದ್ದರೆ ಬಹಳ ಅಸಹ್ಯವಾಗ್ತದ."

" ಅವರು ಹ್ಯಾಗಿದಾರೊ ಏನೊ. ನನಗೇನು ಮನಸ್ಸಿಲ್ಲ ಅಲ್ಲಿಗೆ ಬರಲಿಕ್ಕೆ"

" ಅವರಿಬ್ಬರೂ ಬಹಳ ಒಳ್ಳೆಯವರು " ಅವರ ಒಳ್ಳೆಯತನ ಕುರಿತು ತನಗೇ ನಂಬಿಕೆಯಿರದಿದ್ದರೂ ಮರುಳಯ್ಯ ಹಾಗೆ ಹೇಳಬೇಕಾಯಿತು.

ಕಮಲ ಮತ್ತೆ ಮಾತನಾಡದೆ ಕೊಡವನ್ನೆತ್ತಿಕೊಂಡು ಹಿತ್ತಲಿಗೆ ನಡೆದಳು. ಸಾಯಂಕಾಲ ಶಾಲೆಯಿಂದ ಬಂದ ಬಳಿಕ ಅವಳನ್ನು ಹೊರಡಿಸಿದ ರಾಯಿತೆಂದು ಹೇಳಿಕೊಂಡು ಮರುಳಯ್ಯನೂ ಅಷ್ಟಕ್ಕೇ ಸುಮ್ಮನಾಗಿ ಹೊರಟು ಹೋದ.

ನಲ್ಲಿಯ ಮೇಲೆ ಪಾತ್ರೆಗಳನ್ನು ತೊಳೆಯುತ್ತ ಕುಳಿತಿದ್ದ ಪದ್ಮಾವತಿಯೂ ಆ ಸಂಭಾಷಣೆಯನ್ನು ಕೇಳಿಕೊಂಡಿದ್ದವಳು ಕಮಲಳನ್ನು ಕಂಡೊಡನೆ ನಗು ನಗುತ್ತಾ ಮಾತನಾಡಿದಳು :

" ಸುಲಲಿತದೇವಿ ಅಂದರೆ ಯಾರು ಗೊತ್ತೇ ಕಮಲಾ ? "

" ಇಲ್ಲವ್ವಾ."

" ಅವಳು ಒಬ್ಬಳು ಮಹಾಯೋಗಿನಿ ! ಈ ಊರಿನ ಅಧ್ಯಾತ್ಮಿಗಳ ಮಹಾಮಾತೆ ! " ವ್ಯಂಗ್ಯ ಬೆರೆತ ಧ್ವನಿಯಲ್ಲಿ ಹೇಳಿದಳು ಪದ್ಮಾವತಿ. " ಅವರೊಂದು ಯೋಗಮಂಡಲ ಸ್ಥಾಪಿಸಿದ್ದಾರಂತೆ ತಮ್ಮ ಮನೆಯೊಳಗೆ. ಕುಸುಮಾವತಿಯೂ ಒಂದೆರಡು ಬಾರಿ ಆ ಮಂಡಲದ ಮಿಾಟಿಂಗಿಗೆ ಹೋಗಿದ್ದಳಂತೆ. ಅವಳೇ ಹೇಳುತ್ತಿದ್ದಳು ಆ ಮಹಾಮಾತೆಯ ಕಥೆಯನ್ನೆಲ್ಲ.... ನಿನಗೆ ಗೊತ್ತಿಲ್ಲವೇನೇ ? ಅವಳೂ ನಿಮ್ಮ ಯಜಮಾನರ ಹೈಸ್ಕೂಲಿನಲ್ಲೇ ಮಾಸ್ತರತಿಯಾಗಿದಾಳೆ."

" ಹೀಗೇನು ? ಹಾಗಾದರೆ ಅಲ್ಲಿಯದೇ ಪರಿಚಯ ಅನ್ನು."

" ಅವಳಿಗೇನು ಬಿಡು. ಪರಿಚಯ ಇಲ್ಲದಿದ್ದರೂ ತಾನಾಗಿ ಮೈಮೇಲೆ

ಬಿದ್ದು ಪರಿಚಯ ಮಾಡಿಕೊಳ್ಳುವಂಥಾ ಹೆಣ್ಣು ಆಕೆ. ಮಹಿಳಾಮಂಡಲದ ಅಧ್ಯಕ್ಷಸ್ಥಾನ ಹಿಡಿದುಕೋಬೇಕಂತ ಬಹಳ ಪ್ರಯತ್ನ ಮಾಡಿದ್ದಳು. ಆಗಲಿಲ್ಲ. ಅದಕ್ಕೆ ಈಗ ಯೋಗಮಂಡಲ ಅಂತ ಏನೋ ಒಂದು ಸಂಸ್ಥೆ ಎಬ್ಬಿಸಿ ಏನೋ ಆಟ ನಡಸಿದಾಳೆ."

"ಏನು ಮಾಡುತಾರಂತೆ. ಆ ಯೋಗ ಮಂಡಲದಲ್ಲಿ?"

"ಏನೋ ಮಂತ್ರತಂತ್ರ ಯೋಗ ಗೀಗ ಮಾಡುತಾರಂತೆ. ಕುಸುಮಾವತಿಯೂ ಒಂದು ಸಲ ಹೋಗಿದ್ದಳಂತೆ. ಕರಾಚೂರಿನ ಮಹಾಗುರು ಮಹಾಮಾತೆಯರ ಆತ್ಮಗಳು ಬಂದು ಇವರಿಗೆ ಸಂದೇಶ ಕೊಟ್ಟು ಹೋಗುತಾವಂತೆ."

"ಆತ್ಮಗಳು ಹ್ಯಾಗೆ ಬರ್‍ತಾವೆ ತಾಯಿಾ?"

"ಏನೋ. ಯಾರಿಗೆ ಗೊತ್ತು. ಅದರಲ್ಲಾದರೂ ಏನು ಮೋಸ ಅದೆಯೋ. ನಿಮ್ಮ ಯಜಮಾನರಂಥವರನ್ನ ಮರಳುಮಾಡುವದಕ್ಕಾಗಿ ಏನಾದರೊಂದು ತಂತ್ರ ಮಾಡಿರಬಹುದು ಆ ಮಾಟಗಾತಿ."

ಮಧ್ಯಾಹ್ನದ ಊಟ ಮುಗಿದ ಬಳಿಕ ಪದ್ಮಾವತಿ ಕಮಲಳ ಮನೆಗೇ ಬಂದು ಕುಳಿತು, ಸುಚರಿತರಾಯ—ಸುಲಲಿತದೇವಿಯರ ವಿಚಾರವಾಗಿ ಕುಸುಮಾವತಿಯಿಂದ ತನಗೆ ತಿಳಿದಿದ್ದುದೆಲ್ಲವನ್ನೂ ಸವಿಸ್ತಾರವಾಗಿ ವರ್ಣಿಸತೊಡಗಿದಳು. "ಸುಲಲಿತದೇವಿಯ ಚಾಳಿ ಸರಿಯಾಗಿಲ್ಲ ಅಂತ ಊರಲ್ಲೆಲ್ಲಾ ಹೇಳುತಾರೆ. ಹೂಂ. ನಿಮ್ಮ ಯಜಮಾನರು, ಶರಣಪ್ಪನವರು ಇಂಥವರು ಮಾತ್ರ ಅವಳ ಬಲೆಗೆ ಬಿದ್ದಿರಲಿಕ್ಕಿಲ್ಲ. ನೀನೇನು ಗಾಬರಿಯಾಗಬೇಕಾಗಿಲ್ಲ."

"ಅವರನ್ನೂ ಕೆಡಿಸಲಿಕ್ಕೇ ಈಗ ಪ್ರಯತ್ನ ನಡಸಿದಾಳೋ ಏನೊ."

"ಇದ್ದರೂ ಇರಬಹುದವ್ವಾ. ಇಲ್ಲಾಂದರೆ ಎಂದೂ ಇಲ್ಲದ ಈ ಸ್ನೇಹ ಊಟದ ಆಮಂತ್ರಣ ಇದೆಲ್ಲಾ ಯಾಕೆ ಅಂತೀನಿ. ಅಲ್ಲದೆ, ನಿನ್ನನ್ನೂ ಕರಕೊಂಡು ಬರಬೇಕು ಅಂತ ಬೇರೆ ಹೇಳಿದಾಳೆ ಮೆಲ್ಲಗೆ ಸಲಿಗೆ ಬೆಳಸಿ ನಿಮ್ಮಿಬ್ಬರನ್ನೂ ಫಜೀತಿ ಮಾಡುವ ಹೊಂಚು ಹೂಡಿರಬೇಕು ಆ ಮಹಾತಾಯಿ. ಅವಳ ಗಂಡ ಅಂತ ಅಂದುಕೊಳ್ಳುವ ಆ ಸುಚರಿತರಾಯ ಎಂಥ ಪ್ರಾಣಿ ಅಂತೀಯಾ?"

"ಹೆಂಡತಿ ಹೀಗೆಲ್ಲಾ ಮಾಡುವದು ಅವನಿಗೂ ಗೊತ್ತಿರಬೇಕಲ್ಲ? ಅವರು ಹ್ಯಾಗಾದರೂ ಸುಮ್ಮನಿದಾರೋ!"

"ಸುಮ್ಮನಿರದೆ ಮತ್ತೇನು ಮಾಡಿಯಾರು? ಗದರಿಸಿದರೆ ಹೆದರುವ

ಹೆಣ್ಣೂ ಅಲ್ಲ ಅದು. ಮೊದಲೇ ಗಂಡುಬೀರಿಯಂಥಾ ಸ್ವಭಾವ. ನೊರೈವತ್ತು ರೂಪಾಯಿ ಸಂಬಳದ ನೌಕರಿ ಬೇರೆ. ಗಂಡನ್ನ ಬಿಟ್ಟು ಹೊರಟರೂ ಅವಳಿಗೇನು ಚಿಂತೆಯಿಲ್ಲ. ಅವಳು ಬಿಟ್ಟುಹೋದರೆ ಅವನ ಹೊಟ್ಟೆಯೇ ಕಟ್ಟಾಗ್ತದ. ಅವನಿಗೇನು ಒಂದು ಉದ್ಯೋಗವೋ, ಒಂದು ನೌಕರಿಯೋ ಏನದ? ಅರಾಮಾಗಿ ಕೂತು ತಿನ್ನುವದಕ್ಕೆ ಅನುಕೂಲವಾಗಲಿ ಅಂತಲೇ ಮಾಸ್ತರತಿಯಾಗಿದ್ದ ಇವಳನ್ನ ಮದುವೆ ಮಾಡಿಕೊಂಡ. ಮದುವೆಗೆ ಮೊದಲೂ ಇವಳು ಹೀಗೇ ಇದ್ದಳಂತೆ. ಅದೆಲ್ಲಾ ಗೊತ್ತಿದ್ದೂ ಮದುವೆಯಾದವನು ಈಗ ಅದಕ್ಕೆ ಅಡ್ಡಿ ಮಾಡಲಿಕ್ಕೆ ಬರ್ತದೇನು?"

"ಇವಳಾದರೂ ಹೀಗೆಲ್ಲಾ ಯಾಕೆ ಮಾಡ್ತಿರಬಹುದು ಪದ್ಮಾ? ಮಾನ ಮರ್ಯಾದೆ ಏನೂ ಇಲ್ಲವೇನು ಇವಳಿಗೆ?"

"ಮಾನಮರ್ಯಾದೆ ಅನ್ನುವ ಶಬ್ದಗಳೇ ಅವಳಿಗೆ ಗೊತ್ತಿಲ್ಲ ಅಂತ ಕುಸುಮಾ ಹೇಳುತ್ತಿದ್ದಳು. ಅದಲ್ಲದೆ, ಚಿಕ್ಕವರುಸ್ಸಿನಿಂದ ಬಂದ ಚಟಗಳು ಏನು ಮಾಡಿದರೂ ಹೋಗುವದಿಲ್ಲ. ಆರಾಮಾಗಿ ಉಂಡು ತಿಂದು ಅಡ್ಡಾಡಿಕೊಂಡಿದ್ದಾರೆ, ರಾಯರು. ಮೇಲೆ ಮನರಂಜನೆಗಂತ ಅಧ್ಯಾತ್ಮ, ಯೋಗ, ಕರ್ಣಾಟಕ ಏಕೀಕರಣ, ರಾಜಕಾರಣ, ಸಾಹಿತ್ಯ, ಕಾವ್ಯ ಅಂತ ಏನೇನೋ ಸೋಗು. ಅದರ ನಿಮಿತ್ತವಾಗಿ ದೊಡ್ಡ ದೊಡ್ಡ ಸಾಹುಕಾರರ ದೋಸ್ತಿ ಆಗ್ತದ. ಅವರನ್ನೆಲ್ಲಾ ಮನೆಗೆ ಕರಕೊಂಡು ಬಂದು ಹೆಂಡತಿಗೆ ಪರಿಚಯ ಮಾಡಿಸಿಕೊಟ್ಟರಾಯ್ತು. ಮುಂದಿನದೆಲ್ಲಾ ಅವಳೇ ನೋಡಿಕೊಳ್ತಾಳೆ. ಹ್ಯಾಗಿದೆ ನೋಡಿದಿಯಾ ಸುಚರಿತರಾಯರ ಚರಿತ್ರೆ!"

"ದೊಡ್ಡ ದೊಡ್ಡ ಮಂದಿ ಬರ್ತಾರೆ ಅಂದಿಯಾ ಅವರ ಮನೆಗೆ?"

"ಕರ್ಣಾಟಕ ಅಷ್ಟೇ ಯಾಕೆ, ಬೇರೆ ಪ್ರಾಂತಗಳಲ್ಲಿನ ದೊಡ್ಡ ದೊಡ್ಡವರನ್ನೆಲ್ಲಾ ಹ್ಯಾಗೋ ಹಿಡುಕೊಂಡು ಬರ್ತಾರೆ ಸುಚರಿತರಾಯರು. ಸಾರ್ವಜನಿಕ ಕಾರ್ಯಗಳಲ್ಲಿ ಓಡಾಡುತ್ತಾ ಅವರೆಲ್ಲರ ಪರಿಚಯವಾಗಿರ್ತದ. ಅದನ್ನ ಉಪಾಯದಿಂದ ಬೆಳಸಿ ಮನೆಗೆ ಚಹಾಕ್ಕೆ ಕರತಂದರಾಯ್ತಲ್ಲ? ಎಂಥ ದೊಡ್ಡವರು ಬಂದರೂ ವಸ್ತಿ ಮಾಡಲಿಕ್ಕೆ ಅನುಕೂಲವಾಗುವಂಥಾ ಭಾರೀ ಮನೆಯಂತೂ ಇದ್ದೇ ಇದೆಯಲ್ಲ! ಕಾಂಗ್ರೆಸ್ ಲೀಡರ್ ಸಾಹುಕಾರ್ ಕುಬೇರಪ್ಪ.... ಅವರ ಹೆಸರನ್ನ ಕೇಳಿರಬಹುದು ನೀನು?"

"ಇಲ್ಲವ್ವಾ. ನಾನೇನು ನಿನ್ನ ಹಾಗೆ ಪತ್ರಿಕೆಗಳನ್ನೋದುತೇನೆಯೇ? ನನಗೇನು ಗೊತ್ತಾಗಬೇಕು ಈ ಪುಢಾರಿಗಳ ವಿಷಯ?"

"ಕುಬೇರಪ್ಪ ಅಂದರೆ ಈ ಜಿಲ್ಲೆಗೇ ದೊಡ್ಡ ಜಮೀನ್ದಾರರು. ಅವರ ಊರಿನ ಜಮೀನುಗಳೆಲ್ಲಾ ಅವರವೇ ಅಂತೆ. ವರ್ಷಕ್ಕೆ ಐವತ್ತು ಸಾವಿರ ಉತ್ಪನ್ನ. ಮೋಟರು ಕಾರು ಇಟ್ಟಿದ್ದಾರೆ. ಈ ಊರಲ್ಲೂ ಒಂದು ಮನೆ ಮಾಡಿದಾರೆ. ಹಣ ಖರ್ಚು ಮಾಡುವದೆಂದರೆ ಲಕ್ಷ್ಯವೇ ಇಲ್ಲವಂತೆ ಅವರಿಗೆ. ಇಂಥವರ ನಡತೆ ಹ್ಯಾಗಿರ್ತದನ್ನೂದು ನಿನಗೆ ಗೊತ್ತೇ ಇರಬೇಕಲ್ಲ? ಶ್ರೀ ಕೃಷ್ಣ ಪರಮಾತ್ಮನ ಅವತಾರವಂತೆ ಈ ಸಾಹುಕಾರ. ಇಂಥವನು ನಾಲ್ಕು ನಾಲ್ಕು ದಿನ ಸುಲಲಿತದೇವಿಯ ಮನೆಯಲ್ಲೇ ಬಿದ್ದುಕೊಂಡಿರ್ತಾನಂತೆ."

"ಇವನೂ ಅಧ್ಯಾತ್ಮಿಯೋ ಏನು?"

"ದೊಡ್ಡ ಅಧ್ಯಾತ್ಮಿ! ವರ್ಷದಲ್ಲಿ ಎರಡು ಮೂರು ಸಲ ಕರಾಚೂರಿಗೂ ಹೋಗಿ ಬರ್ತಿರ್ತಾನೆ. ಮಹಾಗುರು ಮಹಾಮಾತೆಯರ ಪರಮ ಶಿಷ್ಯನಂತೆ ಇವನೂ! ಸುಚರಿತರಾಯರ ಯೋಗಮಂಡಲಕ್ಕೆ ಅಧ್ಯಕ್ಷನಾಗಿರುವವನೂ ಇವನೆ!

"ಯೋಗಮಂಡಲದ ಮೂವರು ಸದಸ್ಯರೆಂಥವರೆನ್ನೂದು ಗೊತ್ತಾಯ್ತುಲ್ಲ? ಇನ್ನು ಉಳಿದವರ ಕಥೆ ಕೇಳು. ಅವರಲ್ಲೊಬ್ಬರು ಡಾಕ್ಟರ್ ಸಾಹೇಬರು. ಅವರ ನಿಜವಾದ ಹೆಸರು ಏನದೋ ಏನೊ. ಊರೊಳಗಿನ ಜನರು ಮಾತ್ರ ಅವರಿಗೆ ಗನೋರಿಯಾ ಡಾಕ್ಟರ್ ಅಂತ ಕರೀತಾರಂತೆ. ಅಂದರೇನು ಗೊತ್ತಾಯ್ತೋ ಇಲ್ಲೋ?" ಎಂದು ಪ್ರಶ್ನಿಸಿ, ಕಮಲಳ ಉತ್ತರಕ್ಕಾಗಿ ತಡೆಯದೆ ತಾನೇ ಮುಂದುವರಿಸಿದಳು ಪದ್ಮಾವತಿ: "ಗನೋರಿಯಾ ಅಂದರೆ ಒಂದು ಕೆಟ್ಟರೋಗ. ಅಷ್ಟಾದರೂ ಗೊತ್ತಿರಬೇಕಲ್ಲಾ ನಿನಗೆ? ಆ ರೋಗ ಆದವರೆಲ್ಲಾ ಈ ಡಾಕ್ಟರರ ಗಿರಾಕಿಗಳು. ಒಂದು ಇಂಜಕ್ಷನ್ ಚುಚ್ಚಿ ಹತ್ತು ರೂಪಾಯಿ ವಸೂಲ್ಮಾಡ್ತಾರೆ. ಇದೇ ರೋಗದ ಪುಣ್ಯದಿಂದ ಈ ಡಾಕ್ಟರು ನಲವತ್ತು ಐವತ್ತು ಸಾವಿರ ರೂಪಾಯಿ ಗಂಟುಮಾಡಿಕೊಂಡಿದ್ದಲ್ಲದೆ ಈ ಊರಲ್ಲಿ ನಾಲ್ಕೈದು ಮನೆಗಳನ್ನೂ ಕಟ್ಟಿಸಿ ತಿಂಗಳಿಗೆ ನಾಲ್ಕೈದು ನೂರು ಬಾಡಿಗೆ ಹೊಡೀತಿದಾರೆ. ಅವರದೂ ಒಂದು ಕಾರಿದೆ. ಅವರೂ ಯೋಗದ ಅಭ್ಯಾಸ ನಡಸಿದ್ದಾರೆ. ಕರಾಚೂರಿಗೂ ಹೋಗಿ ಬರ್ತಿರುತಾರೆ....

"ಆಮೇಲೆ ಇನ್ನೊಬ್ಬ ದೇಶಭಕ್ತರು–ಅವರೇನೂ ಇಲ್ಲಿಯವರಲ್ಲ–ಗೊಬ್ಬೂರಿನವರು. ಕಾಂಗ್ರೆಸ್ ಪುಢಾರಿಗಳು. ವಿರುಪಣ್ಣನವರು ಅಂತ ಅವರ ಹೆಸರು. ಎಂ. ಎಲ್. ಎ. ಆಗಿದಾರೆ. ಐವತ್ತಕ್ಕೆ ಸಮೀಪಿಸಿರಬೇಕು ವಯಸ್ಸು. ಮನೆಯಲ್ಲಿ ಹೆಂಡತಿಯಿದಾಳೆ, ಏಳೆಂಟು ಮಕ್ಕಳಿದಾವೆ. ಆದರೂ ಹೊರಚಾಳಿಯನ್ನ ಬಿಟ್ಟಿಲ್ಲ ಅಣ್ಣನವರು. ಗೊಬ್ಬೂರಿನಲ್ಲಿಯ ಲೇಡಿ ಡಾಕ್ಟರೊಬ್ಬಾಕೆ ಇವರ ಪ್ರೇಯಸಿ. ಆಕೆಯದೊಂದು ಕಾರಿದೆ. ಅದರಲ್ಲಿ ಕೂತುಕೊಂಡು ಇಬ್ಬರೂ ಬರ್ತಿರ್ತಾರೆ ಸುಚರಿತರಾಯರ ಮನೆಗೆ–ಯೋಗಾಭ್ಯಾಸ ಮಾಡಲಿಕ್ಕೆ! ಇವರೂ ಕರಾಚೂರಿನ ಗುರುಗಳ ಭಕ್ತರೇ....

"ಇನ್ನೊಬ್ಬರು ಗೊಬ್ಬೂರಿನ ಗಿರಣಿ ಮಾಲೀಕರು, ಲಕ್ಷಾಧೀಶರು. ಉಳಿವೆಪ್ಪನವರು ಅಂತ. ಬ್ರಿಟಿಷರಿದ್ದಾಗ ದಿವಾನ್‌ಬಹದ್ದೂರ್ ಆಗಿದ್ದರು. ಸ್ವಾತಂತ್ರ್ಯ ಬಂದ ಮೇಲೆ ಕಾಂಗ್ರೆಸ್ ಭಕ್ತರಾಗಿದಾರೆ. ಇವರೂ ಮಹಾ ರಸಿಕಶಿಖಾಮಣಿಯಂತೆ. ಗೊಬ್ಬೂರಿನಲ್ಲೇ ಇವರವು ನಾಲ್ಕು ಸಂಸಾರ ಇದಾರಂತೆ. ಸುಚರಿತರಾಯ ಇವರಿಗೂ ಯೋಗದ ಹುಚ್ಚು ಹಿಡಿಸಿ ತನ್ನ ಮಂಡಲದ ಸದಸ್ಯರನ್ನಾಗಿ ಮಾಡಿಕೊಂಡಿದಾನೆ. ಇವರೂ ಬರ್ತಿರ್ತಾರಂತೆ ಪ್ರತಿ ಆದಿತ್ಯವಾರ...."

"ಊರಿನವರಿಗೆಲ್ಲಾ ಗೊತ್ತೇನೇ ಇದು?"

"ಎಲ್ಲರಿಗೂ ಹ್ಯಾಗೆ ಗೊತ್ತಾದೀತು? ನಾನು ಹೇಳುವ ತನಕ ನಿನಗೂ ಗೊತ್ತಿರಲಿಲ್ಲವಲ್ಲ? ನನಗೆ ಗೊತ್ತಾದದ್ದೂ ಕುಸುಮಾವತಿಯಿಂದ."

"ಅವಳ ಮಾತನ್ನು ಪೂರಾ ನಂಬುವದು ಹ್ಯಾಗವ್ವಾ?"

"ಛೆ. ಛೆ. ಹಾಗೆಲ್ಲ ಅವಳು ಸುಳ್ಳಾಡುವದಿಲ್ಲ. ಬಹಳ ಚುರುಕು ಹುಡುಗಿ. ಆ ಮಂಡಲದ ಸದಸ್ಯಳಾಗುವದಾಗಿ ಹೇಳಿ ಆ ಗುಂಪಿನಲ್ಲಿ ಹೊಕ್ಕು ಅವರ ಗುಟ್ಟುಗಳನ್ನೆಲ್ಲಾ ತಿಳಕೊಂಡು ಬಂದಿದಾಳೆ. ಅವಳಿಂದ ಅದು ಮಹಿಳಾ ಮಂಡಲದ ಸದಸ್ಯೆಯರಿಗೆಲ್ಲಾ ಗೊತ್ತಾಯ್ತು. ಅವಳನ್ನೂ ಕೆಡಿಸಲು ಪ್ರಯತ್ನ ಮಾಡಿದಳಂತೆ ಸುಲಲಿತೆ. ಕುಬೇರಪ್ಪಾ, ಗನೋರಿಯಾ ಡಾಕ್ಟರು, ಉಳಿವೆಪ್ಪ ಮೂವರೂ ಅವಳಿಗಾಗಿ ಬಾಯಿ ಬಾಯಿ ಬಿಟ್ಟರಂತೆ. ಕುಸುಮಾವತಿ ಅವರಿಗೆಲ್ಲಾ ಚಪ್ಪಲಿ ತೋರಿಸಿ ಚೆನ್ನಾಗಿ ಅವಮಾನ ಮಾಡಿ ಹೊರಟುಬಂದಳಂತೆ!"

"ಅಡ್ಡಿಯಿಲ್ಲವ್ವಾ. ಗಟ್ಟಿ ಹೆಣ್ಣುಮಗಳೇ ಇರಬೇಕು ಕುಸುಮಾವತಿ?"

" ಅವಳೇನೋ ಗಟ್ಟಿಯಿದಾಳೆ–ಚಾಂದಬೀಬೀ ಇದ್ದ ಹಾಗೆ. ಅವಳ ಯಜಮಾನರು ಮಾತ್ರ ಬಹಳ ಅಂಜುಬರುಕರಂತೆ. ಮೊನ್ನೆ ಭೆಟ್ಟಿಯಾದಾಗ ಹೇಳುತಿದಳು ಕುಸುಮಾ. ಅವಳಿಂದ ಅಪಮಾನವಾಯ್ತು ಅಂತ ಕುಬೇರಪ್ಪ ಉಳಿವೆಪ್ಪ ಇಬ್ಬರೂ ಸೇಡು ತೀರಿಸಿಕೊಳ್ಳಲಿಕ್ಕೆ ಕಲೆಕ್ಟರಿಗೆ ಹೇಳಿ ಅವಳ ಯಜಮಾನರಿಗೆ ಫಜೀತಿ ಮಾಡಿಸಬಹುದು ಅಂತ....ಇವರಿಬ್ಬರೂ ದೊಡ್ಡ ಮುಖಂಡರಲ್ಲವೇನು ? ಕಲೆಕ್ಟರನ್ನೂ ಅಂಜಿಸ್ತಾರಂತೆ ಇವರು."

" ಹಾಗಾದರೆ ಬಹಳ ಶಕ್ತಿವಂತರೇ ಅನ್ನು."

" ಈಗೇನವ್ವಾ ? ದುಡ್ಡೊಂದು ಇದ್ದರಾಯ್ತು. ಎಂಥಾ ಹಂದಿಗೂ ದೊಡ್ಡಸ್ತನ ಬರ್ತದ. ಮಾಡುವುದು ಹಲ್ಕಟ ಕೆಲಸ. ಮತ್ತೆ ಮೇಲೆ ಅಧ್ಯಾತ್ಮದ ಸೋಗು. ಇವರನ್ನೆಲ್ಲಾ ಬಯಲಿಗೆಳೆದು ಫಜೀತಿ ಮಾಡಲಿಕ್ಕೆ ಯಾರಾದರೂ ಮುಂದೆ ಬಂದರೆ ಎಷ್ಟು ಚಲೋ ಆದೀತು ! ಆದರೆ, ಈ ಜನ ಅಂದರೆ ಮುಳ್ಳು ಹಂದಿಗಳಿದ್ದಂತೆ. ಇವರನ್ನ ಕೆಣಕಲಿಕ್ಕೆ ಎಲ್ಲರೂ ಅಂಜುತಾರೆ. ಏನು ಮಾಡೂದು ! ನಿಮ್ಮ ಯಜಮಾನರಂಥವರು ಬೇರೆ ಇವರನ್ನ ನಂಬಿ ಇವರ ಸಂಗಡ ಕೂಡಿಕೊಂಡು ಇವರನ್ನ ದೊಡ್ಡವರನ್ನ ಮಾಡ್ತಾರೆ."

" ಈ ಚಂಡಾಳ ಚೌಕಡಿಯ ಕಥೆ ನಮ್ಮವರಿಗೆ ಗೊತ್ತದೋ ಇಲ್ಲೋ."

" ಇನ್ನೂ ಗೊತ್ತಾದ ಹಾಗಿಲ್ಲ. ಅದಕ್ಕೇ ಅವರು ಕರೆಯುತ್ತಲೂ ಊಟಕ್ಕೆ ಹೊರಟು ನಿಂತಿದಾರೆ."

" ನಾನೂ ಬರಬೇಕಂತ ಕಾಡಿಸ್ತಿದಾರಲ್ಲವ್ವಾ. ಹ್ಯಾಗೆ ಮಾಡಲಿ ? ಇಂಥವರ ಮನೆಗೆ ಹೋಗೂದಾದರೂ ಹ್ಯಾಗೆ ? "

" ಹೋಗಬಾರದು. ಅದೇನೋ ಸರಿ. ಆದರೂ ನೀನೊಮ್ಮೆ ಹೋಗಿ ಬರೂದೇ ಒಳ್ಳೇದು. ಅಲ್ಲಿ ಇನ್ನೂ ಏನೇನು ನಡೀತದ ಅನ್ನೂದನ್ನ ತಿಳಕೊಂಡಾದರೂ ಬರಲಿಕ್ಕಾದೀತು. ಕುಸುಮಾ ಸ್ವಲ್ಪ ತಿಳಕೊಂಡು ಬಂದಾಳ. ನೀನೂ ಸ್ವಲ್ಪ ತಿಳಕೊಂಡು ಬಾ. ಆಮೇಲೆ ಯಾರಿಗಾದರೂ ಹೇಳಿ ಇವರ ಮೇಲೊಂದು ಕಾದಂಬರಿಯನ್ನೇ ಬರೆಸಲಿಕ್ಕೆ ಬಂದೀತು."

" ಹೋಗಿ ಬರಲೇ ಹಾಗಾದರೆ ? ಮತ್ತೇನಾದರೂ ಅನರ್ಥ ಆಗಲಿಕ್ಕಿಲ್ಲ "?

" ಮೊದಲನೇ ದಿವಸವೇ ಏನಾದೀತು ? ಇದೇನು ಅರಣ್ಯ ಏನು, ಹಾಗೆಲ್ಲಾ

ನಡೀಲಿಕ್ಕೆ? ಸುತ್ತಮುತ್ತ ಜನರಿದಾರೆ. ಹಾಗೆಲ್ಲಾ ಹುಚ್ಚುಚ್ಚಾರ ಮಾಡಿದರೆ ನಡೆಯುವ ಹಾಗೂ ಇಲ್ಲ. ಸಂಗಡ ನಿಮ್ಮವರು ಬೇರೆ ಇರ್ತಾರಲ್ಲ ? ”

“ ಅಯ್ಯೋ. ಇವರೇನು ! ಇದ್ದರೂ ಇಲ್ಲದ ಹಾಗೇ. ಇವರಿಗೆ ತಿಳಿಯೂದು ಅಷ್ಟರೊಳಗೇ ಅದೆ.”

“ ಹಾಗೆಂದರೇನೇ ? ನಿನ್ನ ಮೇಲೆ ಯಾರಾದರೂ ಕೈ ಮಾಡಿದರೂ ಸುಮ್ಮನಿರ್ತಾರೇನು ಮರುಳಯ್ಯನವರು ? ಅಷ್ಟೂ ಬುದ್ಧಿಯಿಲ್ಲವೇನು ಅವರಿಗೆ?”

“ ಯಾರಿಗ್ಗೊತ್ತು ತಾಯಿ ! ಇದುವರೆಗಂತೂ ಅಂಥಾ ಪ್ರಸಂಗ ಬಂದಿಲ್ಲ ಅಂತ ಏನೂ ಗೊತ್ತಾಗಿಲ್ಲ. ಒಂದು ವೇಳೆ ಅಂಥಾ ಪ್ರಸಂಗ ಬಂದಾಗ ಏನು ಮಾಡ್ತಾರೋ ನೋಡಬೇಕು. ಸಂಸಾರದಲ್ಲಂತೂ ಮನಸ್ಸೇ ಇಲ್ವಲ್ಲ ಅವರಿಗೆ. ಇಂಥವರು ಹ್ಯಾಗ್ಯಾಗೋ ಮಾಡ್ತಿರ್ತಾರೆ.”

ಆ ಮಾತು ಹೇಳುತ್ತಿದ್ದಂತೆ ಹತ್ತು ವರ್ಷಗಳ ಹಿಂದಿನ ಚಿತ್ರವೊಂದು ಕಮಲಳ ದೃಷ್ಟಿಯೆದುರಿಗೆ ಕಾಣಿಸಿಕೊಂಡಿತು. ಅವಳ ತೌರೂರಿನಲ್ಲಿ, ಅವರ ಮನೆಯ ಮಗ್ಗುಲಲ್ಲಿಯೆ ಆ ತಾಲ್ಲೂಕಿನ ಮಾಮಲೇದಾರರೂ ವಾಸವಾಗಿದ್ದರು. ಅವರಿಗಾಗ ನಲವತ್ತೋ ನಲವತ್ತೈದೋ ವಯಸ್ಸಿರಬಹುದು. ಹೆಂಡತಿ ಮಾತ್ರ ನವಯುವತಿಯಾಗಿದ್ದಳು. ಎರಡು ವರ್ಷಗಳದೊಂದು ಮಗುವೂ ಇತ್ತು. ಮಾಮಲೇದಾರರಿಗೆ ಮೊದಲಿನಿಂದಲೂ ದೇವರು ದಿಂಡರು ಸ್ವಾಮಿಗಳು ಜಗದ್ಗುರುಗಳಲ್ಲಿ ಬಹಳ ಭಕ್ತಿಯಿದ್ದಿತಂತೆ. ಒಬ್ಬ ಗುರುವಿನ ನಾದಕ್ಕೆ ಬಿದ್ದು ಅವರು ಹೆಂಡತಿಯೊಡನಿದ್ದ ಸಂಬಂಧವನ್ನು ಕಡಿದುಕೊಂಡಿದ್ದರಂತೆ. ರಾತ್ರೆಯಾದರೆ ಆ ಗಂಡಹೆಂಡರ ಜಗಳವೋ ಜಗಳ. ಹೆಂಡತಿಯ ಕೊಟಡಿಗೆ ಬೀಗ ಜಡಿದು ಹೊರಗಡೆ ಮಲಗುತ್ತಿದ್ದರು ಮಾಮಲೇದಾರರು. ಅವಳು ಮಾನ ಮರ್ಯಾದೆಗಳ ಪರಿವೆಯನ್ನೂ ಇಟ್ಟುಕೊಳ್ಳದೆ ಬೊಬ್ಬೆಯಿಟ್ಟು ಗದ್ದಲಮಾಡಿ ಓಣಿಯ ಜನರನ್ನೆಲ್ಲ ಎಬ್ಬಿಸಿ ಗಂಡನನ್ನು ಅಪಹಾಸ್ಯಕ್ಕೀಡು ಮಾಡುತ್ತಿದ್ದಳು. ಈ ದಂಪತಿಗಳ ಬಿರುಸಿನ ವಾದವಿವಾದವೂ ಎಷ್ಟೋ ಬಾರಿ ತನ್ನ ಕಿವಿಗೆ ಬಿದ್ದಿತ್ತು.

“ ನೀವು ಹೀಗೆ ಮಾಡಿದರೆ ನಾನೇನು ಮಾಡಲಿ ? ಇಂಥವರು ನನ್ನನ್ನ ಮದುವೆ ಮಾಡಿಕೊಂಡದ್ದಾದರೂ ಯಾಕೆ ? ” ಎಂದು ಸವಾಲು ಹಾಕುತ್ತಿದ್ದಳು ಹೆಂಡತಿ.

"ಬುದ್ಧಿಯಿಲ್ಲದ್ದಕ್ಕೆ ಮಾಡಿಕೊಂಡೆ. ಈಗೇನು ಮಾಡು ಅಂತೀ ನನಗೆ?"

"ಮಾಡಿಕೊಂಡ ತಪ್ಪಿಗೆ ಸಂಸಾರ ಮಾಡಬೇಕು."

"ನನಗದು ಬೇಕಾಗಿಲ್ಲ."

"ನಿಮಗೆ ಬೇಕಾಗಿರಲಿಕ್ಕಿಲ್ಲ. ನನಗೆ ಬೇಕು. ನಾನಿನ್ನೂ ಹರಯದಾಕೆ. ನನ್ನ ಬಾಳ್ವೆ ಎಲ್ಲಾ ಹಾಳು ಮಾಡಿದಿರಿ ನೀವು," ಎನ್ನುತ್ತಾ ನೆಲಕ್ಕೆ ಕೈ ಬಡಿದು ಬಡಿದು ಆಕ್ರೋಶ ಮಾಡುತ್ತಿದ್ದಳಾಕೆ.

"ನಿನಗೆ ಮನಸ್ಸಿದ್ದರೆ ಸೋಡಚೀಟಿ ಕೊಟ್ಟು ಬಿಡುತೀನಿ. ಬೇರೆಯವನನ್ನ ಮಾಡಿಕೊಂಡು ಹೋಗು."

"ಊಹೂಂ. ಅದಕ್ಕೆಲ್ಲಾ ನಾ ತಯಾರಿಲ್ಲ."

"ಹಾಗಾದರೆ ಏನಾದರೂ ಮಾಡಿಕೋ ಹೋಗು. ಯಾವನನ್ನಾದರೂ ಇಟ್ಟುಕೋ ಹೋಗು," ಎಂದು ತ್ರಸ್ತರಾಗಿ ನುಡಿಯುವರು ಮಾಮಲೇದಾರರು.

"ನೀವೇನು ಗಂಡಸರೋ ನಪುಂಸಕರೋ?" ಎಂದು ಕೂಗಿಕೊಳ್ಳುವಳು ಹೆಂಡತಿ.

"ನಪುಂಸಕ ಅಂತಲೇ ತಿಳುಕೊಳ್ಳಬಹುದು. ಕೆಲವರು ಹುಟ್ಟಿದಾಗಲೇ ನಪುಂಸಕರಿರ್ತಾರೆ, ಕೆಲವರು ದೇವರಿಗಾಗಿ ನಪುಂಸಕರಾಗ್ತಾರೆ."

"ಸುಡಬೇಕು ನಿಮ್ಮಂಥವರ ಬಾಳನ್ನು!" ಎಂದು ಅಬ್ಬರಿಸುವಳು ಹೆಂಡತಿ.

ಮುಂದೆ ಅವಳು ಯಾರನ್ನೋ ಇಟ್ಟುಕೊಂಡಳೆಂಬ ವದಂತಿಯೂ ಹರಡಿತ್ತು ಓಣಿಯಲ್ಲಿ. ಮಾಮಲೇದಾರರಿಗೂ ಆ ಸಂಗತಿ ತಿಳಿದಿರಲು ಸಾಕು. ಅವರು ಪಿಟ್ಟೆಂದು ಮಾತನಾಡದೆ ಸುಮ್ಮನಿದ್ದು ಬಿಟ್ಟರು. ಅಂದಿನಿಂದ ಅವರ ಮನೆಯಲ್ಲಿ ಗದ್ದಲವಾಗುವುದು ನಿಂತುಹೋಗಿತ್ತು.

ಅದೊಂದು ಅಸಾಧಾರಣ ವಿಷಯವೆಂತಲೇ ಅದು ಕಮಲಳ ನೆನಪಿನಲ್ಲಿ ಅಷ್ಟುದಿನವೂ ಅಳಿಯದಂತಿತ್ತು. ತನ್ನ ಗಂಡನೂ ಆ ಮಾಮಲೇದಾರರಂತೆಯೆ ವರ್ತಿಸುವ ಸಂಭವವಿದೆಯೆಂದು ಎನಿಸಿದಾಗ ಮುಂದಿನ ಘಟನೆಗಳನ್ನು ಕುರಿತು ಯೋಚಿಸಲಾರದೆ ಅವಳ ಎದೆ ಕಂಪಿಸಿತು. ಮಾಮಲೇದಾರರ ಹೆಂಡತಿಯ ಹಾಗೆ ತಾನು ಇದುವರೆಗೂ ಗದ್ದಲ ಮಾಡಿಲ್ಲ. ಮುಂದೆಯೂ ಮಾಡಲಾರಳು.

ಹಾಗೆ ಕೂಗಾಡಿ ಮನೆಯ ಮರ್ಯಾದೆಯನ್ನು ಮಾರುಕಟ್ಟೆಗೆಳೆಯುತ್ತಾರೆಯೆ? ಮಾಮಲೇದಾರರ ಹೆಂಡತಿಯೆಂದರೆ ನಾಚಿಕೆಗೆಟ್ಟ ಹೆಂಗಸೆಂದೇ ತನಗಾಗ ಅನ್ನಿಸಿತ್ತು. ಈಗಲೂ ಆ ಅನಿಸಿಕೆಯಲ್ಲಿ ಬದಲಾವಣೆಯಾಗಿಲ್ಲ. ಅವಳ ಹಾಗೆ ತಾನು ಕೂಗಾಡುವುದು ಸಾಧ್ಯವೇ ಇಲ್ಲ. ಆದರೆ....ಯಾರನ್ನಾದರೂ ಇಟ್ಟುಕೊಳ್ಳಬಹುದೆಂದು ತನ್ನ ಗಂಡನೇ ತನಗೆ ಹೇಳಿದ ಪಕ್ಷದಲ್ಲಿ ತಾನೇನನ್ನು ಮಾಡುವುದು? ಏನೆಂದು ಉತ್ತರವೀಯುವು? ಗಂಡನಿಂದ ಸಿಕ್ಕದಿದ್ದ ಸುಖವನ್ನು ಮಿಂಡನಿಂದ ಪಡೆದು ತೃಪ್ತಳಾದಳು ಮಾಮಲೇದಾರರ ಹೆಂಡತಿ. ಅವಳ ಹಾಗೆ ತಾನೂ....

ಆ ವಿಚಾರ ಬರುತ್ತಲೂ ಕಮಲಳಿಗೆ ತನ್ನ ಬಗೆಗೆ ತನಗೇ ಹೇಸಿಕೆಯೆನಿಸಿತು. ಛಿ! ಹೆಣ್ಣು ಜಾತಿಗೇ ಕಲಂಕ ಪ್ರಾಯಳಾದಂಥ ಆ ಹೆಂಗಸೆಲ್ಲಿ! ತಾನೆಲ್ಲಿ! ಅವಳಂಥ ಕೀಳು ಮಟ್ಟಕ್ಕೆ ತಾನು ಇಳಿಯುವುದು ಸಾಧ್ಯವೇ ಇಲ್ಲ. ಅದಕ್ಕಿಂತ ಪ್ರಾಣ ತ್ಯಜಿಸುವುದೇ ಒಳ್ಳೆಯದು. ಇಂಥ ಹೇಸಿ ವಿಚಾರವಾದರೂ ಹೇಗೆ ಸುಳಿಯಿತೊ ತನ್ನ ತಲೆಯಲ್ಲಿ?

ತನ್ನ ಬಗೆಗೆ ತಾನೇ ಅಚ್ಚರಿಪಟ್ಟುಕೊಳ್ಳುತ್ತ ಕಮಲ ಮೌನವಾಗಿ ಕುಳಿತಿದ್ದ ಹಾಗೆ ಪದ್ಮಾವತಿ ಕುತೂಹಲದಿಂದ ಕೇಳಿದಳು:

"ಏನು ವಿಚಾರವೇ ಕಮಲಾ?"

"ಹಿಂದಿನದೊಂದು ಸಂಗತಿ ನೆನಪಾಗಿತ್ತು," ಎಂದು ಆರಂಭಿಸಿ ಮಾಮಲೇದಾರರ ಮತ್ತು ಅವರ ಹೆಂಡತಿಯ ಕಥೆಯೆಲ್ಲವನ್ನೂ ವಿವರವಾಗಿ ಹೇಳಿದಳು ಕಮಲ.

"ಸರಿ. ಇಂಥಾಪು ನಾನೂ ಕೇಳಿದೀನಿ. ಏನನಿಸ್ತದೇ ನಿನಗೆ ಇದರ ಬಗ್ಗೆ?" ಎಂದು ಬೇಕೆಂತಲೇ ಪ್ರಶ್ನಿಸಿದಳು ಪದ್ಮಾವತಿ.

"ಮರ್ಯಾದಸ್ಥರಾದವರು ಹೀಗೆ ಮಾಡುತಾರೇನು ಎಲ್ಲಾದರೂ?"

"ಆ ಮಾಮಲೇದಾರರ ಹೆಂಡತಿಯದೇನೂ ತಪ್ಪಿಲ್ಲಂತ ನನಗನಿಸ್ತದ."

"ತಪ್ಪಿಲ್ಲ ಅಂತೀಯಾ?" ಎಂದು ಚಕಿತಳಾಗಿ ಕೇಳಿದಳು ಕಮಲ.

"ಇಲ್ಲ. ಅವಳದೇನೂ ತಪ್ಪಿಲ್ಲ. ಯಾರನ್ನಾದರೂ ನೋಡಿಕೋ ಅಂತ ಅವಳ ಗಂಡನೇ ಹೇಳಲಿಲ್ಲವೇನು? ಗಂಡನ ಆಜ್ಞೆಯಂತೆ ನಡಕೊಳ್ಳಬೇಕಾದದ್ದು ಪತಿವ್ರತಾಸ್ತ್ರೀಯರ ಕರ್ತವ್ಯ ಅಲ್ಲೇನು?" ಎಂದು ಹೇಳಿದಳು

ಪದ್ಮಾವತಿ, ಅಣಕ ಬೆರೆತ ಧ್ವನಿಯಲ್ಲಿ.

"ಗಂಡ ಮೂರ್ಖನಾದರೆ ಹೆಂಡತಿಯೂ ಮೂರ್ಖಳಾಗಬೇಕೇನು?"

"ಗಂಡನ ಮಾತೇ ವೇದವಾಕ್ಯ ಅಂತ ಶಾಸ್ತ್ರಗಳು ಹೇಳಿದಾವೋ ಇಲ್ಲೋ? ಗಂಡನ ಮಾತು ಮೀರಿ ನಡೆದ ಹೆಂಡತಿಗೆ ರೌರವನರಕವಾಗ್ತದ."

"ನೀನು ಚೇಷ್ಟೆ ಮಾಡಬೇಡ ಬಿಡವ್ವಾ."

"ಊ ಹೂಂ. ಚೇಷ್ಟೆಯಲ್ಲ ಕಮಲಾ. ಗಂಭೀರವಾಗೇ ಹೇಳುತ್ತಿದೀನಿ. ನಿನಗೇ ಇಂಥಾ ಪ್ರಸಂಗ ಬಂದರೆ ನೀನೇನು ಮಾಡುತ್ತೀ? ಹೇಳು ನೋಡೋಣ."

ಆ ಪ್ರಶ್ನೆಗೆ ಉತ್ತರವೀಯಲಾರದೆ ತಲೆ ತಗ್ಗಿಸಿ ಕುಳಿತಿದ್ದಳು ಕಮಲ. ಪದ್ಮಾವತಿಯೆ ಮುಂದುವರಿಸಿದಳು :

"ಆ ಮಾಮಲೇದಾರರ ಹೆಂಡತಿಯ ಬಗ್ಗೆ ಕನಿಕರ ಬರ್ತದ. ಕೈ ಹಿಡಿದ ಆ ಗಂಡ ಅವಳನ್ನ ಸರಿಯಾಗಿ ಬಾಳಿಸಿದ್ದರೆ ಅವಳ್ಯಾಕೆ ಹಾದಿ ಬಿಟ್ಟು ಹೋಗುತಿದ್ದಳು? ಅವನಿಗೇನೋ ಕೈಲಾಸ ಕಾಣುವ ಚಿಂತೆ. ಇವಳಿಗೂ ಆ ಚಿಂತೆಯಿದ್ದರೆ ಮಾತು ಬೇರೆ. ಹೆಂಡತಿಯ ಬಯಕೆಯೇನು ಅನ್ನುವದನ್ನ ತಿಳುಕೊಳ್ಳಲಿಕ್ಕೂ ಮನಸು ಮಾಡದೆ ಬರೀ ತನ್ನ ಮೂಗಿನ ನೇರಕ್ಕೇ ಆತ ಹೊರಟು ಬಿಟ್ಟ. ಅವನನ್ನ ಸರಿಯಾದ ಹಾದಿಗೆಳೆಯಲು ಅವಳೂ ಸಾಕಷ್ಟು ಯತ್ನಿಸಿದಳು. ಕಡೆಗೂ ಆತ ಸುಧಾರಿಸಲಿಲ್ಲ. ತಪ್ಪುಹಾದಿಯನ್ನೂ ಅವನೇ ತೋರಿಸಿ ಕೊಟ್ಟ. ಸರಿ. ಅವಳೂ ಹತಾಶಳಾಗಿ ಅದು ತಪ್ಪು ಅಂತ ಗೊತ್ತಿದ್ದರೂ ಅವನ ಮೇಲಿನ ಸಿಟ್ಟಿಗಾಗಿ ಅದೇ ಹಾದಿ ಹಿಡಿದಳು. ಹೀಗಾದ್ದರಲ್ಲಿ ಅವನ ತಪ್ಪು ದೊಡ್ಡದೋ ಅವಳದು ದೊಡ್ಡದೋ?"

"ಮಾಮಲೇದಾರರ ಹೆಂಡತಿಯ ಬಗ್ಗೆ ನಿನಗೆ ಕನಿಕರ ಬರ್ತದಲ್ಲ–ಸುಲಲಿತದೇವಿಯ ಬಗೆಗೂ ಯಾಕೆ ಬರಬಾರದು?"

ಆ ಪ್ರಶ್ನೆಗೆ ಕೂಡಲೇ ಉತ್ತರ ಬರಲಿಲ್ಲ ಪದ್ಮಾವತಿಯಿಂದ. ಕಮಲಳ ಮಾತಿನಲ್ಲಿ ನ್ಯಾಯದ ಅಂಶವಿದ್ದುದು ಸ್ಪಷ್ಟವಾಗಿತ್ತು. ಮಾಮಲೇದಾರರ ಹೆಂಡತಿಯದು ಒಂದು ಬಗೆಯ ಜೀವನವಾದರೆ ಸುಲಲಿತದೇವಿಯದೊಂದು ಬಗೆಯದು. ಮಾಮಲೇದಾರರ ಹೆಂಡತಿಯಾದರೂ ಒಬ್ಬನನ್ನೇ ಇಟ್ಟುಕೊಂಡು ಅಷ್ಟರಿಂದಲೇ ತೃಪ್ತಳಾಗಿದ್ದಳು. ಸುಲಲಿತದೇವಿಯಾದರೋ ದಿನಕ್ಕೊಬ್ಬ

ಹೊಸಬನನ್ನು ಹುಡುಕುವ ಸ್ವೇಚ್ಛಾಚಾರಿಣಿ. ಸುಚರಿತರಾಯನಂತೂ ಮಾನು ಲೇದಾರರಂಥವನಲ್ಲ. ಆದರೂ ಇವಳು ಹೀಗಾಗಲು ಏನು ಕಾರಣವಿರ ಬಹುದು? ಬಾಲ್ಯದ ಸಂಸ್ಕಾರವೇ ಮುಖ್ಯ ಕಾರಣವೊ ಏನೊ. ಅದೊಂದೇ ಕಾರಣವೆಂದು ಖಚಿತವಾಗಿ ಹೇಳುವುದಕ್ಕೂ ಆಗುವುದಿಲ್ಲ. ಸೂಳೆಯರ ಮನೆ ಗಳಲ್ಲಿ ಜನ್ಮ ತಳೆದು ಗೃಹಸ್ಥರನ್ನು ಮದುವೆಯಾಗಿರುವವರನೇಕರು ಒಳ್ಳೆಯ ಶೀಲವತಿಯರಾಗಿಯೆ ಬಾಳುತ್ತಿಲ್ಲವೆ? ಸುಲಲಿತೆಯಂಥವರು ಸ್ವೇಚ್ಛಾಚಾರಿ ಗಳಾಗಲು ಬೇರೆ ಕಾರಣಗಳಿರಲು ಸಾಕು. ಆ ಕಾರಣಗಳಾವುವೆಂಬುದನ್ನರಿ ತುಕೊಳ್ಳಬೇಕಿದ್ದರೆ ತಾನು ಸ್ವತಃ ಅವಳ ಪರಿಚಯ ಮಾಡಿಕೊಳ್ಳಬೇಕು. ಕುಸುಮಾವತಿ ಹೇಳುವಳೆಂದು ತಾನು ಎಲ್ಲವನ್ನೂ ನಂಬಿಬಿಡಬಾರದು. ಕುಸುಮಾವತಿಗಾದರೂ ಸರಿಯಾದ ಕಲ್ಪನೆ ಬಂದಿದೆಯೊ ಇಲ್ಲವೊ ಯಾರು ಬಲ್ಲರು. ಪ್ರತ್ಯಕ್ಷ ನೋಡದೆ, ಪರಾಮರ್ಶೆ ಮಾಡದೆ ಯಾರ ಬಗೆಗೂ ದುರಭಿ ಪ್ರಾಯವಿಟ್ಟುಕೊಳ್ಳಬಾರದು, ಅಲ್ಲವೆ?

"ಅವಳು ಎಂಥವಳು ಅನ್ನುವದನ್ನ ಪ್ರತ್ಯಕ್ಷ ನೋಡಿ ಮಾತಾಡಿ ನಿಶ್ಚ ಯಿಸೋಣ. ಮೊದಲು ನೀ ಅವಳನ್ನ ನೋಡಿ ಬಾ. ಅಲ್ಲಿ ಏನೇನು ನಡೀ ತದೋ ಎಲ್ಲಾ ಸೂಕ್ಷ್ಮವಾಗಿ ನಿರೀಕ್ಷೆ ಮಾಡಿ ಬಾ. ಹಾಗೇ ಅವಳನ್ನೂ ಊಟಕ್ಕೇ ಆಮಂತ್ರಿಸಿ ಬಾ?

"ಊಟಕ್ಕೆ? ಅವಳನ್ನು?" ಎಂದು ಚಕಿತಳಾಗಿ ಕೇಳಿದಳು ಕಮಲ. ಸ್ವಲ್ಪ ಸಮಯದ ಹಿಂದೆ ಸುಲಲಿತೆಯನ್ನು ದೂಷಿಸುತ್ತಿದ್ದ ಪದ್ಮಾವತಿಯೇ ಈಗ ಅವಳನ್ನು ಊಟಕ್ಕೆ ಆಮಂತ್ರಿಸುವಂತೆ ಸೂಚನೆ ಕೊಡುತ್ತಿರುವಳಲ್ಲ! ಬಹಳ ಚಂಚಲ ಸ್ವಭಾವವೆಂದು ತೋರುತ್ತದೆ ಪದ್ಮಾವತಿಯದು....

"ಅವಳು ಬಂದ ಮಾತ್ರಕ್ಕೆ ಅಂಥ ಪ್ರಮಾದವೇನಾಗ್ತದೇ? ಅವಳು ಬರಲಿ. ಅವಳೊಬ್ಬಳೇ ಹಂ! ಆ ರಾಯರನ್ನ ಕರೆಯಬೇಡ. ಅವಳು ಬಂದಾಗ ನನಗೂ ತಿಳಿಸು. ಇದೆಲ್ಲಾ ನನ್ನ ಪ್ಲ್ಯಾನು ಅಂತ ಮಾತ್ರ ಅವಳಿಗೆ ತಿಳೀಬಾರದು...." ಎಂದು ಹೇಳಿ ಪದ್ಮಾವತಿ ಮಾತು ಮುಗಿಸಿದಳು.

ಸಾಯಂಕಾಲ ಗಂಡ ಬರುತ್ತಲೂ ಕಮಲ ಹೇಳಿದಳು:

"ಇವತ್ತು ಊಟಕ್ಕೆ ಹೋಗುವುದು ಬೇಡ. ಆದಿತ್ಯವಾರ ನಿಮ್ಮ ಸಭೆಗಳಾಗುತ್ತವಲ್ಲ. ಅದನ್ನೂ ನೋಡಬೇಕಂತ ವಿಚಾರ ಮಾಡಿದೀನಿ.

ಅವೊತ್ತೇ ಹೋದರಾಯಿತು."

ಸಹಜವಾಗಿಯೆ ಮರುಳಯ್ಯನಿಗೆ ಬಹಳ ಸಂತೋಷವಾಯಿತು. ಕೊನೆಗೂ ದೇವರು ಕಣ್ಣು ತೆರೆದ! ಕಮಲಳಿಗೂ ಅಧ್ಯಾತ್ಮದಲ್ಲಿ ಅಭಿರುಚಿ ಹುಟ್ಟಿದ ಹಾಗಿದೆ....

"ಹಾಗೇ ಮಾಡೋಣ ಕಮಲಾ. ಆದಿತ್ಯವಾರವೇ ಹೋಗೋಣ. ಇವತ್ತು ಬರಲಿಕ್ಕಾಗುವದಿಲ್ಲಂತ ಅವರಿಗೆ ತಿಳಿಸಿ ಬಂದುಬಿಡ್ತೀನಿ," ಎಂದು ಹೇಳಿ ಆತ ಹೊರಟುಹೋದ.

೧೨

ಭಾನುವಾರದ ದಿನ ಮರುಳಯ್ಯ ಕಮಲಳೊಡನೆ ಸುಚರಿತರಾಯನ ಮನೆಗೆ ಬರುವುದರೊಳಗಾಗಿ ಸೂರ್ಯಾಸ್ತ ಸಮಯವಾಗಿತ್ತು. ನಗರಸಭೆಯ ವಿದ್ಯುದ್ದೀಪಗಳೂ ಆಗ ತಾನೆ ಬೆಳಗತೊಡಗಿದ್ದುವು. ಆ ದೀಪಗಳ ಬೆಳಕು, ಮನೆಯೆದುರು ನಿಂತುಕೊಂಡಿದ್ದ ಮೋಟಾರುಕಾರುಗಳನ್ನು ಬೆಳಗಿಸಿ ಆ ಮನೆಗೆ ಒಂದು ವಿಧದ ಶೋಭೆಯನ್ನು ತಂದಿತ್ತು.

"ಎಲ್ಲರೂ ಬಂದಂತೆ ಕಾಣ್ತದ." ಎಂದ ಮರುಳಯ್ಯ.

"ಎಲ್ಲರೂ ಅಂದರೆ ?"

"ಯೋಗಮಂಡಲದ ಸದಸ್ಯರು."

ಕೆಳಗಿನ ಅಂಗಳದಲ್ಲಿಯೆ ಕಾದುನಿಂತಿದ್ದ ಸುಚರಿತರಾಯ ಈ ದಂಪತಿಗಳನ್ನು ಆದರದಿಂದ ಬರಮಾಡಿಕೊಂಡು ಮಹಡಿಗೆ ಕರೆದೊಯ್ದ. ಮಹಡಿಯ ಮೇಲೆ ನೆರೆದಿದ್ದ ಕುಬೇರಪ್ಪ, ಉಳಿವೆಪ್ಪ, ವಿರುಪಣ್ಣ, ಲೇಡೀ ಡಾಕ್ಟರ್ ವಸುಮತೀಬಾಯಿ, 'ಗನೋರಿಯಾ ಡಾಕ್ಟರ್' ನಾಗೇಂದ್ರಪ್ಪ, ಎಲ್ಲರ ಕಣ್ಣುಗಳೂ ಇತ್ತ ತಿರುಗಿದುವು. ಹತ್ತು ರೂಪಾಯಿನ ಸಾಧಾರಣ ಸೀರೆಯಲ್ಲೂ ಎದ್ದು ಕಾಣುತ್ತಿದ್ದ ಕಮಲಳ ಸೌಮ್ಯಸೌಂದರ್ಯವೂ ಯೌವನವೂ ಅವರನ್ನು ಬೆರಗುಗೊಳಿಸದಿರಲಿಲ್ಲ. ಲೇಡಿ ಡಾಕ್ಟರ್ ವಸುಮತೀಬಾಯಿಗೆ ಒಳಗೊಳಗೇ ಅಸೂಯೆಯುಂಟಾದರೂ ಅದನ್ನು ಮೊಗದಲ್ಲಿ ವ್ಯಕ್ತಗೊಳಿಸದೆ ತುಟಿಗಳ ಮೂಲೆಯಲ್ಲಿ ತಾತ್ಸಾರದ ನಗೆಯನ್ನು ಕುಣಿಸುತ್ತಾ "ಇದೆಲ್ಲೋ ಅಶಿಕ್ಷಿತ ಗೊಡ್ಡೆಂದು ಕಾಣುತ್ತದೆ," ಎಂದು ತನ್ನಲ್ಲಿಯೆ ಹೇಳಿಕೊಂಡು ವಿರುಪಣ್ಣನವರತ್ತ ದೃಷ್ಟಿ ತಿರುಗಿಸಿ ಮೂಕವಾಗಿಯೇ ಅವರ ಅಭಿಪ್ರಾಯ ಯಾಚಿಸಿದಳು. ಅವಳನ್ನು ಸಂತುಷ್ಟಗೊಳಿಸಲೆಂದು ವಿರುಪಣ್ಣ ಸಮ್ಮತಿ ಸೂಚಕವಾಗಿ ಕತ್ತು ಕೊಡಹಿದರಾದರೂ ಅವರ ರಸಿಕ ಮನಸ್ಸು ಕಮಲಳನ್ನೂ ವಸುಮತೀಬಾಯಿಯನ್ನು ಒಳಗೊಳಗೇ ಹೋಲಿಸಿನೋಡಿ, ಅನಾಘ್ರಾಣಿತ ಕುಸುಮದಂತಿದ್ದ ಕಮಲಳ ಕಡೆಗೇ ಒಲೆಯತೊಡಗಿತ್ತು. ಕುಬೇರಪ್ಪ, ಉಳಿವೆಪ್ಪ ಮತ್ತು ಗನೋರಿಯಾ

ಡಾಕ್ಟರರೂ ಅವಳನ್ನೇ ಎವೆಯಿಕ್ಕದೆ ದಿಟ್ಟಿಸುತ್ತಿದ್ದರು.

ಸುಲಲಿತದೇವಿ ಥಟ್ಟನೆ ಸೋಫದಿಂದೆದ್ದು ಬಾಗಿಲಿನ ವರೆಗೂ ಹೋಗಿ ಕಮಲಳ ಕೈ ಹಿಡಿದು ಕರೆದುಕೊಂಡು ಬಂದಳು. ಅಪರಿಚಿತ ಪುರುಷರ ಸಹವಾಸದಲ್ಲಿ ಹಾಗೆ ಬೆರೆತುಕೊಳ್ಳುವ ಅಭ್ಯಾಸವಿರಲಿಲ್ಲವಾದ್ದರಿಂದ ಕಮಲ ತಬ್ಬಿಬ್ಬಾಗಿ ಗಂಡನ ಮೊಗವನ್ನೇ ದಿಟ್ಟಿಸುತ್ತಿದ್ದಳು. ಅಲ್ಲಿ ಸೇರಿದ್ದ ಗಂಡಸರೆಲ್ಲರೂ ತನ್ನನ್ನು ಬಯಕೆಯ ದೃಷ್ಟಿಯಿಂದ ನೋಡುತ್ತಿದ್ದರೆಂಬುದೂ ಅವಳಿಗೆ ಆಗಲೆ ಗೊತ್ತಾಗಿ ಹೋಗಿತ್ತು. ಅವರನ್ನು ಕುರಿತು ಪದ್ಮಾವತಿ ಹೇಳಿದುದರಲ್ಲಿ ಅತಿಶಯೋಕ್ತಿಯೇನೂ ಇಲ್ಲವೆಂದೇ ಅವಳಿಗೆ ಮನದಟ್ಟಾಯಿತು. ಅವರ ಕಾಮುಕ ದೃಷ್ಟಿಗಳನ್ನೆದುರಿಸುವುದೂ ಅಸಹ್ಯಕರವಾಗಲು ಅವಳು ಅಲ್ಲಿಂದ ಜಾರಿಕೊಂಡು ಒಳಗಡೆ ನುಸುಳಿಕೊಳ್ಳಲು ಯತ್ನಿಸುತ್ತಿದ್ದ ಹಾಗೇ ಸುಲಲಿತದೇವಿ ಅವಳನ್ನು ಸೋಫಾದ ಮೇಲೆ ಕೂಡ್ರಿಸಿ ತಾನೂ ಪಕ್ಕದಲ್ಲಿ ಕುಳಿತುಕೊಂಡಳು.

ಪರಿಚಯದ ಶಾಸ್ತ್ರ ಪೂರೈಸುತ್ತಲೂ, ತನ್ನ ಕೈ ಗಡಿಯಾರದೊಂದಿಗೆ ಆಟವಾಡುತ್ತ ವಸುಮತೀಬಾಯಿಯೆಂದಳು :

" ಕಮಲಾಬಾಯಿಯವರು ಸೊಸೈಟಿಯಲ್ಲಿ ಬರುವದು ಇದೇ ಮೊದಲ ಸಲ ಅಂತ ಕಾಣ್ತದಲ್ಲ ? "

" ಹೌದು. ಹೌದು. ಅವರು ಹೊರಗೆ ಬಂದದ್ದೇ ಕಡಿಮೆ," ಎಂದು ಅವಸರವಸರವಾಗಿ ಹೇಳಿದ ಮರುಳಯ್ಯ.

" ಅವರೊಬ್ಬರೇ ಯಾಕೆ, ಮರುಳಯ್ಯನವರೂ ಹೊರಗೆ ಬರುವದೇ ಇಲ್ಲ. ಏನೋ ಇವತ್ತು ನನ್ನ ಜುಲುಮೆಗಾಗಿ ಬಂದಿದಾರೆ. ಇವರು ಇಲ್ಲಿಗೆ ಬರುವಂತೆ ಮಾಡಬೇಕಾದರೆ ಒಂದು ವರ್ಷ ಸತತವಾಗಿ ನಾನು ಕಷ್ಟಪಡಬೇಕಾಯ್ತು," ಎಂದಳು ಸುಲಲಿತದೇವಿ.

" ನೀವೇನೂ ಸಂಕೋಚ ಮಾಡಿಕೋ ಬೇಡಿರಿ ಕಮಲಾಬಾಯಿ. ನಾವೇನೂ ಅಪರಿಚಿತರಂತೆ ತಿಳುಕೋಬೇಡಿರಿ. ನಮ್ಮ ಮಂಡಲದಲ್ಲಿ ಎಲ್ಲರೂ ಸಾಧಕರು, ಎಲ್ಲರೂ ಸಮಾನರು, ಎಲ್ಲರೂ ಆತ್ಮೀಯರು. ಯಾಕ್ರೀ ಸಾಹುಕಾರರೆ ? " ಎಂದ ಡಾಕ್ಟರ್ ನಾಗೇಂದ್ರಪ್ಪ.

" ಕ್ವೈಟ್ ರೈಟ್. ಕ್ವೈಟ್ ರೈಟ್," ಎಂದ ಕುಬೇರಪ್ಪ. ಅವನು ಪಾಠಮಾಡಿಕೊಂಡಿದ್ದ ಕೆಲವೇ ಇಂಗ್ಲೀಷ್ ಶಬ್ದಗಳಲ್ಲಿ ' ಕ್ವೈಟ್ ರೈಟ್ '

ಎಂಬುದೂ ಒಂದಾಗಿತ್ತು. ಇಂಗ್ಲೀಷ್ ಶಾಲೆಯ ಕಟ್ಟೆಯನ್ನೇರುವ ಮಾತಿರಲಿ, ಕನ್ನಡಶಾಲೆಯ ಕೊನೆಯ ಪರೀಕ್ಷೆಗೂ ಆತ ಕಟ್ಟಿರಲಿಲ್ಲ. ಆದರೂ, ಹಲಕೆಲವು ಇಂಗ್ಲೀಷ್ ಶಬ್ದಗಳನ್ನು ಪಾಠ ಮಾಡಿಕೊಂಡು ಹೊಸ ಪರಿಚಯದ ಸಂದರ್ಭ ಗಳಲ್ಲೆಲ್ಲ ಅವುಗಳನ್ನು ಉರು ಹೊಡೆಯುವುದು ಅವನ ಪದ್ಧತಿಯಾಗಿತ್ತು.

"ಗಂಡಸರು, ಹೆಂಗಸರು ಎಲ್ಲರೂ ಸಮಾನಸ್ಕಂಧರ ಹಾಗೆ ಸಾಧನೆ ಮಾಡಿ ಅತಿಮಾನವರಾಗಬೇಕು ಅಂತ ಮಹಾಗುರುಗಳು ಹೇಳಿದಾರಲ್ಲ—ತಮ್ಮ 'ಮಹಾಯೋಗ' ಪುಸ್ತಕದಲ್ಲಿ. ನೀವೂ ಓದಿರಬೇಕಲ್ಲ ಅದನ್ನ ಕಮಲಾ ಬಾಯಿಾ?" ಎಂದು ಕೇಳಿದ ಕುಬೇರಪ್ಪ. 'ಮಹಾಯೋಗ' ಎಂಬುದು ಇಂಗ್ಲೀಷಿನಲ್ಲಿ ಬರೆಯಲ್ಪಟ್ಟ ಸಾವಿರ ಪುಟಗಳ ಮಹಾಗ್ರಂಥ. ಇಪ್ಪತ್ತು ವರ್ಷಗಳ ಸಂತತ ಪರಿಶ್ರಮ, ವ್ಯಾಸಂಗ ಮತ್ತು ಧ್ಯಾನಗಳ ಫಲವಾಗಿ ರಚಿತ ವಾಗಿದ್ದ ಆ ಪುಸ್ತಕ ರೋಷರಾಯರಂಥ ವಿದ್ವಾಂಸರಿಗೂ ಅರ್ಥವಾಗದಷ್ಟು ಕ್ಲಿಷ್ಟವಾದುದಾಗಿತ್ತು. ಅದನ್ನೋದಿ ಅರ್ಥಮಾಡಿಕೊಳ್ಳಲು ಮರುಳಯ್ಯನೂ ಹಲವು ಬಾರಿ ಯತ್ನಿಸಿ ಸೋತು ಹೋಗಿ ಆ ಹವ್ಯಾಸವನ್ನೆ ಬಿಟ್ಟು, ಮಹಾ ಮಾತೆಯವರು ಬರೆದಿದ್ದ ಚಿಕ್ಕಪುಟ್ಟ ಹೊತ್ತಿಗೆಗಳಿಂದಲೇ ತೃಪ್ತಿಪಟ್ಟುಕೊಂಡಿದ್ದು ದಿತ್ತು. ಸುಚರಿತರಾಯನದೂ ಅದೇ ಅನುಭವ. ಸುಲಲಿತದೇವಿ ಆ ಪುಸ್ತಕ ಕೊಂಡು ಸಂಗ್ರಹಿಸಿದ್ದಳಾಗಲಿ ಒಂದು ಸಲವೂ ಅದನ್ನು ತೆರೆದು ನೋಡಿರಲಿಲ್ಲ. ಡಾಕ್ಟರ್ ನಾಗೇಂದ್ರಪ್ಪನೂ, ಲೇಡೀ ಡಾಕ್ಟರ್ ವಸುಮತೀಬಾಯಿಯೂ ಆ ಹೆಸರನ್ನೇನೊ ಕೇಳಿದ್ದರಾದರೂ ಅದನ್ನು ನೋಡುವ ಗೊಡವೆಗೂ ಹೋಗಿರ ಲಿಲ್ಲ. ವಿರುಪಣ್ಣನಿಗಂತೂ ರಾಜಕೀಯದ ಗದ್ದಲದಲ್ಲಿ ಆ ಪುಸ್ತಕದತ್ತ ಲಕ್ಷ್ಯ ಹೊರಳಿಸುವುದಕ್ಕೂ ಅವಕಾಶ ಲಭಿಸಿರಲಿಲ್ಲ. ಇನ್ನುಳಿದವನು ಉಳಿವೆಪ್ಪ. ಅವನಿಗಂತೂ ಇಂಗ್ಲಿಷಿನ ಒಂದು ಅಕ್ಷರವೂ ತಿಳಿಯುತ್ತಿರಲಿಲ್ಲ. ಅಧ್ಯಾತ್ಮ ವಿಚಾರಗಳನ್ನು ಕುರಿತು ಅವನಿಗೆ ತಿಳಿದಿದ್ದುದೂ ಅಷ್ಟಕ್ಕಷ್ಟೆ. ಕರ್ನಾಟಕ ಏಕೀಕರಣ, ಸರ್ವಧರ್ಮ ಸಮನ್ವಯ ಮೊದಲಾದುವುಗಳಂತೆ ಈಚೆಗೆ ಕರಾ ಚೂರಿನ ಅಧ್ಯಾತ್ಮವೂ ಒಂದು 'ಫ್ಯಾಶನ್' ಆದಂದಿನಿಂದ ಯಾವ ನಿಮಿತ್ತ ದಿಂದಲಾದರೂ ಸದಾಕಾಲವೂ ಸಾರ್ವಜನಿಕರ ದೃಷ್ಟಿಯೆದುರು ಮೆರೆಯಬಯ ಸುತ್ತಿದ್ದ ಉಳಿವೆಪ್ಪ ಸುಚರಿತರಾಯನ ಬಲವಂತಕ್ಕೆ ಕಟ್ಟುಬಿದ್ದು ಯೋಗ ಮಂಡಲದ ಸದಸ್ಯನಾಗಿದ್ದುದಲ್ಲದೆ, ಭಾನುವಾರಕ್ಕೊಂದಾವರ್ತಿ ನಡೆಯುತ್ತಿದ್ದ

ಮಂಡಲದ ಸಭೆಗೂ ಬಂದು ಹೋಗುವ ಕ್ರಮಕ್ಕಾರಂಭಿಸಿದ್ದ. ಸಭೆಯ ಕಾಲಕ್ಕೆ ನಡೆಯುತ್ತಿದ್ದ ರಹಸ್ಯಮಯ ಪ್ರದರ್ಶನವೂ ಅವನ ಕುತೂಹಲವನ್ನು ಆಕರ್ಷಿಸಿತ್ತು. ಕರಾಚೂರಿನ ಮಹಾಗುರುಗಳ ತತ್ತ್ವಪ್ರಣಾಲಿಯ ವೈಶಿಷ್ಟ್ಯ ವಾವುದೆಂಬುದು ಕೂಡ ಅವನಿಗೆ ಗೊತ್ತಿರಲಿಲ್ಲ. ಕುಬೇರಪ್ಪ ಮಾತ್ರ ಆ ವಿಚಾರದಲ್ಲಿ ಉಳಿದವರೆಲ್ಲರಿಗಿಂತ ಕೊಂಚ ಮುಂದುವರಿದಿದ್ದು, ಮಹಾಗುರು ಮತ್ತು ಮಹಾಮಾತೆಯರ ಕೆಲವು ಮಾತುಗಳನ್ನಾದರೂ ಉರುಹೊಡೆಯ ಬಲ್ಲ ವನಾಗಿದ್ದ. ಅವರು ಬರೆದ ಪುಸ್ತಕಗಳ ಹೆಸರುಗಳನ್ನೂ ಆತ ತಿಳಿದುಕೊಂಡು ಪ್ರಸಂಗ ಬಂದಾಗಲೆಲ್ಲಾ ಅವುಗಳನ್ನು ಚಾಣಾಕ್ಷತನದಿಂದ ಉಪಯೋಗಿಸಿ ಕೊಳ್ಳುವುದನ್ನೂ ಕಲಿತುಕೊಂಡಿದ್ದ. ಕಮಲಳನ್ನು ಬೆರಗುಗೊಳಿಸುವ ಉದ್ದೇಶ ದಿಂದಲೇ ಅವನು 'ಮಹಾಯೋಗ'ದ ಹೆಸರನ್ನು ಉಲ್ಲೇಖಿಸಿದ್ದ.

ಆದರೆ, ಕಮಲ ಬೆರಗುಗೊಳ್ಳಲೂ ಇಲ್ಲ, ಅವನ ಪ್ರಶ್ನೆಗೆ ಉತ್ತರವನ್ನೂ ಕೊಡಲಿಲ್ಲ. ಮೌನವಾಗಿ ಕುಳಿತುಕೊಂಡು ಅಲ್ಲಿ ನೆರೆದ ವ್ಯಕ್ತಿಗಳನ್ನೂ ಅವರ ರೀತಿ ನಡತೆಗಳನ್ನೂ ನಿರೀಕ್ಷಿಸುವುದೆಂದು ಅವಳು ಮನಸ್ಸಿನಲ್ಲಿಯೆ ಗೊತ್ತು ಮಾಡಿಕೊಂಡಳು.

ಅವಳು ತುಟಿ ಬಿಚ್ಚದೆ ಸುಮ್ಮನೆ ಕುಳಿತುಕೊಳ್ಳುತ್ತಲೂ ಮತ್ತೆ ಮರುಳಯ್ಯನೇ ಅವಳ ಪರವಾಗಿ ಉತ್ತರವೀಯಬೇಕಾಯಿತು.

"ಇಲ್ಲ, ಇಲ್ಲ, ಸಾಹುಕಾರರೇ. ನಮ ಶ್ರೀಮತಿಯವರಿಗೆ ಅಷ್ಟು ಚೆನ್ನಾಗಿ ಇಂಗ್ಲಿಷು ಬರುವದಿಲ್ಲ."

"ಹೀಗೇನು? ಸರಿ. ಸರಿ. ಗೊತ್ತಾಯ್ತು. ಗೊತ್ತಾಯ್ತು. ನಿಜ ಹೇಳುವದಾದರೆ, ನನಗಾದರೂ ಎಲ್ಲಿ ಬರ್‍ತಿತ್ತು ಇಂಗ್ಲೀಷ್? ನಾನೇನು ಅದನ್ನ ಸಾಲೆಯಲ್ಲಿ ಕಲೀಲಿಲ್ಲ. ಯಾವ ಮಾಸ್ತರನೂ ನನಗದನ್ನ ಕಲಿಸಲಿಲ್ಲ. ಕನ್ನಡ-ಇಂಗ್ಲೀಷ್ ಸೆಲ್ಫ್ ಸ್ಟಡೀ ತಗೊಂಡು ಕೂತು ನಾನೇ ಕಷ್ಟಪಟ್ಟು ಮೂರು ನಾಲ್ಕು ವರ್ಷ ಒಂದೇ ಸಮನೆ ಯತ್ನ ಮಾಡಿ ಇಂಗ್ಲೀಷ್ ಬರೆಯಲೂ ಓದಲೂ ಕಲಿತುಕೊಂಡೆ. ಮೊನ್ನೆ ಗವರ್ನರ್ ಸಾಹೇಬರು ಬಂದಿದ್ದರಲ್ಲಾ, ಆಗ ಅವರೊಡನೆ ನಾನೂ ಇಂಗ್ಲೀಷಿನಲ್ಲೇ ಮಾತಾಡಬೇಕಾಯಿತು. ಎಷ್ಟು ಚೆನ್ನಾಗಿ ಮಾತಾಡುತೀರಲ್ಲಾ ಅಂತ ಆಶ್ಚರ್ಯಪಟ್ಟುಕೊಂಡರು ಕಲೆಕ್ಟರರು. ಯಾವ ಮಾಸ್ತರನಿಂದಲೂ ನಾನದನ್ನ ಕಲೀಲಿಲ್ಲ ಅಂತ ಹೇಳಿದಾಗ ಅವರಿಗಾದ

ಆಶ್ಚರ್ಯ ಇಷ್ಟೇ ಅಂತ ಹೇಳಲಾರೆ." ಎಂದು ಮೊದಲಾಗಿ, ತನಗಿಲ್ಲದ ಇಂಗ್ಲಿಷ್ ಜ್ಞಾನದ ಜಂಬಕೊಚ್ಚಿಕೊಳ್ಳತೊಡಗಿದ ಕುಬೇರಪ್ಪ.

ವಸುಮತೀಬಾಯಿ ಬೇಸರದಿಂದ ಆಕಳಿಸಿ ಸೋಫಾದಲ್ಲಿ ಅತ್ತಿತ್ತ ಹೊರಳ ತೊಡಗಿದಳು. ಕುಬೇರಪ್ಪ ಮಾತಿಗಾರಂಭಿಸಿದೊಡನೆಯೆ ಅವಳಿಗೆ ತಲೆನೋವು ಬಂದುಬಿಡುತ್ತಿತ್ತು. ತನ್ನ ವಿಷಯ ತಾನೇ ಹೇಳಿಕೊಳ್ಳುವುದೆಂದರೆ ಬಹಳ ಆಸೆ ಕುಬೇರಪ್ಪನಿಗೆ. ತಾನು ಸಾಹುಕಾರನಾದುದರಿಂದ ಎಲ್ಲರೂ ತನ್ನ ಮಾತನ್ನು ಅತ್ಯಂತ ಆಸಕ್ತಿಯಿಂದ ಆಲಿಸುವರೆಂದೇ ಅವನು ತಿಳಿದುಕೊಂಡಿದ್ದ. ಸುಚರಿತರಾಯ—ಸುಲಲಿತದೇವಿ ಇಬ್ಬರೂ ಸಾಹುಕಾರನ ಆ ದೌರ್ಬಲ್ಯವನ್ನು ಎಂದೋ ಗುರುತಿಸಿಕೊಂಡು ಅವನು ಗಂಟೆಗಳ ಕಾಲ ಮಾತನಾಡಿದರೂ ಬೇಸರ ಸೂಚಿಸದೆ ತಾಳ್ಮೆಯಿಂದ ಕೇಳಿಕೊಂಡು ಅವನ ಜಂಬದ ಪೊಳ್ಳಿಗೆ ಗಾಳಿ ತುಂಬಿ ತಮ್ಮ ಬೇಳೆ ಬೇಯಿಸಿಕೊಳ್ಳುವುದರಲ್ಲಿ ನಿರತರಾಗಿದ್ದರು. ವಿರುಪಣ್ಣನೂ ಕೂಡ ಕುಬೇರಪ್ಪನಿಂದ ಆಗಾಗ ಆರ್ಥಿಕ ನೆರವು ಪಡೆಯುತ್ತಿದ್ದವನಾದುದರಿಂದ ಸಾಹುಕಾರನ ಮಾತಿನ ಮಳೆಯನ್ನು ಅವನೂ ತೋರಿಕೆಗಾಗಿಯಾದರೂ ಸ್ವಾಗತಿಸುವುದು ಅವಶ್ಯವಾಗಿತ್ತು. ವಸುಮತೀಬಾಯಿಗಾಗಲಿ, ಡಾಕ್ಟರ್ ನಾಗೇಂದ್ರಪ್ಪನಿಗಾಗಲಿ ಹಣದ ಕೊರತೆಯೇನೂ ಇರಲಿಲ್ಲ. ನಾಗೇಂದ್ರಪ್ಪ ಓರೆಕೋರೆಯಲ್ಲೂ, ವಸುಮತೀಬಾಯಿ ಗೊಬ್ಬೂರಿನಲ್ಲೂ ಹೆಸರಾಂತ ಡಾಕ್ಟರೆನಿಸಿಕೊಂಡಿದ್ದವರು. ಅವರ ಗಿರಾಕಿಗಳೆಲ್ಲರೂ ದೊಡ್ಡ ದೊಡ್ಡ ಶ್ರೀಮಂತರು ಮತ್ತು ಅಧಿಕಾರಿಗಳು. ಎಂತಲೇ ಅವರು ಕುಬೇರಪ್ಪನ ದಾಕ್ಷಿಣ್ಯಕ್ಕೊಳಗಾಗ ಬೇಕಾದ ಕಾರಣವಿರಲಿಲ್ಲ. ವಸುಮತೀಬಾಯಿಗಂತೂ ಕುಬೇರಪ್ಪನ ಸಹವಾಸ ಅಸಹನೀಯವೆನಿಸಿತ್ತು. ಆದರೂ, ವಿರುಪಣ್ಣನಿಗೂ ಕುಬೇರಪ್ಪನಿಗೂ ಇದ್ದ ಬಾಂಧವ್ಯವನ್ನು ಕಂಡುಕೊಂಡು ಎಷ್ಟು ಬೇಸರವೆನ್ನಿಸಿದರೂ ಆಕೆ ಸಹಿಸಿಕೊಳ್ಳ ಬೇಕಾಗಿ ಬಂದಿತ್ತು. ನಾಗೇಂದ್ರಪ್ಪ ಮೊದಲಿನಿಂದಲೂ ವಿನೋದ ಬುದ್ಧಿಯವನಾದುದರಿಂದ ಕುಬೇರಪ್ಪನ ಬಡಾಯಿಯ ಮಾತುಗಳಿಂದ ಅವನಿಗೆ ಬೇಸರವೆನ್ನಿಸುತ್ತಿರಲಿಲ್ಲ. ಅದೂ ಒಂದು ಮೋಜು, ಒಂದು ತಮಾಷೆ, ಮನರಂಜನೆಯ ಸಾಧನ ಎಂತಲೇ ಆತ ಭಾವಿಸಿದ್ದ.

ಸುಚರಿತರಾಯ ಕೇಳಿದ :

"ಕರಾಚೂರಿಗೆ ಹೋದಾಗಲೆಲ್ಲಾ ಮಹಾಮಾತೆಯವರ ಸಂಗಡ

ಇಂಗ್ಲೀಷಿನಲ್ಲೇ ಮಾತಾಡುತ್ತೀರಲ್ಲವೇನ್ರೀ ಸಾಹುಕಾರರೆ?"

"ಹೌದು, ಮತ್ತೆ! ಇಂಗ್ಲಿಷು ಅಲ್ಲದೆ ಬೇರ್‍ಯಾವ ಭಾಷೆಯೂ ತಿಳಿಯೂದಿಲ್ಲವಲ್ಲ ಅವರಿಗೆ? ಆ ಹೆಣ್ಣು ಮಗಳ ಇಂಗ್ಲೀಷು ಅರ್ಥಮಾಡಿಕೊಳ್ಳೊದು ಬಹಳ ಕಷ್ಟ. ಆದರೂ ನನಗೇನು ಅಷ್ಟು ಕಷ್ಟ ಅನ್ನಿಸಲಿಲ್ಲ........"

"ಅದೆಲ್ಲಾ ಆ ಮಹಾತಾಯಿಯದೇ ಕೃಪೆ!" ಎಂದ ಮರುಳಯ್ಯ.

ಕುಬೇರಪ್ಪನಿಗೆ ಆ ಮಾತು ಅಸಮಾಧಾನವನ್ನುಂಟುಮಾಡಿತಾದರೂ ಆತ ಅದನ್ನು ವ್ಯಕ್ತಗೊಳಿಸದೆ, ಮತ್ತೆ ಕಮಲಳ ಕಡೆಗೆ ನೋಡುತ್ತ ಹೇಳಿದ:

"ನೀವು ಮತ್ತು ಮರುಳಯ್ಯನವರು ಇಬ್ಬರೂ ಮುಂದಿನ ಸಾರಿ ನನ್ನ ಸಂಗಡವೇ ಕರಾಚೂರಿಗೆ ಬರಬೇಕು. ನೀವಿನ್ನೂ ಕರಾಚೂರಿಗೆ ಹೋಗಿ ಬಂದಿಲ್ಲ ಹೌದಲ್ಲೋ?"

ಆಗಲೂ ಕಮಲ ಬಾಯಿ ತೆರೆಯಲಿಲ್ಲ.

"ಇಲ್ಲರೀ," ಎಂದು ಮರುಳಯ್ಯನೇ ಹೇಳಿದ.

"ಮೊದಲು ನಮ್ಮೂರಲ್ಲಿ ಆಶ್ರಮ ಸುರುಮಾಡಬೇಕಲ್ಲ. ಕಮಲಾ ಬಾಯಿಯವರಿಗೆ ತಿಳಿಸಿದಿರಾ ಈ ಸುದ್ದಿಯನ್ನ? ಅವರ್‍ಯಾಕೆ ಮಾತೇ ಆಡೂದಿಲ್ಲ ವಲ್ಲ?"

"ಅವರ ಸ್ವಭಾವವೇ ಹಾಗೆ ಸಾಹುಕಾರರೇ. ಬಹಳ ಸಂಕೋಚ. ಏನೂ ತಿಳುಕೋ ಬೇಡಿರಿ."

"ಇಷ್ಟು ಸಂಕೋಚ ಮಾಡಿಕೊಂಡರೆ ಹ್ಯಾಗಪ್ಪ? ಛೆ. ಛೆ. ನಾನೆಲ್ಲೂ ನೋಡಿಲ್ಲ ಇಷ್ಟು ನಾಚಿಕೆಪಟ್ಟುಕೊಳ್ಳುವವರನ್ನ!"

"ಹೊಸ ಗುರುತು. ಹೀಗಾಗೂದೂ ಸಹಜ," ಎಂದ ಉಳಿವೆಪ್ಪ.

"ನಾಲ್ಕೈದು ವಾರ ಸಭೆಗೆ ಬಂದರೆಂದರೆ ಕಮಲಾಬಾಯಿಯವರೂ ನೈಚಳಿ ಬಿಟ್ಟು ಮಾತಾಡ್ತಾರೇಳ್ರೀ ಸಾಹುಕಾರರೆ!" ಎಂದು ಹೇಳಿ ಸುಲಲಿತ ದೇವಿ, ಕಮಲಳ ಭುಜದ ಮೇಲೆ ಸಲಿಗೆಯಿಂದ ಕೈ ಹಾಕಿ, "ಹೌದಲ್ರೀ, ನಾ ಹೇಳೂದು ಬರೋಬರಿ ಹೌದಲ್ಲೋ?" ಎಂದಳು.

ಕಮಲ ನಸುನಕ್ಕಳಷ್ಟೆ. ಆಗಲೂ ಅವಳ ಬಾಯಿಂದ ಮಾತು ಹೊರಡ ಲಿಲ್ಲ.

ಎಲ್ಲರಿಗೂ ಅಪ್ರಿಯವಾಗಿದ್ದ ಆ ಪ್ರಸಂಗವನ್ನು ಬದಲಿಸಲೆಂದು ಸುಚರಿತ

ರಾಯ ಧ್ವನಿಯೆತ್ತಿದ :

" ಟೈಂ ಆಯ್ತು. ಮೀಟಿಂಗ್ ಸುರುಮಾಡೋಣವೇನು ? "

" ಆಲ್ ರೈಟ್, ಆಲ್ ರೈಟ್ ! " ಎಂದ ಕುಬೇರಪ್ಪ, ಹಿರಿಯತನದ ಪ್ರದರ್ಶನ ಮಾಡುತ್ತ.

" ವಾಸಂತೀ, ವಾಸಂತೀ, ವೇಳೆಯಾಯ್ತು," ಎಂದು ಕೂಗಿದಳು ಸುಲಲಿತದೇವಿ. ಕಮಲ ಕುತೂಹಲದಿಂದ ದೃಷ್ಟಿ ಹೊರಳಿಸುತ್ತಿದ್ದ ಹಾಗೇ ಶುಭ್ರ ಶ್ವೇತವಸನಧಾರಿಯಾಗಿ ಕೇಶರಾಶಿಯನ್ನು ಸ್ವಚ್ಛಂದವಾಗಿ ಇಳಿಬಿಟ್ಟು ಕೊಂಡಿದ್ದ ವಾಸಂತಿ ಹಾಲಿನಲ್ಲಿ ಅಡಿಯಿರಿಸಿ ಕಿಟಕಿಯ ಹತ್ತಿರದಲ್ಲಿದ್ದ ಕುರ್ಚಿ ಯಲ್ಲಿ ಕುಳಿತುಕೊಂಡಳು.

" ಇವತ್ತು ವಾಸಂತಿಯೇ ಮಾತಾಜಿಯಾಗುತ್ತಾಳೆ," ಎಂದಳು ಸುಲಲಿತ ದೇವಿ.

ಸುಚರಿತರಾಯ ಥಟ್ಟನೆದ್ದು, ವಾಸಂತಿಯ ತಲೆಯ ಮೇಲಿದ್ದ ದೀಪ ವೊಂದನ್ನುಳಿದು ಇನ್ನುಳಿದ ದೀಪಗಳನ್ನೆಲ್ಲ ಆರಿಸಿದ. ಆ ಮಬ್ಬು ಬೆಳಕಿನಲ್ಲಿ ಕಣ್ಣುಗಳನ್ನು ಮುಚ್ಚಿ ಕುರ್ಚಿಯಲ್ಲಿ ನೆಟ್ಟಗೆ ಕುಳಿತುಕೊಂಡಿದ್ದ ವಾಸಂತಿ ಬಿಳಿಯುಡುಗೆಯ ದೇವತೆಯಂತೆ ಕಾಣಿಸುತ್ತಿದ್ದಳು. ನಿಜವಾದ ತಮಾಷೆಗಿನ್ನು ಆರಂಭ ಎಂದುಕೊಳ್ಳುತ್ತಾ ಕಮಲ ನೆಟ್ಟದೃಷ್ಟಿಯಿಂದ ವಾಸಂತಿಯನ್ನೇ ನೋಡು ತ್ತಿದ್ದಳು.

ಜಗನ್ಮಾತೆಯ ಸ್ತೋತ್ರಗೀತೆಯೊಂದನ್ನು ಮೆಲ್ಲಗಿನ ಧ್ವನಿಯಲ್ಲಿ ಹಾಡಿ ದಳು ಸುಲಲಿತದೇವಿ. ಪ್ರಾರ್ಥನೆ ಮುಗಿಯುತ್ತಲೂ ನೆರೆದವರೆಲ್ಲರೂ ತಲೆ ಬಾಗಿಸಿ ಎದುರಿಗೆ ಕುಳಿತಿದ್ದ ಜಗನ್ಮಾತೆಯ ವೇಷಧಾರಿಗೆ ಕೈ ಮುಗಿದರು. ಸುಚರಿತರಾಯ ಕೈಯಲ್ಲಿ ಚಿಕ್ಕ ಪುಸ್ತಕವೊಂದನ್ನು ಹಿಡಿದು ಎದ್ದು ನಿಂತು ಮಹಾಗುರು, ಮಹಾಮಾತೆಯರ ಕೆಲವು ವಚನಗಳನ್ನು ಓದಿದ. ಮತ್ತೊಂದು ಬಾರಿ ಮಹಾತಾಯಿಯ ವೇಷಧಾರಿಗೆ ಕೈ ಮುಗಿದರು.

" ಆಶೀರ್ವಾದ. ಆಶೀರ್ವಾದ," ಎಂದು ಎರಡು ಬಾರಿ ರಾಗವಾಗಿ ಹೇಳಿ ಕೈಯೆತ್ತಿ, ಎಲ್ಲರನ್ನೂ ಹರಸಿದ ಹಾಗೆ ನಟಿಸಿ ವಾಸಂತಿ ನಿಧಾನವಾಗಿ ಎದ್ದು ಹೊರಟುಹೋದಳು. " ಓಂ ಶ್ರೀ ಓಂ," ಎಂದು ಗಟ್ಟಿಯಾಗಿ ಹೇಳುತ್ತಾ ಸುಚರಿತರಾಯ ವಿದ್ಯುದ್ದೀಪಗಳೆಲ್ಲವನ್ನೂ ಮತ್ತೆ ಬೆಳಗಿಸಿದ.

"ಇವತ್ತು ಏನೂ ಮೆಸೇಜ್ ಬರಲಿಲ್ಲವಲ್ರೀ?" ಎಂದು ಪ್ರಶ್ನಿಸಿದ ಡಾಕ್ಟರ್ ನಾಗೇಂದ್ರಪ್ಪ.

"ನಾವೆಲ್ಲರೂ ನಮ್ಮ ಮನಸ್ಸುಗಳನ್ನ ಪೂರಾ ತೆರೆದುಕೊಂಡು ಬಂದಿದ್ದರೆ ಮಾತ್ರ ಮಹಾತಾಯಿಯವರು ಮೆಸೇಜ್ ಕಳಿಸ್ತಾರೆ," ಎಂದು ಸ್ಪಷ್ಟೀಕರಿಸಿದ ಸುಚರಿತರಾಯ.

"ನಾವಂತೂ ತೆರೆದುಕೊಂಡೇ ಕೂತಿದ್ದೆವು," ಎಂದಳು ವಸುಮತೀಬಾಯಿ. ಇಂಥ ಪವಾಡಗಳಲ್ಲಿ ಅವಳಿಗೆ ಕೊಂಚವೂ ನಂಬಿಕೆಯಿರಲಿಲ್ಲವಾದರೂ ಮಹಾಗುರು ಮತ್ತು ಮಹಾಮಾತೆಯರು ಸಿದ್ಧಿ ಸಾಕ್ಷಾತ್ಕಾರ ಪಡೆದ ಅತಿಮಾನುಷವ್ಯಕ್ತಿಗಳಾದುದರಿಂದ ಈ ಮನೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಅವರು ಆತ್ಮರೂಪಿಗಳಾಗಿ ಭಾಗವಹಿಸುವುದೂ ಸಾಧ್ಯವೊ ಏನೊ ಎಂಬ ವಿಚಾರಕ್ಕೋಸ್ಕರವಾಗಿ ಅಲ್ಲಿಗೆ ಬಂದು ಹೋಗುವುದಕ್ಕಾರಂಭಿಸಿದ್ದಳು.

"ಒಬ್ಬರು ತೆರೆದು ಕೂತರಾಯಿತೇ ಡಾಕ್ಟರ್‌ಬಾಯಿ? ಇಲ್ಲಿ ಕೂಡಿದವರೆಲ್ಲಾ ತಮ್ಮ ಮನಸಿನಲ್ಲಿಯ ಬೇರೆ ವಿಚಾರಗಳನ್ನೆಲ್ಲಾ ತೆಗೆದು ಹಾಕಿ ಬರೀ ಮಹಾಗುರು, ಮಹಾಮಾತೆಯರನ್ನೇ ಧ್ಯಾನಿಸುತ್ತಾ ಕೂತರೆ ಮಾತ್ರ ಕರಾಚೂರಿನಲ್ಲಿರುವ ಅವರ ಮಹಾ ಚೇತನಗಳಿಗೆ ನಮ್ಮ ಅರಿವುಂಟಾಗಿ ನಮಗೆ ಮಾರ್ಗದರ್ಶನ ಮಾಡಲು ಮೆಸೇಜ್ ದಯಮಾಡಿಸ್ತಾರೆ. ಕಮಲಾಬಾಯಿ ಇವತ್ತೇ ಹೊಸದಾಗಿ ಬಂದವರು. ಅವರಿಗೆ ಈ ಸಂಗತಿ ತಿಳಿಸಲಿಕ್ಕೂ ನಾವು ಮರೆತೆವು. ಆಯಿತಲ್ಲ. ಮುಂದಿನ ವಾರ ಮತ್ತೆ ಕೂಡುತ್ತೇವಲ್ಲ. ಆಗ ಮೆಸೇಜ್ ಬಂದೇ ಬರ್ತದ," ಎಂದ ಸುಚರಿತರಾಯ.

"ನಮ್ಮೂರಲ್ಲಿ ಆಶ್ರಮ ಸುರುಮಾಡೂದರ ಬಗ್ಗೆ ಮೆಸೇಜ್ ಬೇಡಿಕೋಬೇಕು," ಎಂದ ಕುಬೇರಪ್ಪ.

"ಆಶ್ರಮ ಮಾಡಿ ಏನೇನು ಮಾಡುವವರು ಕುಬೇರಪ್ಪಣ್ಣ?" ಉಳಿವೆಪ್ಪ ಪ್ರಶ್ನಿಸಿದ.

"ಕರಾಚೂರಿನ ಆಶ್ರಮದಲ್ಲಿ ಏನೇನು ನಡೀತದೋ ಅದನ್ನೆಲ್ಲಾ ಮಾಡೂದು."

ಕರಾಚೂರಿನ ಆಶ್ರಮಕ್ಕೆ ಭೇಟ್ಟಿಕೊಡುವ ಸುಯೋಗ ಉಳಿವೆಪ್ಪನಿಗಿನ್ನೂ ಪ್ರಾಪ್ತವಾಗಿರಲಿಲ್ಲವಾದುದರಿಂದ ಅಲ್ಲಿ ನಡೆಯುವ ಕಾರ್ಯಕಲಾಪ

ಗಳ ಕಲ್ಪನೆ ಅವನಿಗಿರಲಿಲ್ಲ. ಎಂತಲೇ ಆತ ಕುತೂಹಲದಿಂದ ಕೇಳಿದ :

"ಕರಾಚೂರಿನಲ್ಲಿ ಏನೇನು ನಡೀತದ ?"

"ಅದೂ ನಿಮಗೆ ಗೊತ್ತಾಗಿಲ್ಲೇನು ಇನ್ನೂ? ಇಷ್ಟು ದಿವಸ ನಮ್ಮ ಮಂಡಲದ ಸದಸ್ಯರಾಗಿದ್ದೂ?"

"ಯಾರಾದರೂ ಹೇಳಿದರೆ ಗೊತ್ತಾದೀತು. ನನಗಾದರೂ ಪುರಸತ್ತು ಎಲ್ಲಿದೆ ಕುಬೇರಪ್ಪಣ್ಣ ? ವ್ಯವಹಾರದ ಕಾಗದ ಪತ್ರ ನೋಡಲೂ ಆಗೂದಿಲ್ಲ ಎಷ್ಟೋ ಸಲ."

"'ಕರಾಚೂರಿನ ಮಹಾಗುರು ಮತ್ತು ಅವರ ಆಶ್ರಮ' ಅನ್ನುವ ಚಿಕ್ಕ ಪುಸ್ತಕ ಕೊಟ್ಟಿದ್ದೆನಲ್ಲರೀ ಅಣ್ಣನವರೆ? ಅದನ್ನು ನೋಡಲೇ ಇಲ್ಲವೇನು ನೀವು?" ಎಂದ ಸುಚರಿತರಾಯ.

"ಅದೆಲ್ಲಿ ಕಳೆದುಹೋಯಿತೋ ತಿಳೀದಪ್ಪಾ. ಬಹಳ ಹುಡುಕಿದೆ. ಸಿಗಲಿಲ್ಲ."

"ಆ ಪುಸ್ತಕವನ್ನ ಕನ್ನಡದಲ್ಲಿ ಭಾಷಾಂತರ ಮಾಡಿ ನಮ್ಮ ಮಂಡಲದ ವತಿಯಿಂದ ಪ್ರಕಟಿಸಿದರೆ ಬಹಳ ಚಲೋ ಆಗ್ತದ. ಇಂಗ್ಲಿಷು ತಿಳಿಯದ ವರಿಗೂ ಉಪಯೋಗವಾಗ್ತದ. ಯಾಕ್ರೀ ಸಾಹುಕಾರರೆ?" ಎಂದ ಸುಚರಿತ ರಾಯ.

"ಗುಡ್. ವೆರೀ ಗುಡ್. ನಮ್ಮ ಮರುಳಯ್ಯನವರೇ ಭಾಷಾಂತರ ಮಾಡಲಿ. ಮುದ್ರಣದ ಖರ್ಚು ನಾನು ನೋಡಿಕೊಳ್ತೀನಿ. ಎಷ್ಟು ಬಂದೀತು ಖರ್ಚು?"

ಸುಚರಿತರಾಯ ಒಂದು ನಿಮಿಷ ಲೆಕ್ಕ ಹಾಕಿದಂತೆ ನಟಿಸಿ ಹೇಳಿದ :

"ಸಣ್ಣ ಪುಸ್ತಕ. ಅದೇನು ದೊಡ್ಡ ವಿಷಯ ಬಿಡಿರಿ ಸಾಹುಕಾರರೆ. ನೂರು ನೂರಿಪ್ಪತ್ತು ಆಗರೆ ಬಹಳವಾಯ್ತು." ನೂರ ಇಪ್ಪತ್ತು ರೂಪಾಯಿ ಗಳಲ್ಲಿ ಅರ್ಧದಷ್ಟನ್ನಾದರೂ ಸಹಜವಾಗಿ ಉಳಿಸಬಹುದೆಂದು ಯೋಚಿಸಿ ಆತ ಹರುಷಗೊಂಡ.

"ಆಯ್ತಲ್ಲ. ನಾಳೆಯಿಂದಲೇ ಭಾಷಾಂತರ ಮಾಡಲು ಸುರುಮಾಡ್ತೀರಾ ಮರುಳಯ್ಯನವರೆ? ನಿಮ್ಮ ಶ್ರಮಕ್ಕೂ ತಕ್ಕ ಪ್ರತಿಫಲ ಸಿಗ್ತದ. ಯಾರಿಂದಲೂ ಯಾವ ಕೆಲಸವನ್ನೂ ಪುಕ್ಕಟೆ ಮಾಡಿಸಿಕೊಳ್ಳಬಾರದಂತ ಮಹಾತಾಯಿಯವರ

ತತ್ವ ಅದ," ಎಂದ ಕುಬೇರಪ್ಪ.

ಉಳಿವೆಪ್ಪ, ವಿರುಪಣ್ಣ ಮತ್ತು ವಸುಮತೀಬಾಯಿ ಪರಸ್ಪರರ ಮುಖ ದಿಟ್ಟಿಸುತ್ತಾ ಮುಗುಳ್ನಗು ಬೀರಿದರು.

"ಪುಸ್ತಕದ ವ್ಯವಸ್ಥೆ ಆಯ್ತಲ್ಲ. ಇನ್ನು ಆಶ್ರಮದ ಮಾತು. ಅದೂ ಕೂಡಾ ಆದಷ್ಟು ಬೇಗ ಗೊತ್ತಾಗಬೇಕು," ಎಂದ ಕುಬೇರಪ್ಪ. "ಕಮಲಾ ಬಾಯಿ ಏನಂದರು ಮರುಳಯ್ಯನವರೆ?"

"ನಾವಿನ್ನೂ ಈ ಚರ್ಚೆಯನ್ನೇ ಮಾಡಿಲ್ಲ ಸಾಹುಕಾರರೆ."

"ಛೆ. ಛೆ. ಶುಭಸ್ಯ ಶೀಘ್ರಂ. ಇಂಥಾದ್ದರಲ್ಲೆಲ್ಲಾ ಕಾಲಹರಣ ಮಾಡ ಬಾರದು. ಯೋಗ್ಯ ಅಂತ ತೋರಿದ್ದನ್ನ ಇಂದು ನಾಳೆ ಅನ್ನದೆ ಮಾಡಿಬಿಡ ಬೇಕು ಅಂತ ಮಹಾತ್ಮರು ಹೇಳಿದ್ದಾರೆ. ನಾನೂ ಕೂಡಾ ಮೊದಲಿಂದಲೂ ಅದೇ ತತ್ವದವನು. ಒಂದು ಕೆಲಸ ಮಾಡಬೇಕೆಂತ ಮನಸ್ಸಿನಲ್ಲಿ ಬಂತು ಅಂದರೆ ಮೀನಮೇಷ ಎಣಿಸುತಾ ಕೂಡ್ರದೆ ಮಾಡಿ ಮುಗಿಸಿ ಬಿಡ್ತೀನಿ."

"ಹೌದೌದು. ಕಮಲಳಂಥಾ ಹೆಣ್ಣನ್ನ ವಶಪಡಿಸಿಕೊಳ್ಳಬೇಕೆಂಬ ವಿಚಾರ ಬಂದಾಗಲಂತೂ ಒಂದು ನಿಮಿಷವೂ ತಡಮಾಡದೆ ಏನಾದರೂ ಹಂಚಿಕೆ ಹೂಡಿ ಕೆಲಸ ಮುಗಿಸಿ ಬಿಡ್ತಾನೆ ಕುಬೇರಪ್ಪ," ಎಂದು ಮನಸ್ಸಿನಲ್ಲಿಯೆ ಹೇಳಿಕೊಂಡು ವಸುಮತೀಬಾಯಿಯನ್ನು ದಿಟ್ಟಿಸುತ್ತಾ ಕಣ್ಣು ಮಿಟುಕಿಸಿದ ನಾಗೇಂದ್ರಪ್ಪ. ಯೋಗಮಂಡಲದ ಸಭೆಗೆಂದು ವಾರ ವಾರವೂ ಭೆಟ್ಟಿಯಾಗತೊಡಗಿದಂದಿನಿಂದ ಅವನಿಗೂ ವಸುಮತೀಬಾಯಿಗೂ ಸ್ನೇಹ ಬೆಳೆಯುತ್ತ ಬಂದಿತ್ತು. ವಿರುಪಣ್ಣನ ಸಂಬಂಧವನ್ನು ತಪ್ಪಿಸಿ ಅವಳನ್ನು ತನ್ನ ಪ್ರೇಯಸಿಯನ್ನಾಗಿ ಮಾಡಿಕೊಳ್ಳಬೇಕೆಂದು ನಾಗೇಂದ್ರಪ್ಪ ಹೊಂಚು ಹಾಕುತ್ತಿದ್ದ. ಸಾವಿರ ಹೆಣ್ಣುಗಳ ಸರದಾರನೆಂದು ಕುಪ್ರಸಿದ್ಧನಾಗಿದ್ದ ಆತನ ಬಗೆಗೆ ವಸುಮತೀಬಾಯಿಗೂ ವಿಲಕ್ಷಣ ಆಕರ್ಷಣೆಯೆನ್ನಿಸುತ್ತಿತ್ತು. ತನ್ನ ಪ್ರೇಯಸಿಯ ಮೇಲೆ ನಾಗೇಂದ್ರಪ್ಪನ ಕಣ್ಣು ಬಿದ್ದಿದ್ದುದನ್ನು ಚಾಣಾಕ್ಷನಾದ ವಿರುಪಣ್ಣನೂ ಬಹಳ ದಿನಗಳ ಹಿಂದೆಯೇ ಕಂಡು ಹಿಡಿದಿದ್ದ. ವಸುಮತೀಬಾಯಿಯ ಬಗೆಗೆ ವಿರುಪಣ್ಣ ಹೆಚ್ಚಿನ ಆಸೆಯನ್ನೂ ಇಟ್ಟುಕೊಂಡಿರಲಿಲ್ಲ. "ಸಿಕ್ಕಷ್ಟು ದಿನ ಶಿವಾಯ ನಮಃ" ಎನ್ನುವ ಧೋರಣೆ ವಿರುಪಣ್ಣನದು. ವಸುಮತೀಬಾಯಿ ಯೇನು ತನ್ನ ಹೆಂಡತಿಯೇ, ತನ್ನನ್ನೇ ನಂಬಿಕೊಂಡು ಇರುವುದಕ್ಕೆ? ಸ್ವೈರ

ಜೀವನಕ್ಕೆ ಆತಂಕವಾಗಬಾರದೆಂಬ ಉದ್ದೇಶದಿಂದಲೇ ಅವಳು ಮದುವೆಯನ್ನೂ ಮಾಡಿಕೊಳ್ಳದೆ " ಕುಮಾರಿಕೆ "ಯಾಗಿಯೆ ಉಳಿದಿದ್ದಳು. ತನ್ನಂಥ ಗೆಳೆಯರೆಷ್ಟು ಮಂದಿಯೋ ಅವಳಿಗೆ. ಏನೋ ತನ್ನ ಸುದೈವದಿಂದ ಕೆಲದಿನಗಳ ಮಟ್ಟಿಗಾದರೂ ಅವಳ ಸ್ನೇಹ ಲಭಿಸಿದೆ. ಸರಿ. ನಡೆದಷ್ಟು ದಿನ ನಡೆಯಲಿ. ಅದರ ಮೇಲೆ ಅವಳ ಇಚ್ಛೆಯಿದ್ದಂತಾಗಲಿ. ಬೇಡವೆನ್ನಲು ತನಗೇನು ಅಧಿಕಾರ? ನೂರು ಜನರಾಗಿ ಹೋದರು. ನಾಗೇಂದ್ರಪ್ಪ ನೂರ ಒಂದನೆಯವನಾಗಬಹುದು, ಅಷ್ಟೆ.

ವಿರುಪಣ್ಣನ ಯೋಚನಾಲಹರಿ ಆ ದಿಕ್ಕಿನಲ್ಲಿ ನಡೆದಿದ್ದರೆ ಉಳಿವೆಪ್ಪನದು ಇನ್ನೊಂದು ದಿಕ್ಕು ಹಿಡಿದು ಹೊರಟಿತ್ತು. ವಸುಮತೀಬಾಯಿಯನ್ನು ವಶಪಡಿಸಿಕೊಳ್ಳುವುದಕ್ಕಾಗಿ ಅವನು ಆತುರನಾಗಬೇಕಾದ ಅಗತ್ಯವಿರಲಿಲ್ಲ. ಗೊಬ್ಬೂರಿನವನೇ ಆದ ಉಳಿವೆಪ್ಪನಿಗೆ ಅದು ಅಗ್ಗದ ಮಾಲು ಎಂಬುದು ಗೊತ್ತು. ಭೊಜ್ಜು ಬೆಳೆದ ಗುಜ್ಜಾನೆ ಮರಿಯಂತಿದ್ದ ಸುಲಲಿತದೇವಿಯನ್ನೂ ಆತ ಬಯಸುತ್ತಿರಲಿಲ್ಲ. ಅವಳ ನಿಕಟ ಸಹವಾಸ, ಅವಳ ಮಾತು, ಅವಳ ವಿನೋದ ಅವನಿಗೆ ಪ್ರಿಯವಾಗಿದ್ದಿತಾದರೂ ಅದಕ್ಕಿಂತ ಹೆಚ್ಚಿನದನ್ನು ಆತ ಅವಳಿಂದ ಅಪೇಕ್ಷಿಸಿರಲಿಲ್ಲ. ವಾಸಂತಿಯನ್ನು ನೋಡಿದಂದಿನಿಂದ ಮಾತ್ರ ಆತ ಅವಳನ್ನು ದೊರಕಿಸಲು ಹಂಬಲಿಸತೊಡಗಿದ್ದ.

" ವಾಸಂತಿ ಯಾರು? ಎಲ್ಲಿಯವಳು? ನಿಮಗೂ ಅವಳಿಗೂ ಏನು ಸಂಬಂಧ? " ಎಂದು ಉಳಿವೆಪ್ಪ ಪ್ರಶ್ನಿಸಿದಾಗ ಸುಚರಿತರಾಯ ನೇರವಾದ ಉತ್ತರವೀಯದೆ,

" ಸಂಬಂಧ ಅಂದಿರಾ? ಸಂಬಂಧ ಅಂಥಾದ್ದೇನೂ ಇಲ್ಲರೀ. ಅವಳು ನಮ್ಮಲ್ಲಿ ಕೆಲಸಗಿತ್ತಿಯಾಗಿದಾಳೆ," ಎಂದು ಮಾತ್ರ ಹೇಳಿದ್ದ.

ಅಂಥ ಉತ್ತರದಿಂದ ಸಮಾಧಾನಪಟ್ಟುಕೊಳ್ಳುವಷ್ಟು ಮೂಢನೇನೂ ಆಗಿರಲಿಲ್ಲ ಉಳಿವೆಪ್ಪ. ಆತ ಮತ್ತೆ ಹೇಳಿದ್ದ:

" ಕೆಲಸಗಿತ್ತಿ ಅನ್ನೂದನ್ನ ನಂಬೂದಾದ್ರೂ ಹ್ಯಾಗ್ರೀ? ಮಹಾರಾಣಿಯ ಹಾಗೆ ಕಾಣ್ತಾಳೆ ನೋಡಲಿಕ್ಕೆ! ಅವಳ ಠೀವಿ ನೋಡಿದರೆ ಅವಳು ಸಾಧಾರಣ ಹೆಣ್ಣು ಅಲ್ಲ ಅಂತಲೇ ಯಾರಾದರೂ ಹೇಳಬಹುದು."

" ವಾಸಂತಿ ಬಲು ಘಾಟೀ ಹುಡುಗಿ ಅನ್ನೂದೇನೊ ನಿಜ. ಅವಳು

ಸಿನಿಮಾಕ್ಕೆ ಸೇರಿಕೊಂಡಿದ್ದರೆ ಒಳ್ಳೇ ನಟಿಯಾಗಬಹುದಿತ್ತು."

"ಅದನ್ನೇ ನಾನು ಹೇಳೂದು. ಇವಳು ನಟಿಯೇ ಇರಬೇಕು. ಕೆಲಸ ಗಿತ್ತಿಯ ಸೋಗು ಹಾಕಿರಬೇಕು ಯಾವುದೋ ಕಾರಣಕ್ಕೆ. ಅದೇನು ಹೇಳುತ್ತೀರೋ ಇಲ್ಲೋ?"

"ಅಂಥಾ ಕಾರಣವೇನೂ ಇಲ್ಲ. ಆದರೆ ಅವಳು ಕುಬೇರಪ್ಪನವರಿಗೆ ಮೀಸಲಾದ ಹೆಣ್ಣು."

"ಅಂದರೆ? ಅವರೇ ಅವಳನ್ನ ತಂದು ನಿಮ್ಮಲ್ಲಿ ಇಟ್ಟದ್ದಾರೋ ಹ್ಯಾಗೆ?"

"ಹಾಗೇನೂ ಇಲ್ಲ. ನಾವೇ ಅವಳನ್ನ ಕರಕೊಂಡು ಬಂದದ್ದು. ಕುಬೇರಪ್ಪನವರಿಗೆ ಅವಳ ಮೇಲೆ ಮನಸ್ಸಾಯಿತು. ಅವಳಿಗೂ ಅವರ ಮೇಲೆ ಮನಸ್ಸಾಯಿತು. ಅದಕ್ಕೆ ನಾನ್ಯಾಕೆ ಅಡ್ಡಿಯಾಗಬೇಕು ಹೇಳಿರಿ."

"ಛೆ. ಛೆ. ಅದನ್ನೆಲ್ಲಾ ನಾನು ನಂಬೂದಿಲ್ಲ. ಆ ಡೊಳ್ಳುಹೊಟ್ಟೆಯವನ ಮೇಲೆ ಅವಳಿಗೆ ಹ್ಯಾಗೆ ಮನಸಾದೀತು? ಇದೆಲ್ಲಾ ಸುಳ್ಳು. ಅವನು ನೂರು ರೂಪಾಯಿ ಕೊಟ್ಟರೆ ನಾನು ಇನ್ನೂರು ಕೊಡ್ತೇನಿ. ಏನಾದರೂ ಮಾಡಿ ವಾಸಂತಿಯನ್ನ ನನಗೆ ಕೊಡಿಸಿರಿ ರಾಯರೇ!" ಎಂದು ಬೇಡಿಕೊಂಡಿದ್ದ ಉಳಿವೆಪ್ಪ.

"ಅವಳು ಕುಬೇರಪ್ಪನವರ ಮಾಲು. ಅವರಿಗೆ ಗೊತ್ತಾದರೆ ಕೆಂಡ ಕೆಂಡ ಆದಾರು. ಅವಳ ಆಸೆಯನ್ನ ಬಿಟ್ಟು ಬಿಡಿರಿ ಅಣ್ಣನವರೆ."

"ಛೆ. ಛೆ. ಅದೆಲ್ಲಾ ಆಗೂದಿಲ್ಲ. ಏನಾದರೂ ಮಾಡಿ ಈ ಕೆಲಸ ಸಾಧಿಸಿಕೊಡಿರಿ," ಎಂದು ಒತ್ತಾಯ ಪಡಿಸಿದ್ದ ಉಳಿವೆಪ್ಪ.

ಆ ಮಾತು ನಡೆದುದು ಹಲವು ತಿಂಗಳುಗಳ ಹಿಂದೆ. ಸುಚರಿತರಾಯನೂ, ಸುಲಲಿತದೇವಿಯೂ ಆ ವಿಚಾರವಾಗಿ ಅನೇಕ ಬಾರಿ ಚರ್ಚಿಸಿದ್ದರಾದರೂ ಯಾವುದೊಂದು ನಿರ್ಣಯಕ್ಕೆ ಬರಲು ಸಮರ್ಥರಾಗಿರಲಿಲ್ಲ. ವಾಸಂತಿಯೊಡನೆ ಸಂಬಂಧ ಬೆಳಸುವ ಮೊದಲು, ಅವಳು ಇನ್ನಾರೊಡನೆಯೂ ರಹಸ್ಯ ಸಂಬಂಧ ಇಟ್ಟುಕೊಳ್ಳಕೂಡದೆಂದು ಕಟ್ಟುನಿಟ್ಟಿನ ಕರಾರು ಹಾಕಿದ್ದ ಕುಬೇರಪ್ಪ—ಅವಳಿಗಾಗಿ ಪ್ರತಿತಿಂಗಳೂ ಐದುನೂರು ರೂಪಾಯಿ ಕೊಡಲು ಒಪ್ಪಿಕೊಂಡ. ಅದರಲ್ಲಿ ಅರ್ಧ ಹಣವನ್ನು ತಾನಿಟ್ಟುಕೊಂಡು ಇನ್ನರ್ಧವನ್ನು ವಾಸಂತಿಗೆ

ಕೊಡುತ್ತಿದ್ದಳು ಸುಲಲಿತದೇವಿ.

"ಉಳಿವೆಪ್ಪನವರ ಹುಚ್ಚು ನೋಡಿದರೆ ಅವರು ತಿಂಗಳಿಗೆ ಸಾವಿರ ಕೊಡೂದಕ್ಕೂ ತಯಾರಾಗಬಹುದು ಅಂತನಿಸ್ತದ," ಎಂದಿದ್ದ ಸುಚರಿತರಾಯ.

"ಕೊಡಬಹುದು—ಲಕ್ಷಾಂತರ ರೂಪಾಯಿ ಗಳಿಸುವವರಿಗೆ ಸಾವಿರದ ಲಕ್ಷ್ಯವೇನು? ಆದರೆ, ಕುಬೇರಪ್ಪನವರಿಗೆ ಅದು ಗೊತ್ತಾದರೆ ನಾವು ಅವರ ಸ್ನೇಹವನ್ನೇ ಕಳಕೊಂಡು ಕೂಡಬೇಕಾದೀತು. ವಾಸಂತಿಗಾಗಿ ಅವರಿಬ್ಬರಿಗೂ ಜಗಳ ಬರೂದೂ ಚೆಲೋದಲ್ಲ," ಎಂದಿದ್ದಳು ಸುಲಲಿತದೇವಿ.

"ಅದೆಲ್ಲಾ ಸರಿಯೆ. ಆದರೆ ಉಳಿವೆಪ್ಪ ಹಟವನ್ನೇ ಹಿಡಿದುಬಿಟ್ಟಾರಲ್ಲ, ಅವರನ್ನ ಹ್ಯಾಗೆ ಸಮಾಧಾನಪಡಿಸೂದು?"

"ವಾಸಂತಿಗಿಂತ ಉತ್ತಮ ತರದ ಮಾಲು ಕೊಡಿಸ್ತೇವಿ ಅಂತ ಹೇಳಿ ಮೂಗಿಗೆ ಬೆಣ್ಣೆ ಹಚ್ಚಿ ಕೂಡ್ರಿಸಿ ಬಿಡಿರಲ್ಲ!"

"ಹೇಳಬಹುದು. ಆದರೆ ವಚನಕೊಟ್ಟ ಪ್ರಕಾರ ತಂದುಕೊಡ ಬೇಕಾಗ್ತದಲ್ಲ?"

"ಅದೆಲ್ಲಾ ನನಗಿರಲಿ. ಅಂಥಾದ್ದೊಂದು ಹಕ್ಕಿಯನ್ನ ನಾನೂ ಹುಡುಕು ತ್ತಲೇ ಇದೀನಿ. ಮಹಿಳಾಮಂಡಲದಲ್ಲಿ ಯಾರಾದರೂ ಸಿಗಬಹುದು. ನೋಡೂಣು."

"ಏನೋ. ಮಹಿಳಾಮಂಡಲದ ಬಗ್ಗೆ ನನಗೇನೂ ಭರವಸೆಯಿಲ್ಲ. ಅವರೆಲ್ಲಾ ಬಹಳ ಘಾಟೀ ಇಸಮುಗಳು. ನಮ್ಮನ್ನ ನಂಬಿಯಾರು ಅಂತ ಹೇಳಲಿಕ್ಕೆ ಬರೂದಿಲ್ಲ."

ಮಹಿಳಾಮಂಡಲದವರು ಸುಲಲಿತದೇವಿಯನ್ನು ನಂಬಿರಲಿಲ್ಲ. ಅಲ್ಲಿ ನಿರಾಸೆಗೊಂಡ ಸುಲಲಿತದೇವಿ ತನ್ನ ಹದ್ದಿನ ದೃಷ್ಟಿಯನ್ನು ಬೇರೆಡೆಗೆ ತಿರುಗಿಸಿದಾಗ ಮರುಳಯ್ಯ ಕಾಣಿಸಿದ್ದ. ಈ ಮಿಕ ಅತ್ಯಂತ ಸುಲಭವಾಗಿ ತಮ್ಮ ಬಲೆಗೆ ಬೀಳಬಹುದೆಂದು ಭಾವಿಸಿದ ಸುಲಲಿತದೇವಿ ಅಂದಿನಿಂದ ತನ್ನ ಪ್ರಯತ್ನ ವನ್ನು ಬಿರುಸಾಗಿ ಸಾಗಿಸಿದ್ದಳು.

"ಶರಣಪ್ಪನವರ ಹಾಗೇ ಇವನೂ ಒಬ್ಬ ಹುಚ್ಚ. ಎಷ್ಟೋ ದಿನಗಳಿಂದ ಹೆಂಡತಿಯ ಸಂಗಡ ಸಂಬಂಧವಿಲ್ಲವಂತೆ. ಅವರಿಬ್ಬರನ್ನೂ ವಿಶ್ವಾಸದಲ್ಲಿ ತೆಗೆದು ಕೊಂಡರೆ ಉಳಿವೆಪ್ಪನವರ ಕೆಲಸ ಸಾಧಿಸಿದ ಹಾಗೇ," ಎಂದಿದ್ದಳು ಸುಲಲಿತ

ದೇವಿ.

"ಮರುಳಯ್ಯನೇನೋ ಚೆಪ್ಪನಿರಬಹುದು. ಅವನ ಹೆಂಡತಿಯೂ ಅಂಥಾಕೆಯೇ ಅಂತ ಹ್ಯಾಗೆ ಹೇಳಬೇಕು? ಅವಳ ಸ್ವಭಾವ ಹ್ಯಾಗಿದೆಯೋ ಏನೋ," ಎಂದಿದ್ದ ಸುಚರಿತರಾಯ.

"ಇಂದಿನ ಹೆಂಗಸರ ಸಂಗತಿ ನನಗಿಂತ ಹೆಚ್ಚು ನಿಮಗೆ ಗೊತ್ತದೇನು? ಗಂಡನ ಸಹವಾಸ ತಪ್ಪಿದ್ದರಂತೂ ಹೇಳೂದೇ ಬೇಕಾಗಿಲ್ಲ. ತಾವಾಗೇ ಬೇರೇನಾದರೂ ಹಾದಿ ಹುಡುಕುತ್ತಿರ್ತಾರೆ," ಎಂದಿದ್ದಳು ಸುಲಲಿತದೇವಿ.

ಅದು ವಾರವೊಂದರ ಹಿಂದೆ ನಡೆದ ಮಾತು.

ಇಂದು ಕಮಲ ಅವರ ಮನೆಗೆ ಬಂದುದಂತೂ ಆಗಿತ್ತು.

ಉಳಿವೆಪ್ಪ ಅವಳನ್ನು ಕಂಡೊಡನೆ ವಾಸಂತಿಯ ಹವ್ಯಾಸ ಬಿಟ್ಟು ಕಮಲಳನ್ನೇ ದೊರಕಿಸುವುದೆಂದು ಯೋಚಿಸತೊಡಗಿದ್ದ.

ಆದರೆ, ಕುಬೇರಪ್ಪನ ಮನಸ್ಸೂ ಕೂಡಾ ವಾಸಂತಿಯನ್ನು ಮರೆತು ಕಮಲಳತ್ತ ಧಾವಿಸತೊಡಗಿತ್ತು.

ಹೆಣ್ಣಿನ ಹುಚ್ಚೆಂದರೆ ಹೀಗೆಯೆ. ಎಷ್ಟು ಹೆಣ್ಣು ಸಿಕ್ಕರೂ ತೃಪ್ತಿಯೆನಿಸುವುದಿಲ್ಲ ಕಾಮುಕರಿಗೆ. ಹೊಸ ಹೊಸ ಹೆಣ್ಣುಗಳನ್ನು ಅವರು ಹುಡುಕುತ್ತಲೇ ಇರುತ್ತಾರೆ; ಹೊಸ ಹೆಣ್ಣು ಸಿಕ್ಕುತ್ತಲೂ ಹಳೆಯ ಹೆಣ್ಣನ್ನು ದೂರಗೊಳಿಸುತ್ತಾರೆ. ಕುಬೇರಪ್ಪನದಂತೂ ಚಿಕ್ಕ ವಯಸ್ಸಿನಿಂದಲೂ ಇದೇ ಅಭ್ಯಾಸ. ತಂದೆಯ ಏಕಮಾತ್ರ ಪುತ್ರನಾಗಿ ಹುಟ್ಟಬಂದಿದ್ದ ಭಾಗ್ಯಶಾಲಿ ಆತ. ಅವನ ಹದಿನಾರನೆಯ ವಯಸ್ಸಿನಲ್ಲಿಯೆ ತಂದೆಯೂ ತೀರಿಕೊಂಡುದುದರಿಂದ ಅಪಾರ ಆಸ್ತಿಗೆಲ್ಲ ಇವನೇ ಒಡೆಯನಾಗುವಂತಾಗಿತ್ತು. ಇವನು ಕೊಂಚವೂ ಕಷ್ಟ ಪಡದೆ ಸುಮ್ಮನೆ ಮನೆಯಲ್ಲಿ ಬಿದ್ದುಕೊಂಡಿದ್ದರೂ ಸಾವಿರಾರು ರೂಪಾಯಿ ತಾನಾಗಿಯೆ ಬಂದು ಬೀಳುತ್ತಿತ್ತು. ಅದನ್ನೆಲ್ಲಾ ಕೂಡಿಡುವುದೆಂದರೆ ಕುಬೇರಪ್ಪನಿಗೆ ಬೇಸರ. ಐವತ್ತು ಸಾವಿರ ಕೈಗೆ ಬಂದರೆ ಇಪ್ಪತ್ತು ಸಾವಿರವನ್ನು ಬ್ಯಾಂಕಿಗೆ ಕಟ್ಟಿ ಮೂವತ್ತು ಸಾವಿರವನ್ನು ಖರ್ಚು ಮಾಡತೊಡಗಿದ. ಅಷ್ಟೊಂದು ಹಣ ಖರ್ಚಾಗುವುದಕ್ಕೂ ಹಾದಿ ಬೇಡವೆ? ಸರಿ. ಅವನ ಹಣದ ಮೇಲೆ ಕಣ್ಣಿರಿಸಿಕೊಂಡಿದ್ದ ಗೆಳೆಯರು ಹಾದಿಗಳನ್ನು ಹುಡುಕಿಕೊಟ್ಟರು. ಒಂದೆರಡು ವರ್ಷಗಳ ಅವಧಿಯಲ್ಲಿ ಓರೆಕೋರೆ ಜಿಲ್ಲೆಯಲ್ಲೆಲ್ಲ ರಸಿಕಶಿಖಾಮಣಿ

ಯೆಂಬ ಹೆಸರಾಯಿತು ಕುಬೇರಪ್ಪನಿಗೆ. ಹೊಸ ಹೊಸ ಹೆಣ್ಣುಗಳನ್ನು ಹುಡುಕುತ್ತಾ ಅವನ ಮೋಟರು ನಗರಗಳ ಗಲ್ಲಿಗಳನ್ನು ಸುತ್ತತೊಡಗಿತು. ಸುಚರಿತರಾಯನಂಥ 'ಸುಸಂಸ್ಕೃತ' ಮತ್ತು 'ಉಚ್ಚವರ್ಗ'ದ ಸ್ನೇಹಿತರು ಉಚ್ಚ ತರಗತಿಯ 'ಮಾಲು' ಕೊಡಿಸಲು ನೆರವಾದರು. ಆತ ಖಾದಿ ಧರಿಸಿ ಕಾಂಗ್ರೆಸ್ಸಿಗನಾದುದರಿಂದ ದೇಶಸೇವಕಿಯರನೇಕರ ಸಹವಾಸ ಯೋಗವೂ ಲಭಿಸಿತು. ದೇಶಸೇವೆಗಾಗಿಯೆ ಆಯುಷ್ಯ ಮೀಸಲಾಗಿರಿಸಿ ದಾರಿದ್ರ್ಯದಲ್ಲಿ ದಿನಗಳೆಯುತ್ತಿದ್ದ ದೇಶಭಕ್ತರನೇಕರಿಗೆ ಆರ್ಥಿಕ ಸಹಾಯವೊದಗಿಸಿ ಅವರ ಹೆಂಡಿರನ್ನೂ ಉಪಭೋಗಿಸಿದುದಾಯಿತು. ವರ್ಷಗಳು ಕಳೆದ ಹಾಗೆ, ವಯಸ್ಸು ಹೆಚ್ಚಿದ ಹಾಗೆ ಆ ದಾಹವೂ ಹೆಚ್ಚುತ್ತ ಹೋಯಿತೇ ವಿನಾ ಕಡಮೆ ಯಾಗಲಿಲ್ಲ. ಸುಲಲಿತದೇವಿಯ ಸಹಾಯದಿಂದ ವಾಸಂತಿಯನ್ನು ದೊರಕಿಸಿದು ದಾಗಿತ್ತು. ಇನ್ನು ಕಮಲ........

ಸುಲಲಿತದೇವಿಗೆ ಉಭಯಸಂಕಟಕ್ಕಿಟ್ಟುಕೊಂಡಿತ್ತು. ಉಳಿವೆಪ್ಪನಿಗೂ ಕಮಲ ಬೇಕು, ಕುಬೇರಪ್ಪನಿಗೂ ಬೇಕು. ತನ್ನ ಊರಿನಲ್ಲಿ ಆಶ್ರಮ ಸ್ಥಾಪಿಸುವ ಹಂಚಿಕೆ ಹೂಡಿ ಕಮಲಳನ್ನು ತನ್ನವಳನ್ನಾಗಿ ಮಾಡಿಕೊಳ್ಳುವ ಕನಸನ್ನೂ ಈಗಾಗಲೇ ಕಾಣತೊಡಗಿದ್ದ ಕುಬೇರಪ್ಪ. ಹೀಗೆ, ಉಪಾಯಾಂತರ ಗಳಿಂದ ಕಾರ್ಯ ಸಾಧಿಸುವ ಜಾಣ್ಮೆ ಉಳಿವೆಪ್ಪನಿಗಿಲ್ಲ. ಹೆಣ್ಣುಗಳನ್ನು ದೊರಕಿಸಲು ಬುದ್ಧಿವಂತಿಕೆಯ ಅಗತ್ಯವೇನೂ ಇಲ್ಲವೆಂದೇ ಆತ ತಿಳಿದ ಹಾಗಿದೆ. ಹಣವೊಂದಿದ್ದರೆ ಏನೆಲ್ಲವನ್ನೂ ಸಾಧಿಸಬಹುದೆಂದು ಆತ ಭಾವಿಸಿದ ಹಾಗಿದೆ. ವಾಸಂತಿಯಂಥ ಹುಡುಗಿಯರೇನೋ ಕೇವಲ ಹಣದ ಗಾಳಕ್ಕೆ ಸಿಕ್ಕಿಬೀಳ ಬಹುದು. ಕಮಲಳಂಥವರನ್ನು ಪಳಗಿಸಲು ಬಹಳ ಧೂರ್ತತನ ಬೇಕು. ಇವಳ ಸ್ವಭಾವವೆಂಥದೆಂಬುದನ್ನು ತಿಳಿದುಕೊಳ್ಳುವುದಕ್ಕೇ ಒಂದೆರಡು ವಾರ ಹಿಡಿಯಬಹುದು. ಇಲ್ಲಿಗೆ ಬಂದಂದಿನಿಂದ ಇವಳು ತುಟಿಯನ್ನೂ ತೆರೆಯಲಿಲ್ಲ, ಒಂದು ಮಾತನ್ನೂ ಆಡಲಿಲ್ಲ. ಇವಳೆಂಥ ಘಾಟೀ ಹೆಣ್ಣು ಎನ್ನುವುದಕ್ಕೆ ಇಷ್ಟು ನಿದರ್ಶನ ಸಾಕು. ನಿಜಕ್ಕೂ ಇವಳ ಚಾರಿತ್ರ್ಯ ಎಂಥದಿರಬಹುದು? ಗಂಡ ಮರುಳಯ್ಯನಿದ್ದರೂ, ಅವನಿಂದ ಶಾರೀರಕ ಸುಖ ಲಭಿಸದಿದ್ದರೂ ಇವಳು ಪೂರ್ವಕಾಲದ ಪತಿವ್ರತೆಯರಂತೆ ತನ್ನ ಶೀಲ ಕಾದುಕೊಂಡಿರಬಹುದೇ? ಇಲ್ಲವೆ, ಗಂಡನಿಗೆ ಗೊತ್ತಾಗದಂತೆ ಯಾರನ್ನಾದರೂ ಮಡಗಿಕೊಂಡಿರಬಹುದೇ?

ಇದನ್ನೆಲ್ಲ ಗೊತ್ತುಮಾಡಿಕೊಳ್ಳಬೇಕಾದರೆ ಇವಳೊಡನೆ ಹೆಚ್ಚಿನ ಸಲಿಗೆ ಬೆಳೆಸಬೇಕಾದುದು ಅತ್ಯಗತ್ಯ. ಇವಳನ್ನು ಮತ್ತೆ ಮತ್ತೆ ಊಟಕ್ಕೆ, ಉಪಾಹಾರಕ್ಕೆ ಕರೆಯಬೇಕು, ತನ್ನನ್ನೂ ಅವಳು ಕರೆಯುವಂತೆ ಮಾಡಬೇಕು. ಒಂದೆರಡು ವಾರ ಅವಳ ಮನೆಗೆ ಹೋಗಿ ಬಂದು ಮಾಡಿದರೆ ಅವಳ ಗುಟ್ಟುಗಳೆಲ್ಲವನ್ನೂ ಗೊತ್ತುಮಾಡಿಕೊಳ್ಳಲು ಸಾಧ್ಯವಾಗಬಹುದು. ಕಾಯಿ ಹಣ್ಣಾದ ಬಳಿಕ ತಾನೇ ಅದನ್ನು ಮಾರುವ ವಿಚಾರ? ಮುಂದೆ ಕುಬೇರಪ್ಪನ ಅದೃಷ್ಟವಿದ್ದರೆ ಅವನಿಗೆ, ಇಲ್ಲದಿದ್ದರೆ ಉಳಿವೆಪ್ಪನಿಗೆ. ಈಗಲೇ ಆ ಬಗೆಗೆ ಚಿಂತಿಸುವುದು ವ್ಯರ್ಥ........

ಹಾಗೆ ಯೋಚಿಸುತ್ತಾ ಸುಲಲಿತದೇವಿ ಸೋಫಾದಿಂದೆದ್ದು,

" ಊಟಕ್ಕೆ ವೇಳೆಯಾಯ್ತು. ಏಳೋಣವೇ ? " ಎಂದಳು.

" ನಾವು ಹೊರಡುತೀವಿ," ಎನ್ನುತ್ತಾ ವಸುಮತೀಬಾಯಿಯೂ ಎದ್ದುಬಿಟ್ಟಳು. ವಿರುಪಣ್ಣ, ಉಳಿವೆಪ್ಪ, ನಾಗೇಂದ್ರಪ್ಪನವರೂ ಹೊರಟರು.

" ಊಟ ಮುಗಿಸಿಕೊಂಡೇ ಹೋಗಿರಿ ಎಲ್ಲರೂ," ಎಂದು ಔಪಚಾರಿಕವಾಗಿ ಹೇಳಿದಳು ಸುಲಲಿತದೇವಿ.

" ಏನೂ ಬೇಡ. ನಾವು ಹೊರಡುತೀವಿ," ಎಂದು ಅವರೂ ಔಪಚಾರಿಕವಾಗಿಯೇ ಹೇಳಿದರು.

" ಹಾಗಾದರೆ ಮುಂದಿನ ವಾರ........"

" ರೈಟೋ ! " ಎಂದ ನಾಗೇಂದ್ರಪ್ಪ.

ವಿರುಪಣ್ಣ—ವಸುಮತೀಬಾಯಿಯವರ ಕಾರೂ, ನಾಗೇಂದ್ರಪ್ಪನ ಕಾರೂ ಹೊರಟುಹೋದ ಮೇಲೂ ಉಳಿವೆಪ್ಪನ ಕಾರು ಹೊರಡಲಿಲ್ಲ. ತನ್ನನ್ನು ಬೀಳ್ಕೊಡಲು ಕೆಳಗೆ ಬಂದಿದ್ದ ಸುಚರಿತರಾಯನನ್ನು ಕಾರಿನೊಳಗೆ ಬರಮಾಡಿಕೊಂಡು ಮೆಲ್ಲಗಿನ ಧ್ವನಿಯಲ್ಲಿ ಕೇಳಿದ ಉಳಿವೆಪ್ಪ:

" ಹೊಸಾ ಮಾಲು ಬಂದದಲ್ಲಾ, ಅದನ್ನ ನನಗಾಗಿ ರಿಜರ್ವ್ ಮಾಡಲಿಕ್ಕಾಗಲಿಲ್ಲೇನು ? "

ಸುಚರಿತರಾಯ ಒಂದು ಕ್ಷಣ ತಲೆ ಕೆರೆದುಕೊಳ್ಳುತ್ತಿದ್ದು ಅನಂತರ ಹೇಳಿದ :

" ನೋಡೂಣು ಅಣ್ಣನವರೆ, ಪ್ರಯತ್ನ ಮಾಡೂಣು."

ತನ್ನ ಕೋಟಿನ ಕಿಸೆಯಿಂದ ನೂರು ರೂಪಾಯಿಗಳದೊಂದು ನೋಟು ತೆಗೆದು ಸುಚರಿತರಾಯನ ಕೈಗಿಡುತ್ತಾ ಹೇಳಿದ ಉಳಿವೆಪ್ಪ:

"ಆದಷ್ಟು ಬೇಗ ಕೆಲಸ ಸಾಧಿಸಿಕೊಡಬೇಕು ರಾಯರೆ. ಸಾವಿರ ರೂಪಾಯಿ ಹೋದರೂ ಚಿಂತಿಲ್ಲ." ಅಷ್ಟು ಹೇಳಿ ಧ್ವನಿಯನ್ನು ಇನ್ನಷ್ಟು ತಗ್ಗಿಸಿ ಆತನೆಂದ: "ಆಶ್ರಮ ಗೀಶ್ರಮ ಅಂತ ಸೋಗು ಹಾಕಿ ಆ ಕುಬೇರ ಅವಳನ್ನ ಹೊಡಕೊಂಡು ಬಿಡುವ ಹಂಚಿಕೆ ಹಾಕಿದ್ದಾನೆ ಹೌದಲ್ಲೋ? ಆ ಹುಡುಗಿ ಅವನ ಕೈಗೆ ಸಿಗದಂತೆ ಮಾಡಬೇಕು. ಎಷ್ಟು ರೊಕ್ಕ ಖರ್ಚಾದರೂ ಚಿಂತಿಲ್ಲ."

"ನೋಡೂಣು ಅಣ್ಣಾನವರೆ, ಪ್ರಯತ್ನ ಮಾಡೂಣು," ಎಂಬ ತನ್ನ ಮೊದಲಿನ ಮಾತನ್ನೇ ಮತ್ತೆ ಉಚ್ಚರಿಸಿ ಕಾರಿನಿಂದಿಳಿದ ಸುಚರಿತರಾಯ.

ಕಾರು ಹೊರಟಿತು.

ಕಮಲಳನ್ನು ತನ್ನ ತೋಳುಗಳಲ್ಲಿ ಹಿಡಿದುಕೊಳ್ಳುವ ಸಮಯದ ಕನಸು ಕಾಣುತ್ತಾ ಕಾರಿನ ದಿಂಬಿಗೊರಗಿ ಗೊರಕೆ ಹೊಡೆಯತೊಡಗಿದ ಉಳಿವೆಪ್ಪ.

ಅವನಿಗಿಂತ ಮೊದಲೇ ಗೊಬ್ಬೂರಿಗೆ ಹೊರಟಿದ್ದ ವಿರುಪಣ್ಣ ಮತ್ತು ವಸುಮತೀಬಾಯಿ ಕಾರಿನ ಹಿಂಭಾಗದಲ್ಲಿ ಸುಖವಾಗಿ ಒರಗಿ ಕುಳಿತು ಕಮಲಳ ವಿಚಾರವಾಗಿಯೆ ಮಾತನಾಡುತ್ತಿದ್ದರು.

"ಈ ಹುಡುಗಿಯನ್ನೂ ಬಲೆಗೆ ಹಾಕಿಕೊಳ್ಳಬೇಕೆಂತ ಹೊಂಚು ಹಾಕಿರ ಬೇಕು ಕುಬೇರಪ್ಪ. ಹೌದೋ ಅಲ್ಲವೋ?" ಎಂದು ಕೇಳಿದಳು ವಸುಮತೀ ಬಾಯಿ.

ವಿರುಪಣ್ಣ ಯಾವಾಗಲೂ ಸಾವಧಾನದಿಂದ ಮಾತನಾಡುವವನು. ಯಾವುದೊಂದು ವಿಷಯದ ಕುರಿತು ಅಭಿಪ್ರಾಯ ವ್ಯಕ್ತಗೊಳಿಸುವ ಮೊದಲು ನೂರು ಸಲ ವಿಚಾರ ಮಾಡಿ ಬಹಳ ಎಚ್ಚರಿಕೆಯಿಂದ, ಸಂದಿಗ್ಧವಾಗಿ ಮಾತ ನಾಡುವವನು. "ಹೌದು" ಅಥವಾ "ಇಲ್ಲ" ಎಂದು ಖಂಡಿತವಾಗಿ ಅವನೆಂದೂ ಹೇಳುತ್ತಿರಲಿಲ್ಲ. ಇಪ್ಪತ್ತೈದು ವರ್ಷಗಳ ಕಾಲ ರಾಜಕೀಯದ ಗರಡಿಯಲ್ಲಿ ಸಾಧನೆ ಮಾಡಿದುದರ ಫಲವಾಗಿ ಆತನಿಗೆ ಲಭಿಸಿದ್ದ ಚಾಣಾಕ್ಷತನ ವದು. ಗೆಳೆಯರನ್ನೂ, ಹಿತೈಷಿಗಳನ್ನೂ ಕುರಿತು ಮಾತನಾಡುವ ಸಂದರ್ಭ ಬಂದಾಗಲಂತೂ ಆತ ಇನ್ನೂ ವಿಶೇಷವಾದ ಜಾಗರೂಕತೆ ವಹಿಸಿ, ಅಲ್ಲದ

ಮಾತು ಹೊರಬೀಳದಂತೆ ನೋಡಿಕೊಳ್ಳುತ್ತಿದ್ದ. ಎಂತಲೇ, ವಸುಮತೀ ಬಾಯಿ ಕುಬೇರಪ್ಪನ ಮಾತೆತ್ತಿದಾಗ ವಿರುಪಣ್ಣ ಒಡನೆಯೇ ಉತ್ತರವೀಯದೆ, ಒಂದು ನಿಮಿಷ ಯೋಚಿಸುತ್ತಿದ್ದು ಅನಂತರ ಹೇಳಿದ :

"ಅಂಥಾ ವಿಚಾರ ಏನೂ ಇರಲಿಕ್ಕಿಲ್ಲ ಕುಬೇರಪ್ಪನವರಿಗೆ."

"ಸರಿ. ನೀವೂ ಅವರನ್ನ ಉಳಿಸಲಿಕ್ಕೆ ಹೊರಟಿರಿ. ಇಬ್ಬರೂ ರಾಜ ಕಾರಣಿಗಳು. ಸ್ನೇಹಿತರು. ಒಬ್ಬರು ಇನ್ನೊಬ್ಬರನ್ನ ಕಾದುಕೊಂಡಿರುವದೂ ಅವಶ್ಯ, ಅಲ್ಲವೇನು ?"

"ರಾಜಕಾರಣಕ್ಕೂ ಇದಕ್ಕೂ ಏನು ಸಂಬಂಧ ವಸುಮತೀ? ಇದು ಅವರವರ ವೈಯಕ್ತಿಕ ವಿಷಯ. ನನ್ನ ವೈಯಕ್ತಿಕ ವಿಷಯಗಳಲ್ಲಿ ಕುಬೇರಪ್ಪ ನವರು ಕೈ ಹಾಕುವದಿಲ್ಲ. ಅವರ ವಿಷಯಗಳಲ್ಲಿ ನಾನು ಕೈ ಹಾಕುವದಿಲ್ಲ."

"ಅಂದರೆ—ಅವರು ತಮಗೆ ತಿಳಿದದ್ದು ಮಾಡಿಕೊಳ್ಳಲಿ, ನಿಮಗೆ ತಿಳಿದದ್ದು ನೀವು ಮಾಡಿಕೊಳ್ಳಬಹುದು ಅಂತ ಅಲ್ಲವೇನು ?"

"ಖಾಸಗೀ ವಿಷಯ ಅಂದರೆ ಹೀಗಿರೂದೇ ಚಲೋದು, ಈಗ, ನಿಮ್ಮ ವಿಷಯ ಬೇರೆ ಯಾರಾದರೂ ಮಾತಾಡಿದ್ದು ಗೊತ್ತಾದರೆ ನೀವು ಸಹಿಸ್ತೀರಾ ?"

"ನನ್ನ ಮಾತು ಬೇರೆ ಆಯ್ತು. ನನಗಂತೂ ಮದುವೆಯಿಲ್ಲ, ಸಂಸಾರ ವಿಲ್ಲ. ಆದರೆ ಆ ಕಮಲ........"

"ಅವಳಿಗೆ ಮದುವೆಯಾಗಿ ಸಂಸಾರ ನಡದದ. ನಿಜ. ಆದರೇನಾಯ್ತು? ನನಗೆ ಮದುವೆಯಾಗಿಲ್ಲೇನು ? ಸುಲಲಿತದೇವಿಗೆ, ನಾಗೇಂದ್ರಪ್ಪನವರಿಗೆ, ಉಳಿವೆಪ್ಪನವರಿಗೆ ಮದುವೆಯಾಗಿಲ್ಲೇನು ?"

ವಸುಮತೀಬಾಯಿ ನಿರುತ್ತರಳಾದರೂ ತಾನು ಸೋತು ಹೋದುದನ್ನು ಒಪ್ಪಿಕೊಳ್ಳಲಿಷ್ಟವಿಲ್ಲದೆ, ಕಮಲಳ ಮಾತನ್ನ ಬಿಟ್ಟು,

"ಇನ್ನು ಮುಂದೆ ಆ ಯೋಗಮಂಡಲದ ಸಭೆಗೆ ಹೋಗುವದರಲ್ಲಿ ಅರ್ಥ ವಿಲ್ಲ ಅಂತಲೇ ನನಗನಿಸ್ತದ," ಎಂದಳು.

"ಯಾಕೆ ?"

"ಯೋಗಮಂಡಲ ಅಂದರೇನು, ಎಂಥಾದ್ದು, ಅಲ್ಲಿ ನಡೆಯೂದು ಏನು ಅನ್ನುವದೆಲ್ಲಾ ಗೊತ್ತಾಗಿ ಹೋಯ್ತಲ್ಲ? ಮಜಾ ಮಾಡಲಿಕ್ಕೆ ಯೋಗಮಂಡಲದ ಸೋಗು ಯಾಕೆ ಬೇಕು? ನನಗಂತೂ ಇಂಥ ಡಾಂಭಿಕತನ ಸೇರುವದಿಲ್ಲ.

ಮಾಡುವದನ್ನ ಮುಚ್ಚುಮರೆ ಇಲ್ಲದೆ ಮಾಡಬೇಕು."

"ನಮಗೂ ನಿಮಗೂ ಭಿನ್ನಾಭಿಪ್ರಾಯ ಬರೂದು ಇಲ್ಲೇ. ನಿಮ್ಮ ಹಾಗೆ ಸೆಂಟ್ ಪರ್‌ಸೆಂಟ್ ಪ್ರಾಮಾಣಿಕರಾಗಿರುವವರು ಎಷ್ಟು ಮಂದಿಯಿದಾರೆ ಈ ಪ್ರಪಂಚದಲ್ಲಿ? ಎಲ್ಲೋ ಲಕ್ಷಕ್ಕೊಬ್ಬರು, ಕೋಟಿಗೊಬ್ಬರು. ಉಳಿದವರೆಲ್ಲಾ ನಮ್ಮ ಹಾಗೇ ಸಾಮಾನ್ಯ ಜನರು. ನಿಮ್ಮ ಹಾಗೆ ಪ್ರತ್ಯಕ್ಷವಾಗಿ ಮಾಡುವಷ್ಟು ಧೈರ್ಯ ಎಲ್ಲರಿಗೂ ಇರುವದಿಲ್ಲ. ಅದಕ್ಕೆ ಕಾರಣಗಳೂ ಇರ್ತಾವೆ........"

"ಏನು ಕಾರಣಗಳೊ. ಎಲ್ಲಿ ನೋಡಿದರೂ ಬರೀ ಡಾಂಭಿಕತನ. ರಾಜಕಾರಣಿಗಳು, ಮುಂದಾಳುಗಳು, ಶಿಕ್ಷಕರು, ಪ್ರೊಫೆಸರರು, ಕವಿಗಳು, ಸಾಹಿತಿಗಳು, ಪತ್ರಿಕಾಕರ್ತರು, ಮಠಾಧಿಪತಿಗಳು, ವೇದಾಂತಿಗಳು, ಅಧ್ಯಾತ್ಮಿಗಳು ಎಲ್ಲಾ ಡಾಂಭಿಕರೇ. ಈ ಯುಗವೇ ಡಾಂಭಿಕರ ಯುಗ ಅಂತ ಅನಿಸ್ತದ. ಯೋಗಮಂಡಲ ಅಂತ ಹೆಸರಿಡೂದು, ಕರಾಚೂರಿನ ಮಹಾ ಗುರು, ಮಹಾಮಾತೆಯರ ಹೆಸರು ದುರುಪಯೋಗ ಮಾಡಿಕೊಳ್ಳೂದು, ವಾಸಂತಿಯಂಥ ಹೆಂಗಸನ್ನ ಮಾತೆಯಾಗಿ ಮೆರೆಸೂದು, ರಾತ್ರಿ ಆ ಮಾತೆಯ ಸಂಗಡವೇ ರಮಿಸೂದು........ಏನು ನಿಮ್ಮ ಕುಬೇರಪ್ಪ........ಆ ತಲೆಹಿಡುಕ ಸುಚರಿತರಾಯ........ಆ ಕುಂಟಲಗಿತ್ತಿ ಸುಲಲಿತಾ........ಯೋಗಮಂಡಲ ಅಲ್ಲ ಇದು, ಭೋಗಮಂಡಲ......." ಎಂದು ಹೇಳುತ್ತಾ ವಸುಮತೀಬಾಯಿ ಗಹಗಹಿಸಿ ನಗತೊಡಗಿದಳು.

"ಭೋಗಮಂಡಲ ಅಂತ ಹೆಸರಿಟ್ಟರೆ ಸ್ವಾರಸ್ಯವೇ ಉಳಿಯುವುದಿಲ್ಲ ವಸುಮತೀ!"

"ಉಳಿಯೂದಿಲ್ಲ? ಯಾಕೆ?"

"ಸೋಗು ಹಾಕುವದರಲ್ಲೂ ಮನುಷ್ಯನಿಗೆ ಒಂದು ತರದ ಸಂತೋಷ ಅನ್ನಿಸ್ತದೋ ಇಲ್ಲೋ? ಕದ್ದು ಮುಚ್ಚಿ ಮಾಡೂದರಲ್ಲಿ ಸಿಗುವ ಸುಖದ ಮುಂದೆ ಬಹಿರಂಗವಾಗಿ ಮಾಡೂದರಲ್ಲಿ ಸಿಗುವ ಸುಖ ಬರೀ ಸಪ್ಪಗೆ. ನೀವು ಸೈಕಾಲಜಿ ಓದಿಕೊಂಡಿರಬೇಕಲ್ಲ?"

"ಡಾಂಭಿಕತನದ ಸಮರ್ಥನೆಗಾಗಿ ಸೈಕಾಲಜಿಯ ದುರ್ಲಾಭ ಪಡೆಯೂದನ್ನು ನೋಡಲು ಫ್ರೈಡ್ ಬದುಕಿಲ್ಲ, ಅವನ ಪುಣ್ಯ."

ಆಗ ನಗುವ ಸರದಿ ವಿರುಪಣ್ಣನದಾಯಿತು.

"ಜಗತ್ತೇ ಒಂದು ರಂಗಭೂಮಿ, ನಾವೆಲ್ಲಾ ಪಾತ್ರಧಾರಿಗಳು ಅಂತ ಶೇಕ್ಸ್‌ಪಿಯರ್ ಹೇಳಿದಾನೆ. ಅದಕ್ಕೇ ನಾವೆಲ್ಲರೂ ಯಾವಾಗಲೂ ಸೋಗು ಹಾಕಿಕೊಂಡೇ ಇರಬೇಕು ಅಂತ ಹೇಳಿದಂತಾಯ್ತು ನಿಮ್ಮ ಮಾತು!" ಎಂಥಳು ವಸುಮತೀಬಾಯಿ.

"ಸ್ವಲ್ಪ ಆಳವಾಗಿ ವಿಚಾರ ಮಾಡಿದರೆ ಪ್ರಪಂಚದಲ್ಲಿ ಎಲ್ಲರೂ ಹಾಕಿರೂದು ಸೋಗೇ ಅಲ್ಲವೇನು? ಹುಟ್ಟಿದಾಗ ಏನೂ ತರಲಿಲ್ಲ, ಸತ್ತಮೇಲೆ ಏನೂ ಒಯ್ಯುದಿಲ್ಲ. ನಡುವೇ ಈ ಸೋಗು ಎಲ್ಲಾ. ಅಲ್ಲವೇನು?"

"ಓಹ್ಹೊ! ಆಗಲೇ ವೈರಾಗ ಬಂತೇನು!" ಎನ್ನುತ್ತಾ ಮತ್ತೆ ನಕ್ಕಳು ವಸುಮತೀಬಾಯಿ.

"ವೈರಾಗ್ಯ ಯಾಕೆ ಬಂದೀತ, ನಿಮ್ಮಂಥ ಪ್ರೇಯಸಿ ಇರುವಾಗ? ಜೀವದಿಂದಿರುವ ತನಕ ಸುಖವಾಗಿ ಇದ್ದರಾಗಬೇನು ವಸುಮತಿ? ಕುಬೇರಪ್ಪನವರೂ ಸುಖಪಡಲಿ ಬಿಡಿರಿ. ನಮುಗ್ಯಾಕೆ ಅಸೂಯೆ?"

"ಅಸೂಯೆಯೆಲ್ಲಿ ಬಂತು? ಆ ಡೊಳ್ಳು ಹೊಟ್ಟೆಯವನನ್ನ ನಾನೇನು ಬಯಸುತ್ತಿದ್ದೇನೇನು? ಅವನು ಏನು ಮಾಡಿದರೆ ನನಗೇನು! ಆ ಡಾಂಭಿಕತನ ಮಾತ್ರ ನನಗೆ ಸೇರೂದಿಲ್ಲ-ಆಶ್ರಮ ಅಂತೆ....ಸಾಧನ ಅಂತೆ....ಎಂಥಾ ಕಳ್ಳ!"

"ಹೋಗಲಿ ಬಿಡಿರಿ. ಅವರು ಏನು ಮಾಡಿಕೊಂಡರೆ ನಿಮಗೇನಂತೆ! ನಿರ್ಲಿಪ್ತವಾಗಿದ್ದರಾಗದೇ?"

"ಅದಕ್ಕೇ ನಾನಿನ್ನು ಆ ಸಭೆಗೆ ಬರಬಾರದಂತ ಮಾಡಿದೀನಿ."

"ಸಭೆ ಏನು ಮಾಡಿತು ನಿಮಗೆ? ಅದೂ ಒಂದು ಮನರಂಜನೆಯ ಸಾಧನ ಅಂತ ತಿಳುಕೊಳ್ಳಬಹುದಲ್ಲ? ನನಗೂ ಅಲ್ಲಿದ್ದಾಗ ಸ್ವಲ್ಪವಾದರೂ ಮನಶ್ಶಾಂತಿ ಸಿಗ್ತದ."

"ಆ ಮಾತೆಯ ಮುದ್ದು ಮುಖ ನೋಡಿದರೆ ಶಾಂತಿ ಸಿಗೂದೂ ಸಹಜ!"

"ನಿಜವಾಗಿಯೂ ಶಾಂತಿ ಸಿಗ್ತದ ವಸುಮತೀ. ನೀವು ನಂಬಲಿಕ್ಕಿಲ್ಲ. ಆದರೂ ಸತ್ಯ ಹೇಳ್ತೇನಿ. ಆ ಒಂದು ಹದಿನೈದು ನಿಮಿಷ ವಾಸಂತಿ ವಾಸಂತಿಯಲ್ಲ, ಮಹಾಮಾತೆ ಅಂತಲೇ ನನಗನಿಸ್ತದ. ಆಶೀರ್ವಾದ ಮಾಡಿ ಆಕೆ

ಎದ್ದು ಬಿಟ್ಟಾಗ ಆಕೆಯ ಪಾದಕ್ಕೆ ಬೀಳೋಣ ಅಂತನಿಸ್ತದ. ಇದೆಲ್ಲಾ ವಿಚಿತ್ರ ಅನ್ನೂದೇನೋ ನಿಜ. ಆದರೂ ಆ ಕ್ಷಣಕ್ಕೆ ಹಾಗನ್ನಿಸುವದೇನೂ ಸುಳ್ಳಲ್ಲ. ಯೋಗ ಮತ್ತು ಭೋಗ ಎರಡೂ ಅವಳಿ ಜವಳಿ ಸೋದರರಂತೆ ಅಂತ ಯಾವನೋ ಕವಿ ಹೇಳಿದಾನೆ. ಆ ಮಾತು ನಿಜ."

"ಸರಿ. ಸರಿ. ಹಾಗೆ ಹೇಳಿದ ಕವಿಯೂ ನಿಮ್ಮಂಥಾ ಡಾಂಭಿಕನೇ ಇರಬೇಕು," ಎಂದು ನಿಷ್ಠುರವಾಗಿ ನುಡಿದಳು ವಸುಮತೀಬಾಯಿ.

"ಡಾಂಭಿಕನಲ್ಲ, ಅನುಭವಿಕ," ಎಂದ ವಿರುಪಣ್ಣ.

"ಎಂಥಾ ಅನುಭವ ಅನ್ನೂದು ಗೊತ್ತೇ ಅದೆಯಲ್ಲ! ಸೋಗು ಹಾಕುವ ಅನುಭವ!" ಎಂದಳು ವಸುಮತೀಬಾಯಿ. "ನನಗಂತೂ ಬೇಡ ತಾಯಿಾ ಇಂಥಾ ಕಪಟ ನಾಟಕ!"

ಮತ್ತೆ ವಿರುಪಣ್ಣ ವಾದ ಬೆಳೆಸಲಿಲ್ಲ. ಗೊಬ್ಬೂರು ಸಮಾಪಿಸುತ್ತಿತ್ತು. ವಿರುಪಣ್ಣ, ನೆಟ್ಟಗೆ ಸೆಟೆದು ಕುಳಿತುಕೊಂಡ. ತೊಡೆಯ ಮೇಲಿದ್ದ ಟೊಪ್ಪಿಗೆಯನ್ನು ತಲೆಗಿಟ್ಟುಕೊಂಡು ಪುಢಾರಿಯ ಆವಿರ್ಭಾವ ತಂದುಕೊಂಡ. ಅವನ ಚಲನವಲನಗಳನ್ನು ಕೌತುಕದಿಂದ ನಿರೀಕ್ಷಿಸುತ್ತಿದ್ದ ವಸುಮತೀಬಾಯಿ ನಗು ನಗುತ್ತ ಹೇಳಿದಳು :

"ಲೀಡರ್ ಸೋಗು ಸುರುವಾಯ್ತು ಈಗ!"

"ಸೋಗು ಹಾಕದಿದ್ದರೆ ಈ ಪ್ರಪಂಚದಲ್ಲಿ ಬದುಕೂದು ಸಾಧ್ಯವೇ?" ಎಂದ ವಿರುಪಣ್ಣ.

೧೩

ಊಟ ಮುಗಿಸಿಕೊಂಡು ಮರುಳಯ್ಯ, ಕಮಲ ತಮ್ಮ ಮನೆಗೆ ಮರಳಿ ಬಂದಾಗ ಗಂಟೆ ಹತ್ತಾಗಿತ್ತು. ಪಕ್ಕದ ಮನೆಯಲ್ಲಿನ ದೀಪ ಇನ್ನೂ ಆರಿ ಹೋಗಿರಲಿಲ್ಲ. ಮರುಳಯ್ಯ, ಕಮಲ ಹಿಂದಿರುಗಿ ಬರುವುದನ್ನೆ ಕಾದು ಕುಳಿತ ಹಾಗಿತ್ತು ಮುಕ್ಕಣ್ಣ, ಪದ್ಮಾವತಿ.

ಮನೆಯ ಬಾಗಿಲಿನ ಬೀಗ ತೆಗೆದು ಮರುಳಯ್ಯ ಒಳಗೆ ಅಡಿಯಿರಿಸು ತ್ತಿದ್ದ ಹಾಗೆಯೆ ಮುಕ್ಕಣ್ಣ ಕೂಗಿ ಕೇಳಿದ :

" ಈಗ ಊಟ ಮುಗೀತೇನ್ರೀ ಮರುಳಯ್ಯನವರೆ ? "

ಮುಕ್ಕಣ್ಣನಿಗೇಕೆ ಇಂಥ ಉಪದ್ವ್ಯಾಪ ? ತಮ್ಮ ವಿಷಯವಾಗಿ ಇವನಿ ಗೇಕೆ ಅನಾವಶ್ಯಕ ಕುತೂಹಲ ? ಇವನಿಗೆ ಉತ್ತರವೀಯದೆ ತಾತ್ಸಾರದಿಂದ ಸುಮ್ಮನಿದ್ದು ಬಿಡುವುದೇ ಒಳ್ಳೆಯದೆಂದು ತೋರಿತು. ಆದರೆ ಅದು ಸೌಜನ್ಯ ವಲ್ಲ, ಸಾಧಕ ಜೀವಿಗಳಿಗಂತೂ ಇಂಥ ತಾತ್ಸಾರ ತರವಲ್ಲ, ಎಂದುಕೊಂಡು ಸ್ವಲ್ಪದರಲ್ಲಿಯೆ ಹೇಳಿದ ಮರುಳಯ್ಯ.

" ಹೌದ್ರೀ. ಈಗ ಮುಗೀತು."

" ಏನು ವಿಶೇಷರೀ ? ಹೋಳಿಗೆ ಗೀಳಿಗೆ ಮಾಡಿದ್ದರೇ ? "

" ಇಲ್ಲ. ಇಲ್ಲ. ಎಲ್ಲಿಯ ಹೋಳಿಗೆ ! "

" ಯೋಗಮಂಡಲದ ಸಭೆ ನಡೆದ ದಿನ ಫೀಸ್ಟ್ ಇದ್ದೀ ಇರ್ತದಂತ ಸುಚರಿತರಾಯರು ಹೇಳ್ತಿದ್ದರು ಅದಕ್ಕೇ ಕೇಳಿದೆ."

" ಅವರದು ನಿಮಗೂ ಪರಿಚಯವೇನು ಹಾಗಾದರೆ ? " ಮರುಳಯ್ಯ ನಿಗಿಷ್ಟವಿರಲಿಲ್ಲವಾದರೂ ಮಾತು ಬೆಳೆಯುತ್ತಿತ್ತು.

" ಓಹ್ಹೊ. ಸುಚರಿತರಾಯರ ಪರಿಚಯವಿಲ್ಲದ ಜನರಾದರೂ ಎಲ್ಲಿದಾರೆ ಈ ಊರಲ್ಲಿ ? ಕುಬೇರಪ್ಪನವರು, ಉಳಿವೆಪ್ಪನವರು, ವಿರುಪಣ್ಣನವರು, ಎಲ್ಲಾ ಬಂದಿದ್ದರೇನು ? "

" ಬಂದಿದ್ದರು," ಎಂದಷ್ಟೆ ನುಡಿದು ಮಲಗುವ ಸಿದ್ಧತೆಗೆ ತೊಡಗಿದ ಮರುಳಯ್ಯ.

"ಹ್ಯಾಗಿದ್ದಳು ಮಾತೆ?" ಎಂದು ನಗುನಗುತ್ತಾ ಕೇಳಿದ ಮುಕ್ಕಣ್ಣ. ಅದು ಅಣಕದ ಮಾತೆಂದು ಒಡನೆಯೆ ಗುರುತಿಸಿಕೊಂಡ ಮರುಳಯ್ಯ. ಅದಕ್ಕೆ ಉತ್ತರವೀಯದೆ, ಹಾಸಿಗೆ ಬಿಡಿಸುವುದರಲ್ಲಿ ಮಗ್ನನಾದ. ಹಠಾತ್ತಾಗಿ ಅವನೆ ದುರಿಗೆ ಬೇರೊಂದು ಸಮಸ್ಯೆ ತಲೆಯೆತ್ತಿ ನಿಂತಿತು. ಕಮಲಳನ್ನು ಈ ದಿನ ಎಲ್ಲಿ ಮಲಗಿಸುವುದು? ಶರಣಪ್ಪನವರ ಉಪಾಯವನ್ನು ತಾನು ಆರಂಭಿಸು ವುದೇ? ಅದರ ಪರಿಣಾಮವೇನಾದೀತು?

ಆ ವಿಚಾರವಾಗಿ ಆತ ಒಂದು ನಿರ್ಣಯಕ್ಕೆ ಬಂದು ಮುಟ್ಟುವ ಮುನ್ನವೆ ಕಮಲ ತನ್ನ ಹಾಸಿಗೆಯನ್ನು ಹೊತ್ತು ತಂದು ಗಂಡನ ಹಾಸಿಗೆಯ ಮಗ್ಗುಲ ಲ್ಲಿಯೆ ಬಿಡಿಸಿ ಮಲಗಿಕೊಳ್ಳಲು ಅಣಿಯಾಗಿದ್ದಳು.

ಮುಂದೇನು ಮಾಡುವುದೆಂದು ತಲೆ ಕೆರೆದುಕೊಂಡ ಮರುಳಯ್ಯ, ತಾನು ತಡಮಾಡಿದುದೇ ತಪ್ಪಾಯಿತು. ಅವಳು ಕೊಟಡಿಯಲ್ಲಿ ಕಾಲಿಡು ವುದಕ್ಕೆ ಮೊದಲೇ ಬಾಗಿಲು ಇಕ್ಕಿ ಚಿಲಕ ಹಾಕಿಕೊಂಡು ಬಿಟ್ಟದ್ದರಾಗುತ್ತಿತ್ತು. ಈಗ ಅವಳನ್ನು ಹೊರಗೆ ಹಾಕುವುದು ಹೇಗೆ? ಹೊರಗೆ ಹೋಗೆಂದು ಹೇಳಿದರೆ ಅವಳು ಸುಮ್ಮನೆ ಹೊರಟುಹೋಗಬಹುದೆ? ಪ್ರತಿಭಟಿಸಿ ಗದ್ದಲ ಮಾಡಿದರೆ ತಾನೇನನ್ನು ಮಾಡಲು ಸಾಧ್ಯ? ಇಲ್ಲಿ ನಡೆಯುವುದನ್ನೆಲ್ಲ ನಿರೀಕ್ಷಿಸಲು ಮುಕ್ಕಣ್ಣ, ಪದ್ಮಾವತಿ ಬೇರೆ ಕಾದು ಕುಳಿತಿದ್ದಾರೆ. ಅವರಿಗೆ ಗೊತ್ತಾದ ವಿಷಯ ನಗರಕ್ಕೆಲ್ಲ ಗೊತ್ತಾಗಲು ಹೆಚ್ಚು ಕಾಲ ಬೇಕಾಗುವುದಿಲ್ಲ. ಮುಕ್ಕಣ್ಣ ಮಹಾ ಅಧಿಕಪ್ರಸಂಗಿ. ಕಂತೆಗೆ ತಕ್ಕ ಬೊಂತೆ. ಪದ್ಮಾವತಿಯೂ ಮಾತಿನ ಮಲ್ಲಿಯೆ. ಕಮಲಳಿಗೂ ತನಗೂ ಘರ್ಷಣೆ ನಡೆದರೆ ಅದರ ವರದಿಯನ್ನು ಉಪ್ಪುಕಾರ ಹಚ್ಚಿ, ಊರಿನಲ್ಲೆಲ್ಲ ಡಂಗುರ ಸಾರಬಹುದು ಇವರಿಬ್ಬರೂ. ಮುಂದೆ ತನ್ನ ಗತಿ? ಶರಣಪ್ಪನವರ ಹಾಗೆ ತಾನೂ ಹಾಸ್ಯಾಸ್ಪದ ವ್ಯಕ್ತಿಯಾಗ ಬಹುದು....

"ಏನು ಮಾಡೂದು? ಏನು ಮಾಡೂದು?" ಎಂದು ತನ್ನನ್ನು ತಾನೆ ಕೇಳಿಕೊಳ್ಳುತ್ತ ಮರುಳಯ್ಯ ಕೊಟಡಿಯಲ್ಲಿ ಉದ್ವೇಗದಿಂದ ಅಡಿಯಿಡತೊಡ ಗಿದ. ಅವನ ಚಲನವಲನಗಳನ್ನು ಕೌತುಕದಿಂದ ದಿಟ್ಟಿಸುತ್ತಿದ್ದ ಕಮಲ ತುಟಿ ಗಳಲ್ಲೇ ನಗುತ್ತಾ ಕಾದಂಬರಿಯೊಂದನ್ನು ಕೈಯಲ್ಲಿ ಹಿಡಿದುಕೊಂಡು ಹಾಸಿಗೆಯ ಮೇಲೊರಗಿದಳು.

ಐದಾರು ನಿಮಿಷಗಳ ವರೆಗೆ ಶತಪಥ ಹಾಕುತ್ತಿದ್ದು ಅನಂತರ ಹೆಂಡತಿಯ ಬಳಿ ಬಂದು ತೀರಾ ಪಿಸುದನಿಯಲ್ಲಿ ಕೇಳಿದ ಮರುಳಯ್ಯ:

"ನೀವು ಇವತ್ತು ಹೊರಗಿನ ಪಡಸಾಲೆಯಲ್ಲಿ ಮಲಗಿಕೊಂಡುಬಿಡಬಾರದೇ ?"

ಕಾದಂಬರಿಯ ಮೇಲಿನ ದೃಷ್ಟಿಯನ್ನು ಕದಲಿಸದೆ ಅವಳು ನಗುನಗುತ್ತಾ ಕೇಳಿದಳು :

"ಯಾಕೆ ?"

"ಯಾಕೆಂದರೇನು ಹೇಳೂದು ? ನಿಮಗೂ ಗೊತ್ತೆ ಅದಲ್ಲ ಎಲ್ಲಾ!"

"ಇಲ್ಲ, ನನಗ್ಗೊತ್ತಿಲ್ಲ. ಇದೇನು ಹೊಸಾ ರೀತಿ? ಯಾರು ಹೇಳಿಕೊಟ್ಟರು ನಿಮಗೆ ?"

ಮರುಳಯ್ಯ ಹಣೆ ಚಚ್ಚಿಕೊಳ್ಳುತ್ತಾ ಎದ್ದು ಮತ್ತೆ ಶತಪಥಕ್ಕಾರಂಭಿಸಿದ. ಹಠಾತ್ತಾಗಿ ಅವನ ದಪ್ಪ ಮೆದುಳಿನಲ್ಲಿ ಹೊಸ ಯುಕ್ತಿಯೊಂದು ಕಾಣಿಸಿಕೊಂಡಿತು.

"ಎಲಾ ! ಎಂಥಾ ಮೂರ್ಖ ನಾನು ! ಇಂಥಾ ಸುಲಭ ಉಪಾಯ ಕೂಡಾ ಬೇಗ ಹೊಳೀಲಿಲ್ಲವಲ್ಲಾ ನನಗೆ !" ಎಂದುಕೊಳ್ಳುತ್ತಾ ಆತ ತನ್ನ ಹಾಸಿಗೆಯನ್ನು ಸುತ್ತಿ, ತಾನೇ ಹೊರಗಿನ ಪಡಸಾಲೆಗೆ ಹೊರಡಲಣಿಯಾದ.

ಕಾದಂಬರಿಯನ್ನು ಹಾಸಿಗೆಯ ಮೇಲಿಟ್ಟು ಎದ್ದು ಕುಳಿತಳು ಕಮಲ. ಈಗ ತಾನು ಸುಮ್ಮನಿದ್ದು ಬಿಟ್ಟಲ್ಲಿ ಪ್ರಸಂಗ ಕೈತಪ್ಪಿ ಹೋಗುವುದೆಂದು ಖಚಿತವಾಗುತ್ತಲೂ ಅವಳು ಅವನ ಹಾಸಿಗೆ ಸುರುಳಿಯನ್ನು ಹಿಡಿದೆಳೆದು ಮೊದಲಿದ್ದ ಕಡೆಯಲ್ಲಿಯೆ ಅದನ್ನಿಟ್ಟಳು.

"ಬೇಡ, ಬೇಡ, ಕಮಲಮುಖಿ. ನನಗೆ ಅಡ್ಡಿ ಮಾಡಬೇಡಿರಿ," ಎಂದು ದೈನ್ಯದಿಂದ ಬೇಡಿಕೊಂಡ ಮರುಳಯ್ಯ,

"ಇಂಥಾ ಹುಚ್ಚುಚ್ಚಾರ ನೀವೂ ಮಾಡಬೇಡಿರಿ."

"ನನ್ನ ಯೋಗಸಾಧನೆಗೆ ಕಲ್ಲು ಹಾಕಬೇಡಿರಿ ಕಮಲಮುಖೀ."

"ನನ್ನ ಸಂಸಾರಕ್ಕೆ ನೀವೂ ಕಲ್ಲು ಹಾಕಬೇಡಿರಿ."

ಮರುಳಯ್ಯ ನಿರುತ್ತರನಾಗಿ ದಿಙ್ಮೂಢನಂತೆ ನಿಂತುಕೊಂಡ.

ಮತ್ತೆ ಕಮಲಳೇ ಹೇಳಿದಳು :

"ಇದನ್ನೆಲ್ಲಾ ನಿಮಗ್ಯಾರು ಕಲಿಸಿದರೆಂದು ನನಗೂ ಗೊತ್ತು. ಆವೊಬ್ಬರು ಹಾಳಾದದ್ದು ಸಾಕಾಗದೆ ನಿಮ್ಮನ್ನೂ ಹಾಳು ಮಾಡಲು ಹೊರಟಿದ್ದಾರವರು. ಆದರೆ, ನಾನು ಹಾಗೆಲ್ಲಾ ನಿಮ್ಮನ್ನು ಹಾಳಾಗಲು ಬಿಡೂದಿಲ್ಲ."

ಆಗಲೂ ಮರುಳಯ್ಯ ಮಾತನಾಡಲಿಲ್ಲ. ಇವಳ ಹಿಡಿತದಿಂದ ಪಾರಾಗುವುದು ಹೇಗೆ? ಎಂದು ಆತ ರಭಸದಿಂದ ಯೋಚಿಸುತ್ತಿದ್ದಂತೆಯೆ ನೆರೆಮನೆಯಿಂದ ಹಾಡು ಕೇಳಿಬರತೊಡಗಿತು :

"ನನ್ನ ಕಣ್ಣ ಮುಂದೆ ನಿಲ್ಲು
ನಲ್ಲೆ, ಒಂದೆ ನಿಮಿಷ!
ಮರೆತು ಬಿಡುವೆ ಅಳಲ ಬಸಿರ
ನೂರು ವರುಷ ವರುಷ!"*

"ನನ್ನ ಮನಸ್ಸನ್ನ ದುರ್ಬಲಗೊಳಿಸಲಿಕ್ಕೆಂದೇ ಈ ವೇಳೆಯಲ್ಲಿ ಇವರು ಇಂಥಾ ಹಾಡುತ್ತಿರಬೇಕು. ಎಂಥಾ ಹಾಳು ಸಹವಾಸ ಗಂಟು ಬಿತ್ತು!" ಎಂದು ಹೇಳಿಕೊಳ್ಳುತ್ತಾ ಮರುಳಯ್ಯ ಹಾಸಿಗೆಯನ್ನು ಅಲ್ಲಿಯೆ ಬಿಟ್ಟು ಪಡಸಾಲೆಗೆ ಬಂದು ಚಾಪೆಯೊಂದನ್ನು ಬಿಡಿಸಿ ಬಿದ್ದುಕೊಂಡ. ಈ ಮನೆಯನ್ನು ಬಿಟ್ಟು ಹೋಗುವವರೆಗೂ ತನ್ನ ಸಾಧನೆ ಮುಂದುವರಿಯುವಂತಿಲ್ಲ. ಕುಬೇರಪ್ಪನವರ ಆಮಂತ್ರಣ ಸ್ವೀಕರಿಸಿ ಅವರ ಊರಿಗೆ ಹೋಗಿ ಆಶ್ರಮ ಜೀವನ ನಡೆಸುವುದೊಳ್ಳೆಯದು. ನಾಳೆಯ ದಿನವೇ ಶರಣಪ್ಪನವರನ್ನು ಕಂಡು ಕೆಲಸಕ್ಕೆ ರಾಜೀನಾಮೆ ಸಲ್ಲಿಸಿಬಿಡಬೇಕು. ಎಂದು ಬೇಕಾದರೂ ಹೊರಡಬಹುದೆಂದು ಕುಬೇರಪ್ಪನವರೂ ಹೇಳಿದ್ದಾರೆ.

ಆದರೆ....ಆದರೆ....

ಅವರನ್ನು ಪೂರ್ಣವಾಗಿ ನಂಬಿ ತಾನು ಅಲ್ಲಿಗೆ ಹೊರಡಬಹುದೇ?

ಅಲ್ಲಿಗೆ ಹೋದ ಮೇಲೂ ಕೂಡಾ ಕಮಲಳ ಸಮಸ್ಯೆ ಹಾಗೇ ಉಳಿಯುತ್ತದಲ್ಲ? ಅದನ್ನು ಹೇಗೆ ಪರಿಹರಿಸುವುದು? ತನ್ನ ಬ್ರಹ್ಮಚರ್ಯವ್ರತವನ್ನು ನಡೆಯಗೊಡಬಾರದೆಂದೇ ಅವಳು ಸಂಕಲ್ಪಿಸಿಕೊಂಡಂತೆ ತೋರುತ್ತದೆ. ಹಾಗಾದರೆ....ಹಾಗಾದರೆ....

ಕೇಳಲಾರೆನೆನ್ನುವ ಕಿವಿಗಳಿಗೂ ಮುಕ್ಕಣ್ಣನ ಹಾಡು ಕೇಳಿಸುತ್ತಿತ್ತು :

---
* ಕವಿ : ಗೋ. ಕೃ. ಅಡಿಗ.

“ ಬಾಳ ಕೊನೆಯವರಿಗು ಒಂದೆ
ತಾಳಲಯವು ಭಾವಭಂಗಿ,
ನಾನೆ ನಿನ್ನ ಹೃದಯ ಸಂಗಿ,
ಎಂತಾದರು ಕುಣಿಯುವಾ !
ಲಾಸ್ಯ ಹಾಸ್ಯ ಒಂದೆ ನಿಮಿಷ,
ತಾಂಡವವೋ ವರುಷ ವರುಷ,
ಮೂಕಶೋಕರಸದ ನಿಕಷ
ನಮ್ಮ ಪ್ರಣಯ ಸಿದ್ಧಿಗೆ,
ನಮ್ಮ ಹೃದಯವೃದ್ಧಿಗೆ ! ”

ಚಾಪೆಯ ಮೇಲೂ ಮಲಗಿಕೊಂಡಿರಲಾಗಲಿಲ್ಲ ಮರುಳಯ್ಯನಿಗೆ. ಮತ್ತೆ ಪ್ರಣಯ....ಮತ್ತೆ ಕುಣಿತ... ಮತ್ತೆ ತಾಂಡವ....ಹಾಡು ನಿಲ್ಲಿಸೆಂದು ಮುಕ್ಕಣ್ಣನಿಗೆ ಹೇಳಲೂ ಮನಸ್ಸು ಬರಲಿಲ್ಲ. ತನ್ನನ್ನು ಪೀಡಿಸುವ ಉದ್ದೇಶದಿಂದಲೇ ಹಾಡುತ್ತಿರುವ ಆ ಕಿಡಿಗೇಡಿ ಅವನು ನಿಲ್ಲಿಸುವುದುಂಟೆ ? ಹಾಡಲಿ, ಎಷ್ಟು ಹೊತ್ತು ಹಾಡುವನೋ ಹಾಡಲಿ, ಅವನ ಹಾಡು ನಿಂತ ಮೇಲೆ ಬಂದು ಮಲಗಿಕೊಂಡರಾಯಿತೆಂದುಕೊಂಡು ಮರುಳಯ್ಯ ಎದ್ದು ಬಾಗಿಲು ತೆಗೆದು ಹೊರಗಡೆ ಬಂದು ನಿಂತುಕೊಂಡ.

ಬಾಗಿಲು ತೆಗೆದುದರ ಸದ್ದು ಕೇಳಿಸುತ್ತಲೂ ಕಮಲಳೂ ಎದ್ದು ಬಂದಳು. ಸಂತ್ರಸ್ತ ಮನಃಸ್ಥಿತಿಯಲ್ಲಿ ಆತ ಮನೆಯನ್ನೆ ತ್ಯಜಿಸಿ ಹೊರಟು ಹೋಗಬಹುದೇನೋ ಎಂದೂ ಅವಳಿಗೆನ್ನಿಸದಿರಲಿಲ್ಲ.

ಹೊರಗಣ ಕಟ್ಟೆಯ ಮೇಲೆ, ನಿಂತು ನಕ್ಷತ್ರಗಳನ್ನು ದಿಟ್ಟಿಸುತ್ತಿದ್ದ ಗಂಡನನ್ನು ನೋಡುತ್ತಲೂ ಕಮಲಳಿಗೆ ಕನಿಕರವುಂಟಾಗದಿರಲಿಲ್ಲ. ಅಷ್ಟು ದೀರ್ಘಕ್ಕೆ ಹೋದದ್ದು ತಪ್ಪಾಯಿತೇನೋ ಎಂದುಕೊಂಡಳು. ರಬ್ಬರಿನ ತುಂಡನ್ನು ಬಹಳ ಎಳೆಯಬಾರದು....ತಲೆ ಕೆಡಿಸಿಕೊಂಡು ಆತ ಎಲ್ಲಿಗಾದರೂ ಹೋಗಿಬಿಟ್ಟರೆ ತನ್ನ ಗತಿಯೇನು ?

ಸ್ವಲ್ಪ ಸಮಯದ ಹಿಂದೆ, ಆತ ಊಟಡಿಯನ್ನು ತ್ಯಜಿಸಿ ಪಡಸಾಲೆಗೆ ಎದ್ದು ಹೋದಾಗ, ‘ ಹೋದರೆ ಹೋಗಲಿ,’ ಎಂದು ಅವಳು ಕೋಪದ ಭರ

ದಲ್ಲಿ ಅಂದುಕೊಂಡಿದ್ದಳು. ಅವನ ವಿಚಾರವಾಗಿ ಅವಳೆದೆಯಲ್ಲಿ ತಿರಸ್ಕಾರವೂ ಒಡಮೂಡ ತೊಡಗಿತ್ತು. ಇಂಥ ಮುಟ್ಠಾಳನನ್ನು ಕಟ್ಟಿಕೊಳ್ಳಬೇಕೆಂದು ತನ್ನ ಹಣೆಯಲ್ಲಿ ಬರೆದಿದ್ದಿತೇನೊ. ಯೋಗ....ಸಾಧನೆ....ಮಂಡಲ....ಮಾತೆ.... ಆಶ್ರಮ....ಕುಬೇರಪ್ಪ....ಉಳಿವೆಪ್ಪ....ಅವರೆಲ್ಲರೂ ಮೊದಲನೆಯ ನಂಬರಿನ ಡಾಂಭಿಕರೆಂಬುದನ್ನು ಎರಡು ತಾಸುಗಳಲ್ಲಿಯೆ ತಾನು ಕಂಡುಕೊಂಡುದಾಗಿತ್ತು. ತನ್ನನ್ನು ಬಲೆಗೆ ಹಾಕಿಕೊಳ್ಳುವ ಏಕಮಾತ್ರ ಉದ್ದೇಶದಿಂದಲೇ ಕುಬೇರಪ್ಪ ಆಶ್ರಮದ ಉಪಾಯ ಯೋಚಿಸುತ್ತಿದ್ದುದನ್ನು ತಾನು ತಿಳಿದುಕೊಂಡುದಾಗಿತ್ತು. ಸುಲಲಿತದೇವಿ, ಸುಚರಿತರಾಯ ಇಬ್ಬರೂ ಕುಂಟಲದವರೆಂದು ತಿಳಿದುಕೊಳ್ಳು ವುದಕ್ಕೂ ತನಗೆ ಹೆಚ್ಚು ಹೊತ್ತು ಹಿಡಿದಿರಲಿಲ್ಲ. ಯೋಗಮಂಡಲದ ಸೋಗಿನಲ್ಲಿ ಸುಲಲಿತದೇವಿಯ ಮನೆ ಸೂಳೆಯಮನೆಯಾಗಿದ್ದುದನ್ನೂ ತಾನು ಅರಿತುಕೊಂಡಿ ದ್ದಳು. ತನ್ನ ಗಂಡನಿಗೆ ಮಾತ್ರ ಯಾವುದೂ ತಿಳಿಯಲಿಲ್ಲವಲ್ಲ! ಇದೆಂಥ ಬುದ್ಧಿಹೀನ ಗಂಡು ಗಂಟುಬಿತ್ತು ತನಗೆ....

"ತಾಂಡವವೋ ವರುಷ ವರುಷ...."

ಕಮಲಳ ಎದೆಯಲ್ಲಿ ಪರಸ್ಪರ ವಿರುದ್ಧ ವಿಚಾರಗಳ ತಾಂಡವಕ್ಕಾರಂಭ ವಾಗಿತ್ತು. ಬ್ರಹ್ಮಚರ್ಯವಂತೆ....ವ್ರತವಂತೆ....ಯೋಗಸಿದ್ಧಿಯಂತೆ....ಸಾಕ್ಷಾ ತ್ಕಾರವಂತೆ! ಬೇರೆ ಮಲಗುವುದಂತೆ! ಎಂಥ ಅವಿವೇಕ! ಮಲಗಿಕೊಂಡರೆ ಮಲಗಿಕೊಳ್ಳಲಿ. ಇವರನ್ನು ಅಡ್ಡಗಟ್ಟಿ, ಸೆರಗೊಡ್ಡಿ ಬೇಡಿಕೊಂಡು, ತನ್ನ ಹತ್ತಿರವೇ ಮಲಗಿಕೊಳ್ಳಬೇಕೆಂದು ಪ್ರಾರ್ಥಿಸುವುದಂತೂ ತನ್ನಿಂದಾಗದು. ತಾನು ಹಾಗೆಲ್ಲ ಆಚರಿಸಿದರೆ ತನ್ನ ಮರ್ಯಾದೆಯಾದರೂ ಏನು ಉಳಿದಂತಾ ಯಿತು? ಬಿದ್ದುಕೊಳ್ಳಲಿ ಅವರು ಪಡಸಾಲೆಯಲ್ಲೇ....

ಅವಳು ಹಾಗೆ ಹೇಳಿಕೊಳ್ಳುತ್ತಿದ್ದಂತೆ ಹಠಾತ್ತಾಗಿ ಮಾಮಲೇದಾರರ ಮತ್ತು ಅವರ ಹೆಂಡತಿಯ ನೆನಪು ಬಂದಿತ್ತು. ಆಕೆ ಮಾಡಿದ್ದು ಸರಿಯಾಗಿ ದ್ದರೂ ಇರಬಹುದೆಂಬ ವಿಚಾರವೂ ಒಂದು ಕ್ಷಣ ಅವಳ ಮನಸ್ಸಿನಲ್ಲಿ ಸುಳಿದು ಹೋಗಿತ್ತು. ಇಂಥ ಗಂಡರಿಗೆ ಬುದ್ಧಿ ಕಲಿಸಲು ಅದೇ ಸರಿಯಾದ ಉಪಾ ಯವೊ ಏನೊ....

ಮರುಕ್ಷಣದಲ್ಲಿಯೆ ಅವಳ ವಿಚಾರ ಬದಲಾಗಿತ್ತು. ಆಕೆ ಕೈಗೊಂಡ ಉಪಾಯದಿಂದ ಗಂಡನಿಗೆ ಬುದ್ಧಿ ಬಂದಿತೆ? ಆತನ ವೈರಾಗ್ಯದ ಹುಚ್ಚು

ಹೋಯಿತೇ? ಅವನಿಂದ ಸಿಕ್ಕದಿದ್ದ ಶರೀರಸುಖವೇನೊ ಅವಳಿಗೆ ಸಿಕ್ಕಿತು. ಆದರೆ, ಅದರಿಂದ ಅವಳು ನಿರೀಕ್ಷಿಸಿದ್ದ ತೃಪ್ತಿ ಲಭಿಸಿತೇ? ತುಳಿಯಬಾರದ ದಾರಿ ತುಳಿಯುವಾಗ ಎಂಥ ಕೋಲಾಹಲ ನಡೆದಿರಬಹುದು ಅವಳ ಎದೆಯಲ್ಲಿ? ಅಷ್ಟರ ಮೇಲೂ ಅವಳು ಪಡೆದ ಆ ಸುಖ ಎಂಥ ಸುಖ? ಶರೀರ ಸುಖವೊಂದೇ ಸುಖವೇ ಪ್ರಪಂಚದಲ್ಲಿ?

ಆ ವಿಚಾರ ಬರುತ್ತಲೂ ತನ್ನ ಗಂಡನ ಬಗೆಗೆ ಕೊಂಚ ಸಹಾನುಭೂತಿ ಮೂಡಿತು ಕಮಲಳಲ್ಲಿ. ಶರೀರಸುಖದ ಬಯಕೆಯಂತೂ ಅವರಿಗಿಲ್ಲ. ಹಾಗಾದರೆ, ಅವರು ಬಯಸುತ್ತಿರುವ ಸುಖವಾವುದು? ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವುದರಲ್ಲೂ ಒಂದು ಸುಖವಿದೆಯೆ? ಅದೆಂಥ ಸುಖ? ಇತರ ಸುಖಗಳನ್ನೆಲ್ಲ ತ್ಯಾಗ ಮಾಡುವುದರಿಂದಲೇ ಲಭಿಸುವುದೇ ಆ ಸುಖ?

ಅವಳು ಹಾಗೆ ಯೋಚಿಸುತ್ತಿದ್ದಾಗಲೇ ಹೊರಬಾಗಿಲು ತೆರೆದ ಸದ್ದಾಗಿತ್ತು. ಕಮಲ ಚಕಿತಳಾಗಿಯೇ ಎದ್ದು ಬಂದಿದ್ದಳು.

ಅವಳ ಹೆಜ್ಜೆಯ ಸದ್ದು ಕೇಳಿಸಿದರೂ ಆತ ಅವಳತ್ತ ಹೊರಳದೆ ನಿಂತ ಹಾಗೆಯೆ ನಿಂತುಕೊಂಡಿದ್ದ. ಕಮಲ ಅವನ ಬಳಿ ಕೋಮಲ ಸ್ವರದಲ್ಲಿ ಹೇಳಿದಳು:

"ಹೀಗ್ಯಾಕೆ ನಿಂತುಕೊಂಡಿರಿ ಇಲ್ಲಿ ಬಂದು? ನಿದ್ದೆ ಮಾಡೂದಿಲ್ಲೇನು?"

ಆಗಲೂ ಆತ ಅವಳತ್ತ ಹೊರಳಲಿಲ್ಲ, ದೃಷ್ಟಿಯನ್ನೂ ಕದಲಿಸಲಿಲ್ಲ. ಕಳವಳದಿಂದ ಭಾರವಾದ ಧ್ವನಿಯಲ್ಲಿ ಹೇಳಿದ:

"ನಿದ್ದೆ ಬರುವ ಹಾಗಿಲ್ಲ ಕಮಲಮುಖೀ."

ಮಗುವನ್ನು ಎಳೆದೊಯ್ದು ಮಲಗಿಸುವ ಹಾಗೆ ಆತನನ್ನು ಎಳೆದೊಯ್ದು ಮೈದಡವಿ ಮಲಗಿಸಬೇಕೆಂಬ ಬಲವತ್ತರವಾದ ಬಯಕೆ ಕಮಲಳ ಎದೆಯಲ್ಲಿ ತುಂಬಿ ಬಂತು. ಆ ಕ್ಷಣದಲ್ಲಿ ತನ್ನ ಗಂಡನೂ ಒಂದು ಮಗುವೇ ಎಂದು ಅವಳಿಗೆ ತೋರಿತು. ಬುದ್ಧಿ ಬೆಳೆಯದ ಹಸುಳೆ....

"ಬರ್ರಿ. ಬರ್ರಿ. ಹಟಮಾಡಬೇಡಿರಿ," ಎಂದಳಾಕೆ.

ಅವಳ ಧ್ವನಿಯಲ್ಲಿ ಕಾಣಿಸಿಕೊಂಡ ಬದಲಾವಣೆಯ ಅರಿವಾಗುತ್ತಲೂ ಮರುಳಯ್ಯ ಚಕಿತನಾಗಿ ಅವಳತ್ತ ತಿರುಗಿದ.

"ಬರ್ರಿ. ಬರ್ರಿ. ನೀವು ಕೋಣೆಯಲ್ಲೇ ಮಲಗಿರಿ. ನಾನು ಪಡಸಾಲೆ

ಯಲ್ಲೇ ಮಲಗಿಕೊಳ್ತೀನಿ."

"ಕಮಲಾ....ಕಮಲಮುಖಿ...." ಎನ್ನುತ್ತಾ ಆತ ಅವಳ ಎರಡು ಕೈಗಳನ್ನು ಹಿಡಿದೆತ್ತಿ ಹಣೆಗೊತ್ತಿಕೊಂಡು ಹೇಳಿದ :

"ಈಗ ನನ್ನ ಚಿಂತೆ ಹೋದಂತಾಯ್ತು. ಕಡೆಗೂ ನೀವು ಮನಸು ಮಾಡಿದಿರಿ...."

ಗಂಡನನ್ನು ಕೊಟಡಿಯಲ್ಲಿ ಬಿಟ್ಟು ತನ್ನ ಹಾಸಿಗೆಯನ್ನೆತ್ತಿಕೊಂಡು ಪಡಸಾಲೆಗೆ ಬಂದು, ಹಾಸಿಗೆ ಹಾಸುವುದಕ್ಕೂ ಮನಸ್ಸು ಬರದೆ, ಚಾಪೆಯ ಮೇಲೇ ಬಿದ್ದುಕೊಂಡಳು ಕಮಲ. ಮತ್ತೆ ಅವಳ ಎದೆಯಲ್ಲಿ ಬಿರುಗಾಳಿ ಮೊರೆಯತೊಡಗಿತ್ತು. ಗಂಡನ ಹುಚ್ಚಿಗೆ ಬಗ್ಗಬಾರದೆಂದು ಮುನ್ನಾದಿನವೆ ನಿರ್ಧರಿಸಿದ್ದ ತಾನು ಇಷ್ಟು ಬೇಗ ಆ ಸಂಕಲ್ಪವನ್ನು ಮರೆತು ಹುಚ್ಚಿಯಂತೆ ಆಚರಿಸಿದುದನ್ನು ಯೋಚಿಸಿದ ಹಾಗೆಲ್ಲ ಅವಳಿಗೆ ತನ್ನ ಬಗೆಗೆ ಅಚ್ಚರಿಯೆನಿಸ ತೊಡಗಿತು. ತನ್ನ ಸುಖದ ಭಂಡಾರವನ್ನು ತಾನಾಗಿಯೇ ಸಮುದ್ರಕ್ಕೆಸೆದು ಬಿಟ್ಟಂತಾಯಿತಲ್ಲ ! ಈ ಸಂಗತಿ ಗೊತ್ತಾದಾಗ ಪದ್ಮಾವತಿ ಏನೆನ್ನಬಹುದು ?

ಛೆ. ಛೆ. ಎಂಥ ಪ್ರಮಾದವಾಯಿತು....

"ವಿರಹದ ಬಿರುಬೇಸಿಗೆಯಲಿ
ನಿಟ್ಟುಸಿರಿನ ಬೇಸುರಿಯಲಿ
ಜೀವ ಮಿಡುಕುತಿರುವುದು...."

—ಇನ್ನೂ ಮುಗಿದಿರದ ಮುಕ್ಕಣ್ಣನ ಹಾಡು ಬಿರುಗಾಳಿಯಂತೆ ಬೀಸಿ ಬಂತು.

ಕೊನೆಯವರೆಗೂ ನಿಟ್ಟುಸಿರು ಬಿಡುತ್ತಾ ಮಿಡುಕುವುದೇ ತನ್ನ ಪಾಲಿನ ದೌರ್ಭಾಗ್ಯವೆ ? ಈ ಬೇಗೆಯಿಂದ ಬಿಡುಗಡೆ ಹೊಂದಲು ಬೇರೆ ಹಾದಿಯೆ ಇಲ್ಲವೆ ?

ಮರುಳಯ್ಯನ ರಾಜೀನಾಮೆಯ ಕಾಗದವನ್ನು ಎರಡು ಬಾರಿ ಓದಿಕೊಂಡು ಮೇಜಿನ ಮೇಲಿಟ್ಟು, ಕನ್ನಡಕವನ್ನು ತೆಗೆದು ಅದರ ಪೆಟ್ಟಗೆಗೆ ಸೇರಿಸುತ್ತ ಶರಣಪ್ಪ ಕೇಳಿದರು :

" ಪೂರಾ ವಿಚಾರ ಮಾಡೇ ರಾಜಿನಾಮೆ ಕೊಡುತ್ತಿದೀರಾ ? "

" ಹೌದ್ರೀ....ವಿಚಾರ ಮಾಡೀನಿ."

" ಇನ್ನೂ ಒಂದು ವಾರ ವಿಚಾರ ಮಾಡಿ ನೋಡಿರಿ. ಅಲ್ಲಿಯ ತನಕ ನಾನಿದನ್ನ ನನ್ನ ಹತ್ತಿರವೇ ಇಟ್ಟುಕೊಳ್ತೀನಿ. ಈಗ ದುಡುಕಿದ್ದಕ್ಕೆ ಮುಂದೆ ಪಶ್ಚಾತ್ತಾಪ ಪಡುವ ಪ್ರಸಂಗ ಬರಬಾರದು. ಇಂಥಾ ಒಳ್ಳೆಯ ನೌಕರಿ ಎಷ್ಟು ಮುಂದಿಗೆ ಸಿಗ್ತದ ? "

" ಒಳ್ಳೆಯ ನೌಕರಿ ! " ಎಂದು ಮನಸ್ಸಿನಲ್ಲಿಯೆ ಹೇಳಿಕೊಂಡು ಮುಗುಳ್ನಗುತ್ತ ಮರುಳಯ್ಯನೆಂದ :

" ಎಲ್ಲಾ ರೀತಿಯಿಂದ ವಿಚಾರ ಮಾಡಿಯೇ ರಾಜೀನಾಮೆ ಕೊಟ್ಟದೀನಿ ಮಾಸ್ತರೆ. ಈಗಲೇ ರಿಲೀವ್ ಮಾಡಿದರಂತೂ ಸರಿಯೆ. ನಿಯಮಗಳಂತೆ ಒಂದು ತಿಂಗಳು ನೋಟೀಸ್ ಕೊಡಲೂ ನಾನು ತಯಾರಿದೀನಿ."

" ನೋಟೀಸಿನ ಪ್ರಶ್ನೆಯಲ್ಲ, ಆದರೆ ನಿಮ್ಮ ಭವಿತವ್ಯದ ಪ್ರಶ್ನೆ ಇದು. ಕುಬೇರಪ್ಪನವರ ಸಂಗಡ ಹೊರಡುವದನ್ನೇ ಗಟ್ಟಮಾಡಿದಿರಾ ? "

" ಹೌದು ಸಾರ್. ಈ ನೌಕರಿಯಲ್ಲೂ ನನಗೆ ಸುಖವಿಲ್ಲ. ನಿಮಗೂ ಗೊತ್ತು."

" ಹಾಗಿದ್ದರೆ ನಿಮ್ಮ ಇಚ್ಛೆ," ಎಂದಿಷ್ಟೆ ನುಡಿದು ಶರಣಪ್ಪ ಸುಮ್ಮನಾದರು.

ಮತ್ತೊಂದು ನಿಮಿಷ ಕಳೆದ ಬಳಿಕ ಅವರು ಹೇಳಿದರು : " ಇನ್ನೊಂದು ವಾರದಲ್ಲಿ ರಿಲೀವ್ ಮಾಡ್ತೀನಿ. ಅದುವರೆಗೆ ರಜೆ ಅಂತ ತಿಳುಕೋಬಹುದು. ಈಗಲೇ ಹೊರಡಬೇಕೇನು ನೀವು ? "

" ಕುಬೇರಪ್ಪನವರು ಹೇಳಿದ ದಿನ ಹೊರಡಬೇಕು ಸಾರ್."

ಶಾಲೆಯ ಕೆಲಸಕ್ಕೆ ರಾಜೀನಾಮೆ ಕೊಡುವ ವಿಚಾರವಾಗಿ ಕಮಲಳ ಅಭಿಪ್ರಾಯವನ್ನೂ ಕೇಳಿರಲಿಲ್ಲ ಮರುಳಯ್ಯ. ಕೇಳುವುದರಿಂದಲಾದರೂ ಏನು ಪ್ರಯೋಜನ ? ಅದನ್ನು ಆಕೆ ವಿರೋಧಿಸುವುದು ಖಂಡಿತವೆಂದೇ ಅವನಿಗೆನ್ನಿಸಿತ್ತು. ಎಂತಲೇ ಆತ ಅವಳೆದುರಿಗೆ ಆ ವಿಚಾರವನ್ನೇ ಪ್ರಸ್ತಾಪಿಸಿರಲಿಲ್ಲ.

ರಾಜಿನಾಮೆಯ ಕಾಗದವನ್ನು ಶರಣಪ್ಪನವರಿಗೊಪ್ಪಿಸಿ ಮನೆಗೆ ಬಂದ ಬಳಿಕ ಮಾತ್ರ ಮರುಳಯ್ಯ ಆ ವಿಷಯ ತಿಳಿಸಲೇಬೇಕಾಗಿ ಬಂದಿತು. ಮಧ್ಯಾಹ್ನದಲ್ಲೇ ಮನೆಗೆ ಬಂದ ಗಂಡನನ್ನು ಕಂಡು ಕಮಲ ಕೇಳಿದಳು :

" ಯಾಕೆ ? ಇವತ್ತು ಬೇಗ ಬಂದಿರಿ ? ಸಾಲೆಗೆ ಸೂಟಿಯೋ ಏನು ? "

" ಸೂಟಿ ? ನನಗೆ ಇನ್ನು ಸೂಟಿಯೆ."

" ಅಂದರೆ ? "

" ಇಂದಿನಿಂದ ಸಾಲೆಗೂ ನನಗೂ ಸಂಬಂಧವಿಲ್ಲ ಕಮಲಮುಖೀ. ನಾನು ರಾಜೀನಾಮೆ ಕೊಟ್ಟುಬಿಟ್ಟೆ."

ಒಂದೈದು ನಿಮಿಷ ಹತಬುದ್ಧಳಾಗಿ ಮೌನವಾಗಿ ಕುಳಿತುಕೊಂಡಿದ್ದು ಅನಂತರ ಕೇಳಿದಳು ಕಮಲ :

" ರಾಜೀನಾಮೆ ಕೊಟ್ಟರಿ. ಮುಂದೆ ? "

" ಮೊನ್ನೆ ಕುಬೇರಪ್ಪನವರು ಹೇಳಿದ್ದು ನಿಮಗೂ ಗೊತ್ತದಲ್ಲ ? ಅವರ ಊರಲ್ಲಿ ಆಶ್ರಮ ಸ್ಥಾಪಿಸ್ತಾರೆ. ಅದನ್ನ ನೋಡಿಕೊಳ್ಳೂದಕ್ಕೆ ನಾನು ಹೋಗಬೇಕಾಗ್ತದ."

" ಅಂದರೆ....ಅವರಿಗೆ ಒಪ್ಪಿಗೆ ಕೊಟ್ಟೇ ಬಿಟ್ಟರೇನು ಹಾಗಾದರೆ ? "

" ನಿನ್ನೆ ಸಂಜೆ ಮತ್ತೆ ಸಿಕ್ಕಿದ್ದರು ಕುಬೇರಪ್ಪನವರು. ತಿಂಗಳಿಗೆ ನೂರೈವತ್ತು ರೂಪಾಯಿ ಗೌರವವೇತನ ಕೊಡ್ತೀನಂತ ಹೇಳಿದಾರೆ. ಸಾಲೆಗಿಂತ ಇದು ಚಲೋದಲ್ಲೇನು ? "

" ಅವರ ಊರಿಗೆ ನೀವೊಬ್ಬರೇ ಹೋಗ್ತೀರೊ, ಅಥವಾ...."

" ನಾನೊಬ್ಬನೇ ಹ್ಯಾಗೆ ಹೋಗೂದು ? ನೀವು ? "

" ಅದನ್ನೇ ಕೇಳ್ತೀನಿ ನಾನೂ. ನೀವು ಏನು ವಿಚಾರ ಮಾಡೀರಿ ? "

" ನಾನು ಹೋದರೆ ನೀವೂ ಬರಬೇಕಾಗ್ತದಲ್ಲ...."

" ಅಲ್ಲಿಗೆ ಬರಲಿಕ್ಕೆ ನನಗೆ ಮನಸಿರದಿದ್ದರೆ ? "

" ಯಾಕೆ ಮನಸಿಲ್ಲ ? "

" ಸ್ಪಷ್ಟ ಹೇಳಲೇ ? "

" ಹೇಳಿಬಿಡಿರಿ. ಈಗಲೇ ಎಲ್ಲಾ ನಿಶ್ಚಯ ಮಾಡಿ ಬಿಡೋಣ."

" ಅಲ್ಲಿಗೆ ಬರಲಿಕ್ಕೆ ನನಗೇನು ಮನಸ್ಸಿಲ್ಲ. ನಿಮ್ಮ ಆ ಕುಬೇರಪ್ಪ ನೀವು ತಿಳಿದಂತೆ ಒಳ್ಳೆಯವರಿರಬಹುದಂತ ನನಗನಿಸೂದಿಲ್ಲ."

ಕುಬೇರಪ್ಪ ಒಳ್ಳೆಯವನೆಂದು ಮರುಳಯ್ಯನೂ ದೃಢವಾಗಿ ನಂಬಿ ಕೊಂಡಿರಲಿಲ್ಲ. ಅವನ ಮನಸ್ಸಿನಲ್ಲಿಯೂ ಸಂದೇಹವಿದ್ದೇ ಇತ್ತು. ಆದರೆ, ಕಮಲಳೆದುರಿಗೆ ಇದನ್ನು ವ್ಯಕ್ತಗೊಳಿಸದೆ ಆತ ಎಚ್ಚರಿಕೆಯಿಂದ ಮಾತನಾಡಿದ:

" ಒಬ್ಬರ ಬಗ್ಗೆ ಸರಿಯಾಗಿ ತಿಳಕೊಳ್ಳದೆ ತಪ್ಪು ಅಭಿಪ್ರಾಯ ಇಟ್ಟು ಕೊಳ್ಳೂದು ಚಲೋದಲ್ಲ ಕಮಲಮುಖೀ."

" ತಪ್ಪು ಅಭಿಪ್ರಾಯ ? ಇಲ್ಲ, ಅಂಥಾದ್ದೇನೂ ಇಲ್ಲ. ಅವತ್ತು ನಾನು ಅವರನ್ನ ನೋಡಿದೆನಲ್ಲ. ಆಗಲೇ ನನಗೆ ಮನವರಿಕೆಯಾಯ್ತು. ಅವರು ಪಕ್ಕಾ ಡಾಂಭಿಕರು ಅಂತ... ಅಲ್ಲದೆ, ಅವರ ವಿಷಯ ಗೊತ್ತಿದ್ದವರೆಷ್ಟೋ ಮಂದಿ ಹೇಳಿದ ಕಥೆಗಳನ್ನು ಕೇಳಿದ ಬಳಿಕ ಸಂಶಯವೇ ಉಳೀಲಿಲ್ಲ."

" ಕಥೆಗಳೇ ? ಎಂಥಾ ಕಥೆಗಳು ? "

" ಒಂದೊಂದೂ ಒಂದೊಂದು ಕಾದಂಬರಿಯಾಗುವ ಹಾಗಿದಾವೆ. ಮುಖ್ಯವಾಗಿ ಅವರ ನಡತೆ ನೆಟ್ಟಗಿಲ್ಲ. ಅಂಥವರ ಮಾತು ನಂಬಿ ನಾವು ಆಶ್ರಮಕ್ಕೆ ಹೋಗಿ ನಿಲ್ಲೂದು ಚಲೋದಲ್ಲ. ಅದರಿಂದ ನಮಗೆ ಮರ್ಯಾದೆ ಬರೂದಿಲ್ಲ."

ಕುಬೇರಪ್ಪನವರ ಊರಿಗೆ ಹೋಗಲು ಕಮಲಳನ್ನೊಪ್ಪಿಸುವುದು ತುಂಬಾ ಪರಿಶ್ರಮದ ಕಾರ್ಯವೆಂಬುದರ ಅರಿವಾಗುತ್ತಲೂ ಮರುಳಯ್ಯ ಅಂದಿನ ಮಟ್ಟಿಗೆ ಆ ವಾದವನ್ನು ನಿಲ್ಲಿಸಿ ಟೊಪ್ಪಿಗೆ ಹಾಕಿಕೊಂಡು ಹೊರಗೆ ಹೊರಟ.

" ಎಲ್ಲಿಗೆ ಹೊರಟಿರಿ ? ರಾಜೀನಾಮೆಯನ್ನ ಹಿಂತೆಗೆದುಕೊಳ್ಳಲಿಕ್ಕೆ ಸಾಧ್ಯವಿದ್ದರೆ ಈಗಲೇ ತಗೊಂಡು ಬಿಡಿರಿ," ಎಂದಳು ಕಮಲ.

ಉತ್ತರವಾಗಿ ಮರುಳಯ್ಯ ಹೇಳಿದುದೇನೆಂಬುದು ಕಮಲಳಿಗೆ ತಿಳಿಯ ಲಿಲ್ಲ.

ಅವನು ಹೋಗುತ್ತಲು ಅವಳು ಬಾಗಿಲು ಇಕ್ಕಿಕೊಂಡು ಪದ್ಮಾವತಿಯ

ಮನೆಗೆ ಹೋಗಿ, ನಿದ್ದೆ ಮಾಡುತ್ತಿದ್ದ ಪದ್ಮಾವತಿಯನ್ನೆಬ್ಬಿಸಿ ರಾಜೀನಾಮೆಯ ವಾರ್ತೆಯನ್ನು ತಿಳಿಸಿದಳು.

"ಇವರು ಹೀಗೇನಾದರೂ ದುಡುಕಿ ಮಾಡಿಯಾರಂತ ನನಗೆ ಚಿಂತೆ ಯಿದ್ದೇ ಇತ್ತವ್ವ. ಕಡೆಗೂ ಹೀಗಾಯ್ತು ನೋಡು."

"ಛೆ. ಛೆ. ಬಹಳ ತಪ್ಪಾಯ್ತು. ಬಹಳ ತಪ್ಪಾಯ್ತು. ಇಂಥಾ ಹುಚ್ಚು ಕೆಲಸ ಯಾಕಾದರೂ ಮಾಡಿದರೋ? ಸುಲಲಿತದೇವಿ ಚೆನ್ನಾಗಿ ತಲೆ ಕೆಡಿಸಿ ದಂತೆ ಸಾಕು."

"ನಮ್ಮ ಬುದ್ಧಿಯನ್ನ ನಮ್ಮ ಕೈಲಿಟ್ಟುಕೊಂಡಿದ್ದರೆ ಯಾರೂ ನಮ್ಮನ್ನ ಕೆಡಿಸಲಿಕ್ಕಾಗೂದಿಲ್ಲ ಪದ್ಮಕ್ಕಾ. ಇವರೇ ಮೊದಲು ಮರುಳರು. ಅದಕ್ಕೇ ಹೀಗಾಯ್ತು."

"ರಾಜೀನಾಮೆ ಕೊಡೂದಕ್ಕೆ ಮೊದಲು ನಿನ್ನ ಕೇಳಲೇ ಇಲ್ವೇನು?"

"ನಾನು ಬೇಡಾ ಅನ್ನುತೀನಿ ಅಂತ ತಿಳಕೊಂಡೇ ನನಗೊಂದು ಮಾತೂ ತಿಳಿಸದೆ ಎಲ್ಲಾ ಮಾಡಿ ಮುಗಿಸಿ ಬಂದಾರೆ. ಇದೇ ಈಗ ಗೊತ್ತಾದದ್ದು ನನಗೂ."

"ಎಲ್ಲಿದಾರೆ ಈಗ? ನಮ್ಮವರು ಬಂದ ಬಳಿಕ ಅವರಿಂದಾದರೂ ಹೇಳಿ ಸೂಣಂತೆ. ಕುಬೇರಪ್ಪ ಎಂಥವನನ್ನೂದು ಗೊತ್ತಾದ ಮೇಲಾದರೂ ಅವರ ಹುಚ್ಚು ಬಿಡಬಹುದೇನೊ...."

"ಒಂದರ್ಧ ತಾಸು ನೋಡಿದರೆ ಸಾಕು, ಅವನೆಂಥವನನ್ನೂದು ಎಂಥಾ ಮೂರ್ಖರಿಗೂ ಗೊತ್ತಾಗಿ ಹೋಗ್ತದ. ಇವರಿಗೆ ಮಾತ್ರ ಗೊತ್ತಾಗಲಿಲ್ಲ. ಏನ್ಮಾಡೂದು ಪದ್ಮಕ್ಕಾ, ನನ್ನ ಅದೃಷ್ಟ...."

"ಆ ಸುಲಲಿತಾ? ಅವಳು ಹ್ಯಾಗೆ? ನಾವು ತಿಳುಕೊಂಡ ಹಾಗೇ ಇದಾಳೋ? ಅಥವಾ...."

"ಅವಳು ಮಾತ್ರ ಬಹಳ ಬೆರಿಕಿಯಿದಾಳೆ, ಪದ್ಮಕ್ಕಾ. ಏನೂ ಗುಟ್ಟು ಬಿಟ್ಟುಕೊಡೂದಿಲ್ಲ ಒಮ್ಮೆಲೆ. ನನ್ನನ್ನೂ ಬಹಳ ಮರ್ಯಾದೆಯಿಂದಲೇ ಮಾತಾ ಡಿಸಿದಳು. ಊಟ ನಡೆದಿದ್ದಾಗಲೂ ಸಂಶಯ ಬರುವಂಥಾದ್ದು ಏನೂ ಆಗಲಿಲ್ಲ."

"ನಿನ್ನ ಪೂರಾ ನಂಬಿಸಿ ಕುಬೇರಪ್ಪನ ಊರಿಗೆ ಕಳಿಸಿ ಅಲ್ಲಿ ಫಜೀತಿ

ಮಾಡಬೇಕಂತ ಹೊಂಚು ಹಾಕಿರಬಹುದು."

"ಇರಬಹುದು. ಅಂತೂ ಅವಳು ಬಹಳ ಹುಷಾರು ಹೆಣ್ಣು. ಅವಳ ಗಂಡನೂ ಹಾಗೇ. ಬಹಳ ಧೂರ್ತ. ನೋಡಲಿಕ್ಕೆ ದೊಡ್ಡ ಸಂಭಾವಿತನಂತೇ ಕಾಣಿಸ್ತಾನೆ."

"ಕುಬೇರಪ್ಪ?"

ಶ್ರೀಮಂತಿಕೆಯೊಂದನ್ನ ಬಿಟ್ಟರೆ ಬೇರೆ ಯಾವ ಗುಣವೂ ಇದ್ದ ಹಾಗಿಲ್ಲ ಅವನಲ್ಲಿ. ಅವನು ನೋಡುವ ರೀತಿಯೆಂಥಾದ್ದು, ಮಾತಾಡುವ ರೀತಿ ಯೆಂಥಾದ್ದು, ಹೆಂಗಸರನ್ನು ಎಂದೂ ನೋಡೇ ಇರದವರ ಹಾಗೆ ನನ್ನ ನೋಡುತ್ತಿದ್ದ. ಇನ್ನು ಅವನ ಮಾತು....ಎಲ್ಲಾ ತನಗೇ ಸಂಬಂಧಪಟ್ಟಿದ್ದು. ತಾನು ಹಾಗೆ ಮಾಡಿದ, ತಾನು ಹೀಗೆ ಮಾಡಿದ. ಬರೀ ಅದೇ. ಅದೊಂದು ಜಂಬದ ಕೋಳಿ. ಅವನು ಎರಡು ನಿಮಿಷ ಮಾತಾಡಿದರೆ ಸಾಕು, ತಲೆನೋವು ಬಂದುಬಿಡ್ತದ. ಅಷ್ಟು ಬೇಸರು. ವಸುಮತೀಬಾಯಿ ಅಂತ ಒಬ್ಬರು .ಡಾಕ್ಟರು ಬಂದಿದ್ದರು ಗೊಬ್ಬೂರಿಂದ, ಅವರೂ ಮೂಗು ಮುರೀತಿದ್ದರು ಅವನ್ನ ನೋಡಿ."

"ಓಹ್ಹೊ! ಅವಳೇ! ದೇಶಭಕ್ತ ವಿರುಪಣ್ಣನ ಪ್ರೇಯಸಿ...."

"ಅವರಿಬ್ಬರಿಗೂ ಅಂಥಾ ಸಂಬಂಧ ಏನಾದರೂ ಇರಬಹುದಂತ ನನಗೂ ಅನ್ನಿಸಿತ್ತವ್ವಾ ಆಗಲೆ. ಡಾಕ್ಟರೂ ಅವಳನ್ನು ಆಗಾಗ ಕದ್ದು ಕದ್ದು ನೋಡುತ್ತಾ ಇದ್ದ...."

"ಅವನಂತೂ ಓರೆಕೋರೆಯ ಒಂದನೇ ನಂಬರಿನ ಪೋಲಿ. ಅವಳೂ ಹಾಗೆ. ಅವಳ ತಲೆಯಲ್ಲಿ ಕೂದಲು ಇರುವಷ್ಟು ಮಂದಿ ಗೆಳೆಯರು ಅವಳಿಗೆ...."

"ಇಂಥವರೆಲ್ಲಾ ಕೂಡಿ ಕರಾಚೂರಿನ ಮಹಾಗುರು ಮಹಾಮಾತೆಯರ ಹೆಸರು ಕೆಡಿಸ್ತಾ ಇದಾರಲ್ಲ ಪದ್ಮಕ್ಕಾ?"

"ಒಬ್ಬ ಸದ್ಗುರು ಇದ್ದ ಕಡೆ ಇಂಥಾ ಕಳ್ಳ ಶಿಷ್ಯ ಶಿಷ್ಯೆಯರು ಇದ್ದೇ ಇರುತಾರೆ. ಊಟಕ್ಕೆ ಬರಹೇಳಿದಿಯಾ ಸುಲಲಿತೆಗೆ?"

"ಹೇಳೀನಿ. ಮುಂದಿನ ಆದಿತ್ಯವಾರ ಮಧ್ಯಾಹ್ನ ಬರ್ತೀನಂತ ಹೇಳಿ ದಾಳೆ. ಅದಿರಲಿ. ಈಗ ರಾಜೀನಾಮೆಯದು ಹ್ಯಾಗೆ ಮಾಡೂದು?"

"ನಮ್ಮವರ ಮಾತಾದರೂ ಕೇಳಬಹುದೋ ಇಲ್ಲೋ ಮರುಳಯ್ಯ

ನವರು ?”

“ಹೇಳುವ ಹಾಗೆ ಹೇಳಲಿ. ಕೇಳಿದರೆ ಕೇಳಿದರು. ಇಲ್ಲದಿದ್ದರಿಲ್ಲ.”

ಯಾರ ಮಾತನ್ನೂ ಕೇಳುವ ಸ್ಥಿತಿಯಿರಲಿಲ್ಲ ಮರುಳಯ್ಯ. ಮುಕ್ಕಣ್ಣ ಎರಡು ಗಂಟೆಗಳ ಕಾಲ ಕಂಠಶೋಷಣೆ ಮಾಡಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ.

“ಈ ಹಾದಿಯಲ್ಲಿ ಹೋದರೇನೇ ನನ್ನ ಗುರಿ ಸಾಧಿಸ್ತದಂತ ಖಾತ್ರಿಯಾಗಿದೆ ನನಗೆ,” ಎಂದು ಸ್ಪಷ್ಟವಾಗಿ ಹೇಳಿದ ಮರುಳಯ್ಯ.

“ನಿಮ್ಮ ಆ ಗುರಿಯಾದರೂ ಏನು ಮರುಳಯ್ಯ ?”

“ನಿಮ್ಮ ಸಾಕ್ಷಾತ್ಕಾರದ ಹುಚ್ಚಿಗಾಗಿ ನಿಮ್ಮ ಹೆಂಡತಿಯ ಬಲಿ ಕೊಡ್ತೀರಾ ?”

“ಅವರದೇಕೆ ಬಲಿಯಾಗ್ತದ ? ಅವರೂ ನನ್ನ ಹಾದಿಯಲ್ಲೇ ಬರ್‍ತಾರೆ.”

ಮರುಳಯ್ಯನ ಕೊಟಡಿಯಲ್ಲಿ ಈ ವಾದ ನಡೆದಿದ್ದಾಗ ಪಡಸಾಲೆಯಲ್ಲಿ ಕುಳಿತು ಕೇಳುತ್ತಿದ್ದ ಕಮಲ ಅಲ್ಲಿಂದಲೇ ಹೇಳಿದಳು :

“ನಿಮ್ಮ ಹಾದಿಯಲ್ಲಿ ಬರೂದಕ್ಕೆ ನನ್ನಿಂದಾಗುವುದಿಲ್ಲ.”

“ನೋಡಿದಿರಾ ? ಈಗೇನನ್ನುತ್ತೀರಿ ?” ಎಂದು ಸವಾಲು ಹಾಕಿದ ಮುಕ್ಕಣ್ಣ.

ಆ ರೀತಿಯಾಗಿ ಕಮಲ ನಡುವೆ ಮಾತನಾಡಿದುದು ಮರುಳಯ್ಯನಿಗೆ ಬೇಸರವನ್ನುಂಟುಮಾಡಿತ್ತು. ಮುಕ್ಕಣ್ಣನ ಸಮಕ್ಷಮದಲ್ಲಿ ತನಗೂ ಅವಳಿಗೂ ಘರ್ಷಣೆ ನಡೆಯುವುದನ್ನು ಆತ ಅಪೇಕ್ಷಿಸಿರಲಿಲ್ಲ. ಎಂತಲೇ, ಈಗ ತಾನು ಅವಳೊಡನೆ ವಾದಿಸದೆ ಸುಮ್ಮನಿರುವುದೇ ಒಳ್ಳೆಯದೆಂದು ಭಾವಿಸಿ ಆತ ಮೌನ ತಳೆದ.

ಆದರೆ, ಮುಕ್ಕಣ್ಣ ಮಾತ್ರ ಅವನನ್ನು ಅಷ್ಟಕ್ಕೇ ಬಿಡಲಿಲ್ಲ.

“ಕೈ ಹಿಡಿದ ಹೆಂಡತಿಯ ಮನಸ್ಸಿನ ವಿರುದ್ಧವಾಗಿ ರಾಮಕೃಷ್ಣ ಪರಮಹಂಸರೂ ಕೂಡಾ ಏನನ್ನೂ ಮಾಡಲಿಲ್ಲ ಅನ್ನೂದು ನಿಮಗೂ ಗೊತ್ತೇ ಇರಬೇಕಲ್ಲ ? ಈಗ ನೀವು ಕಮಲಮ್ಮನವರ ಮಾತು ಕೇಳದಿದ್ದರೆ ಬಹಳ ತಪ್ಪಾಗ್ತದ. ಕುಬೇರಪ್ಪ ಒಳ್ಳೆಯವನಲ್ಲ. ಅವನ್ನ ನಂಬಿ ಅವನೂರಿಗೆ ಹೋಗೂದು ಚಲೋದಲ್ಲ. ಮುಂದೆ ನಿಮಗೆ ಬಹಳ ಪಶ್ಚಾತ್ತಾಪವಾಗ್ತದ. ಕಮಲಮ್ಮ

ನವರೂ ಬಹಳ ಕಷ್ಟಪಡಬೇಕಾಗ್ತದ. ನಿಮ್ಮ ಹಿತೈಷಿಯಾಗಿ ಈ ಮಾತು ಹೇಳ್ತಿದೀನಿ. ತಿಳಿದು ತಿಳಿದೂ ಬಾವಿಯಲ್ಲಿ ಹಾರಿಕೋಬೇಡಿರಿ."

ಆಗಲೂ ಮರುಳಯ್ಯ ಏನೊಂದೂ ಮಾತನಾಡಲಿಲ್ಲ. ತನ್ನ ನಿರ್ಧಾರ ವನ್ನೂ ಬದಲಿಸಲಿಲ್ಲ. ತಾನು ಹಿಡಿದದ್ದೇ ಸರಿಯಾದ ಹಾದಿಯೆಂದು ಆತ ದೃಢವಾಗಿ ನಂಬಿಕೊಂಡಿದ್ದ.

"ರಾತ್ರಿ ನೀನೆಲ್ಲಿ ಮಲಗುತ್ತಿದ್ದೀಯೇ?" ಎಂದು ಪದ್ಮಾವತಿ ಕೇಳಿದಳು, ಮಾರನೆಯ ದಿನ ಮಧ್ಯಾಹ್ನ.

"ಪಡಸಾಲೆಯಲ್ಲಿ."

ಪದ್ಮಾವತಿ ರೇಗಿ ನುಡಿದಳು: "ಎಲ್ಲಾ ನಿಂದೇ ತಪ್ಪು ಅಂತ ಕಾಣ್ತದ. ಅವರ ಹುಚ್ಚಿಗೆ ಸರಿಯಾಗಿ ನೀನ್ಯಾಕೆ ತಾಳ ಹಾಕುತ್ತೀ?"

"ಮತ್ತೇನು ಮಾಡಲಿ ಪದ್ಮಕ್ಕಾ? ಅವರನ್ನ ಹಿಡಿದು ಗದರಿಸೂದು ನನ್ನಿಂದಾಗದ ಕೆಲಸ. ನಾಚಿಕೆಗೇಡು."

ಒಂದು ಗಳಿಗೆ ಸುಮ್ಮನಿದ್ದು ಪದ್ಮಾವತಿ ಪ್ರಶ್ನಿಸಿದಳು:

"ಅವರಂತೂ ಕುಬೇರಪ್ಪನವರ ಊರಿಗೆ ಹೊರಟುಬಿಡುವ ಹಾಗೇ ಕಾಣ್ತದಲ್ಲ? ನೀನೇನು ಮಾಡುವಾಕೆ?"

"ಏನು ಮಾಡಲಿ?"

"ಅದನ್ನ ನೀನೇ ನಿಶ್ಚಯಿಸಬೇಕವ್ವಾ. ಎಷ್ಟಾದರೂ ನಾವು ಹೊರಗಿನವರು. ಇಂಥಾದ್ದೆಲ್ಲಾ ಹೇಳಬಾರದು."

ಕಮಲಳ ಕಣ್ಣಿನಲ್ಲಿ ಕಂಬನಿಯೊಂದು ಕಾಣಿಸಿಕೊಂಡಿತು. ಪದ್ಮಾವತಿಯ ಕೈಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡು ಸ್ನೇಹದಿಂದ ಅದುಮುತ್ತಾ ಅವಳೆಂದಳು:

"ನೀನು ಹೀಗೆಲ್ಲಾ ಆಡಿದರೆ ನನಗೆ ಅಳು ಬರ್ತದ ಪದ್ಮಕ್ಕಾ. ಯಾರೂ ಇಲ್ಲದ ಪರದೇಶಿ ನಾನು. ನೀನೇ ನನ್ನ ಅಕ್ಕ ತಂಗಿ ಗೆಳತಿ ಎಲ್ಲಾ...."

"ಕೆಲ ದಿವಸಗಳ ವರೆಗೆ ತವರುಮನೆಯಲ್ಲಿರಲಿಕ್ಕಾಗಲಿಕ್ಕಿಲ್ಲೇನು?" ಎಂದಳು ಪದ್ಮಾವತಿ.

"ಊಹೂಂ. ಎರಡು ದಿನ ಕೂಡಾ ಇರುವಂತಿಲ್ಲ. ಅತ್ತಿಗೆಗೆ ನನ್ನ ಕಂಡರಾಗದು. ಅದರಿಂದಾಗಿ ಅಣ್ಣನೂ ನನ್ನ ಮೇಲಿನ ಮನಸು ತೆಗೆದು

ಬಿಟ್ಟಿದಾನೆ. ನಾಲ್ಕೈದು ವರ್ಷ ಆಯ್ತು, ಅವರೂ ಬಂದಿಲ್ಲ. ನಾನೂ ಹೋಗಿಲ್ಲ."

"ಅತ್ತೆಯ ಮನೆಯವರೂ ಯಾರೂ ಇಲ್ಲೇನೇ ಕಮಲಾ?"

"ಎಲ್ಲೆಲ್ಲೋ ಇದಾರೆ....ನನ್ನ ಪಾಲಿಗೆ ಮಾತ್ರ ಇಲ್ಲದ ಹಾಗೇ."

"ಹಾಗಾದರೆ ಮುಂದೆ ಹ್ಯಾಗವ್ವ? ಇಲ್ಲೇ, ಇದೇ ಮನೆಯಲ್ಲೇ ಇದ್ದು ಬಿಡ್ತೀಯೇನು?"

"ಇಲ್ಲಿದ್ದು ಏನು ಮಾಡಲಿ?"

"ನಾನೂ ಇಲ್ಲೇ ಇರ್ತೀನಲ್ಲ? ಅಕ್ಕ ತಂಗಿ ಕೂಡೇ ಇರೂಣು ಇಬ್ಬರೂ."

"ಛೆ. ಛೆ. ಅದೆಲ್ಲಾ ಹ್ಯಾಗಾದೀತು? ಮಂದಿ ಏನಂದಾರು?"

"ಅನ್ನುವವರೇನು ಅಂದೇ ಅನ್ನುತಾರೆ. ಮಂದಿಯ ಬಾಯಿಗೆ ಬೀಗ ಹಾಕೂದು ಶಕ್ಯ ಅದೆಯೇನೇ? ನಮ್ಮಿಷ್ಟಕ್ಕೆ ನಾವಿದ್ದರಾಯ್ತು."

"ಅದೆಲ್ಲಾ ಸರಿಯವ್ವ. ಆದರೆ, ಅವರನ್ನ ಬಿಟ್ಟು ನಾನಿಲ್ಲಿ ಇರೂದಾದರೂ ಚಂದ ಕಂಡೀತೇನು?"

"ಕಾಣೂದಿಲ್ಲ ನಿಜ. ಅವರನ್ನ ಬಿಟ್ಟು ಇರು ಅಂತ ನಾನೂ ಹೇಳೂದಿಲ್ಲ. ಅವರಂತೂ ಹೋಗಬಾರದ ಸ್ಥಳಕ್ಕೆ ಹೊರಟಾರೆ. ಈಗ ನೀನೇನು ಮಾಡಬೇಕು ಅನ್ನುವ ಪ್ರಶ್ನೆ ಅದು."

"ನೋಡೂಣು. ಇನ್ನೂ ಪ್ರಯತ್ನ ಮಾಡಿ ನೋಡ್ತೀನಿ," ಎಂದಳು ಕಮಲ.

ಆದರೆ, ಅವಳೆಷ್ಟು ಪ್ರಯತ್ನಪಟ್ಟರೂ ಮರುಳಯ್ಯನನ್ನು ಅವನ ನಿರ್ಧಾರದಿಂದ ಕದಲಿಸಲು ಸಮರ್ಥಳಾಗಲಿಲ್ಲ.

"ಈ ವಿಷಯವಾಗಿ ದಯವಿಟ್ಟು ವಾದಿಸಬೇಡಿರಿ," ಎಂದು ಸ್ಪಷ್ಟವಾಗಿ ಹೇಳಿಬಿಟ್ಟ ಮರುಳಯ್ಯ.

"ಹಾಗಾದರೆ ನೀವು ಅಲ್ಲಿಗೆ ಹೋಗೂದು ಖಂಡಿತ ಏನು?"

"ಸಂಶಯವೇ ಇಲ್ಲ. ಈಗಾಗಲೇ ಎಲ್ಲಾ ಸಿದ್ಧತೆಯೂ ಮುಗಿದದ. ನಾವು ಹೊರಡೂದಷ್ಟೇ ಬಾಕಿ. ಕುಬೇರಪ್ಪನವರು ನಮ್ಮ ಹಾದಿ ಕಾಯುತ್ತಿರಬೇಕು."

"ನಾನು ಅಲ್ಲಿಗೆ ಬರಲು ತಯಾರಾಗದಿದ್ದರೆ?" ಎಂದು ವಿಕಾರರಹಿತ

ಧ್ವನಿಯಲ್ಲಿ ಕೇಳಿದಳು ಕಮಲ.

" ಬರದಿದ್ದರೆ....ಬರದಿದ್ದರೆ...." ಮರುಳಯ್ಯ ಒಂದು ಕ್ಷಣ ತಲೆ ತುರಿಸಿ ಕೊಳ್ಳುತ್ತಿದ್ದು ಅನಂತರ ಹೇಳಿದ : " ಬರದಿದ್ದರೆ ನನ್ನದೇನೂ ಒತ್ತಾಯ ಇಲ್ಲ. ನೀವೊಬ್ಬರೇ ಇಲ್ಲೇ ಇರಬಹುದು. ತಿಂಗಳು ತಿಂಗಳೂ ರೂಪಾಯಿ ಕಳಿಸುತ್ತೀನಿ, ಖರ್ಚಿಗೆ."

" ಆಯ್ತು. ಹಾಗೇ ಮಾಡಿರಿ," ಎಂದಳು ಕಮಲ, ನಿಶ್ಚಯದ ಧ್ವನಿಯಲ್ಲಿ.

ಆದರೆ, ಮಾತನಾಡಿದಂತೆ ಅವಳನ್ನು ಅಲ್ಲಿಯೆ ಬಿಟ್ಟು ಹೊರಡುವುದು ಸುಲಭವಾದ ಕೆಲಸವೇನೂ ಆಗಿರಲಿಲ್ಲ. ಮರುಳಯ್ಯ ನಾಲ್ಕು ದಿನವಿಡೀ ಯೋಚಿಸಿದ. ಸುಲಲಿತದೇವಿಯ ಸಲಹೆ ಕೋರಿದ.

" ಅವರು ಬರೂದೇ ಇಲ್ಲ ಅಂತಾರೇನು ? " ಎಂದಳು ಸುಲಲಿತದೇವಿ. ಒಬ್ಬರೇ ಇಲ್ಲಿರಬಲ್ಲರೇನು ? "

" ಇರಬಹುದಲ್ಲ ? "

" ನಿಮಗೆ ವ್ಯವಹಾರ ಜ್ಞಾನ ಏನೇನೂ ಇಲ್ಲ ಮರುಳಯ್ಯನವರೆ. ಹರೆಯದ ಹೆಂಗಸನ್ನ ಒಬ್ಬಳನ್ನೇ ಬಿಟ್ಟು ಹೋಗ್ತಾರೇನು ಯಾರಾದರೂ ? ಇದು ಮೊದಲೇ ಪಟ್ಟಣ. ಯಾವ ವೇಳೆಯಲ್ಲಿ ಏನಾದೀತು ಅಂತ ಹೇಳಲಿಕ್ಕೆ ಬರ್ತದೇನು ? "

" ಬರದಿದ್ದರೆ ನಾನಾದರೂ ಏನು ಮಾಡಲಿ, ಹೇಳಿರಿ," ಎಂದನಾತ, ಅಸಹಾಯತೆ ತುಂಬಿದ ಧ್ವನಿಯಲ್ಲಿ.

" ಎಂಥಾ ಗಂಡಸರೋ ನೀವು ! ನಿಮ್ಮ ಹೆಂಡತಿ ನಿಮ್ಮ ಮಾತು ಕೇಳೂದಿಲ್ಲ ಅಂದರೇನು ? "

" ಅದಕ್ಕೂ ಕೂಡಾ ತಾಕತ್ತು ಬೇಕಾಗ್ತದಲ್ಲ ! ಇರಲಿ. ಹ್ಯಾಗೂ ನಾನು ಆದಿತ್ಯವಾರ ಊಟಕ್ಕೆ ಬರ್ತೀನಲ್ಲ. ಆಗ ಹೇಳ್ತೀನಿ ಅವರಿಗೆ. ನನ್ನ ಮಾತಾದರೂ ಕೇಳ್ತಾರೇನೋ ನೋಡೋಣ," ಎಂದಳು ಸುಲಲಿತದೇವಿ.

" ಕಡೆಗೂ ಅವರು ನಿಮ್ಮ ಸಂಗಡ ಬರಲೆಕ್ಕೊಪ್ಪದೇ ಇದ್ದರೆ ನಮ್ಮಲ್ಲಿಯೇ ಬಿಟ್ಟು ಹೋಗಬಹುದು," ಎಂದು ಸೂಚಿಸಿದ ಸುಚರಿತರಾಯ.

" ಹಾಗೂ ಮಾಡಬಹುದು. ಒಂದೆರಡು ತಿಂಗಳು ಅವರು ನಮಲ್ಲಿದ್ದರೆ

ಅವರಿಗೂ ಅಧ್ಯಾತ್ಮದಲ್ಲಿ ಪ್ರೀತಿ ಹುಟ್ಟಬಹುದು," ಎಂದಳು ಸುಲಲಿತದೇವಿ.

ಭಾನುವಾರ ಮುಂಜಾನೆ ಹತ್ತುಗಂಟೆಗೆ ಅವಳು ಮರುಳಯ್ಯನ ಮನೆಗೆ ಬಂದಾಗ ಅಡುಗೆಯಲ್ಲಿ ತೊಡಗಿಕೊಂಡಿದ್ದ ಕಮಲ ಎದ್ದು ಬಂದು ಅವಳನ್ನು ಬರಮಾಡಿಕೊಂಡಳು.

"ಮರುಳಯ್ಯನವರಿಲ್ಲವೇನು ?"

"ಇಲ್ಲ. ಮುಂಜಾನೆ ಎದ್ದವರೇ ಎಲ್ಲಿಗೋ ಹೋದರು."

"ನಾನಿವತ್ತು ಬರ್ತೀನಿ ಅನ್ನೂದನ್ನ ಮರೆತುಬಿಟ್ಟರೋ ಏನೊ."

"ಇಲ್ಲ. ಈಗ ಬಂದು ಬಿಡ್ತೀನಂತ ಹೇಳಿ ಹೋಗಿದಾರೆ."

"ಇವತ್ತು ಯೋಗಮಂಡಲದ ಸಭೆಯಿದೆಯಲ್ಲ. ನಿನ್ನೆ ರಾತ್ರೀನೇ ಕುಬೇರಪ್ಪನವರು ಬಂದಿದಾರೆ. ಅವರನ್ನ ಭೆಟ್ಟಿಯಾಗಲಿಕ್ಕೆ ಹೋಗಿರಬೇಕು, ಬಹಳ ಮಾಡಿ. ಏನು, ಅಡಿಗೆಯಾಯ್ತೇ ?"

"ಇನ್ನೇನು, ಮುಗೀತಾ ಬಂತು. ಸಾರು ಒಂದು ಆದರಾಯ್ತು."

ಪಡಸಾಲೆಯಲ್ಲಿ ಹಾಸಿದ್ದ ಚಾಪೆಯ ಮೇಲೆ ಸುಲಲಿತದೇವಿ ಕುಳಿತುಕೊಳ್ಳುತ್ತಿದ್ದ ಹಾಗೇ ಪದ್ಮಾವತಿ ಉಪಸ್ಥಿತಳಾದಳು. ಪರಿಚಯದ ಶಾಸ್ತ್ರ ಮುಗಿಯುತ್ತಲೂ ಪದ್ಮಾವತಿ ಹೇಳಿದಳು :

"ನಿಮ್ಮನ್ನ ಬಹಳ ದಿನಗಳಿಂದ ನೋಡಬೇಕಂತ ಇದ್ದೆ. ನಿಮ್ಮ ಬಗ್ಗೆ ಬಹಳ ಕೇಳೀನಿ."

"ಕೇಳೀರಾ ? ಏನು ಕೇಳೀರಿ ?" ಅರ್ಧ ಅಣಕ, ಅರ್ಧ ಕುತೂಹಲ ಸೇರಿದ ಧ್ವನಿಯಲ್ಲಿ ಕೇಳಿದಳು ಸುಲಲಿತದೇವಿ. "ನೀವು ಮಹಿಳಾಮಂಡಲದ ಸದಸ್ಯರಾಗೀರೇನು ?"

"ಹೌದು. ನಿಮಗೆ ಹ್ಯಾಗೆ ಗೊತ್ತಾಯ್ತು?"

"ಒಂದು ಸಭೆಯ ಕಾಲಕ್ಕೆ ನಿಮ್ಮನ್ನ ನೋಡಿದಂತೆ ನೆನಪು. ಆಗ ಪರಿಚಯವಿರಲಿಲ್ಲ ಅಷ್ಟೆ. ನಿಮ್ಮ ಯಜಮಾನ್ರು ಲೆಕ್ಚರರ್ ಆಗಿದಾರಲ್ಲವೇನು ? ಎಷ್ಟು ಬರ್ತದ ಸಂಬಳ ?"

"ಇನ್ನೂರೈವತ್ತು."

"ಇನ್ನೂ ಮಕ್ಕಳಾಗಲಿಲ್ಲ ?"

"ಇಲ್ಲ."

" ಹಾಗಾದರೆ ಗಂಡಹೆಂಡರು ರಾಜಾರಾಣಿಯರ ಹಾಗೆ ಸುಖದಿಂದ ಇರಬೇಕಲ್ಲ. ಸಂತೋಷ. ಸಂತೋಷ," ಎಂದಳು ಸುಲಲಿತದೇವಿ. ಅವಳ ಮಾತಿನ ಅಂತರಾರ್ಥವನ್ನು ಗ್ರಹಿಸಲಾರದೆ ಪದ್ಮಾವತಿ ಗೊಂದಲಕ್ಕೊಳಗಾಗಿ ಮುಂದೇನು ಮಾತನಾಡುವುದೆಂದು ಯೋಚಿಸತೊಡಗಿದಳು.

" ಮಹಿಳಾಮಂಡಲದ ಕಾರ್ಯದರ್ಶಿಗಳಿಗೂ, ಅಧ್ಯಕ್ಷರಿಗೂ ನನ್ನ ಕಂಡರಾಗೂದಿಲ್ಲ. ಅಧ್ಯಕ್ಷ ಸ್ಥಾನದ ಚುನಾವಣೆಗೆ ನಾನೂ ನಿಂತದ್ದೇ ಅದಕ್ಕೆ ಕಾರಣ. ಆಕೆ ಇದಾಳಲ್ಲಾ, ಆ ಜಮೀನ್ದಾರರ ಶ್ರೀಮತಿ ಗೋದೂಬಾಯಿ, ಮಂಡಲದ ಅಧ್ಯಕ್ಷಸ್ಥಾನವನ್ನ ಗುತ್ತಿಗೆ ಹಿಡಿದಂತೆ ಹಿಡಿದು ಕೂತಿದಾಳೆ. ಬೇರೆ ಯಾರಿಗೂ ಅಧಿಕಾರ ಕೊಡೂದು ಬೇಡ ಆಕೆಗೆ. ನಾನು ಚುನಾವಣೆಗೆ ನಿಂತದ್ದರಿಂದ ನನ್ನ ಮೇಲೆ ಸಿಟ್ಟು ಮಾಡಿಕೊಂಡು ಈಗ ನನ್ನ ಬಗ್ಗೆ ಏನೇನೋ ಅಪಪ್ರಚಾರ ನಡಸಿದಾಳಂತೆ. ಆ ಕುಸುಮಾವತಿಗೆ ಬುದ್ಧಿಯಿಲ್ಲ. ಆ ಸೋಗಲಾಡಿ ಹೇಳಿದ ಹಾಗೆ ಇವಳು ಕುಣೀತಾಳೆ. ಇಂಥಾ ಚಿಲ್ಲರೆ ಹೆಂಗಸರು ನನ್ನಂಥವಳ ಬಗ್ಗೆ ಏನು ಆಡಿಕೊಂಡರೇನಂತೆ. ನಾಯಿ ಬೊಗಳಿದರೆ ದೇವಲೋಕ ಹಾಳೇ? ಇದೇ ಅಲ್ಲೇನು ನೀವು ಕೇಳಿದ್ದು ನನ್ನ ಬಗ್ಗೆ ?"

" ಛೆ. ಛೆ. ಅಂಥಾದ್ದೇನೂ ಇಲ್ರೀ."

" ನನಗೂ ಗೊತ್ತು. ನೀವೇನೂ ಹಾರಿಸಿ ಮಾತಾಡಬೇಕಾಗಿಲ್ಲ. ನನ್ನ ಬೆನ್ನ ಹಿಂದೆ ಈ ಹೆಂಗಸರು ನನ್ನ ಬಗ್ಗೆ ಏನೇನು ಮಾತಾಡ್ತಾರೆ ಅನ್ನೂದು ನನಗೂ ಗೊತ್ತು. ನನಗೂ ದೇವರು ಬಾಯಿ ಕೊಟ್ಟಿದಾನೆ. ಮನಸು ಬಂದರೆ ನಾನೂ ಮಾತಾಡಬಹುದು, ಬೇಕಾದಷ್ಟು. ಹಾಗೇನಾದರೂ ನಾನು ಮಾತಾಡಲಿಕ್ಕೆ ಸುರು ಮಾಡಿದರೆ ಈ ಮಹಿಳಾಮಂಡಲದವರು ಈ ಊರಲ್ಲಿ ತಲೆ ಎತ್ತಿಕೊಂಡು ತಿರುಗಲಿಕ್ಕಾಗಲಿಕ್ಕಿಲ್ಲ. ಆ ಗೋದೂಬಾಯಿ ಎಂಥವಳಿದಾಳೆ ಅನ್ನೂದು ನಿಮಗೆ ಗೊತ್ತೇನು ?"

" ಇಲ್ಲ ತಾಯೀ. ನನಗವರ ಪರಿಚಯ ಹೆಚ್ಚಿಗಿಲ್ಲ."

" ಅವಳ ಗಂಡ ಆ ಜಮೀನ್ದಾರ ಎಂಥವನಿದಾನೆ ಅನ್ನೂದು ಈ ಜಿಲ್ಲೆಯವರಿಗೆಲ್ಲಾ ಗೊತ್ತದ. ದಿನಕ್ಕೊಬ್ಬ ಹೆಂಗಸು ಸಿಕ್ಕರೂ ತೃಪ್ತಿಯಾಗುವದಿಲ್ಲವಂತೆ ಅವನಿಗೆ. ಅದಕ್ಕೆ ಅನುಕೂಲವಾಗಲಿ ಅಂತಲೇ ಮಹಿಳಾಮಂಡಲದ ಅಧ್ಯಕ್ಷಸ್ಥಾನವನ್ನ ಗಟ್ಟಿಯಾಗಿ ಹಿಡಿದುಕೊಂಡಿರಲಿಕ್ಕೆ ಹೇಳಿದಾನೆ ತನ್ನ

ಹೆಂಡತಿಗೆ. ಮಂಡಲದ ಸದಸ್ಯೆಯರನ್ನ ಮನೆಗೆ ಚಹಕ್ಕೆ ಕರೆದು ಗಂಡನಿಗೆ ಬಲಿ ಕೊಡ್ತಾಳೆ ಆ ಅಧ್ಯಕ್ಷಿಣಿ."

"ನಾನೇನು ನಂಬೂದಿಲ್ಲವ್ವಾ ಇಂಥಾ ಮಾತನ್ನ. ಗೋದೂಬಾಯಿಯವರ ಬಗ್ಗೆ ಇಂಥಾದ್ದು ನಾನೆಂದೂ ಕೇಳಿಲ್ಲ."

"ಕೇಳಿರಲಿಕ್ಕಿಲ್ಲ. ಯಾಕೆ ಗೊತ್ತೇನು ? ಇಂಥಾದ್ದನ್ನ ಮಾತಾಡುವ ಧೈರ್ಯವಾದರೂ ಎಲ್ಲಿಂದ ಬರಬೇಕು ಬಡಹೆಂಗಸರಿಗೆ ? ಮಂಡಲದ ಕಾರ್ಯದರ್ಶಿಗಳಂತೂ ಗೋದೂಬಾಯಿಯ ಕಿಸೆಯಲ್ಲಿರುವವರು...."

"ಹೂಂ. ಹೋಗಲಿ ಬಿಡಿರೀ. ಅವರಿವರ ಸುದ್ದಿ ಯಾಕೆ ನಮಗೆ ?" ಎಂದು ನಡುವೆಯೆ ಮಾತನ್ನು ತಡೆದಳು ಕಮಲ.

"ನನಗೇನೂ ಈ ಉಪದ್ವ್ಯಾಪ ಬೇಕಾಗಿರಲಿಲ್ಲ ಕಮಲಮ್ಮನವರೆ. ನನ್ನ ತಂಟೆಗೆ ಯಾರೂ ಬರದಿದ್ದರೆ ನಾನೂ ಯಾರ ತಂಟೆಗೂ ಹೋಗೂದಿಲ್ಲ." ಎಂದು ಹೇಳಿ ಒಂದು ಕ್ಷಣ ಸುಮ್ಮನಿದ್ದು ಸುಲಲಿತದೇವಿಯೆಂದಳು : "ನಿಮ್ಮವರು ರಾಜೀನಾಮೆ ಕೊಟ್ಟರಂತಲ್ಲ. ಎಂದು ಹೊರಡುವವರು ಹಾಗಾದರೆ ?"

"ಎಂದು ಹೊರಡ್ತಾರೋ ಗೊತ್ತಿಲ್ಲವ್ವಾ."

"ಅಂದರೆ ? ನೀವು ಹೊರಡೂದಿಲ್ಲೇನು ?" ಎಂದು ಬೇಕೆಂತಲೇ ಆಶ್ಚರ್ಯ ನಟಿಸುತ್ತಾ ಕೇಳಿದಳು ಸುಲಲಿತದೇವಿ.

"ನಾನಿಲ್ಲೇ ಇರಬೇಕಂತ ಮಾಡೀನಿ," ಎಂದು ಕಮಲ ಹೇಳುತ್ತಿದ್ದ ಹಾಗೇ ಮರುಳಯ್ಯ ಮನೆಯಲ್ಲಿ ಅಡಿಯಿರಿಸಿದ. ಒಡನೆಯೆ ಪದ್ಮಾವತಿ ಅಲ್ಲಿಂದೆದ್ದು ತನ್ನ ಮನೆಗೆ ನಡೆದಳು.

"ಏನು ದೇವಿಯವರೆ, ಬಹಳ ಹೊತ್ತಾಯಿತೇ ಬಂದು ?"

"ಇಲ್ಲರೀ. ಇದೇ ಈಗ ಬಂದೆ. ಎಲ್ಲಿ, ಕುಬೇರಪ್ಪನವರ ಹತ್ತಿರ ಹೋಗಿದ್ದಿರೋ ಏನು ?"

"ಹೌದು. ಆದರೆ ಅವರು ಮನೆಯಲ್ಲಿರಲಿಲ್ಲ. ಯಾರೋ ಮಂತ್ರಿಗಳು ಬಂದು ಕ್ಯಾಂಪ್ ಹಾಕಿದಾರಂತೆ ಟಿ. ಬಿ. ಯಲ್ಲಿ. ಅವರನ್ನ ನೋಡಲಿಕ್ಕೆ ಹೋಗಿದಾರಂತೆ."

"ಕುಬೇರಪ್ಪನವರವು ಹೀಗೇ ಬಹಳ ಕೆಲಸ ಇರ್ತಾವೆ. ಅವರ ಸಲಹೆ ಕೇಳದೆ ಮಂತ್ರಿಗಳೂ ಯಾವ ಕೆಲಸವನ್ನೂ ಮಾಡೂದಿಲ್ಲ." ಮರುಳಯ್ಯ—

ಕಮುಲರ ಮೇಲೆ ಪ್ರಭಾವ ಬೀರಲೆಂದೇ ಸುಲಲಿತದೇವಿ ಆ ಮಾತನ್ನಾಡಿದುದು ಸ್ಪಷ್ಟವಾಗಿತ್ತು.

ಊಟ ನಡೆದಿದ್ದ ಹಾಗೆ ಅವಳು ಮತ್ತೆ ಕುಬೇರಪ್ಪನವರ ವರ್ಣನೆಗಾರಂಭಿಸಿದಳು. ಅಲ್ಲಿ ಇಲ್ಲಿ ಸುತ್ತಾಡಿ ಮಾತು ಮತ್ತೆ ಆಶ್ರಮದ ವಿಚಾರಕ್ಕೇ ಬಂದಿತು.

" ಕಮುಲಮ್ಮನವರು ಅಲ್ಲಿಗೆ ಬರೂದಿಲ್ಲ ಅಂತಾರಲ್ರೀ ಮರುಳಯ್ಯನವರೆ ? "

" ಹೌದ್ರೀ. ಅವರ ಮರ್ಜಿ."

" ಅರೆ ! ಇವರನ್ನ ಬಿಟ್ಟು ನೀವೊಬ್ಬರೆ ಆಶ್ರಮ ಮಾಡಿದರೆ ಏನು ಚಂದ ? ಶ್ರೀ ರಾಮಕೃಷ್ಣರಿದ್ದಲ್ಲಿ ಶಾರದಾದೇವಿ, ಮಹಾಗುರು ಇದ್ದಲ್ಲಿ ಮಹಾಮಾತೆ ಇದ್ದರೇನೇ ಶೋಭೆ ಅಲ್ಲವೇನು ? "

" ಅದೇನೋ ನಿಜ. ಆದರೆ ಅವರಿಗ್ಯಾಕೋ ಅತ್ತ ಬರಲಿಕ್ಕೆ ಮನಸ್ಸಿಲ್ಲ. ಒತ್ತಾಯ ಮಾಡಿ ಕರಕೊಂಡು ಹೋಗೂದು ನನ್ನ ತತ್ವಕ್ಕೇ ವಿರುದ್ಧ."

" ಅದು ಸರಿ. ಇಂಥಾ ಸಂಗತಿಗಳಲ್ಲಿ ಒತ್ತಾಯ ಉಪಯೋಗದ್ದಲ್ಲ. ಆದರೆ, ಕಮುಲಮ್ಮನವರು ಅಲ್ಲಿಗೆ ಯಾಕೆ ಬರೂದಿಲ್ಲ ಅನ್ನೂದೇ ನನಗೆ ತಿಳೀಲೊಲ್ಲದು."

" ಕುಬೇರಪ್ಪನವರ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ ಅವರಿಗೆ."

ಆಶ್ಚರ್ಯ ಚಕಿತಳಾದಂತೆ ನಟಿಸುತ್ತ ಸುಲಲಿತದೇವಿ ಹೇಳಿದಳು :

" ಕುಬೇರಪ್ಪನವರೆಂದರೆ ಸಾಕ್ಷಾತ್ ವಿನೋಬಾ ಇದ್ದ ಹಾಗೆ. ಅಂಥವರ ಬಗ್ಗೆ ಸಂಶಯ ಇರಬಾರದು ಕಮುಲಮ್ಮನವರೆ."

ವಿನೋಬಾ ಎಂದರೆ ಯಾರು ಎಂಬುದು ಕಮುಲಳಿಗೂ ಗೊತ್ತಿತ್ತು. ಇತ್ತೀಚೆಗೆ ಅವರು ಆರಂಭಿಸಿದ್ದ ಭೂದಾನಯಜ್ಞದ ವಿಚಾರವನ್ನು ಪತ್ರಿಕೆಗಳಲ್ಲಿ ಓದಿದಂದಿನಿಂದ ಅವರ ವಿಚಾರವಾಗಿ ಅವಳಲ್ಲಿ ಆದರವೂ, ಆಸಕ್ತಿಯೂ ಒಡಮೂಡಿದ್ದುವು. ಭಾರತ ದೇಶದಲ್ಲಿರುವ ಎಂಟು ಹತ್ತು ಮಂದಿ ಪ್ರಾಮಾಣಿಕ ವ್ಯಕ್ತಿಗಳಲ್ಲಿ ವಿನೋಬಾ ಒಬ್ಬರೆಂಬುದೂ ಅವಳಿಗೆ ಗೊತ್ತಿತ್ತು. ದೇಶಕ್ಕಾಗಿ ಆಯುಷ್ಯವನ್ನೆಲ್ಲಾ ಮೀಸಲಾಗಿಟ್ಟು ದುಡಿಯುತ್ತಿರುವ ವಿನೋಬಾ ಎಲ್ಲಿ, ಕುಬೇರಪ್ಪ ಎಲ್ಲಿ ! ಸೂರ್ಯನಿಗೂ ಸೆಗಣಿಯ ಹುಳುವಿಗೂ ಎಂಥ ಹೋಲಿಕೆ ?

" ವಿನೋಬಾಜಿಯುವರ ಹೆಸರನ್ನ್ಯಾಕೆ ಕೆಡಿಸ್ತೀರೀ ? " ಎಂದು, ಕೊಂಚ ಕೋಪದಿಂದಲೇ ಕೇಳಿದಳು ಕಮಲ.

ಸುಲಲಿತದೇವಿ ಕೊಂಚವೂ ಅಪ್ರತಿಭಳಾಗಲಿಲ್ಲ. ಇನ್ನಷ್ಟು ಆಶ್ಚರ್ಯ ನಟಿಸುತ್ತ ಹೇಳಿದಳು :

" ಏನೋ ತಾಯೀ. ನಾನಂತೂ ಹಾಗೆ ತಿಳುಕೊಂಡೀನಿ, ಕುಬೇರಪ್ಪನವರ ಬಗ್ಗೆ. ಅವರು ಯಾರಿಗೂ ಎಂದೂ ಕನಸು ಮನಸಿನಲ್ಲೂ ಕೇಡು ಬಗೆದವರಲ್ಲ. ಯಾರನ್ನೂ ಹಿಂಸಿಸಿದವರಲ್ಲ. ಮಾಡಬಾರದ್ದು ಮಾಡಿದವರಲ್ಲ. ಅವರ ರೈತರೆಲ್ಲಾ ಅವರನ್ನ ದೇವರಂತ ತಿಳುಕೊಂಡಾರೆ. ಬೇಕಾದರೆ ನೀವು ಸ್ವತಃ ಹೋಗಿ ನೋಡಬಹುದು."

ಊಟ ಮುಗಿಯುತ್ತ ಬಂದಿತ್ತು. ಕೊನೆಯ ಅನ್ನಕ್ಕೆ ಮಜ್ಜಿಗೆ ಬಡಿಸುತ್ತಿದ್ದ ಕಮಲ ಅಣಕದ ಧ್ವನಿಯಲ್ಲಿ ಹೇಳಿದಳು :

" ಸ್ವತಃ ನೋಡೀನಲ್ಲ ನಾನೇ, ನಿಮ್ಮ ಮನೆಯಲ್ಲಿ ? ಕುಬೇರಪ್ಪನವರ ಯೋಗ್ಯತೆ ಎಂಥಾದ್ದು ಅನ್ನೂದನ್ನ ತಿಳುಕೊಳ್ಳಲಿಕ್ಕೆ ಅಷ್ಟು ಸಾಕಾಗದೇ ? "

ಒಳಗೊಳಗೇ ಬೆಚ್ಚಿದರೂ ಅದನ್ನು ವ್ಯಕ್ತಗೊಳಿಸದೆ ಸುಲಲಿತದೇವಿ ಹೇಳಿದಳು :

" ಹಾಗೆ ಒಂದೆರಡು ತಾಸುಗಳ ಪರಿಚಯದಿಂದ ಕುಬೇರಪ್ಪನವರ ಸ್ವಭಾವ ಅರ್ಥವಾಗೂದಿಲ್ಲ. ಅವರದು ಸ್ವಲ್ಪ ಸಲಿಗೆಯ ರೀತಿ. ಅದರಿಂದ ತಪ್ಪು ಕಲ್ಪನೆ ಮಾಡಿಕೋಬಾರದು ಕಮಲಮ್ಮನವರೆ. ಅವರು ಎಲ್ಲರನ್ನೂ ತಮ್ಮ ಅಣ್ಣತಮ್ಮಂದಿರು, ಅಕ್ಕತಂಗಿಯರಂತಲೇ ತಿಳುಕೊಂಡು ಸರಳತನದಿಂದ ಮಾತಾಡ್ತಾರೆ. ಮೊದಲಿನಿಂದಲೂ ಹಾಗೇ ಅವರು."

ಕಮಲ ಮತ್ತೆ ಆ ಮಾತು ಬೆಳಸಲಿಲ್ಲ. ವಾದವಿವಾದದಿಂದ ಪ್ರಯೋಜನವಿಲ್ಲವೆಂದೇ ಅವಳಿಗನ್ನಿಸಿತು.

ಮನೆಗೆ ಹೊರಡುತ್ತಾ ಸುಲಲಿತದೇವಿ ಕೊನೆಯ ಬಾರಿಗೆ ಕೇಳಿದಳು :

" ಹಾಗಾದರೆ ನೀವು ಹೊರಡೂದಿಲ್ಲ ಅಂತೀರಾ ? "

" ಇಲ್ಲ," ಎಂದಳು ಕಮಲ.

" ಆಯ್ತು. ನಿಮ್ಮಿಚ್ಛೆ. ಇವತ್ತು ನಮ್ಮ ಮಂಡಲದ ಸಭೆಗಾದರೂ ಬರ್ತೀರಲ್ಲ ? "

“ ಇಲ್ಲ,” ಎಂದಳು ಕಮಲ.

“ ಇಲ್ಲ ? ಯಾಕೆ ? ನಮ್ಮ ಸ್ನೇಹ ಬೇಸರಾಯಿತೇನ್ರೀ ಇಷ್ಟು ಬೇಗ ?”

“ ಸ್ನೇಹಕ್ಕೂ ಅದಕ್ಕೂ ಸಂಬಂಧ ಇಲ್ಲ. ಆದರೆ ನಿಮ್ಮ ಮಂಡಲದ ಸಂಬಂಧ ಮಾತ್ರ ಬೇಡ.”

“ ಯಾಕ್ರೀ ? ಅದರಲ್ಲೇನು ತಪ್ಪು ಕಂಡಿರಿ ? ”

“ ಏನು ಕಂಡೆನೊ ! ಅದೆಲ್ಲಾ ಯಾಕಂತೆ ಒಣ ರಗಳೆ ? ಅಂತೂ ನನಗದು ಮನಸಿಗೆ ಬರಲಿಲ್ಲ.”

“ ಹೀಗೆಲ್ಲಾ ಮನಸಿನಲ್ಲಿಟ್ಟುಕೋಬಾರದು. ನಮ್ಮ ತಪ್ಪಿದ್ದರೆ ಹೇಳಿರಿ, ತಿದ್ದಿಕೊಳ್ತೀವಿ. ಅಂತೂ ನೀವು ನಮ್ಮ ಮಂಡಲದ ಕಾಯಂ ಸದಸ್ಯರಾಗಿದ್ದರೆ ನಮಗೆಲ್ಲಾ ಸಂತೋಷ.”

“ ನನ್ನನ್ನೂ ಮಾತೆಯನ್ನಾಗಿ ಮಾಡುವವರಿದೀರೇನು ? ”

“ ಓಹ್ಹೊ! ಮಾಡೋಣಲ್ಲ—ಅದರಲ್ಲೇನು ? ವಾಸಂತಿಗೇ ಅದನ್ನೇನು ಗುತ್ತಿಗೆ ಬರೆದುಕೊಟ್ಟಿಲ್ಲ.”

“ ಅಂತೂ ನಿಮ್ಮ ಭೋಗಮಂಡಲಕ್ಕೆ ಇನ್ನೊಬ್ಬ ಮಾತೆ ಬೇಕಾಗಿದಾಳೆ ಅನ್ನಿರಿ. ವಾಸಂತಿ ಒಬ್ಬಳೇ ಆಗಿ ಬೇಸರವಾಗಿರಬೇಕು—ಆ ಮಕ್ಕಳಿಗೆಲ್ಲ ! ”

“ ನೀವು ಮಾತಾಡೂದೇನು ಅನ್ನೂದೇ ನನಗೆ ತಿಳಿಯದವ್ವಾ ! ”

“ ಹೂಂ ! ಹೂಂ ! ಹ್ಯಾಗೆ ತಿಳಿದೀತು ಪಾಪ ! ಒಡೆದು ಹೇಳಿದಾಗಲೆ ತಿಳಿದೀತು, ಅಲ್ಲೇನು ? ನಮ್ಮಲ್ಲಿಗೆ ಅತಿಥಿಯಾಗಿ ಬಂದ ನಿಮ್ಮನ್ನ ಅವಮಾನ ಮಾಡುವ ಇಚ್ಛೆ ಇಲ್ಲ ನನಗೆ.”

ಮತ್ತೊಂದು ಮಾತನಾಡದೆ ಸುಲಲಿತದೇವಿ ತನ್ನ ಹಾದಿ ಹಿಡಿದಳು. ಕಮಲ ಆ ರೀತಿ ಮಾತನಾಡಿದುದರಿಂದ ಮರುಳಯ್ಯ ಬಹುವಾಗಿ ದಿಗಿಲು ಗೊಂಡಿದ್ದ. ಸುಲಲಿತದೇವಿ ಹೊರಟು ಹೋದೊಡನೆಯೆ ಆತನೆಂದ :

“ ಇವತ್ತು ನಿಮಗೆ ಏನಾಗಿದೆ ಕಮಲಮುಖಿ ? ಎಂಥೆಂಥಾ ಮಾತು ಆಡಿ ಬಿಟ್ಟಿರಲ್ಲ ! ”

“ ಇನ್ನೂ ಎಂಥೆಂಥಾದ್ದು ಆಡುತ್ತಿದ್ದೆನೊ. ಅವಳು ಅತಿಥಿ ಅಂತ ಸುಮ್ಮನಾದೆ. ಅವರ ಮನೆಯಲ್ಲಿ ಏನೇನು ನಡೀತದನ್ನೂದು ನಿಮಗೆ ಸ್ವಲ್ಪವೂ ತಿಳಿದಿಲ್ಲ, ಹೌದಲ್ಲೋ ? ”

"ಏನೇನು ನಡೀತದ?"

"ನಿಮ್ಮಂಥವರೆದುರಿಗೆ ಕಲ್ಲು ಬಡಕೊಂಡು ಪ್ರಾಣ ಬಿಡಬೇಕು. ಆವಾಗಲೇ ನಿಮಗೆ ತಿಳಿಯೂದು. ಯಾವ ಮೂರ್ಖ ನಿಮಗೆ ಬಿ. ಎ. ಪದವಿ ಕೊಟ್ಟನೋ! ಸಣ್ಣ ಹುಡುಗರಿಗಿರುವಷ್ಟು ಬುದ್ಧಿ ಕೂಡಾ ಇಲ್ಲವಲ್ಲ ನಿಮಗೆ!" ಎಂದು ಕಟುವಾಗಿ ಆಡಿದಳು ಕಮಲ.

ಚಬಕದೇಟು ತಿಂದ ನಾಯಿಯಂತೆ ತಲೆ ಬಾಗಿಸಿಕೊಂಡು, ಮನೆಯಲ್ಲೂ ಕುಳಿತಿರಲಾರದೆ ಕೋಟು ತೊಟ್ಟುಕೊಂಡು ಹೊರಟುಬಿಟ್ಟ ಮರುಳಯ್ಯ.

ಮತ್ತೆ ಆತ ಮನೆಗೆ ಮರಳಿದಾಗ ರಾತ್ರಿಯಾಗಿತ್ತು.

ಪಡಸಾಲೆಯಲ್ಲಿ ಹಾಸಿಗೆ ಬಿಡಿಸಿ ಮಲಗಿಕೊಂಡಿದ್ದ ಕಮಲ ಅವನು ಬರುತ್ತಲೂ ಎದ್ದು ಅಡುಗೆ ಮನೆಗೆ ಹೋಗಿ ತಟ್ಟೆಯಿಟ್ಟು, ಅವನು ಊಟಕ್ಕೆ ಬರುವುದನ್ನು ಕಾದು ಕುಳಿತಳು.

ಅವನು ಬರಲಿಲ್ಲ.

"ಊಟ ಮಾಡೂದಿಲ್ಲೇನು?" ಎಂದಳು ಕಮಲ.

"ನನಗೆ ಹಸಿವಿಲ್ಲ. ನೀವು ಮಾಡಿರಿ," ಎಂದ ಮರುಳಯ್ಯ.

ತಟ್ಟೆಯನ್ನು ಅದರ ಸ್ಥಳದಲ್ಲಿಟ್ಟು ಸ್ವಲ್ಪ ನೀರು ಕುಡಿದು ಕಮಲಳೂ ಎದ್ದು ಬಂದು ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡಳು.

ಕೊಟಡಿಯ ಬಾಗಿಲು ಮುಚ್ಚಿ ಮರುಳಯ್ಯನೂ ಮಲಗಿಕೊಂಡ.

ಮರುದಿನದ ಬೆಳಗ್ಗೆ ಕಮಲಳಿಗೆಚ್ಚರವಾಗುವುದರೊಳಗಾಗಿ ಮರುಳಯ್ಯ ತನ್ನ ಪುಸ್ತಕಗಳನ್ನೂ, ಬಟ್ಟೆಬರೆಗಳನ್ನೂ ಕಟ್ಟಿ ಲೋಳಸರಕ್ಕೆ ಹೊರಡಲು ಸಿದ್ಧವಾಗಿದ್ದ.

"ಸ್ನಾನ ಮುಗಿಸಿಕೊಂಡವನೆ ಹೊರಟು ಬಿಡ್ತೇನಿ. ಕುಬೇರಪ್ಪನವರ ಕಾಸು ಬರ್ತದ ಇಲ್ಲಿಗೇ," ಎಂದು ಹೇಳಿ ಐವತ್ತು ರೂಪಾಯಿಗಳನ್ನು ಅವಳ ಕೈಗೆ ಹಾಕಿದ.

"ಮತ್ತೆ ಎಂದು ಬರ್ತೀರಿ?" ಎಂದು ಸಮಾಧಾನದಿಂದಲೇ ಕೇಳಿದಳಾಕೆ.

"ನನ್ನ ಅಗತ್ಯವಿದ್ದಾಗ ಪತ್ರ ಬರೆವರೆ ಆಗಿಂದಾಗ ಬಂದು ಹೋಗ್ತೇನಿ. ಎರಡು ತಿಂಗಳ ವರೆಗೆ ಕರಾಚೂರಿಗೂ ಹೋಗಿ ಇದ್ದು ಬರೂದದ."

"ಊಟ ಮಾಡಿಕೊಂಡೇ ಹೋಗಿರಲ್ಲ?" ಎಂದಳು ಕಮಲ ಅವನ ಸ್ನಾನ ಮುಗಿದ ಬಳಿಕ.

"ಏನೂ ಬೇಡ ಕಮಲಮುಖಿ. ಊಟದ ವೇಳೆಯೊಳಗಾಗಿ ಊರಿನಲ್ಲಿರುತೀವಿ."

ಮತ್ತೆ ಆಕೆ ಮಾತನಾಡಲಿಲ್ಲ. ಎದೆಯಲ್ಲಿ ತುಂಬಿ ಬಂದಿದ್ದ ಭಾವನೆಗಳನ್ನು ಹತ್ತಿಕ್ಕಿಕೊಂಡು ಮುಖದ ಮೇಲೆ ಗಾಂಭೀರ್ಯ ಮೂಡಿಸಲು ಯತ್ನಿಸ ತೊಡಗಿದಳು.

ಎಂಟೂವರೆ ಗಂಟೆಗೆ ಸರಿಯಾಗಿ ಕುಬೇರಪ್ಪನವರ ಕಾರು ಬಂದು ಅಂಗಳದಲ್ಲಿ ನಿಂತುಕೊಂಡಿತು.

ತನ್ನ ಮನೆಯಲ್ಲಿಯೆ ಪ್ರವೇಶಿಸುವವನಂತೆ ಕುಬೇರಪ್ಪ ದಡದಡನೆ ನಡೆದು ಬಂದು, ಪಡಸಾಲೆಯಲ್ಲಿ ನಿಂತುಕೊಂಡಿದ್ದ ಕಮಲಳಿಗೆ ಕೈ ಮುಗಿದು, ಸಲಿಗೆಯ ನಗೆ ತುಳುಕಿಸುತ್ತ ಹೇಳಿದ :

"ನೀವೂ ಬಂದಿದ್ದರೆ ಬಹಳ ಚಲೋದಾಗ್ತಿತ್ತು. ನೀವೂ ಬರ್ತೀರಿ ಅಂತ ನಾನು ಬಹಳ ವ್ಯವಸ್ಥೆ ಮಾಡಿದ್ದೆ. ನಿಮಗಾಗಿ ಒಬ್ಬ ಒಕ್ಕಲಗಿತ್ತಿಯನ್ನ ಕೂಡಾ ನೇಮಿಸಿ ಬಂದಿದ್ದೆ. ಹಾಲು, ಮೊಸರು, ತುಪ್ಪ ಯಾತಕ್ಕೂ ಏನೂ ಕೊರತೆಯಿಲ್ಲ. ನೀವು ನೀರು ಹೊರಬೇಕಾಗಿಲ್ಲ, ಅಡಿಗೆ ಮಾಡಬೇಕಾಗಿಲ್ಲ, ಅರಿವೆ ಒಗೆಯಬೇಕಾಗಿಲ್ಲ. ಎಲ್ಲಾ ಒಕ್ಕಲಗಿತ್ತಿಯೇ ಮಾಡ್ತಾಳೆ. ನೀವು ರಾಣಿಯ ಹಾಗೆ ಸುಖವಾಗಿ ಇರಬಹುದು. ನನ್ನ ವ್ಯವಸ್ಥೆ ಅಂದರೆ ಕೇಳಬೇಕೇ?"

"ಯಾರ ರಾಣಿಯ ಹಾಗೆ?" ಎಂದು ಕೇಳಬೇಕೆನ್ನಿಸಿತ್ತು ಕಮಲಳಿಗೆ. ಆದರೆ ಅವರು ಹೊರಟು ನಿಂತ ಸಮಯದಲ್ಲಿ ಘರ್ಷಣೆ ಬೇಡವೆಂದುಕೊಂಡು, ನಾಲಗೆಯನ್ನು ಬಿಗಿಹಿಡಿದು ಸುಮ್ಮನಿದ್ದಳು.

"ನೀವು ಬಂದರೆ ನಮಗೆಲ್ಲಾ ಬಹಳ ಸಂತೋಷವಾಗ್ತದ," ಎಂದು ಮತ್ತೆ ಹೇಳಿದ ಕುಬೇರಪ್ಪ.

ಆಗಲೂ ಕಮಲ ಮೌನವನ್ನು ಮುರಿಯಲಿಲ್ಲ; ಶುಷ್ಕ ನಗೆಯನ್ನು ಬೀರಿ ಸುಮ್ಮನಿದ್ದಳು.

"ಅವರು ಬರೂದಿಲ್ಲ ಬರ್ರಿ ಸಾಹುಕಾರರೇ. ಒತ್ತಾಯ ಮಾಡಿ ಉಪ

ಯೋಗ ಇಲ್ಲ," ಎಂದು ಹೇಳಿ ತನ್ನ ಸಾಮಾನುಗಳನ್ನು ಕಾರಿಗೆ ತುಂಬಲೆಂದು ಹೊರಗೆ ಹೋದ ಮುರುಳಯ್ಯ.

ಕುಬೇರಪ್ಪ ಆ ಸಂಧಿಯನ್ನು ಸಾಧಿಸಿ ಕಮಲಳಿಗೆ ತೀರಾ ಹತ್ತಿರ ಬಂದು ನಿಂತು,

"ನನ್ನ ಮೇಲೇನಾದರೂ ಸಂಶಯವೇನ್ರೀ ನಿಮಗೆ? ನೀವ್ಯಾಕೆ ಬರೂದಿಲ್ಲ?" ಎಂದು ಕೇಳಿದ.

ಕಮಲ ದೂರ ಸರಿದು ನಿಂತಳಷ್ಟೆ; ಉತ್ತರವೀಯಲಿಲ್ಲ.

"ನೋಡಿರಿ. ನೀವು ನನ್ನ ಮಗಳಿದ್ದ ಹಾಗೆ. ತಂದೆಯ ಬಗ್ಗೆ ಯಾರಾದರೂ ಸಂಶಯ ಇಟ್ಟುಕೊಳ್ತಾರೇನು? ವಿಚಾರ ಮಾಡಿರಿ. ಯಾವಾಗ ಬೇಕಾದರೂ ಬರಬಹುದು ನೀವು. ನಾನೂ ವಾರಾ ವಾರಾ ಇಲ್ಲಿಗೆ ಬರ್ತಿರ್ತೀನಲ್ಲ, ಬಂದಾಗಲೆಲ್ಲಾ ಭೆಟ್ಟಿಯಾಗ್ತೀನಿ."

ಆಗ ಮಾತ್ರ ನಾಲಗೆಯನ್ನು ತಡೆಹಿಡಿಯಲಾಗಲಿಲ್ಲ ಕಮಲಳಿಗೆ; ಬಾಗಿಲ ಕಡೆಗೆ ಬೆರಳು ತೋರಿಸುತ್ತ ತೀಕ್ಷ್ಣ ಸ್ವರದಲ್ಲಿ ಹೇಳಿದಳು:

"ನಡೀರಿ ಮೊದಲು ಇಲ್ಲಿಂದ. ನಡೀರಿ ಅತ್ತ. ಇನ್ನೊಮ್ಮೆ ಕಾಲು ಹಾಕಬೇಡಿ ಈ ಮನೆಯಲ್ಲಿ."

ಕುಬೇರಪ್ಪ ಕಕ್ಕಾವಿಕ್ಕಿಯಾಗಿ ನೋಡತೊಡಗಿದ. ಇಷ್ಟೊಂದು ದಿಟ್ಟತನದಿಂದ ತನಗೆ ಬಾಗಿಲು ತೋರಿಸುವ ಇನ್ನೊಂದು ಹೆಣ್ಣನ್ನು ಆತ ಅದುವರೆಗೂ ಕಂಡಿರಲಿಲ್ಲ. ಹಣದ ಬಲದಿಂದ ಎಂಥ ಹೆಣ್ಣನ್ನಾದರೂ ವಶಪಡಿಸಿಕೊಳ್ಳಬಹುದೆಂಬ ನಂಬಿಕೆ ಅವನಲ್ಲಿ ಬೆಳೆದು ಬಂದಿತ್ತು. ಆ ನಂಬಿಕೆಯನ್ನು ಮೊಟ್ಟಮೊದಲ ಬಾರಿಗೆ ಮುದುಡಿ ಹುಡಿಗೂಡಿಸಿದ್ದಳು ಕಮಲ. "ಎಲಾ! ಇಂಥಾ ಹೆಂಗಸರೂ ಇದಾರೇನು!" ಎಂದು ಅಚ್ಚರಿಪಟ್ಟುಕೊಳ್ಳುತ್ತಾ ಆತ ಅವಸರದಿಂದ ಹಿಂದಿರುಗಿ ಹೋಗಿ ಕಾರು ಸೇರಿಕೊಂಡ.

ಸಾಮಾನುಗಳನ್ನಿಟ್ಟು ಮರಳಿ ಬಂದ ಮುರುಳಯ್ಯ ಕೊಟಡಿಗೆ ಹೋಗಿ ಗುರುಗಳ ಚಿತ್ರಗಳಿಗೆ ನಮಸ್ಕಾರ ಸಲ್ಲಿಸಿ, ಕೋಟು ಟೊಪ್ಪಿಗೆ ಹಾಕಿಕೊಂಡು ಹೊರಗೆ ಬಂದು,

"ಹೋಗಿ ಬರ್ತೀನಿ ಕಮಲಮುಖೀ," ಎಂದ.

"ಹೋಗಿ ಬರ್ರಿ," ಎಂದಳಾಕೆ, ರೂಕ್ಷಸ್ವರದಲ್ಲಿ.

"ಹುಷಾರಿಯಿಂದ ಇರ್ರಿ. ಹಂ!"

ಆತ ಹೊರಟು ಹೋದ. ಕಮಲ ನಿಂತಲ್ಲಿಯೆ ನಿಂತುಕೊಂಡಿದ್ದಳು ಚಟಪಟ್ ಘರ್‌ಘರ್ ಎಂದು ಸದ್ದು ಮಾಡುತ್ತಾ ಕಾರು ಹೊರಟುಹೋಯಿತು. ಕಮಲ ಓಡುತ್ತ ಹೋಗಿ ಬಾಗಿಲು ಮುಚ್ಚಿ ಚಿಲಕ ಹಾಕಿ ಕೊಟಡಿಗೆ ಬಂದು ಬಿದ್ದುಕೊಂಡಳು. ಅದುವರೆಗೂ ಬಹಳ ಪ್ರಯಾಸದಿಂದ ತಡೆಹಿಡಿದಿದ್ದ ದುಃಖವೆಲ್ಲವೂ ಬಿಕ್ಕುಗಳ ರೂಪದಲ್ಲಿ ಚಿಮ್ಮಿ ಬರತೊಡಗಿತು.

ಅಳುವಿನ ಧ್ವನಿ ಕೇಳಿದ ಪದ್ಮಾವತಿ ಅವಳನ್ನು ಸಂತೈಸಲೆಂದು ಧಾವಿಸಿ ಬಂದಳು.

"ಕಮಲಾ, ಕಮಲೂ...."

'ಓ' ಕೊಡಲಿಲ್ಲ ಕಮಲ.

"ಬಾಗಿಲು ತೆಗೆಯೆ ಕಮಲೂ."

ಕಮಲ ಏಳಲಿಲ್ಲ. ಆ ಸಮಯದಲ್ಲಿ ಯಾರ ಮಾತಿನಿಂದಲೂ ಅವಳಿಗೆ ಸಮಾಧಾನವಾಗುವಂತಿರಲಿಲ್ಲ.

ಐದಾರು ನಿಮಿಷಗಳ ವರೆಗೆ ಬಾಗಿಲು ತಟ್ಟುತ್ತಿದ್ದು, ಕೊನೆಗೂ ಬಾಗಿಲು ತೆರೆಯದಿರಲು ನಿರಾಶಳಾಗಿ ಹಿಂದಿರುಗಿ ಹೋದಳು ಪದ್ಮಾವತಿ.

೧೫

ಒಂದೆರಡು ತಾಸುಗಳ ವರೆಗೆ ಹಾಗೆಯೇ ಬಿದ್ದುಕೊಂಡಿದ್ದು ಕಂಠ ಶೋಕದ ಆವೇಗದಲ್ಲಿಯೇ ಯಾವುದೋ ನಿರ್ಧಾರದ ದಡಕ್ಕೆ ತಲುಪಿ, ಎದ್ದು, ಮುಖ ತೊಳೆದುಕೊಂಡು ಬಂದು ತನ್ನ ಸಾಮಾನುಗಳನ್ನು ಗಂಟುಕಟ್ಟಲೆಂದು ಟ್ರಂಕನ್ನು ತೆರೆದಳು.

ತಾನು ತೆರೆದ ಮೊದಲನೆಯ ಟ್ರಂಕು ತನ್ನ ಗಂಡನ ಖಾಸಾ ಟ್ರಂಕು ಎಂಬುದು ವಿಮನಸ್ಕಳಾಗಿದ್ದ ಆಕೆಗೆ ತಿಳಿಯಲಿಲ್ಲ. ಯಾವಾಗಲೂ ಬೀಗಮುದ್ರೆಯಿಂದ ಭದ್ರವಾಗಿರುತ್ತಿದ್ದ ಆ ಟ್ರಂಕು ಇಂದು ತೆರೆದುಕೊಂಡೇ ಇತ್ತು. ಹೊರಡುವಾಗ ಮರುಳಯ್ಯ ಅದಕ್ಕೆ ಬೀಗ ಹಾಕುವುದನ್ನು ಮರೆತಹಾಗಿತ್ತು. ಮುಚ್ಚಳವನ್ನು ಮೇಲಕ್ಕೆತ್ತಿದೊಡನೆಯೆ ಪುಟ್ಟ ವಹಿಯೊಂದು ಅವಳ ದೃಷ್ಟಿಯನ್ನೆಳೆಯಿತು. ತಾನು ತೆರೆದದ್ದು ತನ್ನ ಟ್ರಂಕಲ್ಲ, ಗಂಡನದು ಎಂಬುದರ ಅರಿವು ಅವಳಿಗಾಗ ಬಂದಿತು. ಅನಾಸ್ಥೆಯಿಂದಲೇ ಆ ವಹಿಯನ್ನು ಕೈಗೆ ತೆಗೆದುಕೊಂಡು ರಕ್ಷಾಪತ್ರವನ್ನು ಮಗುಚಿ ಹಾಕಿದಳು.

"ದಿನಚರಿ"

ಮೊದಲನೆಯ ಪುಟದ ಮೇಲೆ, ಮರುಳಯ್ಯನ ಹಸ್ತಾಕ್ಷರಗಳಿಂದ ಬರೆಯಲಾಗಿದ್ದ ಆ ಶಬ್ದ ಅವಳ ಕುತೂಹಲವನ್ನು ಜಾಗ್ರತಗೊಳಿಸಿತು. "ಈ ಟ್ರಂಕಿಗೆ ಯಾವಾಗಲೂ ಕೀಲಿ ಹಾಕಿ ಇಡಲಿಕ್ಕೆ ಇದೇ ಕಾರಣವೇನೊ. ಇದರಲ್ಲಿ ತಮ್ಮ ಗುಟ್ಟುಗಳನ್ನೆಲ್ಲಾ ಬರೆದಿಟ್ಟಿರಬೇಕು. ನನಗೆ ಗೊತ್ತಿರದ ಗುಟ್ಟುಗಳೂ ಇರಬಹುದು ಎಷ್ಟೋ," ಎಂದು ಮನಸ್ಸಿನಲ್ಲಿಯೆ ಹೇಳಿಕೊಳ್ಳುತ್ತಾ ಅವಳು ಪುಟಗಳನ್ನು ಮಗುಚಿಹಾಕತೊಡಗಿದಳು. ಅಲ್ಲಲ್ಲಿನ ಕೆಲವು ವಾಕ್ಯಗಳು ಅವಳ ಕುತೂಹಲವನ್ನಿನ್ನೂ ಹೆಚ್ಚಿಸಿದುವು. ಸರಿ. ಬಟ್ಟೆಗಳನ್ನು ಗಂಟು ಕಟ್ಟುವ ಯೋಚನೆಯನ್ನು ತ್ಯಜಿಸಿ, ಅವಳು ಹಾಸಿಗೆಯ ಸುರುಳಿಗೊರಗಿ ಕುಳಿತು ಆ ವಹಿಯಲ್ಲಿ ಬರೆದುದೆಲ್ಲವನ್ನೂ ಓದಿ ಮುಗಿಸುವುದಾಗಿ ನಿರ್ಧರಿಸಿ ಆರಂಭದಿಂದ ಮೊದಲು ಮಾಡಿದಳು.

ಒಂದು ಪುಟದ ಮೇಲೆ ಹೀಗೆ ಬರೆದಿತ್ತು:

“ ಇದೆಂಥ ದುರಭ್ಯಾಸ ಗಂಟು ಬಿತ್ತು ನನಗೆ! ಪೂರ್ವ ಜನ್ಮದ ಪಾಪದಂತೆ ಇದು ನನ್ನನ್ನು ದಿನದಿಂದ ದಿನಕ್ಕೆ ಅಧೋಪಾತಾಳಕ್ಕೆ ನೂಕುತ್ತಿದೆಯಲ್ಲ........

ಇದು ತಪ್ಪು....ಇದು ಮೂರ್ಖತನ....ಇದು ಅವಿವೇಕ. ದಿನದಿನವೂ ಸ್ವಲ್ಪ ಸ್ವಲ್ಪವಾಗಿ ಮಾಡಿಕೊಳ್ಳುವ ಆತ್ಮಹತ್ಯೆಯಿದ್ದಂತೆ ಇದು.

ಮಾಡಬಾರದು. ಇನ್ನು ಈ ಕೆಲಸ ಮಾಡಬಾರದು.

ಹೀಗೆ ಅಂದುಕೊಂಡದ್ದು ಎಷ್ಟು ಸಲವೋ! ಇನ್ನೊಮ್ಮೆ ಈ ಅವಿವೇಕಕ್ಕೆ ತೊಡಗುವುದಿಲ್ಲವೆಂದು ವಿವೇಕಾನಂದರ ಫೋಟೋ ಮುಟ್ಟಿ ಪ್ರತಿಜ್ಞೆ ಮಾಡಿದ್ದು ಎಷ್ಟು ಸಲವೊ.... ...

ಪ್ರತಿಜ್ಞೆ ಮಾಡಿದ ಮರುಕ್ಷಣದಲ್ಲೇ ಅದನ್ನು ಮುರಿದು ಹಾಕಿತು ಈ ಹಾಳು ದುಶ್ಚಟ........ಅಯ್ಯೋ! ಇದರಿಂದ ನಾನು ಬಿಡುಗಡೆ ಹೊಂದುವುದು ಸಾಧ್ಯವೇ ಇಲ್ಲವೆ?

ಕಾಶಿ....ಕಾಶಿ....ಕಾಶಿ....

ಏನು ಮಾಡುವುದು ಇವಳನ್ನು? ದೂರ್ವಾಸನಂಥ ಆತ್ಮಶಕ್ತಿಯಿದ್ದಿದ್ದರೆ ಒಂದು ಶಾಪಕ್ಕೇ ಅವಳನ್ನು ಸುಟ್ಟುಬಿಡಬಹುದಾಗಿತ್ತು.

ಅವಳಿಂದ ತಿರಸ್ಕೃತನಾಗದಿದ್ದರೆ ನಾನೀ ದುರಭ್ಯಾಸಕ್ಕೂ ಬಲಿಯಾಗುತ್ತಿರಲಿಲ್ಲ.

ಅವಳೇ ಕಾರಣಳು ನನ್ನೀ ಅಧೋಗತಿಗೆ........”

ಆ ದುರಭ್ಯಾಸವಾವುದೆಂಬುದು ಕಮಲಳಿಗೆ ತಿಳಿಯಲಿಲ್ಲ. ಕಾಶಿಯಿಂದ ಅವಮಾನಿತರಾದುದರಿಂದ ಅವರು ವ್ಯಥಿತರಾಗಿ ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತಿದ್ದುದೇನೋ ಸರಿಯೆ. ಆದರೆ ಅದರಿಂದಾಗಿ ಅಂಟಿಕೊಂಡ ಈ ದುಶ್ಚಟವೆಂದರೇನೊ........

ಕೆಲವು ಪುಟಗಳನ್ನು ಮಗುಚಿ ಹಾಕಿ ಅವಳು ಇನ್ನೊಂದು ಪುಟದ ಮೇಲೆ ದೃಷ್ಟಿಯೋಡಿಸಿದಳು :

“ ದಿನದಿಂದ ದಿನಕ್ಕೆ ನನ್ನ ದೇಹ ಕ್ಷೀಣವಾಗುತ್ತಿದೆ. ಕೆನ್ನೆಗಳ ಎಲುವು ಎದ್ದು ಕಾಣುತ್ತಿವೆ. ಕಣ್ಣುಗಳ ಸುತ್ತಲೂ ಹೊಂಡ ಹರಡಿವೆ.

ಇಂದು ನನ್ನ ಸಹಪಾಠಿ ಮಾಧವರಾಯನೊಡನೆ ವಾಯುವಿಹಾರಕ್ಕೆ ಹೋಗಿದ್ದೆ. ಆತ ಬಹಳ ಅಧಿಕಪ್ರಸಂಗಿ. ಯಾವುದರ ಬಗೆಗೂ ಸಂಕೋಚ ವಿಟ್ಟುಕೊಳ್ಳದೆ ಎಲ್ಲಾ ವಿಚಾರಗಳ ಬಗೆಗೂ ಮಾತನಾಡುತ್ತಾನೆ. ಅವನೊಡನೆ ಅಲೆಯುವ ಅಪೇಕ್ಷೆ ನನಗಿಲ್ಲವಾದರೂ ತಾನಾಗಿ ಬಂದ ಅವನನ್ನು ತಪ್ಪಿಸು ವಂತಿರಲಿಲ್ಲ.

ಕಾಲೇಜು ವಿದ್ಯಾರ್ಥಿಗಳಿಬ್ಬರು ಕೂಡಿದಾಗ ಮೊದಲು ಹೊರಡುವ ಮಾತು ಹೆಣ್ಣಿನದೇ. ನನಗೆ ಮಾತ್ರ ಹೆಣ್ಣು ಅಂದರೇನೇ ಬೇಸರು. ಬದುಕಿ ನಲ್ಲಿನ ಆಸಕ್ತಿಯನ್ನೆ ಕಳೆದುಕೊಂಡು ಕುಳಿತಿರುವ ನನಗೆ ಪ್ರಣಯ ವಿಚಾರಗಳ ಬಗೆಗೆ ಬೇಸರವಿರುವುದೂ ಸಹಜವೇ.

ಮಾಧೂರಾಯ ಮಾತ್ರ ಅತ್ಯಂತ ಉತ್ಸಾಹದಿಂದ ಹುಡುಗಿಯರ ವಿಚಾರ ಹರಟುತ್ತಿದ್ದ. ನಮ್ಮ ವರ್ಗದಲ್ಲಿನ ಸುಮತಿ ಅವನನ್ನು ಪ್ರೀತಿಸುತ್ತಿರುವಳಂತೆ; ಅವಳೊಡನೆ ಪತ್ರವ್ಯವಹಾರವೂ ನಡೆಯುತ್ತಿದೆಯಂತೆ. ಭಾನುವಾರ ಅವರಿ ಬ್ಬರೂ ಕದ್ದು ಸಿನಿಮಾಕ್ಕೆ ಹೋಗುತ್ತಿರುವರಂತೆ........

ಆತ ಆ ವಿಚಾರ ಹೇಳುತ್ತಿದ್ದ ಹಾಗೆ ನನ್ನ ಹೊಟ್ಟೆಯಲ್ಲಿ ವಿಪರೀತ ಸಂಕಟವಾಗುತ್ತಿತ್ತು. ಮಾಧೂರಾಯ ಸ್ಫುರದ್ರೂಪಿ, ಆರೋಗ್ಯಶಾಲಿ. ಸುಂದರ ಯುವತಿಯರನ್ನು ಮರುಳುಗೊಳಿಸುವ ಆಕರ್ಷಣೆಯೂ ಅವನಿಗುಂಟು. ಸುಮತಿ ಅವನನ್ನು ಪ್ರೀತಿಸುವುದರಲ್ಲಿ ಅಚ್ಚರಿಯೇನೂ ಇರಲಿಲ್ಲ. ಇಂಥ ಭಾಗ್ಯ ನನಗಿಲ್ಲದಾಯಿತಲ್ಲಾ........

ಯಾವ ಹುಡುಗಿ ಮೆಚ್ಚಿಕೊಂಡಾಳು ನನ್ನಂಥ ಕುರೂಪಿಯನ್ನು? ನನ್ನಂಥ ಅಶಕ್ತನನ್ನು?

ಪ್ರಣಯ....ಪ್ರೇಮ....ರೋಮಾನ್ಸ್......

ಅದೇ....ಅದೇ ನನ್ನ ರೋಮಾನ್ಸ್....

ಅದೇ ನನ್ನ ಪಾಲಿನ ಪರಮಸುಖ!?

ಸುಮತಿಯ ವಿಚಾರ ಹೇಳುತ್ತಿದ್ದಂತೆಯೆ ಮಾಧೂರಾಯ ಅದನ್ನು ತಡೆದು, ನನ್ನನ್ನು ತುಂಟತನದಿಂದ ದಿಟ್ಟಿಸುತ್ತ ಹೇಳಿದ:

"ನೀವೂ ಯಾರನ್ನಾದರೂ ಪ್ರೀತಿಸ್ತಿರಬಹುದಲ್ಲ?"

ನನಗೆ ನಗುವುಕ್ಕಿ ಬಂತು....ಎಂಥ ವಿಲಕ್ಷಣ ನಗು ಅದು!

" ಇಲ್ಲವೇ ? " ಎಂದ ಮಾಧೂರಾಯ. " ಈಗ ಪ್ರೀತಿಸದಿದ್ದರೆ ಇನ್ನಾವಾಗ ಪ್ರೀತಿಸುವದು ಮರುಳಯ್ಯ ? ಬೇಗ....ಆದಷ್ಟು ಬೇಗ ಯಾರನ್ನಾದರೂ ಹುಡುಕಿಕೊಳ್ಳಿರಿ."

ಆಗಲೂ ನಾನು ಮೌನವಾಗಿಯೆ ಇದ್ದೆ.

ಅವನೇ ಮತ್ತೆ ಹೇಳಿದ :

" ನಿಮ್ಮನ್ನ ಮೂರು ವರ್ಷದಿಂದ ನೋಡ್ತಾ ಇದೇನೆ. ವರ್ಷದಿಂದ ವರ್ಷಕ್ಕೆ ನೀವು ತೆಳ್ಳಗಾಗುತ್ತಾ ಹೊರಟೀರಿ. ಕಣ್ಣುಗಳ ಸುತ್ತಲೂ ಕಪ್ಪು.... ಕೆನ್ನೆಯೆಲುವು ಎದ್ದು ಕಾಣುವುದು....ಕಣ್ಣಿನಲ್ಲಿ ಜೀವವೇ ಇಲ್ಲದಿರುವುದು.... ಇದೆಲ್ಲಾ ಯಾತರ ಲಕ್ಷಣ ಅನ್ನುವದು ನನಗೂ ಗೊತ್ತು...."

ಗಾಬರಿಯಿಂದ ಎದೆ ಹೊಡೆದುಕೊಂಡಿತು. ನನ್ನ ಗುಟ್ಟು ಇವನಿಗೆ ತಿಳಿದಿರಲಾರದಷ್ಟೆ ?

" ಕೆಟ್ಟ ಸಹವಾಸದಿಂದ ಬಾಲ್ಯದಲ್ಲಿ ದುಶ್ಚಟಗಳು ಅಂಟಿಕೊಳ್ಳುತ್ತವೆ ಮರುಳಯ್ಯನವರೆ. ನಿಮಗೊಬ್ಬರಿಗಷ್ಟೇ ಯಾಕೆ, ನೂರಕ್ಕೆ ಎಂಭತ್ತು ಹುಡುಗರಿಗೆ........"

ಅವನ ಮಾತನ್ನು ನಡುವೆಯೇ ತಡೆದು ನಾನು ಹೇಳಿದೆ :

" ನೀವು ನನ್ನ ಬಗ್ಗೆ ಏನು ತಿಳಿದಿದ್ದೀರೊ ಏನೊ. ಅದೆಲ್ಲಾ ತಪ್ಪು ಕಲ್ಪನೆ. ಅಂಥಾ ದುಶ್ಚಟವಾವುದೂ ನನಗಿಲ್ಲ."

" ಹಾಗಿದ್ದರೆ, ನೀವು ದಿನದಿಂದ ದಿನಕ್ಕೆ ಹೆಣದಂತಾಗಲು ಕಾರಣ ವೇನು ? " ಎಂದು ಕೆಣಕಿದ ಮಾಧೂರಾಯ.

" ಹೋಟಲೂಟ ಎಂಥಾದ್ದು ಅನ್ನುವದು ನಿಮಗೆ ಹ್ಯಾಗೆ ಗೊತ್ತಾಗ ಬೇಕ್ರೀ ? ಇಲ್ಲೇ ಮನೆಯಿದೆ, ಸುಖವಾಗಿ ಉಂಡು ತಿಂದು ಆರಾಮಾಗಿದೀರಿ. ಖಾನಾವಳಿಯಲ್ಲಿ ಉಣ್ಣುವ ನಮ್ಮ ಕಷ್ಟ ನಮಗೇ ಗೊತ್ತು. ಮೈಗೆ ಹತ್ತುತ್ತದೆಯೇ ಆ ಅನ್ನ ? " ಎಂದೆಲ್ಲ ವಾದಿಸಿ ಅವನ ಭಾವನೆಯನ್ನು ಅಳಿಸಿಬಿಡಲು ಯತ್ನಿಸಿದೆ. ಆದರಾತ ಗಟ್ಟಿಗ. ಅಷ್ಟಕ್ಕೇ ಸೋಲನ್ನೊಪ್ಪದೆ ಮತ್ತೆ ಹೇಳಿದ :

" ಬಿಡಿರಿ ಬಿಡಿರಿ. ಸಣ್ಣ ಹುಡುಗರಿಗೆ ಹೇಳಿದ ಹಾಗೆ ನನಗೂ ಹೇಳಲು ಬರಬೇಡಿರಿ. ಖಾನಾವಳಿಯಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳು ಊಟ ಮಾಡುವದಿಲ್ಲ ? ಎಲ್ಲರೂ ನಿಮ್ಮ ಹಾಗೆ ಸೊರಗುತ್ತಾರೇನು ! "

“ ಅದು ಅವರವರ ಪ್ರಕೃತಿಯ ಮೇಲಿರ್‍ತದ. ನನ್ನದು ಮೊದಲಿಂದಲೂ ಸೂಕ್ಷ್ಮ ಪ್ರಕೃತಿ. ನಮ್ಮ ತಂದೆ ತಾಯಿ ಎಲ್ಲಾ ನನ್ನ ಹಾಗೇ ಇದ್ದರು....”

“ ಅದೆಲ್ಲಾ ಅರ್ಥವಿಲ್ಲದ ಮಾತು. ಅರಕ್ತ ತಂದೆತಾಯಿಗಳ ಮಕ್ಕಳೆಷ್ಟು ಮಂದಿ ಸ್ಯಾಂಡೋಗಳಾಗಿಲ್ಲ ? ನಿಮಗೆ ಆ ಚಟವಿರುವುದೇ ನಿಜ. ಅದಕ್ಕೆ ಅಷ್ಟು ನಾಚಿಕೊಳ್ಳುವ ಅಗತ್ಯವೂ ಇಲ್ಲ. ಎಷ್ಟೋ ಹುಡುಗರಿಗಷ್ಟೇ ಅಲ್ಲ, ಹುಡುಗಿಯರಿಗೂ ಇರ್‍ತದ ಈ ಚಾಳಿ. ಆದಷ್ಟು ಬೇಗ ಮದುವೆಯಾಗುವುದೇ ಇದಕ್ಕೆ ಉತ್ತಮ ಉಪಾಯ. ನೀವೂ ಕೂಡಾ ಈಗಿಂದೀಗ ಮದುವೆಯಾಗಿ ಸಂಸಾರಕ್ಕಾರಂಭಿಸುವುದೇ ಒಳ್ಳೆಯದು.”

“ ನೀವು ಏನೇನೋ ಹೇಳುತ್ತಿದ್ದೀರಿ ಆಯ್ತು,” ಎಂದೇನೊ ನುಡಿದೆನಾದರೂ ಆತ ಹೇಳುವುದರಲ್ಲಿ ಸಥ್ಯವಿದ್ದುದನ್ನು ನಾನು ಮನಸ್ಸಿನಲ್ಲಾದರೂ ಒಪ್ಪಿಕೊಳ್ಳಲೇ ಬೇಕಾಯಿತು.

“ ಆದಷ್ಟು ಬೇಗ ಮದುವೆಯಾಗಿ ಬಿಡಿರಪ್ಪಾ. ತಡಮಾಡಿದಿರೆಂದರೆ ಮುಂದೆ ಬಹಳ ಪಶ್ಚಾತ್ತಾಪವಾದೀತು,” ಎಂದ ಮಾಧೂರಾಯ.

ತನ್ನ ಗಂಡನಿಗಂಟಿಕೊಂಡಿದ್ದ ದುರಭ್ಯಾಸವಾವುದೆಂಬುದು ಆಗ ಸ್ಪಷ್ಟವಾಯಿತು ಕಮಲಳಿಗೆ. ವ್ಯಸನದಿಂದ ನಿಟ್ಟುಸಿರು ಬಿಡುತ್ತಾ ಅವಳು ಮತ್ತೊಂದು ಪುಟವನ್ನು ತೆರೆದಳು :

“ ನಿನ್ನೆಯ ರಾತ್ರಿ....ನನ್ನ ಸಂಸಾರಿಕ ಜೀವನದ ಪ್ರಥಮ ರಾತ್ರಿ....

ಆತ್ಮವಿಶ್ವಾಸವಿಲ್ಲದ ವಿದ್ಯಾರ್ಥಿಗಳು ಪರೀಕ್ಷೆಯ ದಿನವನ್ನೆ ಭೀತಿಯಿಂದ ಎದುರು ನೋಡುತ್ತಿರುವ ಹಾಗೆ ನಾನು ಈ ರಾತ್ರಿಯನ್ನೆದುರು ನೋಡುತ್ತಿದ್ದೆ.

ಈ ಪರೀಕ್ಷೆಯಲ್ಲಿ ನಾನು ಉತ್ತೀರ್ಣನಾಗುವೆನೊ ಇಲ್ಲವೊ ಎಂಬ ಎದೆಗುದಿಯಿಂದಲೇ ಶಯ್ಯಾಗೃಹದಲ್ಲಿ ಅಡಿಯಿರಿಸಿದೆ.

ಲೋಕದ ಯೌವನವೇ ಮೈವೆತ್ತು ಬಂದ ಹಾಗೆ ಅಲ್ಲಿ ನನ್ನ ಬರುವನ್ನೆದುರು ನೋಡುತ್ತ ಕುಳಿತಿದ್ದಳು ಕಮಲ.

ಅವಳನ್ನು ಮಾತನಾಡಿಸುವುದಕ್ಕೂ ದಿಗಿಲಾಯಿತು, ಅವಳನ್ನು ಸ್ಪರ್ಶಿಸುವುದಕ್ಕೂ ಭಯವಾಯಿತು. ನನ್ನ ಕಾಲುಗಳೆರಡೂ ಕಂಪಿಸುತ್ತಿದ್ದುವು. ನಾಲಗೆ ಒಣಗಿಹೋಗಿತ್ತು.

ಮಂಚದ ಮೇಲೆ ಕುಳಿತುಕೊಂಡೆ, ಹೇಗೋ ಧೈರ್ಯ ತಂದು

ಕೊಂಡು........

ಅತ್ತ ಮುಖ ತಿರುಗಿಸಿ ಕುಳಿತಿದ್ದ ಕಮಲಮುಖಿ ನನ್ನ ಕಡೆ ದೃಷ್ಟಿ ತಿರುಗಿಸಿದಳು........

ಅವಳ ದೃಷ್ಟಿ ನನ್ನ ಮುಖದ ಮೇಲೆ ಹರಿದಾಡುತ್ತಲೂ ಅಗ್ನಿಯ ನಾಲಗೆಯೇ ಹರಿದಾಡಿದಂತೆ ಭಾಸವಾಯಿತು. ಆಗಲೇ ಕೊನೆಗಂಡಿತು ನನ್ನ ಪರೀಕ್ಷೆ........

ಸೋತು ಹೋದೆ....ನಾನು ಪೂರ್ತಿಯಾಗಿ ಸೋತು ಹೋದೆ........

ನಾನೊಂದು ಕಡೆ ಬಿದ್ದುಕೊಂಡೆ....ಅವಳೊಂದು ಕಡೆ ಬಿದ್ದುಕೊಂಡಳು.

ಇದು ನಮ್ಮ ಪ್ರಥಮ ರಾತ್ರಿ....ವೈವಾಹಿಕ ಜೀವನದ ಪ್ರಥಮರಾತ್ರಿ....

ಮುಂದೇನು ಗತಿ? ನಾನಂತೂ ಎಂದೋ ಹಾಳಾಗಿ ಹೋದುದಾಗಿತ್ತು. ಇನ್ನು ಈಕೆಯೂ ಹಾಳಾಗಬೇಕೇ ನನ್ನಿಂದಾಗಿ? ಪಾಪ. ಇವಳು ಮಾಡಿದ ಅಪರಾಧವೇನು?

ಅಯ್ಯೋ! ನಾನು ಮದುವೆಯಾದದ್ದೇ ತಪ್ಪಾಯಿತೇನೊ. ಆ ಮಾಧೂರಾಯನ ಮಾತು ಕೇಳಬಾರದಿತ್ತು. ದು ಡು ಕಿ ಮದುವೆಯಾಗ ಬಾರದಾಗಿತ್ತು."

ಕಮಲಳ ಕಣ್ಣುಗಳಲ್ಲಿ ನೀರೂರಿತ್ತು. ಸೆರಗಿನಿಂದ ಅದನ್ನೊರಸಿಕೊಂಡು ಅವಳು ಮತ್ತೊಂದು ಪುಟದ ಮೇಲೆ ದೃಷ್ಟಿ ತೂರಿದಳು:

" ಬಿಡುಗಡೆಯೇ ಇಲ್ಲವೇ ನನಗೆ? ಈ ಕ್ಷೋಭೆಯಿಂದ ತಪ್ಪಿಸಿಕೊಳ್ಳು ವಂತೆಯೇ ಇಲ್ಲವೆ?

ಯೋಗಾಭ್ಯಾಸ ಮಾಡುವುದರಿಂದ ನನ್ನಂಥವರಿಗೆ ಮನಃಶಾಂತಿ ಲಭಿಸು ವುದೆಂದು ಹೇಳುತ್ತಾರೆ. ಸರಿ— ಅದನ್ನೂ ಮಾಡಿನೋಡುವುದು....

ಕರಾಚೂರಿನ ಗುರೂಜಿಯವರ ಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದೇನೆ. ಓದುತ್ತ ಹೋದ ಹಾಗೆಲ್ಲಾ ಮನಸ್ಸಿಗೆ ಏನೋ ಒಂದು ಬಗೆಯ ಸಮಾಧಾನ ಲಭಿಸುತ್ತಿದೆ. ಗುರೂಜಿಯವರಿಗೆ ಒಂದೆರಡು ಬಾರಿ ಸಾಕ್ಷಾತ್ಕಾರವೂ ಆಗಿದ್ದಿತಂತೆ. ಅವರು ತೋರಿಸಿದ ದಾರಿಯಲ್ಲಿಯೇ ನಡೆದಲ್ಲಿ ನನಗೂ ಸಾಕ್ಷಾತ್ಕಾರವಾಗಬಹುದೋ ಏನೊ."

* * * *

“ಮರೆತು ಬಿಡು. ಎಲ್ಲವನ್ನೂ ಮರೆತು ಬಿಟ್ಟು ನನ್ನನ್ನೇ ನಂಬು. ನನಗೇ ಶರಣು ಬಾ. ಸಾಕ್ಷಾತ್ಕಾರದ ಬಾಗಿಲು ತೆರೆಯುತ್ತದೆ,” ಎನ್ನುತ್ತಾರೆ ಗುರೂಜಿ.

ಮರೆಯಬೇಕು, ಎಲ್ಲವನ್ನೂ ಮರೆಯಬೇಕು. ಕಮಲಳನ್ನು, ಕಾಶಿಯನ್ನು, ಸಂಸಾರವನ್ನು—ಎಲ್ಲವನ್ನೂ ಮರೆಯಬೇಕು.

“ಬ್ರಹ್ಮಚರ್ಯ ಪಾಲಿಸದಿದ್ದರೆ ಯೋಗ ಸಾಧಿಸುವುದಿಲ್ಲ,” ಎನ್ನುತ್ತಾರೆ ಗುರೂಜಿ.

ಮೂರು ತಿಂಗಳುಗಳಿಂದ ನಾನೂ ಬ್ರಹ್ಮಚರ್ಯ ಪಾಲಿಸುತ್ತಿದ್ದೇನೆ. ಈ ಅವಧಿಯಲ್ಲಿ ಕಮಲಳನ್ನು ಸ್ಪರ್ಶಿಸಿಯೇ ಇಲ್ಲ....ಆದರೆ........

ನನ್ನ ಬ್ರಹ್ಮಚರ್ಯದ ನೈಜಸ್ವರೂಪದ ಕುರಿತು ಯೋಚಿಸಿದಾಗಲೆಲ್ಲಾ ನಗು ಬರದಿರುವುದಿಲ್ಲ. ಸಶಕ್ತರಾಗಿದ್ದವರು, ಆರೋಗ್ಯವಾಗಿದ್ದವರು ಪಾಲಿಸುವ ಬ್ರಹ್ಮಚರ್ಯವೇ ಬೇರೆ, ಕೈಲಾಗದ ಹೇಡಿಯಾದ ನಾನು ಪಾಲಿಸುತ್ತಿರುವ ಬ್ರಹ್ಮಚರ್ಯವೇ ಬೇರೆ........

ಯೋಗಾಭ್ಯಾಸ....ಸಾಧನೆ....ಸಾಕ್ಷಾತ್ಕಾರ....

ದುರ್ಬಲರಿಗೆಂದಾದರೂ ಸಾಧ್ಯವೇ ಸಾಕ್ಷಾತ್ಕಾರ?

ಸಾಧ್ಯವಿಲ್ಲವೆಂದು ಗೊತ್ತಿದ್ದರೂ ನಾನು ಅದೇ ಹಾದಿಯನ್ನೆ ಹಿಡಿದು ನಡೆದಿದ್ದೇನೆ. ಬೇರೆ ಹಾದಿಯೂ ಕಾಣುತ್ತಿಲ್ಲವಲ್ಲ?

* * * *

“ಸುಚರಿತರಾಯ, ಸುಲಲಿತದೇವಿ, ಶರಣಪ್ಪನವರೊಡಗೂಡಿ ‘ಯೋಗ ಮಂಡಲ’ ಸ್ಥಾಪಿಸಿದ್ದಾಗಿದೆ. ಎಂಥೆಂಥವರೆಲ್ಲಾ ಸದಸ್ಯರಾಗಲು ಹಾತೊರೆಯುತ್ತಿದಾರೆ! ಸರಿ. ಅವರನ್ನಾದರೂ ನಾನ್ಯಾಕೆ ದೂಷಿಸಬೇಕು? ಯೋಗದ ಮಾತನಾಡಲು ನನಗಾದರೂ ಅಧಿಕಾರವಿದೆಯೆ?

* * * *

“ಇತ್ತಿತ್ತಲಾಗಿ ಮನಃಶಾಂತಿ ವಿಪರೀತ ಕದಡಿ ಹೋಗಿದೆ. ಕತ್ತಲಲ್ಲಿ ತೊಳಲಾಡುವ ಮಗುವಿನಂತೆ ನನ್ನ ಸ್ಥಿತಿ. ಮನೆಯಲ್ಲಿ ನೆಮ್ಮದಿಯಿಲ್ಲ, ಶಾಲೆಯಲ್ಲಿ ಪಾಠ ಹೇಳಲಾಗುವುದಿಲ್ಲ. ಏನನ್ನೊ ಹೇಳಲು ಹೋಗಿ ಇನ್ನೇನನ್ನೊ ಹೇಳಿಬಿಟ್ಟು ವಿದ್ಯಾರ್ಥಿಗಳ ಲೇವಡಿಗೆ ಬಲಿಯಾಗುತ್ತಿದೇನೆ.

ಹೀಗೇ ನಡೆದರೆ, ನಾನು ಈ ನೌಕರಿಯಲ್ಲಿ ಉಳಿಯುವುದು ಕಷ್ಟ. ಈಗಾಗಲೇ ನನ್ನ ಬಗ್ಗೆ ದೂರು ಹೋಗಿದೆ. 'ಪ್ರಾಕ್ಟಿಕಲ್' ಆಗಿರಬೇಕೆಂದು ಶರಣಪ್ಪನವರು ಹೇಳುತ್ತಿದ್ದರು.

ನನಗೆ ಯಾವುದೂ ತಿಳಿಯದಂತಾಗಿದೆ. ಕಲ್ಲಿನಂತಾಗಿದೆ ನನ್ನ ಬುದ್ಧಿ. ಇನ್ನು 'ಪ್ರಾಕ್ಟಿಕಲ್' ಆಗುವುದು ಹೇಗೆ?

ಕೆಲಸಕ್ಕೆ ರಾಜೀನಾಮೆ ಕೊಟ್ಟು, ಕಮಲಳನ್ನು ತೌರುಮನೆಗೆ ಕಳಿಸಿ ಕರಾಚೂರಿಗೆ ಹೋದರೆ ಮನಃಶಾಂತಿ ಸಿಕ್ಕಬಹುದೊ ಏನೊ. ಆದರಾಕೆ ಎಲ್ಲಿಗೂ ಹೋಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾಳೆ.

- ಇನ್ನೇನು ಮಾಡುವುದು? ಮದುವೆ ಮಾಡಿಕೊಂಡು ಎಂಥ ಮೂರ್ಖತನ ಮಾಡಿದಂತಾಯಿತಲ್ಲ?

ಕುಬೇರಪ್ಪನವರೊಂದು ಆಶ್ರಮ ಸ್ಥಾಪಿಸಲಿರುವರಂತೆ. ಜೀವನ ವೇತನ ಕೊಡುವರಂತೆ. ಅಲ್ಲಿಗೆ ಹೋಗಿಬಿಡಲೇ? ಅಲ್ಲಾದರೂ ನನ್ನ ಮನಸ್ಸಿಗೆ ನೆಮ್ಮದಿ ಸಿಕ್ಕಬಹುದೇ?

ಅಲ್ಲಿಗೆ ಹೋದರೂ ಕಮಲಳ ಸಮಸ್ಯೆಯೊಂದು ಹಾಗೆಯೆ ಉಳಿಯುವುದಲ್ಲ?

ಅವಳನ್ನೇನು ಮಾಡುವುದು?

ಅವಳು ಏನಾದರೂ ಮಾಡಿಕೊಳ್ಳಲಿ. ನನ್ನ ಪಾಡಿಗೆ ನಾನು ಎಲ್ಲಿಗಾದರೂ ಹೊರಟು ಬಿಡಲೇ?

ಸಂಬಳದಲ್ಲಿ ಉಳಿಸಿದ ಹಣವಿದೆ. ಸ್ವಲ್ಪ ಅದನ್ನು ತೆಗೆದುಕೊಂಡು ಅವಳು ತವರೂರಿಗೆ ಹೋಗಬಹುದು. ಅವಳು ಇಷ್ಟಪಟ್ಟರೆ ಸೋಡಚೀಟಿಯನ್ನೂ ಕೊಟ್ಟು ಬಿಡಬಹುದು. ಮತ್ತೊಬ್ಬ ಯುವಕನನ್ನು ಮದುವೆಯಾಗಿ ಸುಖದಿಂದ ಜೀವಿಸಲಿ.

ಆದರೆ, ಈ ವಿಚಾರವನ್ನು ಅವಳೆದುರು ಪ್ರಸ್ತಾಪಿಸುವುದಾದರೂ ಹೇಗೆ?"

* * * *

"ನನ್ನ ಹಾಗೆ ಅವಳಿಗೂ ಅಧ್ಯಾತ್ಮದ ಹುಚ್ಚು ಹಿಡಿಸಿದರೆ ಏನಾದರೂ ಪ್ರಯೋಜನವಾಗಬಹುದೆಂದು ಬಗೆದು ಅದಕ್ಕೂ ಯತ್ನಿಸಿದ್ದಾಯಿತು. ಅವಳಿಗೆ ಮಾತ್ರ ಅದರಲ್ಲಿ ಆಸಕ್ತಿಯೇ ಇಲ್ಲ.

ನಿಜವಾಗಿ, ನನಗಾದರೂ ಅವರಲ್ಲಿ ನಂಬಿಕೆಯಿದೆಯೆ? ಅಥವಾ, ನನ್ನನ್ನು ನಾನೇ ವಂಚಿಸಿಕೊಳ್ಳುತ್ತಿದ್ದೇನೆಯೆ?

ಸಂಸಾರದಲ್ಲಿ ಸುಖ ಸಿಕ್ಕಲಿಲ್ಲವೆಂದೇ ಅಲ್ಲವೇ ನಾನು ಈ ಸಾಧನೆಯತ್ತ ತಿರುಗಿದ್ದು?

ಮಾತಾಕುಮಾರನಿಗೂ ಹೀಗೆ ಏನಾದರೂ ಆಗಿದ್ದಿತೋ ಏನೊ. ನಿನ್ನೆ ಅವನೊಡನೆ ಮಾತಾಡುತ್ತ, ರಾತಿಯನ್ನೆಲ್ಲಾ ಕಳೆದದ್ದಾಯಿತು. ಅಧ್ಯಾತ್ಮಿಯ ವೇಷವನ್ನೇನೊ ಆತ ಬಲು ಚೆನ್ನಾಗಿ ಕಟ್ಟಿದ್ದಾನೆ. ಆದರೆ, ಅವನಿಗೂ ಅದ ರಿಂದ ಕೊಂಚವೂ ಉಪಯೋಗವಾಗಿಲ್ಲವೆಂದೇ ನನಗನ್ನಿಸಿತು.

ಕರಾಚೂರಿನ ಗುರೂಜಿಗಳಿಗೆ ಸಾಕ್ಷಾತ್ಕಾರವಾಗಿದೆಯೆಂದು ಹೇಳುತ್ತಾರೆ. ಅವರಲ್ಲಾದರೂ ಎಷ್ಟು ಸತ್ಯವಿದೆಯೋ....

ಅಧ್ಯಾತ್ಮವೆಂದರೆ ಪಲಾಯನವಾದವೆಂದು ಅನೇಕರು ಹೇಳುವುದೇ ನಿಜವಿದೆಯೊ ಏನೊ."

* * * *

"ಆರು ತಿಂಗಳುಗಳಿಂದ ದೂರ ಮಲಗುತ್ತಿದ್ದ ಕಮಲ ಈಚೆಗೆ ಮತ್ತೆ ನನ್ನನ್ನು ಪೀಡಿಸುವುದಕ್ಕಾರಂಭಿಸಿದಾಳೆ....

ನೆರೆಮನೆಯ ಮುಕ್ಕಣ್ಣ, ಪದ್ಮಾವತಿ ಅವಳಿಗೆ ಏನೇನನ್ನು ಹೇಳಿಕೊಟ್ಟಿ ರುವರೊ ತಿಳಿಯದು.

ನನ್ನ ಗಂಡಸುತನದ ಪರೀಕ್ಷೆ ತೆಗೆದುಕೊಳ್ಳುವ ವಿಚಾರವಿದೆಯೇನೊ ಅವಳಿಗೆ....

ಇನ್ನೇನು ಮಾಡುವುದು?

ಶರಣಪ್ಪನವರ ವಿಷಯದಲ್ಲಾದ ಹಾಗೆ ನನ್ನ ವಿಷಯದಲ್ಲೂ ಊರಿನ ಲ್ಲೆಲ್ಲ ಬೊಬ್ಬಾಟವಾದರೆ ಹೇಗೆ?

ನಾನಿಲ್ಲಿ ಮುಖವೆತ್ತಿ ತಿರುಗುವುದು ಹೇಗೆ?"

* * * *

"ಆಶ್ರಮ ಸ್ಥಾಪಿಸುವ ನಿರ್ಧಾರಮಾಡಿ ಕುಬೇರಪ್ಪನವರು ನನ್ನನ್ನು ಕರೆಯುತ್ತಿದಾರೆ.

ಕೆಲದಿನಗಳ ಮಟ್ಟಿಗೆ ಈ ಊರು ಬಿಟ್ಟು ಬೇರೆ ಎಲ್ಲಾದರೂ ಇದ್ದು

ಬಂದರೆ ಸ್ವಲ್ಪವಾದರೂ ಶಾಂತಿ ಸಿಕ್ಕಬಹುದೆಂದು ನನಗೂ ಅನ್ನಿಸುತ್ತಿದೆ.

ನೌಕರಿಗೆ ರಾಜೀನಾಮೆ ಕೊಟ್ಟು ಕುಬೇರಪ್ಪನವರ ಜೊತೆಗೆ ಹೊರಟು ಬಿಡಬೇಕೆಂದು ನಿರ್ಧರಿಸಿದೇನೆ.

ಮತ್ತೆ ಬರುತ್ತದೆ ಕಮಲಳ ಪ್ರಶ್ನೆ. ಅವಳನ್ನೇನು ಮಾಡುವುದು? ತವರೂರಿಗೆ ಹೋಗಲು ಆಕೆ ಸಿದ್ಧಳಿಲ್ಲ.

ಅವಳನ್ನೂ ಕರೆದೊಯ್ಯುವುದೇ ಕುಬೇರಪ್ಪನವರ ಊರಿಗೆ?

ಅವರು ಬಹಳ ವಿಷಯಲಂಪಟರೆಂಬ ವಾರ್ತೆಯಿದೆ. ಅಂಥವರ ಮನೆಗೆ ಕಮಲಳನ್ನು ಕರೆದೊಯ್ಯುವ ಇಚ್ಛೆ ನನಗೂ ಇಲ್ಲ.

ಅಲ್ಲಿಗೆ ಬರಲು ಅವಳೂ ಸಿದ್ಧಳಿಲ್ಲ. ಇಲ್ಲೇ ಇರುವುದಾಗಿ ಹೇಳುತ್ತಾಳೆ.

ಇಲ್ಲೇ ಏನಾದರೂ ಆದರೆ! ಎಂಬ ಚಿಂತೆಯೊಂದು ನನ್ನನ್ನು ಕಾಡುತ್ತಿದೆ. ಎಷ್ಟು ವಿಚಿತ್ರವಾದದ್ದು ಮನುಷ್ಯನ ಮನಸ್ಸು! ಅವಳನ್ನು ಸುಖಪಡಿಸುವ ಸಾಮರ್ಥ್ಯವಂತೂ ನನಗಿಲ್ಲ. ಎಂತಲೇ, ಅವಳನ್ನು ಬಿಟ್ಟು ಎಲ್ಲಿಗೋ ಓಡುತ್ತಿದ್ದೇನೆ. ಆದರೂ, ಅವಳ ಶೀಲದ ಕುರಿತು ಚಿಂತೆ....

ಅವಳ ಶೀಲ ಏನಾದರೆ ನನಗೇನಂತೆ! ನನ್ನಿಂದ ದೊರಕದ ಸುಖವನ್ನು ಆಕೆ ಇತರರಿಂದ ಪಡೆದುಕೊಂಡರೆ ನಾನೇಕೆ ಚಿಂತಿಸಬೇಕು?

ಚಿಂತಿಸಬಾರದು, ನಿಜ. ಆದರೂ ಚಿಂತೆ ತೊಲಗುತ್ತಿಲ್ಲವಲ್ಲ?

ಅವಳಿಂದ ನಾನು ಓಡಿ ಹೋಗುತ್ತಿರುವುದಾದರೂ ನಿಜವೆ?

ನಿಜ. ಅದರಲ್ಲೇನೂ ಸಂಶಯವಿಲ್ಲ.

ತಿಂಗಳು ತಿಂಗಳಿಗೂ ಅವಳಿಗೆ ಹಣವನ್ನೇನೊ ಕಳಿಸಬಹುದು. ಆದರೆ, ಎಷ್ಟು ದಿನಗಳ ವರೆಗೆ ಅವಳು ಒಬ್ಬೊಂಟಿಯಾಗಿ ಇಲ್ಲಿಯೇ ಇರಲು ಸಾಧ್ಯ?

ಅವಳನ್ನು ಹೀಗೆ ಬಿಟ್ಟು ಹೋದ ಮೇಲೆ ನನ್ನ ಸಾಧನೆ ನಿರಾತಂಕವಾಗಿ ನಡೆಯಬಹುದೇ? ಹಗಲಿರುಳೂ ಅವಳದೇ ಯೋಚನೆ ಮನಸ್ಸನ್ನು ಕೊರೆಯ ತೊಡಗಿದರೆ ಯೋಗಸಾಧನೆಯಾದರೂ ಹೇಗೆ ನಡೆದೀತು?

ನಾನೆತ್ತ ಹೊರಟಿದ್ದೇನೆ? ನನ್ನ ಗುರಿಯಾದರೂ ಯಾವುದು? ನಾನದನ್ನು ಸಾಧಿಸಬಲ್ಲೆನೇ?

ನನ್ನಂಥ ದುರ್ಬಲನಿಗೆ, ಚಂಚಲ ಮನಸ್ಕನಿಗೆ ಸಾಕ್ಷಾತ್ಕಾರ ಲಭಿಸುವುದೂ ಸಾಧ್ಯವೇ?

ನಾನು ನಡೆದಿರುವುದೆತ್ತ ? ಬೆಳಕಿನ ಕಡೆಗೋ ? ಅಥವಾ ಕತ್ತಲೆಯಿಂದ ದಟ್ಟವಾದ ಕತ್ತಲೆಯ ಕಡೆಗೋ ?

ಓ ಗುರುದೇವಾ ! ದಾರಿದೋರು. ಓ ಗುರೂಜಿ, ಓ ಮಾತಾಜಿ, ನನ್ನ ಕೈ ಬಿಡಬೇಡಿರಿ."

* * * *

"ನಾನು ಮಾಡುತ್ತಿರುವುದೆಲ್ಲಾ ಶುದ್ಧ ಮೂರ್ಖತನ ಎಂದೂ ಒಮ್ಮೊಮ್ಮೆ ಅನಿಸುತ್ತದೆ.

ನನ್ನಂಥವರಿಗಲ್ಲ ಯೋಗ.... ಸಾಧನೆ.... ಸಾಕ್ಷಾತ್ಕಾರ....

ಯೋಗಭ್ಯಾಸ ಮಾಡುವುದಕ್ಕೂ ದೃಢತೆ, ಸ್ಥಿರತೆ ಬೇಕಾಗುವುದು. ನನ್ನಲ್ಲಿ ಅವುಗಳದೇ ಅಭಾವ.

ನನ್ನಂಥವನು ಯೋಗದ ಹುಚ್ಚಿಗೆ ಬೀಳುವುದು ವ್ಯರ್ಥವೆಂದು ಗೊತ್ತಿದ್ದರೂ ನಾನೇಕೆ ಅದಕ್ಕೇ ಅಂಟಿಕೊಂಡಿದ್ದೇನೆ ?

"ಈ ಹುಚ್ಚನ್ನೆಲಾ ಬಿಟ್ಟು, ಅದರ ಬದಲು ದಿನಾಲು ವ್ಯಾಯಾಮ ಮಾಡಿರಿ, ಟೆನ್ನಿಸ್ಸೋ ಬ್ಯಾಡ್‌ಮಿಂಟನ್ನೋ ಆಡಿರಿ, ಪೌಷ್ಟಿಕ ಆಹಾರ ತೆಗೆದುಕೊಳ್ಳಿರಿ, ಹಾಲು ಹಣ್ಣು ಮೊಟ್ಟೆ ಸೇವಿಸಿರಿ, ಪ್ರಕೃತಿ ಸುಧಾರಿಸುತ್ತದೆ, ಮನಶ್ಶಾಂತಿಯೂ ಲಭಿಸುತ್ತದೆ. ನಿಮಗೇನೂ ಆಗಿಲ್ಲ. ನೀವು ಸುಮ್ಮನೆ ಏನೇನೋ ಅಂಜಿಕೆ ತಂದುಕೊಂಡಿದ್ದೀರಿ. ಮೊದಲು ಆ ಅಂಜಿಕೆ ಬಿಟ್ಟು ಹೊಸ ಹುರುಪಿನಿಂದ ಜೀವಿಸಿರಿ," ಎಂದು ಡಾಕ್ಟರ್ ಪಾಟೀಲರು ಹೇಳಿದ್ದರು, ನಾನೊಮ್ಮೆ ಅವರನ್ನು ನೋಡಲು ಹೋಗಿದ್ದಾಗ.

ಅವರು ಹೇಳಿದ ಹಾಗೆ ಮಾಡುವುದಕ್ಕೂ ಮನಸ್ಸು ಒಪ್ಪಲಿಲ್ಲ ; ಅದು ಪಲಾಯನವಾದದ ಹಾದಿಯನ್ನೇ ಹಿಡಿದು ಹೊರಟಿತು.

ಆಯಿತು. ಅದು ಎಲ್ಲಿಯವರೆಗೆ ಹೋಗುವುದೋ ಹೋಗಲಿ. ಇದರ ಅಂತ್ಯವಾದರೂ ಏನೆಂಬುದನ್ನು ನೋಡಿಯೆ ಬಿಡುತ್ತೇನೆ. ಅದೂ ಒಂದು ಸಾಕ್ಷಾತ್ಕಾರವೇ ಆದಂತಾಯಿತು ! "

ಮರುಳಯ್ಯ ಬರೆದಿದ್ದ ಆ ಕೊನೆಯ ಬರವಣಿಗೆಯನ್ನೋದಿ ಮುಗಿಸುತ್ತಿದ್ದ ಹಾಗೆಯೆ ಬಾಗಿಲಿನಾಚೆ ಏನೋ ಸದ್ದಾದಂತೆ ಕೇಳಿಸಲು, 'ದಿನಚರಿ' ಯನ್ನು ಕೈಯಲ್ಲಿ ಹಿಡಿದುಕೊಂಡೇ ಹೊರಗೆ ಬಂದಳ ಕಮಲ. ಪದ್ಮಾವತಿಯೇ

ಪುನಃ ಬಂದಿರಬಹುದೆಂದು ಅವಳು ಭಾವಿಸಿದ್ದಳು. ಆದರೆ, ಬಾಗಿಲು ತೆಗೆದಾಗ ಪದ್ಮಾವತಿಯ ಬದಲು ತನ್ನ ಗಂಡನನ್ನೇ ಅವಳು ಕಂಡಳು. ಅವನ ಸಾಮಾನುಗಳನ್ನು ಹೊತ್ತುಕೊಂಡಿದ್ದ ಕೂಲಿಯವನೊಬ್ಬ ಅಂಗಳದಲ್ಲಿ ನಿಂತಿದ್ದ.

ಮರುಳಯ್ಯನ ಮೊಗದ ಮೇಲೆ ನೂತನ ಉತ್ಸಾಹವೊಂದು ಎದ್ದು ಕಾಣುತ್ತಿತ್ತು. ಕಮಲಳ ಕೈಯ್ಯಲ್ಲಿದ್ದ 'ದಿನಚರಿ' ಯನ್ನು ನೋಡುತ್ತಲೂ ಅವನಿಗೆ ಕೊಂಚ ನಾಚಿಕೆಯೆನಿಸಿದಂತಾಯಿತು ಮರುಕ್ಷಣವೇ ಆತ ತನ್ನನ್ನು ಸಾವರಿಸಿಕೊಂಡು ನಾಚಿಕೆಯನ್ನು ನಗೆಯಲ್ಲಿ ಮುಳುಗಿಸುತ್ತ ಒಳಗಡೆ ಅಡಿಯಿರಿಸಿದ.

ತನ್ನ ಗಂಡ ಇಷ್ಟು ಬೇಗ ಹಿಂದಿರುಗಿ ಬಂದುದೇಕೆಂಬುದನ್ನರಿತುಕೊಳ್ಳಲಾರದೆ ಕಮಲ ಕಕ್ಕಾವಿಕ್ಕಿಯಾಗಿ ನಿಂತಿದ್ದಳು. ಅವಳಿಗೆ ಆಶ್ಚರ್ಯವೂ ಆಗಿತ್ತು, ಸಂತೋಷವೂ ಆಗಿತ್ತು, ಸಮಾಧಾನವೂ ಆಗಿತ್ತು.

ಕೂಲಿಯವನು ಹೊರಟುಹೋಗುತ್ತಲೂ ಹೊರಬಾಗಿಲು ಹಾಕಿಕೊಂಡು ಮರುಳಯ್ಯ ಹೆಂಡತಿಯ ಬಳಿ ಬಂದು ಕೇಳಿದ :

"ಈ ದಿನಚರಿಯನ್ನೆಲ್ಲಾ ಓದಿ ಬಿಟ್ಟಿರಾ ಕಮಲಮುಖೀ ?"

"ಟ್ರಂಕಿಗೆ ಕೀಲಿ ಹಾಕದೆ ಹಾಗೇ ಹೋಗಿದ್ದಿರಿ. ಕೈಗೆ ಸಿಕ್ಕಿತು. ಕುತೂಹಲ ತಡೆಯದೆ ಓದಿಬಿಟ್ಟೆ."

ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ಮರುಳಯ್ಯ ಪ್ರಶ್ನಿಸಿದ :

"ಓದಿ ಏನನ್ನಿಸಿತು ? ನನ್ನ ಬಗ್ಗೆ ಹೇಸಿಕೆ ಬಂದಿರಬಹುದಲ್ಲ ?"

ಕೂಡಲೇ ಮಾತನಾಡಲಿಲ್ಲ ಕಮಲ. ಒಂದು ನಿಮಿಷ ಸುಮ್ಮನಿದ್ದು ಅನಂತರ ನಿದಾನವಾಗಿ ಹೇಳಿದಳು :

"ಹೇಸಿಕೆ ಯಾಕಾಗಬೇಕು ?"

"ನಾನು ಅಂಥಾ ಹೇಸಿ ಕೆಲಸ ಮಾಡಿದ್ದನ್ನ ಓದಿದ ಬಳಿಕ ಹೇಸಿಕೆಯಾಗದಿರ್ತದೇನು ?"

"ಸ್ವಲ್ಪ ಅಸಹ್ಯ ಅನ್ನಿಸ್ತದನ್ನೊದೇನೋ ನಿಜ. ಆದರೂ ಇಂಥಾದ್ದು ಎಷ್ಟೋ ಕಡೆ ನಡೀತದಲ್ಲ ? ಏನೇನೋ ಆಗಿಹೋಯ್ತು. ಈಗ ಅದಕ್ಕೆ ಹೇಸಿಕೊಂಡರೇನುಪಯೋಗ ?"

ತನ್ನೆದೆಯ ಮೇಲಿದ್ದ ದೊಡ್ಡದೊಂದು ಭಾರವಿಳಿದಂತಾಗಿ ಮರುಳಯ್ಯ

ನಿಗೆ ಹಾಯೆನಿಸಿತು.

"ಕೊನೆಯ ಪುಟವನ್ನೂ ಓದಿದಿರಾ ಕಮಲಮುಖೀ?"

"ಹೂಂ."

"ಡಾಕ್ಟರ್ ಪಾಟೀಲರ ಉಪದೇಶದ ಬಗ್ಗೆ ಬರೆದಿರುವುದನ್ನೂ ಓದಿದಿರಾ?"

"ಓದಿದೆ."

"ಇಷ್ಟು ದಿನಗಳ ವರೆಗೆ ಅವರ ಉಪದೇಶದಂತೆ ವರ್ತಿಸದೆ ಮೂರ್ಖತನ ಮಾಡಿದೆ, ಇಂದಿನಿಂದ ಮಾತ್ರ ಅವರ ಆ ಉಪದೇಶವನ್ನು ಕೃತಿಗಿಳಿಸಲು ನಿಶ್ಚಯ ಮಾಡಿದೇನೆ."

ಲೋಳಸರಕ್ಕೆ ಹೊರಟದ್ದವರು ಇಷ್ಟು ಬೇಗ ಹಿಂದಿರುಗಿ ಬಂದುದೇಕೆ, ಎಂದು ಕಮಲ ಕೇಳುವ ಮೊದಲೇ ಮರುಳಯ್ಯನೇ ಹೇಳಿದ:

"ಸಾಕ್ಷಾತ್ಕಾರದ ಬಗ್ಗೆ ಅದರಲ್ಲಿ ಬರೆದಿದ್ದೇನಲ್ಲ ಕಮಲಮುಖೀ. ಕೊನೆಗೂ ನನಗೆ ಸಾಕ್ಷಾತ್ಕಾರವಾಯಿತು!"

"ಹೌದೇನು?" ಎಂದು ನಗುತ್ತಾ ಕೇಳಿದಳು ಕಮಲ.

"ಇಷ್ಟು ಬೇಗ ನನಗೆ ಸಾಕ್ಷಾತ್ಕಾರವಾಗಲು ಕುಬೇರಪ್ಪನವರೇ ಕಾರಣರಾದರು. ಅವರ ಜೊತೆಗೆ ಹೊರಟದ್ದರಿಂದ ಹಾನಿಯೇನೂ ಆಗದೆ ಲಾಭವೇ ಆಯಿತೆನ್ನಬೇಕು. ಅವರ ಬಗ್ಗೆ ನನಗೆ ಸಂಶಯವೇನೋ ಇದ್ದಿತಾದರೂ ಅವರು ನಿಜವಾಗಿಯೂ ಎಂಥವರು ಎನ್ನುವದು ಮನವರಿಕೆಯಾಗಿರಲಿಲ್ಲ. ಈಗ ಆಯಿತು!"

"ನೀವು ಅವರೂರಿಗೆ ಹೋಗಲೇ ಇಲ್ಲವೇನು?"

"ಎಲ್ಲಿಯ ಊರು,. ಏನು ಕಥೆ! ಇಲ್ಲಿಂದ ಹೊರಟ ಕಾರು ನೆಟ್ಟಗೆ ಅವರ ಬಂಗಲೆಗೆ ಹೋಗಿ ನಿಂತಿತು. ಅವರದೊಂದು ಬಂಗಲೆ ಇಲ್ಲೂ ಅದ. ಅಲ್ಲಿ ಹೋದ ಬಳಿಕ ನನ್ನ ಸಾಮಾನುಗಳನ್ನ ಕಾರಿನಿಂದಿಳಿಸಿ ಅವರೇನು ಹೇಳಿದರು ಅಂತೀರಿ!...." ಎಂದು ನುಡಿದು ಗಟ್ಟಿಯಾಗಿ ನಗತೊಡಗಿದ ಮರುಳಯ್ಯ.

"'ನೀವು ಮನೆಗೆ ಹೋಗಬಹುದು' ಎಂದರು ಕುಬೇರಪ್ಪ.

"'ಯಾಕ್ರೀ?' ಅಂದೆ ನಾನು.

"'ಯಾಕೋ! ಆಶ್ರಮ ಸ್ಥಾಪಿಸುವದರ ಬಗ್ಗೆ ನನಗಿದ್ದ ಹುರುಪೇ

ಹೋಗಿಬಿಟ್ಟಿತು,' ಎಂದರು ಅವರು.

"ಯಾಕೆ? ಏನಾಯ್ತು?" ಅಂತ ನಾನು ಕೇಳಿದಾಗ, "ನಿಮ್ಮ ಮನೆಯವರೂ ನಿಮ್ಮ ಸಂಗಡ ಬರಬಹುದಂತ ತಿಳಿದೇ ನಾ ನಿಮ್ಮನ್ನ ಅಲ್ಲಿಗೆ ಕರೆದದ್ದು. ಅವರೇ ಬರಲಿಲ್ಲವೆಂದ ಮೇಲೆ ನನಗೆ ಇದರಲ್ಲೇನು ಸ್ವಾರಸ್ಯ ಕಾಣುವುದಿಲ್ಲ. ಆಶ್ರಮ ಅಂದ ಮೇಲೆ ಮಾತಾಜಿಯಾಗಿರಲು ಹೆಂಗಸರಿದ್ದರೆ ಚೆಂದ,' ಅಂದರು ಅವರು.

"ಅವರೆಂಥವರೆನ್ನುವುದು ಆಗ ನನಗೆ ಚೆನ್ನಾಗಿ ಗೊತ್ತಾಯಿತು. ಅದೇ ಸಾಕ್ಷಾತ್ಕಾರ ಅರ್ಥಾತ್ ವಿಶ್ವರೂಪದರ್ಶನ ಅಂದರೂ ಅನ್ನಬಹುದು.

"'ವಾಸಂತಿಯನ್ನೇ ಅಲ್ಲಿಗೆ ಕರೆದೊಯ್ದು ಮಾತಾಜಿಯನ್ನಾಗಿ ಮಾಡಲು ಬಂದೀತಲ್ಲರೀ?' ಅಂತ ನಾನಂದೆ.

"ಛೆ. ಛೆ. ವಾಸಂತಿ ಇಲ್ಲೇ ಇರಬೇಕು. ಅವಳನ್ನೆ ಅಲ್ಲಿಗೆ ಕರೆದೊಯ್ದರೆ ಇಲ್ಲಿ ಮಾತಾಜಿಯಾಗುವವರ್‍ಯಾರು?' ಅಂದರು ಕುಬೇರಪ್ಪ.

"'ನಿಮ್ಮ ಹೆಂಡರನ್ನೆ ಯಾಕೆ ಮಾತಾಜಿ ಮಾಡಬಾರದು?' ಅಂತ ನಾ ಕೇಳಿದೆ.

"ಕುಬೇರಪ್ಪ ಒಮ್ಮೆಲೆ ಕಣ್ಣುಕೆಂಪು ಮಾಡಿ ಸಿಟ್ಟನಿಂದ, 'ನಮ್ಮ ಹೆಂಡರ ಬಗ್ಗೆ ಮಾತನಾಡಲು ನಿನಗೆಷ್ಟು ಧೈರ್ಯ!' ಅಂತ ಒದರಿದರು.

"'ನನ್ನ ಹೆಂಡತಿಯ ಬಗ್ಗೆ ಮಾತಾಡಲು ನಿಮಗೆ ಧೈರ್ಯವಿರುವಾಗ ನಿಮ್ಮ ಹೆಂಡತಿಯ ಬಗ್ಗೆ ನಾನ್ಯಾಕೆ ಮಾತಾಡಬಾರದು?' ಅಂದೆ ನಾನು.

"'ನಿಮ್ಮ ಬಗ್ಗೆ ನನಗೇನೂ ಆಸಕ್ತಿ ಉಳೀಲಿಲ್ಲ. ನೀವಿನ್ನು ಹೋಗಬಹುದು' ಅಂದರವರು.

"'ಯಾಕೆ ಉಳಿದೀತು ಪಾಪ!' ಅಂತ ಅಣಕವಾಡಿ ನಾನು ಹೊರಟು ಬಂದೆ." ಎಂದು ಹೇಳಿ ಮತ್ತೆ ನಗತೊಡಗಿದ ಮರುಳಯ್ಯ.

"ಇದೆಲ್ಲಾ ಒಂದು ಆಟವಾಗಿರಬೇಕು ಅವರಿಗೆ. ಅವರ ಮಾತು ನಂಬಿ ನೌಕರಿಗೆ ರಾಜೀನಾಮೆ ಕೊಟ್ಟು ಹೊರಟಿದ್ದನ್ನೂ ಮರೆತರಲ್ಲ ಅವರು!" ಎಂದಳು ಕಮಲ.

"ಅವರಂಥಾ ಸಾಹುಕಾರರೆಲ್ಲಾ ಹಾಗೇ. ತಮ್ಮ ಸ್ವಾರ್ಥ ಸಾಧಿಸಿದರಾಯಿತು, ಅವರಿಗೆ ಬೇರಾವ ಚಿಂತೆಯೂ ಇರುವದಿಲ್ಲ."

"ಇನ್ನೇನು ಮಾಡುವವರು? ನೌಕರಿಯಂತೂ ಹೋಯಿತಲ್ಲ?" ಎಂದು ಕೇಳಿದಳು ಕಮಲ.

"ಅದೇ ಗಾಬರಿಯಲ್ಲೇ ನೆಟ್ಟಗೆ ಶರಣಪ್ಪನವರಲ್ಲಿಗೆ ಹೋಗಿ ನಡೆದದ್ದೆಲ್ಲಾ ಹೇಳಿದೆ. ಹೀಗಾಗಬಹುದೇನೊ ಅಂತ ಅವರಿಗೂ ಅನಿಸಿತ್ತಂತೆ. ನನ್ನ ರಾಜೀನಾಮೆಯನ್ನ ಅವರು ಮೇಲೆ ಕಳಿಸಿಯೇ ಇಲ್ಲ. ತಮ್ಮ ಹತ್ತಿರವೇ ಇಟ್ಟುಕೊಂಡು ಒಂದು ತಿಂಗಳು ರಜಾ ಕೊಟ್ಟಿದ್ದರಂತೆ ನನಗೆ. ಅವರ ದಯದಿಂದ ನೌಕರಿಯಾದರೂ ಉಳಿಯಿತು."

"ಈಗಲಾದರೂ ಬುದ್ಧಿ ಬಂತಲ್ಲ! ದೇವರೇ ಕಾಪಾಡಿದ!" ಎಂದಳು ಕಮಲ.

"ಕಾಪಾಡಿದನಷ್ಟೇ ಅಲ್ಲ–ಪ್ರತ್ಯಕ್ಷ ದರ್ಶನವನ್ನೇ ಕೊಟ್ಟ!" ಎಂದ ಮರುಳಯ್ಯ.

ಇವರ ಮಾತು ಕೇಳುತ್ತಾ ಅದುವರೆಗೂ ಮೌನವಾಗಿದ್ದ, ಮುಕ್ಕಣ್ಣನೂ ಪದ್ಮಾವತಿಯೂ ಆಗ ನಗು ತಡೆಯಲಾರದೆ ಗಟ್ಟಿಯಾಗಿ ನಗುತ್ತಿದ್ದುದು ನೆರೆಮನೆಯಿಂದ ಕೇಳಿಬಂದಿತು.

"ಈಗಲಾದರೂ ನಿಮ್ಮ ಮರುಳುತನ ಹೋಯಿತಲ್ಲ ಮರುಳಯ್ಯನವರೆ! ಬಹಳ ಸಂತೋಷ," ಎಂದು ಮುಕ್ಕಣ್ಣ ಅಲ್ಲಿಂದಲೇ ಕೂಗಿ ಹೇಳಿ ತನ್ನ ಹರುಷವನ್ನು ಹೊರಪಡಿಸಲೆಂದು ಹಾಡಿಗಾರಂಭಿಸಿದ:

"ಆದುದಾಯಿತು ಹಿಂದು, ಶುಭನವೋದಯವಿಂದು
ಕಾರಿರುಳ ಕುರುಡಿಂಗೆ ಕಣ್ಣು ಬಂತು!"

ಸುದರ್ಶನ ಪ್ರಕಾಶನ

ತಾರಾನಿವಾಸ : : ತಿಪಟೂರು.

ಚಂದಾ ನಿಯಮಗಳು

ನಮ್ಮ ಮಾಲೆಯ ಪುಸ್ತಕಗಳನ್ನು ಚಂದಾ ಪದ್ಧತಿಯಲ್ಲಿ ಅನೇಕ ಓದುಗರು ಅಪೇಕ್ಷಿಸಿರುವುದರಿಂದ, ಅವರ ಮನೀಷೆಯಂತೆ ಈ ಚಂದಾಪದ್ಧತಿಯನ್ನು ಜಾರಿಗೆ ತರುತ್ತೇವೆಂದು ತಿಳಿಸಲು ಸಂತೋಷಿಸುತ್ತೇವೆ.

★ ಚಂದಾ ಅವಧಿಯು ಜನವರಿಯಿಂದ ಡಿಸೆಂಬರ್ ಅಂತ್ಯ.

★ ಉತ್ತಮ ದರ್ಜೆಯ ಸಾಹಿತ್ಯ ಒದಗಿಸುವುದು ಪ್ರಕಾಶನದ ಧ್ಯೇಯ.

★ ಪ್ರಕಾಶನದಲ್ಲಿ ಕಾದಂಬರಿ, ಕತೆ, ನಾಟಕ, ನಗೆಬರಹ, ನಗೆ ಕಾದಂಬರಿ ಮುಂತಾದ ವಿವಿಧ ರೀತಿಯ ಸಾಹಿತ್ಯ ಪ್ರಕಟವಾಗುತ್ತದೆ.

★ **ಪ್ರತಿವರ್ಷ ಸುಮಾರು ೧೫೦೦ ಪುಟದಷ್ಟು ಸಾಹಿತ್ಯವನ್ನು ಒದಗಿಸಲಾಗುವುದು.**

★ **ಪ್ರಕಾಶನದ ಚಂದಾ ವರ್ಷಕ್ಕೆ ಎಂಟು ರೂಪಾಯಿಗಳು ಮಾತ್ರ.**

★ **ಪುಸ್ತಕಗಳನ್ನು ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ದ್ವಾರ ಕಳಿಸಲಾಗುವುದು.**

★ **ರಿಜಿಸ್ಟರ್ ಅಂಚೆದ್ವಾರ ಅಪೇಕ್ಷಿಸುವವರು ಹತ್ತು ರೂಪಾಯಿ ಕಳಿಸಬೇಕು. ಚಂದಾಹಣದ ಬಹುಭಾಗ ಅಂಚೆಯ ಇಲಾಖೆಯೇ ಎಳೆದುಕೊಳ್ಳುವುದರಿಂದ ಈ ಪದ್ಧತಿಯು ಅನಿವಾರ್ಯವಾಗಿದೆ.**

ಇಂದೇ ಚಂದಾದಾರರಾಗಿರಿ.

ಸುದರ್ಶನ ಪ್ರಕಟಣೆಗಳು

*೧	ಗೋಮುಖವ್ಯಾಘ್ರ	..	ತಾ. ರಾ. ನಾಗರಾಜ, ಶ್ರೀಪತಿ
*೨.	ಪ್ರೇಮದರ್ಶನ	....	ಕೃಷ್ಣ
೩.	ಮೊದಲ ನೋಟ	....	ತ. ರಾ. ಸು.
೪.	ಅಭಯ	....	ನಿರಂಜನ
೫.	ಸ್ವಯಂವರ	....	ಮ. ನ. ಮೂರ್ತಿ
೬.	ಬಾಳ ಬಂಧನ	....	ದಾಶರಥಿ ದೀಕ್ಷಿತ
೭.	ಕಲಾವಿದ	....	ಪ್ರಕಾಶ್
೮.	ಮಂಗಳ ದೀಪ	....	ಶ್ರೀನಿವಾಸರಾವ್ ಕೊರಟ
೯.	ರಷ್ಯಾದ ಕಥೆಗಳು	....	ಉಮಾಪತಿ
೧೦.	ನಪುಂಸಕ	....	ಶ್ರೀ ಕೃಷ್ಣಪಾಟೀಲ
೧೧.	ಮಸಣದ ಹೂವು	....	ತ. ರಾ. ಸು.
೧೨.	ಅಪವಾದ	....	ಶ್ರೀಕೃಷ್ಣಪಾಟೀಲ
೧೩.	ನತದೃಷ್ಟೆ	....	ನವಗಿರಿನಂದ
೧೪.	ಶಕ್ತಿಪೂಜೆ	....	ಇಂದಿರಾತನಯ
೧೫.	ಸೇಡಿನ ಕಿಡಿ	....	ಇಂದಿರಾತನಯ
೧೬.	ಸಾಕ್ಷಾತ್ಕಾರ	....	ಬಸವರಾಜ ಕಟ್ಟೀಮನಿ

*ಪ್ರತಿಗಳು ಮುಗಿದಿವೆ.

ಅಚ್ಚಿನಲ್ಲಿ

ಮಾವನಮನೆ (ಗೆಳೆಯರ ಮದುವೆಯ ಉಡುಗೊರೆಗಾಗಿ)	ದಾಶರಥಿ ದೀಕ್ಷಿತ
ಪೂಜಾತಂತ್ರ (ಸೇಡಿನಕಿಡಿಯ ಮುಂದುವರಿದ ಕಾದಂಬರಿ)	ಇಂದಿರಾತನಯ

ಪ್ರಕಾಶನದಲ್ಲಿ ಬರಲಿರುವ ಕೃತಿಗಳು

ರಾಜೇಶ್ವರಿ (ಮೊದಲನೋಟದ ಉತ್ತರಭಾಗ)		ತ. ರಾ. ಸು.
ಗುಟ್ಟಿನ ಮಡದಿ	....	ತಾ. ರಾ. ನಾಗರಾಜ
ಕ್ಷೇತ್ರಯಾತ್ರೆ	....	ತಾ ರಾ. ನಾಗರಾಜ
ಸಮಾಗಮ	....	ತ. ರಾ. ಸು.
ಪುಸ್ತಕ ಹೇಳಿದ ಕತೆ (ನವೀನ ಕಾದಂಬರಿ)		ಕೃಷ್ಣಸ್ವಾಮಿರಾವ್
ಪ್ರೇಮಬಂಧನ	....	ಲೀಲಾಶೇಖರ್
ಹಾಸ್ಯಪೂರ್ಣ ಕಾದಂಬರಿ	....	ಶ್ರೀ ಅಷ್ಟಾವಕ್ರ
ಒಬ್ಬಟ್ಟಿನ ಕಂಟ್ರಾಕ್ಟು	....	ಎಸ್. ಸೂರಪ್ಪ

ಈ ಲೇಖಕರ ಇತರ ಕೃತಿಗಳು

ಕಾದಂಬರಿಗಳು

ಸ್ವಾತಂತ್ರ್ಯದೆಡೆಗೆ
ಮಾಡಿ ಮಡಿದವರು
ಜ್ವಾಲಾಮುಖಿಯ ಮೇಲೆ
ಮೋಹದ ಬಲೆಯಲ್ಲಿ
ಬೀದಿಯಲ್ಲಿ ಬಿದ್ದವಳು
ಜರತಾರಿ ಜಗದ್ಗುರು
ಮಣ್ಣು ಮತ್ತು ಹೆಣ್ಣು
ಖಾನಾವಳಿಯ ನೀಲಾ
ನೀ ನನ್ನ ಮುಟ್ಟಬೇಡ
ಜನಿವಾರ ಮತ್ತು ಶಿವದಾರ
ಬಲೆಯ ಬೀಸಿದರು
ನಾನು ಪೋಲೀಸನಾಗಿದ್ದೆ
ಬಂಗಾರದ ಜಿಂಕೆಯ ಹಿಂದೆ
ಗೋವಾದೇವಿ
ಪಾತರಗಿತ್ತಿ
ಆಶ್ರಮವಾಸಿ
ಬೆಳಗಿನ ಗಾಳಿ

ಕಥಾಸಂಗ್ರಹಗಳು

ಕಾರವಾನ್
ಗುಲಾಬಿ ಹೂ
ಆಗಸ್ಟ್ ಒಂಭತ್ತು
ಸೆರೆಯಿಂದ ಹೊರಗೆ
ಜೋಳದ ಬೆಳೆಯ ನಡುವೆ

ನಾಟಕ

ಪಟ್ಟಣದ ಹುಡುಗಿ